ಭಾನುವಾರ, ಜೂನ್ 27, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಪ್ರತಿಭಟನೆ

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಶನಿವಾರ ಭೋಪಾಲದ ರಾಜಭವನದ ಎದುರು ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು ಪ್ರತಿಭಟನೆ ನಡೆಸಿದರು





ಕೋವಿಡ್ ವಿರುದ್ಧದ ಹೋರಾಟದ ಹಾದಿ



ಸೇನಾನಿಗಳಿಗೆ ವಂದನೆ

ಪ್ರಜಾವಾಣಿ ಭಾನುವಾರ • ಜೂನ್ 27, 2021

‘ಆರೋಗ್ಯ ಕರ್ನಾಟಕ’ಕ್ಕೆ ಭದ್ರ ಬುನಾದಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವನಾಗಿ ಅಧಿಕಾರ ವಹಿಸಿಕೊಂಡ ಕ್ಷಣದಲ್ಲೇ, ರಾಜ್ಯದ ಆರೋಗ್ಯ ವಲಯವನ್ನು ಬಲಯುತವಾಗಿಸಿ ‘ಆರೋಗ್ಯ ಕರ್ನಾಟಕ’ ನಿರ್ಮಿಸುವ ಗುರಿ ಹಾಕಿಕೊಂಡಿದ್ದೆ. ಇದರಂತೆ, ಆರೋಗ್ಯ ಕ್ಷೇತ್ರದ ಮೂಲ ಸೌಕರ್ಯಾಭಿವೃದ್ಧಿ, ಹೊಸ ಆಸ್ಪತ್ರೆಗಳ ನಿರ್ಮಾಣ, ಖಾಲಿ ಹುದ್ದೆಗಳ ಭರ್ತಿ, ಉಚಿತ ಸೇವೆಗಳು ಸೇರಿದಂತೆ ಹಲವಾರು ಸುಧಾರಣಾ ಕ್ರಮಗಳೊಂದಿಗೆ ಬದಲಾವಣೆಯ ಪರ್ವ ತರಲಾಗುತ್ತಿದೆ. ನನ್ನ ಈ ಜನ್ಮದಿನದಂದು ಮಹತ್ವದ ಹುದ್ದೆಯಲ್ಲಿದ್ದು ಸೇವೆ ಸಲ್ಲಿಸಿರುವುದನ್ನು ಸ್ಮರಿಸುವ ಹಾಗೂ ಇನ್ನು ಮುಂದೆ ಮಾಡಬೇಕಾದ ಕೆಲಸಗಳನ್ನು ಪಟ್ಟಿ ಮಾಡುವ ಸಂದರ್ಭ ಒದಗಿ ಬಂದಿದೆ.

ರಾಜ್ಯದಲ್ಲಿ ಕಳೆದ ಒಂದೂವರೆ ವರ್ಷದಿಂದ ರಾಜ್ಯ ಸರ್ಕಾರ, ವಿವಿಧ ಸಂಘ-ಸಂಸ್ಥೆಗಳು ಎಲ್ಲಕ್ಕಿಂತ ಹೆಚ್ಚಾಗಿ ಸಾಮಾನ್ಯ ಜನರು ಒಗ್ಗಟ್ಟಾಗಿ ಕೋವಿಡ್ ವಿರುದ್ಧದ ಹೋರಾಟದಲ್ಲಿ ತೊಡಗಿದ್ದಾರೆ. ಈ ಒಂದೂವರೆ ವರ್ಷದಲ್ಲಿ ಆರೋಗ್ಯ ಕ್ಷೇತ್ರದಲ್ಲಾದ ಸುಧಾರಣೆಗಳು ಅನೇಕ. ಕೊರೊನಾ ನಿಯಂತ್ರಣಕ್ಕಾಗಿ ರಾಜ್ಯದ ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ತಂದ ಪ್ರಗತಿ ಕಾರ್ಯಗಳಿಂದ ಇಂದು ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆಗಳು ಲಭ್ಯವಿದೆ. ಹೊಸ ಗುರಿಗಳೊಂದಿಗೆ ಇನ್ನಷ್ಟು ಸುಧಾರಣೆ ತರುವ ಸಂಕಲ್ಪದೊಂದಿಗೆ ಮುನ್ನಡೆಯಲಾಗುತ್ತಿದೆ.

ಆರೋಗ್ಯ ಕೇಂದ್ರಗಳಲ್ಲಿ ಹಾಸಿಗೆ ವ್ಯವಸ್ಥೆ, ಪ್ರಯೋಗಾಲಯಗಳ ಸ್ಥಾಪನೆ, ಲಸಿಕಾ ಅಭಿಯಾನ ಸೇರಿದಂತೆ ಕೊರೊನಾ ವಿರುದ್ಧದ ಹೋರಾಟಕ್ಕೆ ಬೇಕಾದ ಸಕಲ ವ್ಯವಸ್ಥೆಯನ್ನು ಮಾಡುವಲ್ಲಿ ರಾಜ್ಯ ಮುಂದಿದೆ. ಕೇಂದ್ರ ಸರ್ಕಾರ ಹಾಗೂ ವಿಶ್ವ ಆರೋಗ್ಯ ಸಂಸ್ಥೆ ಕೂಡ ಕೋವಿಡ್ ನಿಯಂತ್ರಣದಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳನ್ನು ಶ್ಲಾಘಿಸಿರುವುದು ಹೆಮ್ಮೆಯ ವಿಚಾರ.

ಪರೀಕ್ಷೆ, ಹಾಸಿಗೆ ಹೆಚ್ಚಳ

ಕೋವಿಡ್ ಆರಂಭ ಕಾಲದಲ್ಲಿ ರಾಜ್ಯದಲ್ಲಿ ಕೇವಲ ಎರಡು ಪ್ರಯೋಗಾಲಯಗಳಿದ್ದವು. ನಂತರ ಹಂತಹಂತವಾಗಿ ಲ್ಯಾಬ್‌ಗಳನ್ನು ಆರಂಭಿಸಿ ಒಟ್ಟು 241 ಪ್ರಯೋಗಾಲಯಗಳು ಸ್ಥಾಪನೆಯಾದವು. ಈ ಪೈಕಿ 91 ಸರ್ಕಾರಿ ಪ್ರಯೋಗಾಲಯಗಳಾಗಿವೆ. ಇದರಿಂದಾಗಿ ಹೆಚ್ಚು ಸಂಪರ್ಕಿತರನ್ನು ಪತ್ತೆ ಮಾಡಿ ಅವರಿಗೂ ಪರೀಕ್ಷೆ ಮಾಡಿಸಿ, ಸೋಂಕು ನಿಯಂತ್ರಣಕ್ಕೆ ತರಲು ಸಹಕಾರಿಯಾಗಿದೆ. ಪ್ರಸ್ತುತ ಪ್ರತಿದಿನ ಒಂದೂವರೆ ಲಕ್ಷದಷ್ಟು ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 1,970 ಆಕ್ಸಿಜನ್ ಹಾಸಿಗೆಗಳಿದ್ದು, ಅದನ್ನು 23,971ಕ್ಕೆ ಏರಿಸಲಾಗಿದೆ. ಈ ಆಸ್ಪತ್ರೆಗಳಲ್ಲಿ ಯಾವುದೇ ಎಚ್‌ಎಫ್‌ಎನ್‌ಸಿ ಹಾಸಿಗೆಗಳಿರಲಿಲ್ಲ. ಅದಕ್ಕಾಗಿ ಒಂದೇ ಬಾರಿಗೆ 1,248 ಹಾಸಿಗೆಗಳನ್ನು ಅಳವಡಿಸಲಾಯಿತು. 444 ಐಸಿಯು ಹಾಸಿಗೆಗಳ ಸಂಖ್ಯೆಯನ್ನು 1,145ಕ್ಕೆ ಹೆಚ್ಚಿಸಲಾಯಿತು. 610 ವೆಂಟಿಲೇಟರ್‌ಗಳನ್ನು 2,158ಕ್ಕೆ ಏರಿಸಲಾಯಿತು. ಇದೇ ರೀತಿ ಮೆಡಿಕಲ್ ಕಾಲೇಜುಗಳಲ್ಲಿ ಆಕ್ಸಿಜನ್ ಹಾಸಿಗೆಗಳನ್ನು 4,700ರಿಂದ 9,405ಕ್ಕೆ, ವೆಂಟಿಲೇಟರ್‌ಗಳನ್ನು 341ರಿಂದ 646ಕ್ಕೆ ಏರಿಸಲಾಯಿತು. 15 ಎಚ್‌ಎಫ್‌ಎನ್‌ಸಿ ಹಾಸಿಗೆಗಳನ್ನು 570ಕ್ಕೆ ಹೆಚ್ಚಿಸಲಾಯಿತು. ಇದಲ್ಲದೆ ಮೆಡಿಕಲ್ ಕಾಲೇಜುಗಳಲ್ಲಿ ಲಿಕ್ವಿಡ್ ಆಮ್ಲಜನಕದ ಘಟಕಗಳ ಸಾಮರ್ಥ್ಯವನ್ನು 151 ಕೆಎಲ್‌ನಿಂದ 224 ಕೆಎಲ್‌ಗೆ ಏರಿಸಲಾಗಿದೆ. ಜೊತೆಗೆ ಖಾಸಗಿ ಆಸ್ಪತ್ರೆಗಳ ಶೇ. 50ರಷ್ಟು ಹಾಸಿಗೆಗಳನ್ನು ಪಡೆಯುವುದು, ಪ್ರತಿ ಜಿಲ್ಲೆಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಕೋವಿಡ್ ಆರೈಕೆ ಕೇಂದ್ರಗಳ ನಿರ್ಮಾಣದಿಂದ ರೋಗಿಗಳ ಆರೈಕೆ ಸುಲಭವಾಗಿದೆ.

ಆಕ್ಸಿಜನ್ ಸಾಂದ್ರಕಗಳ ಕೊಡುಗೆ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕರೆಗೆ ಓಗೊಟ್ಟು ಅನೇಕ ಖಾಸಗಿ ಕಂಪನಿ, ಸಂಘ–ಸಂಸ್ಥೆಗಳು ಮುಂದೆ ಬಂದು ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಕೊಡುಗೆ ನೀಡಿವೆ. ಇನ್ಫೋಸಿಸ್ ಪ್ರತಿಷ್ಠಾನದಿಂದ ಚರಕ ಆಸ್ಪತ್ರೆ ನಿರ್ಮಾಣಕ್ಕೆ ನೆರವು, ಜೆಎಸ್‌ಡಬ್ಲ್ಯು ಸ್ಟೀಲ್‌ನಿಂದ ಬಳ್ಳಾರಿಯಲ್ಲಿ ಆಕ್ಸಿಜನ್ ಸಹಿತ ಹಾಸಿಗೆಗಳ ಕೋವಿಡ್ ಕೇಂದ್ರ ನಿರ್ಮಿಸಲಾಗಿದೆ. ಈ ರೀತಿ ಅನೇಕ ಸಂಸ್ಥೆಗಳು ಹಾಸಿಗೆ, ಐಸಿಯು ಮೊದಲಾದ ಮೂಲಸೌಕರ್ಯಕ್ಕೆ ನೆರವು ನೀಡಿದವು. ಇದೇ ರೀತಿ ಇನ್ನಷ್ಟು ಸಂಸ್ಥೆಗಳು ಮುಂದೆ ಬಂದು ಆಕ್ಸಿಜನ್ ಸಾಂದ್ರಕಗಳನ್ನು ಕೊಡುಗೆಯಾಗಿ ನೀಡಿದ್ದು, ಸಾವಿರಾರು ರೋಗಿಗಳಿಗೆ ಜೀವರಕ್ಷಕವಾಗಿ ಕೆಲಸ ಮಾಡಿತು.



ಲಸಿಕೆ: ಡಿಸೆಂಬರ್ ಗುರಿ



‘ರಾಜ್ಯದಲ್ಲಿ ಕೋವಿಡ್ ಲಸಿಕೆ ಅಭಿಯಾನ ಆರಂಭದಿಂದಲೂ ಚುರುಕಾಗಿ ಸಾಗಿದೆ. ನಡುವೆ ಕೆಲ ಸಮಯದಲ್ಲಿ ಲಸಿಕೆಗೆ ಕೊರತೆ ಉಂಟಾದರೂ ಕೂಡ ಸಮಸ್ಯೆಯನ್ನು ಕೂಡಲೇ ಸರಿಪಡಿಸಿ ಲಸಿಕೆ ನೀಡಲಾಗುತ್ತಿದೆ. ಜೂನ್ 21ರಿಂದ ಲಸಿಕೆ ಪೂರೈಸುವ ಸಂಪೂರ್ಣ ಜವಾಬ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ವಹಿಸಿಕೊಂಡು ರಾಜ್ಯ ಸರ್ಕಾರಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಇದಾದ ಬಳಿಕ ಲಸಿಕಾ ಅಭಿಯಾನಕ್ಕೆ ಇನ್ನಷ್ಟು ಚುರುಕು ನೀಡಲಾಗಿದೆ.


ಇತ್ತೀಚೆಗೆ ಕರ್ನಾಟಕ 2 ಕೋಟಿ ಜನರಿಗೆ ಲಸಿಕೆ ನೀಡಿದ್ದು, ದಕ್ಷಿಣ ಭಾರತದ ರಾಜ್ಯಗಳಲ್ಲಿ ಲಸಿಕೆ ನೀಡುವುದರಲ್ಲಿ ನಂ.1 ಆಗಿರುವುದು ಹೆಮ್ಮೆಯ ಸಂಗತಿ. ಡಿಸೆಂಬರ್ ಅಂತ್ಯದಲ್ಲಿ ರಾಜ್ಯದ ಪ್ರತಿ ವ್ಯಕ್ತಿ ಲಸಿಕೆ ಪಡೆದಿರಬೇಕು ಎಂಬ ಗುರಿ ಇರಿಸಿಕೊಂಡಿದ್ದು, ಅದಕ್ಕೆ ತಕ್ಕಂತೆ ಸೂಚನೆಗಳನ್ನು ನೀಡಲಾಗಿದೆ. ಖಾಸಗಿ ಕೇಂದ್ರಗಳೂ ಸೇರಿದಂತೆ ಒಟ್ಟು 13 ಸಾವಿರ ಕೇಂದ್ರಗಳಲ್ಲಿ ಲಸಿಕೆ ಅಭಿಯಾನ ಭರದಿಂದ ನಡೆಯುತ್ತಿದೆ. ಎಲ್ಲರಿಗೂ ಲಸಿಕೆ ನೀಡಿದರೆ, ಕೋವಿಡ್ ಮೂರನೇ ಅಲೆಯ ಬಗ್ಗೆ ಆತಂಕದ ಅಗತ್ಯವೇ ಇರುವುದಿಲ್ಲ.


ಆದರೆ ಲಸಿಕೆ ಬಗೆಗಿನ ತಪ್ಪು ತಿಳಿವಳಿಕೆಗಳಿಂದಾಗಿ ಜನರು ಲಸಿಕಾ ಕೇಂದ್ರಗಳಿಂದ ದೂರ ಉಳಿಯುವ ಸಮಸ್ಯೆ ಆರಂಭದಲ್ಲಿ ಗಮನಕ್ಕೆ ಬಂದಿತ್ತು. ಇತ್ತೀಚೆಗೆ ಈ ಸಮಸ್ಯೆ ನಿವಾರಣೆಯಾದಂತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲೂ ಇನ್ನೂ ಪರೀಕ್ಷೆ ಮಾಡಿಸಿಕೊಳ್ಳಲು ಹಾಗೂ ಲಸಿಕೆ ಹಾಕಲು ಹಿಂದೇಟು ಹಾಕುತ್ತಿರುವುದು ಕಂಡುಬರುತ್ತಿದೆ. ಜನರು ಸರ್ಕಾರೊಂದಿಗೆ ಕೈ ಜೋಡಿಸಿ ಲಸಿಕೆ ಪಡೆದು, ಕೊರೊನಾ ನಿರ್ಮೂಲನೆಗೆ ಸಹಕರಿಸಬೇಕು ಎಂಬುದು ನನ್ನ ಮನವಿ’

– **ಡಾ. ಕೆ. ಸುಧಾಕರ್,** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ









ಕೋವಿಡ್ ಎರಡನೇ ಅಲೆಯ ವೇಳೆ ಮೆಡಿಕಲ್ ಆಕ್ಸಿಜನ್‌ನ ಸಮಸ್ಯೆ ಹೆಚ್ಚಾಗಿ ಕಾಡಿತು. ಇದಕ್ಕಾಗಿ ಕೈಗಾರಿಕಾ ಆಕ್ಸಿಜನ್ ಕೂಡ ಪಡೆಯಲು ಕೇಂದ್ರ ಸರ್ಕಾರ ಸೂಚನೆ ನೀಡಿತು. ಆದರೆ ಶೀಘ್ರದಲ್ಲಿ ಸಾಗಣೆ ಮಾಡುವುದು ಸಮಸ್ಯೆಯಾಯಿತು. ಈ ವೇಳೆ ಕೈಗಾರಿಕೋದ್ಯಮಿಗಳು, ಪೂರೈಕೆದಾರರ ಜೊತೆ ಸಮಾಲೋಚಿಸಿ ತ್ವರಿತ ಕ್ರಮ ಕೈಗೊಳ್ಳಲಾಯಿತು. ಇದರಿಂದ ಸಕಾಲದಲ್ಲಿ ಆಸ್ಪತ್ರೆಗಳಿಗೆ ಆಕ್ಸಿಜನ್ ಸಿಲಿಂಡರ್ ತಲುಪಿಸಲು ನೆರವಾಯಿತು.

ಅನೇಕ ಖಾಸಗಿ ಕಂಪನಿಗಳು, ಟ್ರಸ್ಟ್, ಎನ್‌ಜಿಒಗಳು ಕೋವಿಡ್‌ಗಾಗಿ ಮೂಲಸೌಕರ್ಯ ಒದಗಿಸುವ ಆಶಯ ಹೊಂದಿದ್ದವು. ಕೆಲ ಕಂಪನಿಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಹಣ ಖರ್ಚು ಮಾಡಿ ಮೂಲಸೌಕರ್ಯ ನೀಡಲು ಬಯಸಿದ್ದವು.

ಮೆಡಿಕಲ್ ಆಕ್ಸಿಜನ್ ಪೂರೈಕೆಯ ಸವಾಲುಗಳ ಸಂದರ್ಭದಲ್ಲಿ ಹೆಚ್ಚು ಸಹಾಯವಾಗಿದ್ದು ಆಕ್ಸಿಜನ್ ಸಾಂದ್ರಕಗಳು. ಸುಲಭವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡಯ್ಯಬಹುದಾದ ಸಾಂದ್ರಕಗಳನ್ನು ನೀಡಲು ಕಂಪನಿಗಳು, ಸಂಘ, ಸಂಸ್ಥೆಗಳು ಮುಂದೆ ಬಂದವು. ಈ ಸಾಂದ್ರಕಗಳನ್ನು ಪಡೆದು ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಿಗೆ ಪೂರೈಕೆ ಮಾಡಲಾಯಿತು. ಆಕ್ಸಿಜನ್ ಕೊರತೆಯಿಂದ ಬಳಲುತ್ತಿದ್ದ ರೋಗಿಗಳಿಗೆ ಇದು ಬಹಳಷ್ಟು ನೆರವಾಯಿತು.

ವಿಶ್ವ ಆರೋಗ್ಯ ಸಂಸ್ಥೆಯಿಂದ 100 ಆಕ್ಸಿಜನ್ ಸಾಂದ್ರಕ, ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್‌ನಿಂದ 79 ಆಕ್ಸಿಜನ್ ಸಾಂದ್ರಕ, ಸ್ನೇಹ ಚಾರಿಟೇಬಲ್ ಟ್ರಸ್ಟ್‌ನಿಂದ 500 ಆಕ್ಸಿಜನ್ ಸಾಂದ್ರಕ, ಹರ್ಬಲೈಫ್ ಇಂಡಿಯಾದಿಂದ 150 ಆಕ್ಸಿಜನ್ ಸಾಂದ್ರಕ, ಗ್ರೀನ್ ಕೋದಿಂದ 10 ಎಲ್ ಪಿಎಂ ಸಾಮರ್ಥ್ಯದ 200 ಸಾಂದ್ರಕ ಸೇರಿದಂತೆ ವಿವಿಧ ಕಂಪನಿ, ಸಂಘಟನೆಗಳು ಮೆಡಿಕಲ್ ಆಕ್ಸಿಜನ್ ಉಪಕರಣಗಳನ್ನು ನೀಡಿ ರೋಗಿಗಳ ಚಿಕಿತ್ಸೆಗೆ ನೆರವಾಗಿರುವುದು ಶ್ಲಾಘನೀಯ. ಈ ಕೊಡುಗೆಗಳು ಕೊರೊನಾ ವಿರುದ್ಧದ ಒಗ್ಗಟ್ಟಿನ ಹೋರಾಟಕ್ಕೆ ಬಲ ನೀಡಿವೆ.

ಸಂಪೂರ್ಣ ಉಚಿತ ಚಿಕಿತ್ಸೆ

ಕೋವಿಡ್ ಸೋಂಕಿನಿಂದ ಬಳಲಿದವರಿಗೆ ಹಾಗೂ ಇದರಿಂದ ನೊಂದ ಕುಟುಂಬಗಳಿಗೆ ಸಾಂತ್ವನ ನೀಡುವ ಕೆಲಸವನ್ನೂ ರಾಜ್ಯ ಸರ್ಕಾರ ಮಾಡಿದೆ. ಸರ್ಕಾರ ನಿಯೋಜಿಸಿದ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ 1ನೇ ಹಾಗೂ 2ನೇ ಅಲೆಯಲ್ಲಿ 2.06 ಲಕ್ಷ ಕೋವಿಡ್ ರೋಗಿಗಳಿಗೆ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲಾಗಿದೆ. ಇದಕ್ಕಾಗಿ 956 ಕೋಟಿ ರೂ. ಮೊತ್ತದ ಹಣ ಭರಿಸಲಾಗಿದೆ.

ಕೋವಿಡ್‌ನಿಂದ ಗುಣಮುಖರಾದವರಲ್ಲಿ ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುವ ಸಮಸ್ಯೆ ಆರಂಭವಾಗಿದೆ. ಇದಕ್ಕಾಗಿ ಕೊರೊನಾ ಬಿಡುಗಡೆಯ ಮಾರ್ಗಸೂಚಿಯಲ್ಲಿ ಕೆಲ ಅಂಶಗಳನ್ನು ಸೇರಿಸಲಾಗಿದೆ. ಪ್ರತಿ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಕಾಪಾಡುವುದು, ಮೆಡಿಕಲ್ ಆಕ್ಸಿಜನ್‌ನಲ್ಲಿರುವ ಹ್ಯುಮಿಡಿಫೈರ್‌ನಲ್ಲಿ ನೀರಿನ ಶುದ್ಧತೆಗೆ ಆದ್ಯತೆ ನೀಡುವುದು, ಸ್ಟೀರಾಯ್ಡ್ ಬಳಕೆ ನಿಯಂತ್ರಣ, ಮಾಸ್ಕ್ ಬಳಕೆಗೆ ನಿಯಮ, ಆಸ್ಪತ್ರೆ ಸಮೀಪ ನಿರ್ಮಾಣ ಕಾಮಗಾರಿಗೆ ತಡೆ ಮೊದಲಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೊರೊನಾದಿಂದ ಗುಣಮುಖರಾದವರ ಮೇಲೆ ಹೆಚ್ಚಿನ ನಿಗಾ ಇರಿಸುವ, ಒಂದು ವಾರದ ಬಳಿಕ ಮತ್ತೆ ವೈದ್ಯಕೀಯ ತಪಾಸಣೆಗೆ ಒಳಪಡಿಸುವ ಕ್ರಮವನ್ನೂ ವಹಿಸಲಾಗಿದೆ.

ವೈದ್ಯರ ನೇಮಕ

ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಅತಿ ಕಡಿಮೆ ಅವಧಿಯಲ್ಲಿ ನೇರ ನೇಮಕಾತಿ ಮೂಲಕ 1,763 ವೈದ್ಯರು, ವೈದ್ಯಾಧಿಕಾರಿಗಳ ಹುದ್ದೆ ತುಂಬಲಾಗಿದೆ. 715 ಹಿರಿಯ ತಜ್ಞರು ಹಾಗೂ 1,048 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇಮಕದಿಂದಾಗಿ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಆರೋಗ್ಯ ಕೇಂದ್ರಗಳಲ್ಲಿ ಕೊರತೆ ನೀಗಿದೆ. ಕೋವಿಡ್ ಮೂರನೇ ಅಲೆ ಬರಬಹುದು ಹಾಗೂ ಇದರಲ್ಲಿ ಮಕ್ಕಳಿಗೆ ಹೆಚ್ಚು ಸಮಸ್ಯೆಯಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಇದಕ್ಕೆ ಪೂರಕವಾಗಿ ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಮಕ್ಕಳ ವಿಭಾಗವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಜೊತೆಗೆ ಈ ನೇಮಕಾತಿ ಪ್ರಕ್ರಿಯೆಯಲ್ಲೇ ಹೊಸದಾಗಿ 153 ಮಕ್ಕಳ ತಜ್ಞರನ್ನು ನೇಮಿಸಲಾಗಿದೆ. ಮಕ್ಕಳಿಗೆ ಸೋಂಕು ಹರಡದಂತೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ವಹಿಸಿದ್ದು, ಯಾವುದೇ ಆತಂಕದ ಅಗತ್ಯವಿಲ್ಲ.

2015-16ನೇ ಸಾಲಿನ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಸೇರಿದಂತೆ ಒಂದು ವರ್ಷ ಕಡ್ಡಾಯ ಸೇವೆ ಮಾಡುವುದಾಗಿ ಬಂಧಪತ್ರ ನೀಡಿದ್ದ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಮಾಡಲಾಗಿದೆ. ಖಾಲಿ ಇದ್ದ 2,108 ಹುದ್ದೆಗಳ ಪೈಕಿ, 2,050 ಹುದ್ದೆ ತುಂಬಲು ಎಂಬಿಬಿಎಸ್ ಪೂರ್ಣಗೊಳಿಸಿದ ಒಟ್ಟು 2,050 ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಸ್ಥಳ ನಿಯುಕ್ತಿ ಮಾಡಿ ಕೇವಲ ಎರಡು ತಿಂಗಳಲ್ಲಿ ಹುದ್ದೆ ಭರ್ತಿ ಮಾಡಲಾಗಿದೆ. ತಾಲೂಕು ಆಸ್ಪತ್ರೆಗಳಿಗೆ 438, ಜಿಲ್ಲಾಸ್ಪತ್ರೆಗಳಿಗೆ 228, ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ 1,004 ಎನ್.ಎನ್.ಎಂ. ಕಾರ್ಯಕ್ರಮಗಳಿಗೆ 438 ವೈದ್ಯರನ್ನು ನೀಡಲಾಗಿದೆ. ಈ ವೈದ್ಯರು ಜೂನ್ ಅಂತ್ಯದಲ್ಲೇ ಕೆಲಸಕ್ಕೆ ಹಾಜರಾಗಲಿದ್ದು, ಇವರಿಗೆ ಕೋವಿಡ್ ನಿಯಂತ್ರಣದ ತರಬೇತಿ ಸಹ ನೀಡಲಾಗುವುದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೋವಿಡ್ ಮೂರನೇ ಅಲೆಗೆ ಸಿದ್ಧತೆ

ಕೋವಿಡ್ ಮೂರನೇ ಅಲೆ ಬರುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದಿಂದ ತಕ್ಷಣದ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿದೆ. ಡಾ.ದೇವಿ ಪ್ರಸಾದ್ ಶೆಟ್ಟಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಈ ಸಮಿತಿ ಮಧ್ಯಂತರ ವರದಿಯನ್ನು ನೀಡಿದೆ. ಆದರೆ ಈಗಾಗಲೇ ಮೂರನೇ ಅಲೆಯನ್ನು ತಡೆಗಟ್ಟಲು ಹಾಗೂ ಒಂದು ವೇಳೆ ಅಲೆ ಕಂಡುಬಂದರೂ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರಬಹುದು ಎಂಬ ಅಂದಾಜು ಇರುವುದರಿಂದ ಜಿಲ್ಲಾಸ್ಪತ್ರೆಗಳಲ್ಲಿ 70-80 ಹಾಸಿಗೆಗಳ ಸಹಿತ ಮಕ್ಕಳ ವಿಭಾಗವನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಸುಮಾರು 50 ಮಕ್ಕಳ ತಜ್ಞರಿಗೆ ಬಿಬಿಎಂಪಿಯಿಂದ ತರಬೇತಿ ನೀಡಲಾಗಿದೆ. ವೆಂಟಿಲೇಟರ್, ಎನ್‌ಐವಿ, ಸಿಪಿಆರ್ ಹಾಗೂ ಇತರೆ ಉಪಕರಣಗಳ ಬಳಕೆ ಬಗ್ಗೆ ಪ್ರಾಯೋಗಿಕ ತರಬೇತಿ ಕೊಡಲಾಗಿದೆ. ಮಕ್ಕಳಲ್ಲಿ ಅಗತ್ಯವಿರುವವರಿಗೆ ಹೇಗೆ ಆಕ್ಸಿಜನ್ ನೀಡಬೇಕು ಎಂಬ ಬಗ್ಗೆ ಈ ತಜ್ಞರಿಗೆ ಮಾರ್ಗದರ್ಶನ ನೀಡಲಾಗಿದೆ.

ಮುಂದಿನ ಮೂರು ತಿಂಗಳಲ್ಲಿ ಮಕ್ಕಳಿಗೆ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಲು ಕೂಡ ಕ್ರಮ ವಹಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕಾರ್ಯಕರ್ತರ ನೆರವಿನಿಂದ ಅಪೌಷ್ಟಿಕತೆಯಿಂದ ಬಳಲುತ್ತಿರುವ ಹಾಗೂ ದುರ್ಬಲ ಆರೋಗ್ಯದ ಮಕ್ಕಳನ್ನು ಗುರುತಿಸುವ ಕಾರ್ಯ ಮಾಡಲಾಗುತ್ತಿದೆ. 5 ವರ್ಷಕ್ಕಿಂತ ಸಣ್ಣ ವಯಸ್ಸಿನ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಿದರೂ ಅವರ ಜೊತೆ ತಂದೆ, ತಾಯಿ ಇರಬೇಕಾಗುತ್ತದೆ. ಇದಕ್ಕಾಗಿ ಐಸಿಯು ಹಾಗೂ ಮಕ್ಕಳ ಚಿಕಿತ್ಸಾ ವಿಭಾಗದಲ್ಲಿ ಪಾಲಕರಿಗೂ ಇರಲು ಅವಕಾಶ ಮಾಡಿಕೊಡಲು ವ್ಯವಸ್ಥೆ ಮಾಡಲಾಗುತ್ತಿದೆ. ಅಂತಹ ಪಾಲಕರನ್ನು ಗುರುತಿಸಿ ಆದ್ಯತೆ ಮೇರೆ ಅವರಿಗೂ ಲಸಿಕೆ ನೀಡುವ ಬಗ್ಗೆ ಚರ್ಚಿಸಲಾಗಿದೆ.

ಕಾಲೇಜು ವಿದ್ಯಾರ್ಥಿಗಳಿಗೆ ತರಗತಿ ಆರಂಭಿಸುವ ಮುನ್ನವೇ ಲಸಿಕೆ ನೀಡುವುದು ಸೂಕ್ತ ಎಂದು ತಜ್ಞರು ಸಲಹೆ ನೀಡಿದ್ದಾರೆ. ಇದಕ್ಕಾಗಿ ಕಾಲೇಜು ಆವರಣದಲ್ಲೇ ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಾಗಿ ಲಸಿಕಾ ಅಭಿಯಾನ ನಡೆಸಲು ಉದ್ದೇಶಿಸಲಾಗಿದೆ. ಈ ಮೂಲಕ ಕಾಲೇಜುಗಳನ್ನು ಯಾವುದೇ ಆತಂಕವಿಲ್ಲದೆ ಆರಂಭಿಸಬಹುದಾಗಿದೆ.

ಹೊಸ ವೈರಾಣು

ಡೆಲ್ಟಾ ಪ್ಲಸ್ ಎಂಬ ಹೊಸ ರೂಪಾಂತರಿ ವೈರಸ್ ವೇಗವಾಗಿ ಹರಡುತ್ತಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೋವಿಡ್‌ನ ಒಟ್ಟು ಪರೀಕ್ಷೆಯಲ್ಲಿ ಶೇ.5ರಷ್ಟು ಪ್ರಕರಣಗಳನ್ನು ಜೀನೋಮ್ ಸೀಕ್ವೆನ್ಸ್ ಮಾಡಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಈ ಪರೀಕ್ಷೆ ಕೊರೊನಾ ಮೂರನೇ ಅಲೆ ವೇಗ ತಡೆಗಟ್ಟಲು ಸಹಕಾರಿಯಾಗಲಿದೆ. ಅದರಂತೆ, ಬೆಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಹುಬ್ಬಳ್ಳಿ ವೈದ್ಯಕೀಯ ಕಾಲೇಜುಗಳು ಮತ್ತು ಮಂಗಳೂರು, ವಿಜಯಪುರದ ಜಿಲ್ಲಾಸ್ಪತ್ರೆಗಳಲ್ಲಿ ಒಟ್ಟು 6 ಜೀನೋಮ್ ಸೀಕ್ವೆನ್ಸ್ ಲ್ಯಾಬ್ ಆರಂಭಿಸಲಾಗುತ್ತಿದೆ.

ಕೊರೊನಾ ಸೇನಾನಿಗಳಿಗೆ ಧನ್ಯವಾದ

ಈ ಸಂದರ್ಭದಲ್ಲಿ ನಾನು ಅತಿಮುಖ್ಯವಾಗಿ ಸ್ಮರಿಸುವುದು ನಮ್ಮ ಕೊರೊನಾ ಯೋಧರನ್ನು. ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ವೈದ್ಯರು, ನರ್ಸ್‌ಗಳು, ಇತರೆ ಸಿಬ್ಬಂದಿ ಕೊರೊನಾ ನಿಯಂತ್ರಿಸುವಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಯನ್ನು ಬದಗಿಟ್ಟು ಸಮಾಜಕ್ಕೆ ದುಡಿಯುತ್ತಿದ್ದಾರೆ. ಇನ್ನೂ ಹಲವರು ಕರ್ತವ್ಯದಿಂದಾಗಿ ಪ್ರಾಣತ್ಯಾಗ ಮಾಡಿ ಹುತಾತ್ಮರಾಗಿದ್ದಾರೆ. ಈ ಶ್ರಮಿಕ ಸೇವಕರಿಗೆ ನಾನು ನನ್ನ ಜನ್ಮದಿನವನ್ನು ಸಂಪೂರ್ಣವಾಗಿ ಸಮರ್ಪಿಸುತ್ತೇನೆ. ಇಂತಹ ಸೇನಾನಿಗಳ ಕರ್ತವ್ಯಪ್ರಜ್ಞೆಯನ್ನು ನೆನೆದು ನಾವೆಲ್ಲರೂ ಕೋವಿಡ್ ಸುರಕ್ಷತಾ ಕ್ರಮಗಳನ್ನು ಹಾಗೂ ಸರ್ಕಾರದ ಮಾರ್ಗಸೂಚಿಯನ್ನು ತಪ್ಪದೇ ಪಾಲಿಸೋಣ ಹಾಗೂ ಈ ಮೂಲಕ ಕೊರೊನಾ ಗೆಲ್ಲೋಣ.

ಜೀವ ರಕ್ಷಕರಿಗೆ ನನ್ನ ಪ್ರಣಾಮಗಳು...



ತಮಗೆಲ್ಲರಿಗೂ ಗೊತ್ತಿದೆ. ಕೋವಿಡ್-19ನ ಎರಡೂ ಅಲೆಗಳ ಅತ್ಯಂತ ಸಂಕಷ್ಟ ಕಾಲವನ್ನು ನಮ್ಮ ರಾಜ್ಯ ಅತ್ಯಂತ ದಿಟ್ಟವಾಗಿ ಎದುರಿಸಿದೆ. ಕೇಂದ್ರ ಸರಕಾರದ ಮಾರ್ಗದರ್ಶನ, ಮುಖ್ಯಮಂತ್ರಿಗಳ ಸಕಾಲಿಕ ನಿರ್ಧಾರಗಳು ಮತ್ತು ಸಾರ್ವಜನಿಕರ ಸಹಕಾರದಿಂದ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ನಮಗೆ ಸಾಕಷ್ಟು ಯಶಸ್ಸು ಸಿಕ್ಕಿದೆ ಎನ್ನುವುದು ನನ್ನ ಅಭಿಪ್ರಾಯ.

ದೇಶದಲ್ಲೇ ಮೊದಲ ಬಾರಿಗೆ ಕೋವಿಡ್ ಸಾವು ಸಂಭವಿಸಿದ್ದು ಕಲಬುರಗಿಯಲ್ಲಿ. ಕೊರೊನಾ ವೈರಸ್‌ನ ಹಲವು ಹೊಸ ವೇರಿಯೆಂಟ್‌ಗಳು ಮೊದಲು ನಮ್ಮಲ್ಲೇ ಪತ್ತೆಯಾದವು. ಇಂಥ ಹೊತ್ತಿನಲ್ಲಿ ಆತಂಕವಾಗುವುದು ಸಹಜವೇ ಆಗಿದ್ದರೂ ಪ್ರತಿಯೊಂದು ಹಂತವನ್ನೂ ನಾವು ಅತ್ಯಂತ ತಾಳ್ಮೆಯಿಂದ ನಿಭಾಯಿಸಿದ್ದೇವೆ.

ಪ್ರತಿ ಬಾರಿಯೂ ಒಂದು ದೊಡ್ಡ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಾಗ ನಮಗೆ ದೇವರಂತೆ ಕಾಣಿಸುವುದು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ. ಕಣ್ಣಿಗೆ ಕಾಣಿಸದ ವೈರಾಣುವೊಂದು ದೇಹದಲ್ಲಿ ಉಂಟು ಮಾಡುವ ಅಪಸವ್ಯಗಳನ್ನು ಅರಿತು ಚಿಕಿತ್ಸೆ ನೀಡಿ ಪ್ರಾಣರಕ್ಷಣೆ ಮಾಡುವವರು ಅವರು. ಕೊರೊನಾ ಪರಿಸ್ಥಿತಿ ಅದೆಲ್ಲದಕ್ಕಿಂತಲೂ ಭಿನ್ನ. ಇಲ್ಲಿ ವೈದ್ಯಕೀಯ ಲೋಕವೇನಾದರೂ ತಾನೂ ಕೊರೊನಾದ ಭಯದಿಂದ ಕೈ ಚೆಲ್ಲಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂದು ಊಹಿಸಿಕೊಳ್ಳುವುದೇ ಕಷ್ಟ. ನನಗೆ ಹೆಮ್ಮೆಯಾಗುತ್ತಿದೆ, ನಮ್ಮ ಕರ್ನಾಟಕದ ಪ್ರತಿಯೊಬ್ಬ ವೈದ್ಯರೂ ವೈದ್ಯಕೀಯ ಸಿಬ್ಬಂದಿಯೂ ತಮಗೆ ಏನಾದೀತೋ ಎಂಬ ಸಣ್ಣ ಆತಂಕವನ್ನೂ ಮನಸಿಗೆ ಹಚ್ಚಿಕೊಳ್ಳದೆ ಸಾಕಷ್ಟು ಮುನ್ನೆಚ್ಚರಿಕೆಗಳೊಂದಿಗೆ ಜನರ ಆರೋಗ್ಯ ರಕ್ಷಣೆಗೆ ಮುಂದಾಯಿತು. ಅರ್ಧ ಗಂಟೆ ಧರಿಸಲೂ ಸಾಧ್ಯವಾಗದ ಪಿಪಿಇ ಕಿಟ್‌ಗಳನ್ನು ದಿನಪೂರ್ತಿ ಧರಿಸಿ, ಮನೆಯಲ್ಲಿರುವ ಪುಟ್ಟ ಕಂದಮ್ಮಗಳು, ಸಂಸಾರವನ್ನೆಲ್ಲ ದೂರವಿಟ್ಟು ಹಗಲು ರಾತ್ರಿ ಕೆಲಸ ಮಾಡಿದ್ದಾರೆ ಇವರೆಲ್ಲ.

ಜಗತ್ತು ಆರೋಗ್ಯದ ಆಪತ್ತಿಗೆ ಸಿಲುಕಿದಾಗ ನಾವು ಸೈನಿಕರಾಗಬೇಕು ಎಂಬ ದೃಢ ನಿರ್ಧಾರದೊಂದಿಗೆ ವೈದ್ಯರು, ನರ್ಸ್‌ಗಳು, ಆಸ್ಪತ್ರೆಗಳ ನಾನಾ ವಿಭಾಗಗಳ ಸಿಬ್ಬಂದಿ, ಆಯಾಗಳು ಕೆಲಸ ಮಾಡಿದರು. ನಾನು ತುಂಬಾ ಆದರಪೂರ್ವಕವಾಗಿ ಗೌರವಿಸುವ ಆಶಾ ಕಾರ್ಯಕರ್ತೆಯರು, ತಳಮಟ್ಟದ ಆರೋಗ್ಯ ಕಾರ್ಯಕರ್ತರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿಗೆ ತಲೆಯನ್ನೇ ಕೆಡಿಸಿಕೊಳ್ಳದೆ ಮನೆಮನೆಗೆ ಭೇಟಿ ನೀಡಿ ಆರೋಗ್ಯ ಸೇವೆ ನೀಡಿದರು. ರಕ್ಷಣೆ ಒದಗಿಸಿದರು.

ಮೊದಲ ಅಲೆಗಿಂತಲೂ ಭೀಕರವಾಗಿ ಅಪ್ಪಳಿಸಿದ ಎರಡನೇ ಅಲೆಯಲ್ಲಿ ಆಸ್ಪತ್ರೆಗಳು, ವೈದ್ಯರು, ವೈದ್ಯಕೀಯ ಸಿಬ್ಬಂದಿ ನಡೆದುಕೊಂಡ ರೀತಿಗೆ ನಾನು ತಲೆಬಾಗಿ ನಮಿಸಲೇಬೇಕು. ಒಮ್ಮಿಂದೊಮ್ಮೆಗೇ ಎದ್ದು ಬಂದ ಶ್ವಾಸಕೋಶದ ಸಮಸ್ಯೆ, ಹೃದಯಾಘಾತ, ಬ್ಲ್ಯಾಕ್ ಫಂಗಸ್‌ನಿಂದ ದೇಹದ ಅಂಗಾಂಗಗಳನ್ನೇ ಕಳೆದುಕೊಳ್ಳುವ ಅಪಾಯಕ್ಕೆ ಸಿಲುಕಿದ ರೋಗಿಗಳು, ‘ಕವಾಸಕಿ’ಯಂಥ ವಿಚಿತ್ರ ರೋಗಕ್ಕೆ ತುತ್ತಾದ ಮಕ್ಕಳನ್ನು ಇವರು ನಿಭಾಯಿಸಿದ ರೀತಿಗೆ ಹೇಗೆ ಧನ್ಯವಾದ ಹೇಳುವುದು.

ಅದರಲ್ಲೂ ಆಮ್ಲಜನಕ ಸಿಲಿಂಡರ್, ಆಕ್ಸಿಜನ್ ಬೆಡ್‌ಗಳ ಬೇಡಿಕೆ ಒಮ್ಮಿಂದೊಮ್ಮೆಗೇ ಏರಿದಾಗ, ಏದುಸಿರು ಬಿಡುತ್ತಾ ಬಂದ ರೋಗಿಗಳನ್ನು ಅವರು ಬದುಕಿಸಲು ಪಟ್ಟ ಪಾಡು ಒಬ್ಬ ವೈದ್ಯನಾಗಿ ನನಗೆ ಅರ್ಥವಾಗುತ್ತದೆ.

ಕರ್ನಾಟಕದ ಎಲ್ಲ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳು. ತಾಲೂಕು, ಸಮುದಾಯ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರತಿಯೊಬ್ಬ ಸಿಬ್ಬಂದಿಯೂ ಈ ಮಹಾಯಜ್ಞದಲ್ಲಿ ಸರಕಾರದ ಬೆಂಬಲಕ್ಕೆ ನಿಂತಿದ್ದಾರೆ. ಎರಡನೇ ಅಲೆಯಲ್ಲಂತೂ ಆಮ್ಲಜನಕ ಉತ್ಪಾದಕರು ಮತ್ತು ಪೂರೈಕೆದಾರರಂತೂ ದೇವರಂತೆ ನಮ್ಮ ಪಾಲಿಗೆ ಒದಗಿದರು. ಹಗಲೂ ರಾತ್ರಿ ಉತ್ಪಾದನೆ, ಹಗಲು ರಾತ್ರಿ ಪೂರೈಕೆಯ ಮೂಲಕ ಜೀವ ರಕ್ಷಣೆಗೆ ಪಣ ತೊಟ್ಟರು. ಆಕ್ಸಿಜನ್ ಪೂರೈಕೆ ಒಂದರೆಕ್ಷಣ ವಿಳಂಬವಾದರೂ ಎಂಥ ದುರಂತಗಳು ನಡೆದಿವೆ ಎನ್ನುವುದನ್ನು ಕಲ್ಪಿಸಿಕೊಂಡಾಗ ಇವರ ಸೇವೆಯ ಮಹತ್ವ ನಮಗೆ ಅರ್ಥವಾಗುತ್ತದೆ.

ಕೊರೊನಾ ಹೋರಾಟದಲ್ಲಿ ಮುಂಚೂಣಿ ಸೈನಿಕರಾಗಿ ಕೆಲವರು ಹೋರಾಡಿದರೆ, ಕೋವಿಡ್ ಮಾದರಿ ಸಂಗ್ರಹ, ಸ್ಯಾಂಪಲ್ ಟೆಸ್ಟ್, ಅವುಗಳ ದಾಖಲೀಕರಣ, ಮಾಹಿತಿ ರವಾನೆ ಮಾಡುವಲ್ಲಿ ಲಕ್ಷಾಂತರ ಜನರು ತೆರೆಯ ಹಿಂದೆ ತೊಡಗಿಕೊಂಡಿದ್ದಾರೆ. ಅನಾರೋಗ್ಯಕ್ಕೆ ತುತ್ತಾದ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸುವ ಕಾಯಕದಲ್ಲಿ ಆಂಬ್ಯುಲೆನ್ಸ್ ಸಂಸ್ಥೆಗಳು, ಅದರ ಚಾಲಕರು ನಿದ್ದೆ ಇಲ್ಲದ ರಾತ್ರಿಗಳನ್ನು ಕಳೆದಿದ್ದಾರೆ. ಜನರಿಗೆ ಸಕಾಲದಲ್ಲಿ ಔಷಧ ಪೂರೈಸಿದ ಮೆಡಿಕಲ್‌ಗಳು, ಆಕ್ಸಿಮೀಟರ್ ಮತ್ತಿತರ ಸಲಕರಣೆಗಳನ್ನು ಒದಗಿಸಿ ಭಯ ನಿವಾರಿಸಿದ ವಿತಕರ ಸಂಸ್ಥೆಗಳೆಲ್ಲವೂ ನನಗೆ ಈ ಕಾಲದ ಆಪತ್ಬಾಂಧವರಂತೆ ಕಾಣುತ್ತಾರೆ.

ಇವರೆಲ್ಲರ ಕಾಳಜಿಪೂರ್ವಕ ಸೇವೆ, ತಾವೇ ಅಪಾಯಕ್ಕೆ ಸಿಲುಕುವ ಸಾಧ್ಯತೆಯನ್ನೂ ಲೆಕ್ಕಿಸದೇ ಮಾಡಿದ ಕೈಂಕರ್ಯಗಳ ಫಲವಾಗಿ ಕರ್ನಾಟಕ ಕೊರೊನಾವನ್ನು ನಿಯಂತ್ರಿಸುವಲ್ಲಿ ಸಫಲವಾಗಿದೆ ಎಂದು ಎದೆ ಮುಟ್ಟಿ ಹೇಳುತ್ತೇನೆ. ಅವರ ನೆರವಿಲ್ಲದೆ ಹೋಗಿದ್ದರೆ ಏನಾಗುತ್ತಿತ್ತು ಎಂದು ಊಹಿಸುವುದಕ್ಕೂ ಅಸಾಧ್ಯ ನನಗೆ.

ಇವತ್ತು ನನ್ನ ಜನ್ಮದಿನ. ನೂರಾರು ಜನ ಶುಭಾಶಯ, ಹಾರೈಕೆಗಳೆಲ್ಲವನ್ನೂ ನಾನು ನನ್ನ ಪ್ರೀತಿಯ ವೈದ್ಯರು, ವೈದ್ಯಕೀಯ ಸಿಬ್ಬಂದಿ, ದಾದಿಯರು, ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಆಡಳಿತ ಮತ್ತು ಸಿಬ್ಬಂದಿ ವರ್ಗ, ಆಮ್ಲಜನಕ ಮತ್ತು ಅಗತ್ಯ ಜೀವರಕ್ಷಕ ಸಾಧನಗಳನ್ನು ಪೂರೈಸಿ ಜೀವರಕ್ಷಣೆಗೆ ಪಣ ತೊಟ್ಟ ಸೇವಾ ಹೃದಯಿಗಳಿಗೆ ಅರ್ಪಿಸುತ್ತೇನೆ. ಯಾಕೆಂದರೆ, ಅವರೆಲ್ಲರ ಒಳಿತಿನಲ್ಲೇ ನನ್ನ ಒಳಿತಿದೆ.

ಹಾಗಂತ ಎಲ್ಲವೂ ಸುಖಾಂತ್ಯವಾಗಿದೆ ಅಂತಲ್ಲ. ನಮ್ಮ ರಾಜ್ಯದಲ್ಲೇ 30ಕ್ಕೂ ಅಧಿಕ ಸಾವಿರ ಮಂದಿಯನ್ನು ಕೊರೊನಾದ ವಿಷ ವರ್ತುಲದಿಂದ ರಕ್ಷಿಸಿಕೊಳ್ಳಲಾಗದ ನೋವು ನನ್ನನ್ನು ಕಾಡುತ್ತಲೇ ಇದೆ. ಮನೆಗೆ ಆಸರೆಯಾದವರನ್ನು, ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೂ ನನ್ನ ಕಣ್ಣೀರಿದೆ.

ಕೊರೊನಾ ನಿಲ್ಲುವ ಸೂಚನೆಯೂ ಕಾಣುತ್ತಿಲ್ಲ. ಮೂರನೇ ಅಲೆಯ ರೂಪದಲ್ಲಿ ಮತ್ತೆ ಬರುವ ಸಾಧ್ಯತೆ ದಟ್ಟವಾಗಿದೆ. ಆಗಲೂ ವೈದ್ಯಕೀಯ ಲೋಕವೇ ನಮ್ಮನ್ನು ರಕ್ಷಿಸಬೇಕು. ಅದೇ ಹೊತ್ತಿನಲ್ಲಿ ದೊಡ್ಡ ಪ್ರಮಾಣದಲ್ಲಿ ಲಸಿಕಾ ಅಭಿಯಾನಗಳು ನಡೆದು ಎಲ್ಲರಿಗೂ ರಕ್ಷಾ ಕವಚ ಒದಗಿಸಬೇಕು. ಲಸಿಕೆ ಅಭಿಯಾನದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಸಿಬ್ಬಂದಿಗೂ ನನ್ನ ನಮನಗಳು.

ಕೊರೊನಾ ವಿರುದ್ಧದ ಹೋರಾಟದಲ್ಲಿ ಎಲ್ಲರ ನೆರವನ್ನು ಕೈಮುಗಿದು ಕೇಳುತ್ತೇನೆ. ಸಮಸ್ತರನ್ನೂ ನೆನಪಿಸಿಕೊಳ್ಳುತ್ತಾ ಎಲ್ಲರಿಗೂ ಒಳಿತನ್ನು ಹಾರೈಸುತ್ತೇನೆ.

ಡಾ. ಕೆ. ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ



ಕೊರೊನಾ ಸೇನಾನಿಗಳೊಂದಿಗೆ ಡಾ. ಕೆ. ಸುಧಾಕರ್

ಭಾನುವಾರ, ಜೂನ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 178 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಭಿನ್ನ ಲೈಂಗಿಕ ಅಭಿವ್ಯಕ್ತಿಯ ಕುರಿತು 50 ವರ್ಷಗಳ ಹಿಂದೆ ಹುಟ್ಟಿಕೊಂಡ 'ಪ್ರೈಡ್ ಡೇ' ಆಂದೋಲನದ ಒಂದು ಹಿನ್ನೋಟ.

ರಾಜ್ಯ ಕೋವಿಡ್ ಅಂಕಿ–ಅಂಶ

28,31,026 ▲ ಒಟ್ಟು ಸೋಂಕಿತರು (28,26,754 ನಿನ್ನೆಯ ವಿವರ)

1,05,226 ▼ ಸಕ್ರಿಯ ಪ್ರಕರಣಗಳು

26,91,123 ▲ ಗುಣಮುಖರಾದವರು

34,654 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	4,272	▲
ಗುಣಮುಖ	6,126	▼
ಸಾವು	115	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೃಷಿ ಸಾಲ, ಜಟಿಲ ವರ್ತುಲ

• ವಿಶಾಖ ಎನ್.

ದಾವಣಗೆರೆ: ಮೊದಲೇ ಬಹುಸಂಖ್ಯಾತ ರೈತರಿಗೆ ಬೆಳೆ ಸಾಲ ಎನ್ನುವುದು ವರ್ತುಲದೊಳಗೆ ಸಿಲುಕಿಕೊಂಡು ಉಸಿರುಗಟ್ಟುವ ಭಾವ ಮೂಡಿಸಿತ್ತು. ಈಗ ಅಲ್ಪಾವಧಿ ಕೃಷಿ ಸಾಲಕ್ಕೆ ಸರ್ಕಾರ ವಿಧಿಸಿರುವ ಹೊಸ ಷರತ್ತುಗಳಿಂದಾಗಿ ಗಾಯದ ಮೇಲೆ ಬರೆ ಎಳೆದಂತಾಗಿವೆ.

ರೈತರು ಪಡೆಯುವ ಶೂನ್ಯ ಬಡ್ಡಿದರದ ₹ 3 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ಯೋಜನೆಯಲ್ಲಿ ಒಂದು ಕುಟುಂಬ ಗರಿಷ್ಠ ₹ 3 ಲಕ್ಷದವರೆಗೆ ಸಾಲ ಪಡೆಯಬಹುದು. ಪಹಣಿ ಇಬ್ಬರ ಹೆಸರಿನಲ್ಲಿದ್ದು, ಅವರ ಹೆಸರುಗಳು ಒಂದೇ ಪಡಿತರ ಚೀಟಿಯಲ್ಲಿದ್ದರೆ, ಅಂತಹ ಕುಟುಂಬದ ಒಬ್ಬರಿಗೆ ಮಾತ್ರ ಸಾಲ ದೊರೆಯಲಿದೆ. ಇದಲ್ಲದೆ, ಹೊಸ ನಿಯಮದಂತೆ ಮಾಸಿಕ ವೇತನ ಅಥವಾ ತಿಂಗಳಿಗೆ ₹ 20 ಸಾವಿರಕ್ಕಿಂತ ಹೆಚ್ಚಿನ ಪಿಂಚಣಿ ಪಡೆಯುತ್ತಿರುವ ಅಥವಾ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದ ರೈತರಿಗೆ ಶೂನ್ಯ ಬಡ್ಡಿ ಸಾಲ ದೊರೆಯುವುದಿಲ್ಲ. ಏಪ್ರಿಲ್ ನಂತರ ಕೃಷಿ ಸಾಲಗಳ ಮರುಪಾವತಿಯ ವೇಳೆ ಹೊಸ ಷರತ್ತು ವಿಧಿಸಿರುವುದು ರೈತರ ಗಮನಕ್ಕೆ ಬಂದಿದೆ.


2004ರಿಂದ ಸರ್ಕಾರವು ಸಹಕಾರ ಸಂಘಗಳ ಮೂಲಕ ರೈತರಿಗೆ ಶೂನ್ಯ ಬಡ್ಡಿದರದ ಸಾಲ ನೀಡುತ್ತಿದೆ. ಈವರೆಗೆ ಹಿಡುವಳಿ ಹೊಂದಿರುವ ಎಲ್ಲ ಕೃಷಿಕರು ಈ ಸಾಲ ಪಡೆಯಲು ಅವಕಾಶವಿತ್ತು. ಈಗ ಹೊಸ ಷರತ್ತಿಗೆ ಒಳಪಡುವವರು ಮಾತ್ರ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಬಹುದು. ಉಳಿದವರು ಸಾಲಕ್ಕೆ ಶೇ 7ರಷ್ಟು ಬಡ್ಡಿ ಪಾವತಿಸಬೇಕು.

ಶೂನ್ಯ ಬಡ್ಡಿದರದ ಅಲ್ಪಾವಧಿ ಕೃಷಿ ಸಾಲಕ್ಕೆ ಷರತ್ತು ವಿಧಿಸದಂತೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ ಅವರಿಗೆ ಮನವಿ ಮಾಡಲಾಗಿದೆ ಎಂದು ಪುತ್ತೂರು ಶಾಸಕ ಸಂಜೀವ ಮಠಂದೂರು ಹೇಳಿದರು.

'ಈ ಬಗ್ಗೆ ಸಹಕಾರ ಸಚಿವರಿಗೆ ಮನವಿ ಮಾಡಲಾಗಿದೆ. ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಇಂತಹ ಷರತ್ತು ವಿಧಿಸುವುದು ಸಲ್ಲ' ಎನ್ನುವುದು ರಾಜ್ಯ ರೈತ ಸಂಘ–ಹಸಿರು ಸೇನೆ ಸಂಘಟನಾ ಕಾರ್ಯದರ್ಶಿ ರವಿಕಿರಣ ಪುಣಚ ಅವರ ಅಭಿಪ್ರಾಯ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಒಳನೋಟ
ಮುಗಿಯದ ಋಣಭಾರ
ಪ್ರತಿಕ್ರಿಯಿಸಿ: 9606038256
feedback@prajavani.co.in



ಡಿಸಿಸಿ ಬ್ಯಾಂಕ್‌ನಲ್ಲಿ ಹಗರಣಗಳು ತುಂಬಿವೆ. ರೈತ ಸಾಲ ತೀರಿಸದಿದ್ದರೂ ಪುನರ್‌ನವೀಕರಣದ ಹೆಸರಿನಲ್ಲಿ ದಲ್ಲಾಳಿಗಳು ವ್ಯವಹಾರ ಮಾಡುತ್ತಿದ್ದಾರೆ.
ಕೆ.ಟಿ. ಗಂಗಾಧರ್
ರೈತ ಹೋರಾಟಗಾರ, ಶಿವಮೊಗ್ಗ



ಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಮರುಪಾವತಿ ಪ್ರಮಾಣ ಶೇ 99.95ರಷ್ಟಿದೆ. ಕಳೆದ ಹಣಕಾಸು ವರ್ಷದಲ್ಲಿ ₹770 ಕೋಟಿ ಸಾಲ ನೀಡಿದ್ದೆವು. ಈ ವರ್ಷ ₹ 1000 ಕೋಟಿ ನೀಡುವ ಗುರಿ ಇದೆ.
ಚನ್ನವೀರಪ್ಪ ಎಂ.ಬಿ.
ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಶಿವಮೊಗ್ಗ



ಸಾಂದರ್ಭಿಕ ಚಿತ್ರ: ಸತೀಶ ಬಡಿಗೇರ್

ಒಬ್ಬರು ಕಂಗಾಲು, ಮತ್ತೊಬ್ಬರು ಜಾಣರು



ಕೋವೇರಹಟ್ಟಿ ಶಿವಣ್ಣ

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಕೋವೇರಹಟ್ಟಿಯ ಶಿವಣ್ಣ ಮೂರು ಬ್ಯಾಂಕ್‌ಗಳಲ್ಲಿ ಕೃಷಿ ಸಾಲ ಮಾಡಿದರು. 12 ಎಕರೆಯಲ್ಲಿ ಈರುಳ್ಳಿ, 15 ಎಕರೆಯಲ್ಲಿ ಟೊಮೆಟೊ ಬೆಳೆದರು. ಕಳೆದ ವರ್ಷ ಸೆಪ್ಟೆಂಬರ್ ನಂತರ ಸುರಿದ ಅಕಾಲಿಕ ಮಳೆಯಿಂದ ಬೆಳೆ ಹಾಳಾಯಿತು. ಗುತ್ತಿಗೆ ಜಮೀನಿಗೆ ಬ್ಯಾಂಕ್‌ಗಳು ಸಾಲ ನೀಡುವುದಿಲ್ಲ. ಹೀಗಿದ್ದರೂ ಗುತ್ತಿಗೆಗೆ ಜಮೀನು ಪಡೆದು, ತಿಂಗಳಿಗೆ ಶೇ 2ರಷ್ಟು ಬಡ್ಡಿದರಕ್ಕೆ ಇನ್ನಷ್ಟು ಕೈಸಾಲ ಮಾಡಿದ್ದರು. ಅವರೀಗ ಕಂಗಾಲಾಗಿ 28 ಎಕರೆ ಜಮೀನನ್ನು ಮಾರಾಟಕ್ಕೆ ಇಟ್ಟಿದ್ದಾರೆ.

ಚಿತ್ರದುರ್ಗದ ಡಿ.ಎಸ್. ಹಳ್ಳಿ ಮಲ್ಲಿಕಾರ್ಜುನ ಅವರದ್ದು ಯಶೋಪಥ. 2013ರಲ್ಲಿ ಅವರು 20 ಎಕರೆ ಜಮೀನಿನಲ್ಲಿ ಈರುಳ್ಳಿ ಬೆಳೆದು ₹1 ಕೋಟಿ ಸಂಪಾದಿಸಿ ಸುದ್ದಿಯಾಗಿದ್ದರು. 'ರೈತರು ಕೃಷಿ ಸಾಲವನ್ನು ಶಿಸ್ತಿನಿಂದ ಬಳಸಬೇಕು. ಅದನ್ನು ಮದುವೆಯೋ, ಒಡವೆ ಖರೀದಿಗೋ ಬಳಸಕೂಡದು. ಹಿತಮಿತವಾಗಿ ಖರ್ಚು ಮಾಡಬೇಕು. ನಾನು 2010ರಲ್ಲಿ ₹15 ಲಕ್ಷ ಸಾಲ ಮಾಡಿದ್ದೆ. ಆಗ ಸರಿಯಾಗಿ ನಿದ್ದೆ ಬರುತ್ತಿರಲಿಲ್ಲ. ಐದಾರು ವರ್ಷಗಳಿಂದ ನಾನು ಕೃಷಿ ಸಾಲವನ್ನೇ ಮಾಡಿಲ್ಲ. ಒಂದು ವರ್ಷ ಬೆಳೆ ಲಾಭ ತಂದುಕೊಟ್ಟರೆ, ಇನ್ನೊಂದು ವರ್ಷ ಕೈಕೊಡುತ್ತದೆ. ಇದನ್ನು ಅರಿತು ರೈತರು ಬದುಕಬೇಕು' ಎನ್ನುವುದು ಅವರ ಅನುಭವ ಮಾತು ಹಾಗೂ ಸಲಹೆ.



ಮಲ್ಲಿಕಾರ್ಜುನ

ವಸೂಲಾತಿ ಪ್ರಮಾಣ (ಶೇಕಡವಾರು)

ವರ್ಷ	ಅಲ್ಪಾವಧಿ	ಮಧ್ಯಮಾವಧಿ	ದೀರ್ಘಾವಧಿ
2017-18	87.20	73.31	50.42
2018-19	90.93	82.00	55.23
2019-20	92.00	78.32	40.02
2020-21	96.23	90.44	60.40

ಏಳು ತಿಂಗಳು ಪೂರೈಸಿದ ರೈತ ಪ್ರತಿಭಟನೆ

ರಾಜಭವನಕ್ಕೆ ಮೆರವಣಿಗೆ ಯತ್ನ

ಚಂಡೀಗಡ (ಪಿಟಿಐ): ಕೇಂದ್ರದ ಹೊಸ ಕೃಷಿ ಕಾನೂನುಗಳನ್ನು ವಿರೋಧಿಸಿ ಪಂಜಾಬ್‌ನ ರಾಜ್ಯಪಾಲರ ಮನೆ ಮುಂದೆ ಪ್ರತಿಭಟನೆ ನಡೆಸಲು ಪ್ರಯತ್ನಿಸಿದ ರೈತರನ್ನು ಪೊಲೀಸರು ಶನಿವಾರ ಜಲಫಿರಂಗಿಗಳನ್ನು ಬಳಸಿ ಚದುರಿಸಿದ್ದಾರೆ.

ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ದೆಹಲಿ ಗಡಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಯು ಶನಿವಾರ ಏಳು ತಿಂಗಳು ಪೂರೈಸಿದೆ. ಈ ಸಂದರ್ಭದಲ್ಲಿ, ವಿವಿಧ ರಾಜ್ಯಗಳಲ್ಲಿ ರಾಜಭವನಕ್ಕೆ ಮೆರವಣಿಗೆ ನಡೆಸುವ ಕಾರ್ಯಕ್ರಮವನ್ನು ರೈತರು ಹಮ್ಮಿಕೊಂಡಿದ್ದರು.

ಮಹಿಳೆಯರೂ ಸೇರಿದಂತೆ ರಾಜ್ಯದ ಬೇರೆಬೇರೆ ಭಾಗಗಳಿಂದ ಬಂದಿದ್ದ ರೈತರು ಅಂಬ ಸಾಹಿಬ್ ಗುರುದ್ವಾರಾದಲ್ಲಿ ಸೇರಿ, ಅಲ್ಲಿಂದ ರಾಜಭವನದತ್ತ ಮೆರವಣಿಗೆ ಆರಂಭಿಸಿದ್ದರು. ಚಂಡೀಗಡ– ಮೊಹಾಲಿ ಗಡಿಯಲ್ಲಿ ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಒಳನುಗ್ಗಲು ಪ್ರಯತ್ನಿಸಿದ್ದರು. ಪ್ರತಿಭಟನಕಾರರಲ್ಲಿ ಒಬ್ಬರು ಜಲಫಿರಂಗಿ ಇರುವ ವಾಹನದ ಮೇಲೆ ಏರಿದ್ದರು. ಈ ಸಂದರ್ಭದಲ್ಲಿ ಪೊಲೀಸರು ಜಲಫಿರಂಗಿ ಬಳಸಿ ರೈತರನ್ನು ಚದುರಿಸಿದರು.

ಹರಿಯಾಣ, ಪಂಜಾಬ್, ಕರ್ನಾಟಕ, ಉತ್ತರಾಖಂಡ ಮುಂತಾದ ರಾಜ್ಯಗಳಲ್ಲಿ ಪ್ರತಿಭಟನಾನಿರತ ರೈತರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಇದನ್ನು ಪೊಲೀಸರು ನಿರಾಕರಿಸಿದ್ದಾರೆ.

ರಾಕೇಶ್ ಟಿಕಾಯತ್ ನೇತೃತ್ವದಲ್ಲಿ ರೈತರ ಗುಂಪೊಂದು ದೆಹಲಿ ಲೆಫ್ಟಿನೆಂಟ್ ಗವರ್ನರ್ ಜತೆ ವರ್ಚುವಲ್ ಸಭೆ ನಡೆಸಿ, ನಂತರ ಡಿಸಿಪಿ ಅವರಿಗೆ ತಮ್ಮ ಬೇಡಿಕೆಗಳ ಪತ್ರವನ್ನು ಹಸ್ತಾಂತರಿಸಿದೆ. ಆ ನಂತರ ಮೆರವಣಿಗೆಯನ್ನು ಕೈಬಿಟ್ಟಿತು.

ಮಾತುಕತೆಗೆ ಸಿದ್ಧ

ನವದೆಹಲಿ (ಪಿಟಿಐ): 'ಕೃಷಿ ಕಾನೂನುಗಳಿಗೆ ಸಂಬಂಧಿಸಿದಂತೆ ಸರ್ಕಾರವು ರೈತರ ಜತೆಗೆ ಮಾತುಕತೆಗೆ ಸಿದ್ಧವಿದೆ. ರೈತರು ಪ್ರತಿಭಟನೆಯನ್ನು ಬಿಟ್ಟು ಮಾತುಕತೆಗೆ ಬರಬೇಕು' ಎಂದು ಕೇಂದ್ರದ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಮನವಿ ಮಾಡಿದ್ದಾರೆ.

'ದೇಶದಾದ್ಯಂತ ಹೆಚ್ಚಿನ ರೈತರು ಈ ಕಾನೂನುಗಳ ಪರವಾಗಿದ್ದಾರೆ. ಆದರೂ ಯಾವುದೇ ರೈತರಿಗೆ ಆಕ್ಷೇಪಗಳಿದ್ದರೆ ಅವರ ಜತೆ ಮಾತುಕತೆಗೆ ಸರ್ಕಾರ ಸಿದ್ಧವಿದೆ. ಈಗಾಗಲೇ ಕನಿಷ್ಠ ಬೆಂಬಲ ಬೆಲೆಯನ್ನು ಸರ್ಕಾರ ಹೆಚ್ಚಿಸಿದೆ, ಖರೀದಿಯ ಪ್ರಮಾಣವನ್ನೂ ಹೆಚ್ಚಿಸಲಾಗಿದೆ' ಎಂದು ತೋಮರ್ ಟ್ವೀಟ್ ಮಾಡಿದ್ದಾರೆ.

ಕೇಂದ್ರದ ನೌಕರರಿಗೆ ತುಟ್ಟಿಭತ್ಯೆ

ನವದೆಹಲಿ: ಕೊರೊನಾದಿಂದಾಗಿ ತಲೆದೋರಿದ್ದ ಆರ್ಥಿಕ ಬಿಕ್ಕಟ್ಟಿನಿಂದಾಗಿ ತಡೆಹಿಡಿಯಲಾಗಿದ್ದ ಕೇಂದ್ರದ ನೌಕರರು ಹಾಗೂ ಪಿಂಚಣಿದಾರರ ತುಟ್ಟಿಭತ್ಯೆ (ಡಿ.ಎ) ಹಾಗೂ ತುಟ್ಟಿಭತ್ಯೆ ಪರಿಹಾರ (ಡಿ.ಆರ್)ವನ್ನು ಜುಲೈ 1ರಿಂದ ಅನ್ವಯವಾಗುವಂತೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

2020ರ ಜುಲೈ 1ರಿಂದ ಹಾಗೂ 2021ರ ಜನವರಿ 1ರಿಂದ ಬಾಕಿ ಇರುವ ತುಟ್ಟಿಭತ್ಯೆ ಹಾಗೂ ತುಟ್ಟಿಭತ್ಯೆ ಪರಿಹಾರವನ್ನು ಕ್ರಮವಾಗಿ ಮೂರು ಹೆಚ್ಚುವರಿ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರದ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಆದೇಶದ ಮೂಲಕ ತಿಳಿಸಿದ್ದಾರೆ.

ಶಿಕ್ಷಕರ ವರ್ಗಾವಣೆ: ಹೊಸ ಅಧಿಸೂಚನೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದಲ್ಲಿ ತಕರಾರು ಇದ್ದ ಕಾರಣಕ್ಕೆ ಅಧಿಸೂಚನೆ ಹಂತದಲ್ಲಿಯೇ ಸ್ಥಗಿತಗೊಂಡಿದ್ದ 2020–21ನೇ ಸಾಲಿನ ವರ್ಗಾವಣೆಯನ್ನು 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಕಾಯ್ದೆ'ಗೆ ಅನುಗುಣವಾಗಿ ಮತ್ತೆ ಆರಂಭಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. 2–3 ದಿನಗಳಲ್ಲಿ ಹೊಸ ಅಧಿಸೂಚನೆ ಪ್ರಕಟವಾಗಲಿದೆ.

ಅಧಿಸೂಚನೆಯ ಕರಡು ಸಿದ್ಧವಾಗಿದ್ದು, ಶಿಕ್ಷಣ ಸಚಿವರ ಅನುಮೋದನೆ ಬಾಕಿ ಇದೆ. ಅಧಿಸೂಚನೆ ಪ್ರಕಟಗೊಂಡ ದಿನದಿಂದ ವರ್ಗಾವಣೆಯ ಪ್ರಕ್ರಿಯೆಗಳು ಆರಂಭವಾಗಲಿದೆ. ಹೊಸ ಅಧಿಸೂಚನೆಯಲ್ಲಿ ವರ್ಗಾವಣೆ ಕೋರಿ ಹೊಸತಾಗಿ ಅರ್ಜಿ ಸಲ್ಲಿಸಲು ಮತ್ತು ಈಗಾಗಲೇ ಅರ್ಜಿ ಸಲ್ಲಿಸಿದವರಿಗೆ ವರ್ಗಾವಣೆ ಬಯಸಿದ ಸ್ಥಳವನ್ನು ಬದಲಿಸಲು ಅವಕಾಶ ಸಿಗಲಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

ಕಾಯ್ದೆ ತಿದ್ದುಪಡಿ ಮೂಲಕ, 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿ ತೊಂದರೆ ಅನುಭವಿಸುತ್ತಿರುವ ಶಿಕ್ಷಕರಿಗೆ ವಿಶೇಷ ಕೌನ್ಸೆಲಿಂಗ್ ಮೂಲಕ ಒಂದು ಬಾರಿ ವರ್ಗಾವಣೆಗೆ ಅಧಿಸೂಚನೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ವರ್ಗಾವಣೆ ಕಾಯ್ದೆಯಲ್ಲಿ ಈ ಅಂಶ ಇಲ್ಲದಿದ್ದರೂ ಹಳೆ ಅಧಿಸೂಚನೆಯಲ್ಲಿ (2020 ನ. 11) ಅವಕಾಶ ಮಾಡಿಕೊಟ್ಟ ಕಾರಣಕ್ಕೆ ಅದನ್ನು ಪ್ರಶ್ನಿಸಿ ಕೆಲವರು ಕೆಎಟಿ ಮೆಟ್ಟಿಲೇರಿದ್ದರು.

4ನೇ ಪುಟ ನೋಡಿ

ಆಕ್ಷೇಪಣೆ ಸಲ್ಲಿಸಲು ಕೇವಲ ಹತ್ತು ದಿನಗಳ ಕಾಲಾವಕಾಶ ನೀಡಿದ ಬಿಬಿಎಂಪಿ ಅರಣ್ಯ ವಿಭಾಗ

ಮೆಟ್ರೊ ಮಾರ್ಗಕ್ಕೆ 3,366 ಮರ ಬಲಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡ್–ಕೆ.ಆರ್. ಪುರ– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ನಮ್ಮ ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ ಅಡ್ಡಿಯಾಗಿರುವ 3,366 ಮರಗಳನ್ನು ಕಡಿಯಲು ಬಿಬಿಎಂಪಿಯ ಅರಣ್ಯ ವಿಭಾಗದಿಂದ ಬೆಂಗಳೂರು ಮೆಟ್ರೊ ರೈಲು ನಿಗಮವು ಅನುಮತಿ ಕೋರಿದೆ. ಈ ಪ್ರಸ್ತಾವಕ್ಕೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಬಿಬಿಎಂಪಿ ಅರಣ್ಯ ವಿಭಾಗವು ಕೇವಲ ಹತ್ತು ದಿನಗಳ ಕಾಲಾವಕಾಶ ನೀಡಿದೆ.

ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿ ಡಿಪೊವರೆಗಿನ ಮೆಟ್ರೊ ಮಾರ್ಗ ನಿರ್ಮಾಣಕ್ಕೆ 1,025 ಮರಗಳನ್ನು ಕಡಿಯಲು ಅನುಮತಿ ನೀಡುವ ಕುರಿತು ಬಿಬಿಎಂಪಿ ಅರಣ್ಯ ವಿಭಾಗವು ಲಾಕ್‌ಡೌನ್ ಸಂದರ್ಭದಲ್ಲಿ, ಅಂದರೆ ಏ.30ರಂದು ಅಧಿಸೂಚನೆ ಹೊರಡಿಸಿತ್ತು. ಆಕ್ಷೇಪಣೆ ಸಲ್ಲಿಕೆಗೆ ಕಾಲಾವಕಾಶ ಕಡಿಮೆ ಇದ್ದ ಬಗ್ಗೆ ಪರಿಸರ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದರು. ಹಾಗಾಗಿ ಲಾಕ್‌ಡೌನ್ ತೆರವುಗೊಂಡ ನಂತರ ಹತ್ತು ದಿನಗಳವರೆಗೆ ಕಾಲಾವಕಾಶ ನೀಡಲಾಗುವುದು ಎಂದು ಬಿಬಿಎಂಪಿ ಭರವಸೆ ನೀಡಿತ್ತು. ಪರಿಷ್ಕೃತ ದಿನಾಂಕದ ಪ್ರಕಾರ ಆಕ್ಷೇಪಣೆ ಸಲ್ಲಿಕೆಗೆ ಜೂನ್ 30 ಅಂತಿಮ ದಿನವಾಗಿದೆ.

ನಮ್ಮ ಮೆಟ್ರೊ 2ಎ ಮತ್ತು 2ಬಿ ಮಾರ್ಗಗಳ ಕಾಮಗಾರಿಗೆ ಕಡಿಯುವ ಮರಗಳ ವಿವರವನ್ನು ಜೂನ್ 23ರಂದು ಪ್ರಕಟಿಸಲಾಗಿದೆ. ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿಯವರೆಗೆ 833, ಕಸ್ತೂರಿ ನಗರ ಮತ್ತು ಹೆಬ್ಬಾಳ ಬಳಿಯ ಕೆಂಪಾಪುರದವರೆಗೆ 1,507 ಮರಗಳನ್ನು ಕಡಿಯಲಾಗುತ್ತಿದೆ. ಈ ಬಗ್ಗೆ ಆಕ್ಷೇಪಣೆ ಸಲ್ಲಿಕೆಗೆ ಹತ್ತು ದಿನ ಕಾಲಾವಕಾಶ ನೀಡಲಾಗಿದೆ.

'ಒಂದೇ ಯೋಜನೆಯಡಿ ಕಡಿಯುತ್ತಿರುವ ಮರಗಳ ಸಂಖ್ಯೆಯನ್ನು ತಿಳಿಸಿದರೆ ವಿರೋಧ ವ್ಯಕ್ತವಾಗುತ್ತದೆ ಎಂಬ ಕಾರಣಕ್ಕೆ, ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗುತ್ತಿದೆ. ಕಡಿಯುತ್ತಿರುವ ಮರಗಳ ಸಂಖ್ಯೆ ಹೆಚ್ಚು ಎನಿಸಬಾರದು ಎಂಬ ಉದ್ದೇಶ ನಿಗಮಕ್ಕೆ ಇದ್ದಂತಿದೆ' ಎಂದು ಜಯನಗರದ ಸಾಮಾಜಿಕ ಕಾರ್ಯಕರ್ತರಾದ ರಜನಿ ಸಂತೋಷ್ ಟೀಕಿಸಿದರು.

'ಒಂದೇ ಯೋಜನೆಯಡಿ ಹೀಗೆ ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸುವುದರಿಂದ ಸಾರ್ವಜನಿಕರಿಗೂ ಈ ಬಗ್ಗೆ ಗಮನ ಹರಿಸಲು ಆಗುವುದಿಲ್ಲ. ಆಕ್ಷೇಪಣೆ ಸಲ್ಲಿಸುವ ವೇಳೆಯೂ ಗೊಂದಲವಾಗುತ್ತದೆ. ಮರಗಳನ್ನು ರಕ್ಷಿಸಲು, ನಗರದಲ್ಲಿ ಹಸಿರು ಉಳಿಸಲು ಹೆಚ್ಚು ಜನ ಕೈಜೋಡಿಸಬೇಕಾಗಿದೆ' ಎಂದು ಪರಿಸರ ಕಾರ್ಯಕರ್ತ ದತ್ತಾತ್ರೇಯ ದೇವರೆ ಹೇಳಿದರು.

ಮೆಟ್ರೊ ಯೋಜನೆಗೆ ಕಡಿಯುತ್ತಿರುವ ಮರಗಳ ವಿವರ

ಮಾರ್ಗ	ಮರಗಳು	ಆಕ್ಷೇಪಣೆ ಸಲ್ಲಿಕೆಗೆ ಗಡುವು
ಕಾಡುಬೀಸನಹಳ್ಳಿ–ಬೈಯಪ್ಪನಹಳ್ಳಿ ಡಿಪೊ	1,025	ಜೂನ್ 30
ಸೆಂಟ್ರಲ್ ಸಿಲ್ಕ್ ಬೋರ್ಡ್–ಕಾಡುಬೀಸನಹಳ್ಳಿ	833	ಜುಲೈ 2
ಕಸ್ತೂರಿನಗರದಿಂದ ಕೆಂಪಾಪುರ	1,507	ಜುಲೈ 2

ಸೋಮವಾರದಿಂದ ಮೈಸೂರಿಗೆ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಬಂಧ ಸಡಿಲಗೊಳಿಸಿರುವುದರಿಂದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಬಸ್‌ಗಳ ಸಂಚಾರವನ್ನು ಜೂನ್ 28ರ ಬೆಳಿಗ್ಗೆ 6 ಗಂಟೆಯಿಂದ ಆರಂಭಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕೋವಿಡ್ ಹರಡುವಿಕೆ ತಡೆಗಟ್ಟಲು ಶೇಕಡ 50ರಷ್ಟು ಆಸನ ಸಾಮರ್ಥ್ಯದೊಂದಿಗೆ ಬಸ್‌ಗಳ ಕಾರ್ಯಾಚರಣೆ ಮಾಡಲಾಗುವುದು. ಪ್ರಯಾಣಿಕರು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ನಿಗಮ ಮನವಿ ಮಾಡಿದೆ.

ಆಹಾರ ಕಿಟ್ ಹಂಚಿಕೆ: ಭ್ರಷ್ಟಾಚಾರ ಆರೋಪ

ಲೋಕಾಯುಕ್ತಕ್ಕೆ ಶೀಘ್ರವೇ ದೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಕಟ್ಟಡ ನಿರ್ಮಾಣದ ವಲಸೆ ಕಾರ್ಮಿಕರಿಗೆ ಆಹಾರ ಕಿಟ್ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಆರೋಪಿಸಿದೆ. ಈ ಪ್ರಕರಣದ ತನಿಖೆ ನಡೆಸಲು ಲೋಕಾಯುಕ್ತಕ್ಕೆ ದೂರು ಸಲ್ಲಿಸಲು ನಿರ್ಧರಿಸಲಾಗಿದೆ ಎಂದೂ ಫೆಡರೇಷನ್ ಹೇಳಿದೆ.



'ರಾಜ್ಯದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸೆಸ್ ಹಣವನ್ನು ಸಂಪೂರ್ಣವಾಗಿ ಕಾರ್ಮಿಕರ ಕಲ್ಯಾಣಕ್ಕೆ ವಿನಿಯೋಗಿಸಬೇಕು. ವಲಸೆ ಹಾಗೂ ಅಸಂಘಟಿತ ಕಾರ್ಮಿಕರಿಗೆ ಆಹಾರ ಕಿಟ್ ಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಮ್ಮ ಹಣ ಮತ್ತು ವಿಪತ್ತು ನಿರ್ವಹಣಾ ನಿಧಿಯಿಂದ ಹಂಚಿಕೆ ಮಾಡಬೇಕೆಂದು ನಿರ್ದೇಶನವಿದೆ. ಆದರೆ ಕಾರ್ಮಿಕ ಸಚಿವರು ಕಲ್ಯಾಣ ಮಂಡಳಿಯ ಹಣದಲ್ಲಿ ಆಹಾರ ಕಿಟ್‌ಗಳನ್ನು ಖರೀದಿಸಿರುವುದು ಮತ್ತು ಬೆಂಗಳೂರಿನಲ್ಲಿ ನೋಂದಾಯಿತ ಕಾರ್ಮಿಕರಿಗೆ ಕಾರ್ಮಿಕ ಸಂಘಗಳ ಮೂಲಕ ನೆಪ ಮಾತ್ರಕ್ಕೆ ಹಂಚಿಕೆ ಮಾಡಿ, ರಾಜ್ಯಾದ್ಯಂತ ಮಂಡಳಿಗೆ ಸಂಬಂಧವೇ ಇರದ ಶಾಸಕರಿಗೆ ಹಂಚಿಕೆ ಮಾಡಿರುವುದು 1996ರ ಕಟ್ಟಡ ಕಾರ್ಮಿಕ ಕಾಯ್ದೆಯ ನಿಯಮಾವಳಿಗಳ ಸ್ಪಷ್ಟ ಉಲ್ಲಂಘನೆ' ಎಂದು ಸಿಐಟಿಯು ಆರೋಪಿಸಿದೆ.

'ಲಕ್ಷಾಂತರ ದಿನಸಿ ಕಿಟ್‌ಗಳನ್ನು ಮಾರುಕಟ್ಟೆ ದರಗಳಿಗಿಂತ ದುಪ್ಪಟ್ಟು ಬೆಲೆಗೆ ಆರು ಖಾಸಗಿ ಕಂಪನಿಗಳಿಗೆ ಟೆಂಡರ್ ನೀಡಿರುವುದರ ಹಿಂದೆಯೂ ಭ್ರಷ್ಟಚಾರ ಮತ್ತು ಸ್ವಜನಪಕ್ಷಪಾತ ಎದ್ದು ಕಾಣುತ್ತಿದೆ. ಇದರಿಂದ ಕಲ್ಯಾಣ ಮಂಡಳಿಗೆ ಹತ್ತಾರು ಕೋಟಿ ರೂಪಾಯಿ ನಷ್ಟ ಆಗಿರುವ ಸಾಧ್ಯತೆ ಇದೆ' ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಶಂಕೆ ವ್ಯಕ್ತಪಡಿಸಿದ್ದಾರೆ.

'ಕಾರ್ಮಿಕ ಸಂಘಟನೆಗಳು ಮಾಡಿರುವ ಆರೋಪಗಳಿಗೆ ಕಾರ್ಮಿಕ ಸಚಿವರು ನೀಡಿರುವ ಉತ್ತರವು ಸಮರ್ಪಕವಾಗಿಲ್ಲ. ಕೇವಲ ಆಹಾರ ಕಿಟ್‌ಗಳ ಗುಣಮಟ್ಟಕ್ಕೆ ಮಾತ್ರಕ್ಕೆ ತನಿಖೆಯನ್ನು ಸೀಮೀತಗೊಳಿಸಿ, ಉಳಿದಂತೆ ಖರೀದಿ ವ್ಯವಹಾರ, ಶಾಸಕರಿಗೆ ಕಿಟ್ ವಿತರಣೆ, ಷರತ್ತಿನಂತೆ 10 ಕೆ.ಜಿ ಅಕ್ಕಿ ಬದಲು 5 ಕೆ.ಜಿ ನೀಡಿರುವುದು, ಮುಂತಾದ ಸೇರಿ ಇತರೆ ಆರೋಪಗಳಿಗೆ ಉತ್ತರಿಸಿಲ್ಲ. ಆಹಾರ ಮತ್ತು ಪರಿಹಾರ ವಿತರಣೆಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯಲ್ಲಿ ಒಂದು ವರ್ಷದಿಂದ ನಡೆದಿರುವ ಎಲ್ಲ ತೀರ್ಮಾನಗಳ ಕುರಿತಾಗಿ ಲಭ್ಯವಿರುವ ದಾಖಲೆಗಳನ್ನು ಸಂಗ್ರಹಿಸಿ ಲೋಕಾಯುಕ್ತಕ್ಕೆ ಮತ್ತು ಕಾನೂನು ಪ್ರಾಧಿಕಾರಕ್ಕೆ ದೂರು ನೀಡಲಾಗುವುದು' ಎಂದು ಅವರು ಹೇಳಿದ್ದಾರೆ.

'ನಮ್ಮ ಮೆಟ್ರೊ'ಗೆ ಬಸವೇಶ್ವರರ ಹೆಸರಿಡಲು ಒತ್ತಾಯ

ಬೆಂಗಳೂರು: 'ನಮ್ಮ ಮೆಟ್ರೊ'ಗೆ ಜಗಜ್ಯೋತಿ ಬಸವೇಶ್ವರರ ಹೆಸರಿಡುವ ಮೂಲಕ ಅವರ ಹೆಸರನ್ನು ಚಿರಸ್ಥಾಯಿಯಾಗಿಸಬೇಕು' ಎಂದು ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಒತ್ತಾಯಿಸಿದೆ.

'ವಿಧಾನಸೌಧದ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಪ್ರತಿಷ್ಠಾಪಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಅದರಂತೆ 'ನಮ್ಮ ಮೆಟ್ರೊ'ಗೂ ಬಸವಣ್ಣನವರ ಹೆಸರಿಡುವುದು ಸೂಕ್ತ' ಎಂದು ವೇದಿಕೆ ಹೇಳಿದೆ.

'ವಿಶ್ವದ ಪ್ರಪ್ರಥಮ ಸಂಸತ್ತು ಹುಟ್ಟು ಹಾಕಿದ ಅಣ್ಣ ಬಸವಣ್ಣನವರ ಪ್ರತಿಮೆಯು ವಿಧಾನಸೌಧ ಆವರಣದಲ್ಲಿ ಇಲ್ಲದೆ ಇರುವುದು ನೋವಿನ ಸಂಗತಿಯಾಗಿತ್ತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ನಿರ್ಧಾರ ಕೈಗೊಂಡಿರುವುದು ಸಂತಸ ತಂದಿದೆ. ಪ್ರತಿಮೆ ಸ್ಥಾಪನೆಗೆ ಸಂಬಂಧಿಸಿದ ಕೆಲಸಗಳು ತುರ್ತಾಗಿ ನಡೆಯಲು ಕ್ರಮ ಕೈಗೊಳ್ಳಬೇಕು' ಎಂದೂ ವೇದಿಕೆಯು ಪ್ರಕಟಣೆಯಲ್ಲಿ ತಿಳಿಸಿದೆ.

'ಗ್ರಾಮಗಳ ಕನ್ನಡ ಹೆಸರು ಬದಲಿಸಿದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಗಡಿಯಲ್ಲಿರುವ ಕಾಸರಗೋಡು ಜಿಲ್ಲೆಯ ಮಂಜೇಶ್ವರ ಮತ್ತು ಕೆಲವು ಗ್ರಾಮಗಳ ಕನ್ನಡ ಹೆಸರನ್ನು ಮಲಯಾಳಕ್ಕೆ ಬದಲಾಯಿಸಿದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್. ನಾಗಾಭರಣ ಎಚ್ಚರಿಕೆ ನೀಡಿದ್ದಾರೆ.

'ಶತಮಾನಗಳ ಹಿಂದೆಯೇ ಕರ್ನಾಟಕದ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಗಳನ್ನು ಒಗ್ಗೂಡಿಸಿ, ಅಲ್ಲಿನ ಗ್ರಾಮಗಳಿಗೆ ಕನ್ನಡದ ಹೆಸರುಗಳನ್ನು ನಾಮಕರಣ ಮಾಡಲಾಗಿದೆ. ಆದರೆ, ಈಗ ಅದನ್ನು ಬದಲಾಯಿಸಲು ಹೊರಟಿರುವ ಹುನ್ನಾರ ಸರಿಯಾದ ಕ್ರಮವಲ್ಲ. ಅಲ್ಲದೆ, ಆ ಪ್ರದೇಶದಲ್ಲಿ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಬಳಸುವ ಜನರಿದ್ದಾರೆ. ಅಪಾರ ಸಂಖ್ಯೆಯಲ್ಲಿ ಕನ್ನಡಿಗರಿರುವ ಗ್ರಾಮಗಳ ಹೆಸರನ್ನು ಬದಲಾವಣೆ ಮಾಡುವ ಮೂಲಕ ಕನ್ನಡಿಗರ ಸ್ವಾಭಿಮಾನ ಕೆಣಕುವ ಕೆಲಸವನ್ನು ಕೇರಳ ಸರ್ಕಾರ ಮಾಡಬಾರದು' ಎಂದು ತಿಳಿಸಿದ್ದಾರೆ.



ಟಿ.ಎಸ್ ನಾಗಾಭರಣ

'ಗಡಿಭಾಗದ ಸಮಸ್ಯೆಗಳಿಗೆ ಸೂಕ್ಷ್ಮತೆ ಮತ್ತು ಬದ್ಧತೆಯಿಂದ ನಡೆದುಕೊಳ್ಳಬೇಕಾಗಿರುವುದು ಎರಡೂ ರಾಜ್ಯಗಳ ಜವಾಬ್ದಾರಿ. ಇದನ್ನು ಕೇರಳದ ಸರ್ಕಾರ ಅರಿತುಕೊಳ್ಳಬೇಕು. ಈ ಬಗ್ಗೆ ಕೂಡಲೇ ಅಲ್ಲಿನ ಸರ್ಕಾರ ಕ್ರಮ ಕೈಗೊಂಡು, ಗ್ರಾಮಗಳಿಗೆ ಇರುವ ಕನ್ನಡದ ಹೆಸರುಗಳನ್ನು ಹಾಗೆಯೇ ಉಳಿಸಿಕೊಳ್ಳುವಂತೆ ಸ್ಥಳೀಯ ಸಂಸ್ಥೆಗಳು ಮತ್ತು ಕಂದಾಯ ಇಲಾಖೆಗೆ ಸೂಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕನ್ನಡದ ಅಸ್ಮಿತೆಗೆ ಧಕ್ಕೆ ತರುವ ಕೆಲಸವನ್ನು ಮಾಡಬಾರದು. ಈ ಪ್ರಕ್ರಿಯೆಯಲ್ಲಿ ಕೇರಳ ಸರ್ಕಾರ ಮುಂದುವರಿದರೆ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಗಡಿನಾಡು ಹೊರನಾಡಿನ ವಿವಿಧ ಸಂಘಟನೆಗಳೊಂದಿಗೆ ಹೋರಾಟ ನಡೆಸಬೇಕಾಗುತ್ತದೆ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ನಗರದ ಹಲವೆಡೆ ಭಾರಿ ಮಳೆ

ಬೆಂಗಳೂರು: ನಗರದ ಹಲವೆಡೆ ಶನಿವಾರ ಜೋರು ಮಳೆಯಾಗಿದೆ. ಮೂರು ದಿನಗಳಿಂದ ನಗರದಲ್ಲಿ ಬಿಸಿಲಿನಿಂದ ಕೂಡಿದ ವಾತಾವರಣವಿತ್ತು. ದಿಢೀರ್ ಮಳೆಯಿಂದ ಧರೆ ತಂಪಾಯಿತು.

ಬೆಳಿಗ್ಗೆ ತುಸು ಬಿಸಿಲಿನ ನಡುವೆ ಮೋಡಕವಿದ ವಾತಾವರಣವಿತ್ತು. ಸಂಜೆಯಿಂದ ಜಿಟಿಜಿಟಿಯಾಗಿ ಆರಂಭವಾದ ಮಳೆ ಕೆಲವೆಡೆ ಜೋರಾಯಿತು. ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರದ ಬಹುತೇಕ ಸ್ಥಳಗಳಲ್ಲಿ ಹೆಚ್ಚು ಮಳೆ ದಾಖಲಾಗಿದೆ.

ಯಲಹಂಕ, ಅಟ್ಟೂರು, ಮನೋರಾಯನ ಪಾಳ್ಯ, ಮಹದೇವಪುರ, ರಾಜಾಜಿನಗರ, ಹೊಯ್ಸಳನಗರ, ವಿ.ವಿ. ಪುರ, ಚಾಮರಾಜಪೇಟೆ, ಲಕ್ಕಸಂದ್ರ, ನಾಗರಬಾವಿ, ವಿಜಯನಗರ, ಜಕ್ಕೂರು, ನಾಯಡಂಹಳ್ಳಿ ಸೇರಿದಂತೆ ಹಲವು ಭಾಗಗಳಲ್ಲಿ ಮಳೆ ಸುರಿದಿದೆ.

ರಾತ್ರಿ ಒಂಬತ್ತು ಗಂಟೆಯವರೆಗೆ ಮಳೆ ಬಿಟ್ಟು ಬಿಟ್ಟು ಆಗಾಗ ಸುರಿಯಿತು. ತಗ್ಗು ಪ್ರದೇಶಗಳು ಹಾಗೂ ಇಳಿಜಾರಿನ ರಸ್ತೆಗಳಲ್ಲಿ ಮಳೆ ನೀರು ಹರಿಯಿತು. ವಾರಾಂತ್ಯದ ಲಾಕ್‌ಡೌನ್ ಇದ್ದಿದ್ದರಿಂದ ವಾಹನಗಳ ಸಂಚಾರ ಕಡಿಮೆ ಇತ್ತು. ಹಾಗಾಗಿ ಮಳೆಯಿಂದ ವಾಹನ ಸಂಚಾರಕ್ಕೆ ಅಷ್ಟೇನೂ ಅಡಚಣೆ ಉಂಟಾಗಲಿಲ್ಲ.

ಎಚ್.ಗೊಲ್ಲಹಳ್ಳಿ ಹಾಗೂ ಬೇಗೂರಿನಲ್ಲಿ 6 ಸೆಂ.ಮೀವರೆಗೆ ಮಳೆ ದಾಖಲಾಗಿದೆ. ಕೆಂಗೇರಿ 3, ರಾಜರಾಜೇಶ್ವರಿ ನಗರ, ಅಂಜನಾಪುರ, ಬೆಳ್ಳಂದೂರು ಭಾಗಗಳಲ್ಲಿ ತಲಾ 2 ಸೆಂ.ಮೀ ಮಳೆಯಾಗಿದೆ. ಬೆಂಗಳೂರಿನಲ್ಲಿ ಮುಂದಿನ ಎರಡು ದಿನಗಳವರೆಗೆ ಮೋಡ ಕವಿದ ವಾತಾವರಣ ಇರಲಿದೆ. ಕೆಲವೆಡೆ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಳೆಗೇರಿ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ



ರಾಜರಾಜೇಶ್ವರಿನಗರ: ಇಲ್ಲಿನ ಎಚ್‌ಎಂಟಿ ವಾರ್ಡ್‌ನ ಆಶ್ರಯ ನಗರದ ಕೊಳೆಗೇರಿಯಲ್ಲಿ ವಾಸವಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣಕ್ಕೆ ಅನುಕೂಲವಾಗಲು ಕಾಂಗ್ರೆಸ್ ಮುಖಂಡರಾದ ಎಚ್.ಕುಸುಮಾ ಅವರು ಟ್ಯಾಬ್‌ಗಳನ್ನು ಉಚಿತವಾಗಿ ವಿತರಿಸಿದರು.

ಕೊಳೆಗೇರಿ ನಿವಾಸಿಗಳು ಶಾಲೆಗಳಲ್ಲಿ ಆನ್‌ಲೈನ್ ಶಿಕ್ಷಣ ನಡೆಯುತ್ತಿದ್ದು, ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಪೋಷಕರು ಕುಸುಮಾ ಅವರ ಬಳಿ ಅಳಲು ತೋಡಿಕೊಂಡಿದ್ದರು.

ಬಳಿಕ ಮಾತನಾಡಿದ ಕುಸುಮಾ,'ಬಡವರು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದೆ ಬರಬೇಕು. ಹಾಗಾಗಿ, ಬಡವರನ್ನು ಭೇಟಿ ಮಾಡಿ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದೇನೆ. ಮಕ್ಕಳಿಗೆ ತಿಳಿವಳಿಕೆ ನೀಡಿ, ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆಯುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಕರೆ ತರಬೇಕು' ಎಂದು ಪೋಷಕರಿಗೆ ಸಲಹೆ ನೀಡಿದರು.

ಮೈಲಾರಿ ಆಗ್ರೋ: ಬಹುಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕ ಬಡ್ಡಿ ಆಮಿಷವೊಡ್ಡಿ ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಸಂಗ್ರಹಿಸಿ ವಂಚಿಸಿರುವ ಆರೋಪದಡಿ 'ಮೈಲಾರಿ ಆಗ್ರೋ ಪ್ರೊಡಕ್ಟ್' ಕಂಪನಿ ವಿರುದ್ಧ ನಗರದ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕಂಪನಿಯಲ್ಲಿ ಹಣ ಹೂಡಿಕೆ ಮಾಡಿ ವಂಚನೆಗೀಡಾಗಿರುವ ಜೆ.ಪಿ. ನಗರದ ನಿವಾಸಿ ಮಹೇಶ್ ಎಂಬುವರು ದೂರು ನೀಡಿದ್ದಾರೆ. 'ಮೈಲಾರಿ ಅಗ್ರೋ ಪ್ರೊಡಕ್ಟ್' ಕಂಪನಿ ನಿರ್ದೇಶಕರಾದ ಭರತ್, ಮಹೇಶ್, ಪ್ರಕಾಶ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಣಕಾಸಿನ ವ್ಯವಹಾರ ಮಾಡುವ ನೆಪದಲ್ಲಿ ಕಂಪನಿ ಸ್ಥಾಪಿಸಲಾಗಿದೆ. ಹಣ ಠೇವಣಿ ಇರಿಸಿಕೊಂಡು ನಿಗದಿತ ದಿನದೊಳಗೆ ಬಡ್ಡಿ ಸಮೇತ ವಾಪಸ್ ನೀಡುವ ಯೋಜನೆಗಳನ್ನು ಕಂಪನಿ ಅಡಿಯಲ್ಲಿ ರೂಪಿಸಲಾಗಿದೆ. ಯೋಜನೆಗಳ ಬಗ್ಗೆ ಆರೋಪಿಗಳು, ನಿರಂತರವಾಗಿ ಜಾಹೀರಾತು ನೀಡುತ್ತಿದ್ದರು. ತಮ್ಮನ್ನು ಸಂಪರ್ಕಿಸುವ ಜನರಿಗೆ ಅಧಿಕ ಬಡ್ಡಿ ಆಮಿಷವೊಡ್ಡಿ ಹಣ ಹೂಡಿಕೆ ಮಾಡಿಸಿಕೊಳ್ಳುತ್ತಿದ್ದರು. ಈ ಮಾಹಿತಿಯನ್ನು ದೂರುದಾರ ತಿಳಿಸಿದ್ದಾರೆ' ಎಂದೂ ಮೂಲಗಳು ಹೇಳಿವೆ.

'ಆರೋಪಿಗಳ ಮಾತು ನಂಬಿದ್ದ ದೂರುದಾರ ಮಹೇಶ್, ಕಂಪನಿಯಲ್ಲಿ ₹ 50 ಲಕ್ಷ ಹೂಡಿಕೆ ಮಾಡಿದ್ದರು. ಅದಕ್ಕೆ ತಕ್ಕಂತೆ ಆರೋಪಿಗಳು ಬಡ್ಡಿ ನೀಡಿರಲಿಲ್ಲ. ಅಸಲನ್ನೂ ವಾಪಸ್ ಕೊಡದೇ ಸತಾಯಿಸುತ್ತಿದ್ದರು' ಎಂದೂ ತಿಳಿಸಿವೆ.

ಅನಧಿಕೃತ ಕಂಪನಿ: 'ಯಾವುದೇ ಪರವಾನಗಿ ಪಡೆಯದೇ ಮೈಲಾರಿ ಆಗ್ರೋ ಪ್ರೊಡಕ್ಟ್ ಕಂಪನಿ ಆರಂಭಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಯಾವುದೇ ನಿಯಮಗಳನ್ನೂ ಕಂಪನಿ ಪಾಲಿಸುತ್ತಿಲ್ಲ. ಈ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ಸಾವಿರಕ್ಕೂ ಹೆಚ್ಚು ಮಂದಿಯಿಂದ ₹ 25 ಸಾವಿರದಿಂದ ₹ 50 ಲಕ್ಷದವರೆಗೂ ಸಂಗ್ರಹಿಸಿರುವ ಮಾಹಿತಿ ಇದೆ. ಆರೋಪಿಗಳನ್ನು ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಮೂಲಗಳು ತಿಳಿಸಿವೆ.

ಸಮಗ್ರ ಕೃಷಿ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಉತ್ತರ ಮತ್ತು ಯಲಹಂಕ ತಾಲ್ಲೂಕು ವ್ಯಾಪ್ತಿಗಳಲ್ಲಿ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ 'ಸಮಗ್ರ ಕೃಷಿ ಅಭಿಯಾನ'ಕ್ಕೆ ಬೆಟ್ಟಹಲಸೂರು ಗ್ರಾಮದಲ್ಲಿ ಚಾಲನೆ ನೀಡಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಿ.ಎಸ್.ರಜನಿ ಪ್ರಕಾಶ್ ಹಾಗೂ ಬೆಂಗಳೂರು ನಗರ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಬಿ.ಕೆ.ಮಂಜುನಾಥ ಗೌಡ ಈ ಅಭಿಯಾನಕ್ಕೆ ಚಾಲನೆ ನೀಡಿದರು.



ಸಮಗ್ರ ಕೃಷಿ ಅಭಿಯಾನದ ರಥ

ಬೆಂಗಳೂರು ಉತ್ತರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಇ.ಪ್ರಸನ್ನ ಕುಮಾರ್, 'ಜಾಲಾ, ಹೆಸರಘಟ್ಟ ಮತ್ತು ದಾಸನಪುರ ಹೋಬಳಿಗಳ ವ್ಯಾಪ್ತಿಯಲ್ಲಿ ಕೃಷಿ ಹಾಗೂ ಇನ್ನಿತರ ಮಾಹಿತಿ ಒಳಗೊಂಡ ರಥವು ಮೂರು ದಿನ ಸಂಚರಿಸಲಿದೆ. ಈ ಮೂಲಕ ರೈತರಿಗೆ ಕೃಷಿ ಮತ್ತು ಇನ್ನಿತರ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಕುರಿತು ವಿಜ್ಞಾನಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಮಾಹಿತಿ ನೀಡಲಿದ್ದಾರೆ' ಎಂದರು.

'ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಕೃಷಿ ತಾಂತ್ರಿಕ ಸಲಹಾ ಸೇವೆ, ನೂತನ ತಂತ್ರಜ್ಞಾನಗಳು, ರೈತ ಕ್ಷೇತ್ರ ಪಾಠಶಾಲೆ ಮತ್ತು ತರಬೇತಿ, ಪಿ.ಎಂ ಕಿಸಾನ್ ಯೋಜನೆಯಲ್ಲಿ ಪ್ರೋತ್ಸಾಹಧನ, ಕೃಷಿ ಯಂತ್ರಧಾರೆ--ಹೋಬಳಿ ಮಟ್ಟದಲ್ಲಿ ಬಾಡಿಗೆ ಆಧಾರಿತ ಕೃಷಿ ಸಲಕರಣೆಗಳ ಸೇವೆ, ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳು, ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ವಿತರಣೆ ಕುರಿತಂತೆಯೂ ಮಾಹಿತಿ ಲಭ್ಯವಾಗಲಿದೆ' ಎಂದು ವಿವರಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ವೆಂಕಟೇಶ್, ಆಡಳಿತ ಅಧಿಕಾರಿ ರವಿಬಾಬು, ಸಹಾಯಕ ಕೃಷಿ ಅಧಿಕಾರಿ ರುದ್ರಸ್ವಾಮಿ ಹಾಗೂ ಇತರರು ಇದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಬೆಂಗಳೂರು:'ಕೋವಿಡ್ ನಡುವೆಯೇ ನಾವು ಜೀವನ ನಡೆಸುವುದು ಅನಿವಾರ್ಯ. ಕೊರೊನಾ ನಿಯಂತ್ರಣದ ಜೊತೆಗೆ ಅಭಿವೃದ್ಧಿ ಕಾಮಗಾರಿಗಳಿಗೂ ಒತ್ತು ಕೊಡಬೇಕಿದೆ. ಹಾಗಾಗಿ, ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ವೇಗ ಹೆಚ್ಚಿಸಲಾಗುತ್ತಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಯಶವಂತಪುರ ಕ್ಷೇತ್ರದ ಅಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ₹5 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

'ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು' ಎಂದರು.

ನವಗ್ರಾಮದಲ್ಲಿ ವಲಸೆ ಕಾರ್ಮಿಕರಿಗೆ ನೂತನ ಗೃಹಗಳನ್ನು ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಿದರು.

ಮಣ್ಣಿನಡಿ ಸಿಲುಕಿದ್ದ ಕಾರ್ಮಿಕನ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನುಮಂತನಗರ ಠಾಣೆ ವ್ಯಾಪ್ತಿಯ ಕೆಂಪೇಗೌಡ ಲೇಔಟ್‌ನಲ್ಲಿ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿದ್ದ ವೇಳೆ ಶನಿವಾರ ಮಧ್ಯಾಹ್ನ ಮಣ್ಣು ಕುಸಿದು ಕಾರ್ಮಿಕರೊಬ್ಬರು ಅದರಡಿ ಸಿಲುಕಿಕೊಂಡರು.

'ಕಾರ್ಮಿಕ ನಾಗೇಶ್ ಎಂಬುವರ ದೇಹದ ಅರ್ಧ ಭಾಗ ಮಣ್ಣಿನಡಿ ಸಿಲುಕಿತ್ತು. ಸ್ಥಳೀಯರು ಹಾಗೂ ಪೊಲೀಸರು ಸೇರಿ ಅವರನ್ನು ಮಣ್ಣಿನಿಂದ ಹೊರಗೆ ತೆಗೆದು ರಕ್ಷಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಸ್ವಾಮಿನಾಥನ್ ಎಂಬುವರು ತಮ್ಮ ಜಾಗದಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸುತ್ತಿದ್ದಾರೆ. ಮಣ್ಣು ಅಗೆದು ಕಬ್ಬಿಣದ ರಾಡ್‌ಗಳನ್ನು ನಿಲ್ಲಿಸಿ ಪಾಯ ತುಂಬುವ ಕೆಲಸ ನಡೆಯುತ್ತಿತ್ತು. ರಸ್ತೆಗೆ ಹೊಂದಿಕೊಂಡೇ ಪಾಯವಿತ್ತು. ಶನಿವಾರ ಮಧ್ಯಾಹ್ನ ರಸ್ತೆ ಕೆಳಭಾಗದ ಜಾಗದಿಂದ ಮಣ್ಣು ಕುಸಿದು ಬಿದ್ದಿತ್ತು. ಅದೇ ಜಾಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು, ಜಿಗಿದು ಪ್ರಾಣ ಉಳಿಸಿಕೊಂಡಿದ್ದರು. ನಾಗೇಶ್ ಮಾತ್ರ ಮಣ್ಣಿನಡಿ ಸಿಲುಕಿದ್ದರು' ಎಂದರು.

'ನಾಗೇಶ್ ಅವರಿಗೆ ಯಾವುದೇ ಗಾಯವಾಗಿಲ್ಲ. ಘಟನೆ ಬಗ್ಗೆ ಯಾರೊಬ್ಬರೂ ದೂರು ನೀಡಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.



ಹನುಮಂತನಗರದ ಕೆಂಪೇಗೌಡ ಲೇಔಟ್‌ನಲ್ಲಿ ಕಟ್ಟಡ ನಿರ್ಮಿಸುತ್ತಿದ್ದ ಜಾಗದ ಪಾಯದಲ್ಲಿ ಕುಸಿದಿದ್ದ ಮಣ್ಣು

ಅನುಮತಿ ನಕಾರ: ಜೆಡಿಎಸ್ ಪ್ರತಿಭಟನೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ ನಿಯಂತ್ರಿಸುವ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದು ಆರೋಪಿಸಿ ಇದೇ ಸೋಮವಾರ (ಜೂ.28) ಜೆಡಿಎಸ್ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಅನುಮತಿ ನೀಡಲು ಪೊಲೀಸರು ನಿರಾಕರಿಸಿದ್ದಾರೆ. ಇದರಿಂದಾಗಿ ಪ್ರತಿಭಟನೆಯನ್ನು ಆ ಪಕ್ಷ ಮುಂದೂಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಲೆ ಏರಿಕೆ ತಡೆಯುವಲ್ಲಿ ವಿಫಲವಾಗಿವೆ ಎಂದು ಆರೋಪಿಸಿ ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯವರೆಗೂ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಲು ಜೆಡಿಎಸ್ ಸಿದ್ಧತೆ ನಡೆಸಿತ್ತು. ಜೆಡಿಎಸ್ ರಾಜ್ಯ ಘಟಕದ ನೇತೃತ್ವದಲ್ಲೇ ಪ್ರತಿಭಟನೆ ನಿಗದಿಯಾಗಿತ್ತು.

ಪ್ರತಿಭಟನೆಗೆ ಅವಕಾಶ ಕೋರಿ ಪಕ್ಷದ ಬೆಂಗಳೂರು ಮಹಾನಗರ ಘಟಕದ ಅಧ್ಯಕ್ಷ ಆರ್. ಪ್ರಕಾಶ್, ಇದೇ 23ರಂದು ಕೇಂದ್ರ ವಿಭಾಗದ ಡಿಸಿಪಿ ಕಚೇರಿಗೆ ಮನವಿ ಸಲ್ಲಿಸಿದ್ದರು. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳು ಜಾರಿಯಲ್ಲಿರುವ ಕಾರಣದಿಂದ ಪ್ರತಿಭಟನೆಗೆ ಅನುಮತಿ ನಿರಾಕರಿಸಿರುವುದಾಗಿ ಡಿಸಿಪಿ ಶನಿವಾರ ಹಿಂಬರಹ ನೀಡಿದ್ದಾರೆ.

ಇನ್ನರ್ ವೀಲ್ ಕ್ಲಬ್‌ನಿಂದ ವೈದ್ಯಕೀಯ ನೆರವು

ಬೆಂಗಳೂರು: ಮಹಿಳಾ ಸ್ವಯಂಸೇವಾ ಸಂಸ್ಥೆ 'ಇನ್ನರ್‌ವೀಲ್ ಕ್ಲಬ್ ಆಫ್ ಬೆಂಗಳೂರು' ನಗರದಾದ್ಯಂತ ಕೋವಿಡ್ ಲಸಿಕೆ ಶಿಬಿರಗಳನ್ನು ಆಯೋಜಿಸಿದ್ದು, ಕೋವಿಡ್ ರೋಗಿಗಳಿಗೆ ಉಚಿತ ಊಟ ವಿತರಿಸಿದೆ.



ಪ್ರೇಮಾ ಅಯ್ಯರ್

ಸಂಸ್ಥೆಯ ಅಧ್ಯಕ್ಷೆ ಪ್ರೇಮಾ ಅಯ್ಯರ್, 'ಕ್ಲಬ್‌ನ ಸದಸ್ಯರು 2020–21ನೇ ಸಾಲಿನಲ್ಲಿ ಶಿಕ್ಷಣ ಮತ್ತು ವೃತ್ತಿಪರ ತರಬೇತಿ, ಆರೋಗ್ಯ ಮತ್ತು ನೈರ್ಮಲ್ಯ, ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು, ಸಮುದಾಯ ಮತ್ತು ಪರಿಸರ ಕ್ಷೇತ್ರಗಳಲ್ಲಿ ದಣಿವರಿಯದೆ ಕೆಲಸ ಮಾಡಿದ್ದಾರೆ. ಇದಕ್ಕಾಗಿ 125ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು' ಎಂದರು.

'ಮಹಿಳೆಯರಿಗೆ ಡಿಜಿಟಲ್ ಶಿಕ್ಷಣ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಟ್ಯಾಬ್ ವಿತರಣೆ, ಸರ್ಕಾರಿ ಶಾಲೆಗಳಲ್ಲಿ ಜಲ ಸಂರಕ್ಷಣೆ ಮುಂತಾದ ಕಾರ್ಯಕ್ರಮಗಳನ್ನು ಸಂಸ್ಥೆ ಯಶಸ್ವಿಯಾಗಿ ಪೂರೈಸಿದೆ' ಎಂದರು.

ರೇಖಾ ಕದಿರೇಶ್ ಹತ್ಯೆ: ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛಲವಾದಿಪಾಳ್ಯ ವಾರ್ಡ್‌ನ ಪಾಲಿಕೆಯ ಮಾಜಿ ಸದಸ್ಯೆ ಬಿಜೆಪಿಯ ಆರ್. ರೇಖಾ ಕದಿರೇಶ್ ಹತ್ಯೆ ಪ್ರಕರಣದಲ್ಲಿ ಮತ್ತೆ ಮೂವರು ಆರೋಪಿಗಳನ್ನು ಪಶ್ಚಿಮ ವಿಭಾಗದ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಪ್ರಮುಖ ಆರೋಪಿಗಳಾದ ಪೀಟರ್ (46) ಹಾಗೂ ಸೂರ್ಯನನ್ನು (19) ಗುಂಡು ಹಾರಿಸಿ ಶುಕ್ರವಾರ ಬೆಳಿಗ್ಗೆ ಸೆರೆ ಹಿಡಿಯಲಾಗಿತ್ತು.

ಇದರ ಬೆನ್ನಲ್ಲೇ ತನಿಖೆ ಚುರುಕುಗೊಳಿಸಿದ್ದ ಪೊಲೀಸರು, ಸ್ಟೀಫನ್ (21), ಅಜಯ್ (21) ಹಾಗೂ ಪುರುಷೋತ್ತಮ್‌ನನ್ನು (22) ಬಂಧಿಸಿದ್ದಾರೆ. ಎಲ್ಲರನ್ನೂ ನ್ಯಾಯಾಲಯದ ಎದುರು ಹಾಜರುಪಡಿಸಿ 14 ದಿನ ಕಸ್ಟಡಿಗೆ ಪಡೆದಿದ್ದಾರೆ.

ಆರೋಪಿಗಳು ಹಾಗೂ ಸಂಬಂಧಿಕರ ಮನೆಗಳಿಗೂ ಪೊಲೀಸರು ದಾಳಿ ನಡೆಸಿದ್ದಾರೆ. ಸಂಬಂಧಿಕರಿಂದಲೂ ಮಾಹಿತಿ ಸಂಗ್ರಹಿಸಿದ್ದಾರೆ.

'ಆರೋಪಿ ಪೀಟರ್ ಹಾಗೂ ಸೂರ್ಯ, ರೇಖಾ ಅವರಿಗೆ ಮಾರಕಾಸ್ತ್ರಗಳಿಂದ ಹೊಡೆದಿದ್ದರು. ಚಾಕುವಿನಿಂದ ಕತ್ತು ಕೊಯ್ದಿದ್ದರು. ಕೃತ್ಯ ತಡೆಯಲು ಬಂದ ಸಾರ್ವಜನಿಕರ ಮೇಲೆ ಸ್ಟೀಫನ್ ಹಾಗೂ ಅಜಯ್ ಹಲ್ಲೆ ಮಾಡಿದ್ದರು. ಆರೋಪಿ ಪುರುಷೋತ್ತಮ್, ಹಲ್ಲೆ ನಡೆಸುವ ಮುನ್ನ ಸಿ.ಸಿ.ಟಿ.ವಿ ಕ್ಯಾಮೆರಾ ತಿರುಗಿಸಿಟ್ಟಿದ್ದ. ರೇಖಾ ಜೊತೆಗೇ ಓಡಾಡಿಕೊಂಡಿದ್ದ ಐವರು ಆರೋಪಿಗಳು, ಸಂಚು ರೂಪಿಸಿ ಕೃತ್ಯ ಎಸಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕದಿರೇಶ್ ಕೊಲೆಯಲ್ಲಿ ಪತ್ನಿ ಕೈವಾಡ?

'ಕದಿರೇಶ್ ಅವರ ಕೊಲೆಯಲ್ಲೂ ಸಂಬಂಧಿಕರ ಕೈವಾಡವಿತ್ತು. ಆರೋಪಿಗಳಿಗೆ ರೇಖಾ ಸಹಕರಿಸಿದ್ದ ಮಾಹಿತಿ ಎಲ್ಲೆಡೆ ಹರಿದಾಡುತ್ತಿದೆ. ಈ ಬಗ್ಗೆಯೂ ಪರಿಶೀಲನೆ ನಡೆದಿದೆ' ಎಂದೂ ಮೂಲಗಳು ಹೇಳಿವೆ.

ಕದಿರೇಶ್ ಅಕ್ಕ ವಶಕ್ಕೆ: ಪ್ರಕರಣದಲ್ಲಿ ಭಾಗಿಯಾಗಿರುವ ಅನುಮಾನದಡಿ ಕದಿರೇಶ್ ಅವರ ಅಕ್ಕ ಮಾಲಾ, ಆಕೆಯ ಮಗ ಹಾಗೂ ಸೊಸೆಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಕದಿರೇಶ್ ಅವರಿಗೆ ರೇಖಾ ಎರಡನೇ ಪತ್ನಿ. ಕದಿರೇಶ್ ಕುಟುಂಬವನ್ನು ಹೆಚ್ಚು ದ್ವೇಷಿಸುತ್ತಿದ್ದರು. ತಮ್ಮ ಸಹೋದರರೊಬ್ಬರಿಗೆ ಚಪ್ಪಲಿಯಿಂದ ಹೊಡೆದಿದ್ದರು. ಇದರಿಂದ ವೈಷಮ್ಯ ಬೆಳೆದಿತ್ತು. ಇದೇ ಕಾರಣಕ್ಕೆ ಕುಟುಂಬದವರೆಲ್ಲರೂ ಸೇರಿ ಹತ್ಯೆಗೆ ಸಂಚು ರೂಪಿಸಿದ್ದರು ಎಂಬ ಅನುಮಾನವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಟೆಂಡರ್ ಕೊಡಿಸದಿದ್ದಕ್ಕೆ ಸಿಟ್ಟು: 'ಆರೋಪಿ ಪೀಟರ್, ಕಸ ವಿಲೇವಾರಿ ಟೆಂಡರ್ ಪಡೆದುಕೊಂಡಿದ್ದ. ಕಳೆದ ವರ್ಷ ಟೆಂಡರ್ ಅವಧಿ ಮುಗಿದಿತ್ತು. ನವೀಕರಣ ಮಾಡಿಸಲು ಅರ್ಜಿ ಸಲ್ಲಿಸಿದ್ದ. ಆದರೆ, ರೇಖಾ ಆತನಿಗೆ ಟೆಂಡರ್ ನವೀಕರಣ ಮಾಡಿಸಲು ನೆರವಾಗಿರಲಿಲ್ಲ. ಇದರಿಂದ ಪೀಟರ್ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ. ಇದೇ ಸಿಟ್ಟಿನಲ್ಲಿ ಪೀಟರ್, ಕುಟುಂಬಸ್ಥರ ಸಹಕಾರದಿಂದ ಇತರರ ಜೊತೆ ಸೇರಿ ಹತ್ಯೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

'ವಾರ್ಡ್‌ನಲ್ಲಿ ಹಿಡಿತ ಸಾಧಿಸಲು ಕದಿರೇಶ್ ಕುಟುಂಬಸ್ಥರೇ ರೇಖಾ ಹತ್ಯೆ ಮಾಡಿಸಿರುವ ಸಾಧ್ಯತೆಯೂ ಇದೆ' ಎಂದೂ ಹೇಳಿವೆ.

‘ಸ್ಮಾರ್ಟ್‌ಸಿಟಿ’ ಎರಡನೇ ಹಂತದ ಯೋಜನೆಗೆ ಕೈಜೋಡಿಸಿದ ತೋಟಗಾರಿಕೆ ಇಲಾಖೆ

ಕಬ್ಬನ್ ಉದ್ಯಾನ: ಮಾಹಿತಿ ನೀಡಲಿವೆ ಮರಗಳು

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿರುವ ಪ್ರತಿ ಮರದ ಸಂಪೂರ್ಣ ವಿವರಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ‘ಸ್ಮಾರ್ಟ್‌ಸಿಟಿ’ ಯೋಜನೆ ಅಡಿ ಉದ್ಯಾನದ ಎಲ್ಲ ಮರಗಳ ಹೆಸರು, ಅವುಗಳ ಮೂಲ ಮತ್ತು ವೈಶಿಷ್ಟ್ಯ ಸಾರುವ ಫಲಕ ಅಳವಡಿಸುವ ಯೋಜನೆಗೆ ತೋಟಗಾರಿಕೆ ಇಲಾಖೆ ಕೈಜೋಡಿಸಿದೆ.

ಉದ್ಯಾನದಲ್ಲಿ ತರಹೇವಾರಿ ಮರಗಳಿದ್ದು, ಅವುಗಳ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ಇರಲಿಲ್ಲ. ಹಾಗಾಗಿ, ‘ಐಡೆಂಟಿಫಿಕೇಷನ್ ಆ್ಯಂಡ್ ಟ್ರೇಸಿಂಗ್’ ಹೆಸರಿನಲ್ಲಿ ಪ್ರತಿ ಮರದ ಪೂರ್ಣ ವಿವರಗಳನ್ನು ಪತ್ತೆ ಮಾಡಲಿದ್ದು, ಉದ್ಯಾನಕ್ಕೆ ಬರುವವರು ಶೀಘ್ರದಲ್ಲೇ ಮರಗಳ ಮಾಹಿತಿ ತಿಳಿದುಕೊಳ್ಳಬಹುದು.

‘ಕಬ್ಬನ್ ಉದ್ಯಾನದಲ್ಲಿ ಬಹಳ ವರ್ಷಗಳಷ್ಟು ಹಳೆಯದಾದ ಸಾವಿರಾರು ಮರಗಳಿವೆ. ಪ್ರತಿ ಮರವೂ ಭಿನ್ನವಾದ ಗುಣಲಕ್ಷಣಗಳನ್ನು ಒಳಗೊಂಡಿದೆ. ಹಲವು ಅಪರೂಪದ ಹಾಗೂ ಪಾರಂಪರಿಕ ಮರಗಳೂ ಉದ್ಯಾನದಲ್ಲಿದ್ದು, ಅವುಗಳ ಸಂಪೂರ್ಣ ವಿವರಗಳುಳ್ಳ ಫಲಕ ಅಳವಡಿಸುವ ಯೋಜನೆ ರೂಪಿಸಲಾಗಿದೆ’ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಪಿ.ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರಜ್ಞರು ಪ್ರತಿ ಮರದ ಹೆಸರು, ವಯಸ್ಸು, ಅದರ ಗುಣ, ಮೂಲ, ಉಪಯೋಗ ಹಾಗೂ ವಿಶೇಷತೆಗಳನ್ನು ಸೂಚಿಸಲಿದ್ದಾರೆ. ಅವರಿಂದ ಮಾಹಿತಿ ಪಡೆದು ಎಲ್ಲ ಮರಗಳಿಗೆ ಸ್ವವಿವರವುಳ್ಳ ಫಲಕ ಅಳವಡಿಸಲಾಗುವುದು. ಇದರಿಂದ ಮುಂದಿನ ದಿನಗಳಲ್ಲಿ ಸಸ್ಯಗಳ ಬಗ್ಗೆ ಆಸಕ್ತಿ ಉಳ್ಳವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೂ ಅನುಕೂಲವಾಗಲಿದೆ’ ಎಂದು ಅವರು ಮಾಹಿತಿ ನೀಡಿದರು.

ಮರಕ್ಕೆ ಹಾನಿಯಾಗದಂತೆ ಫಲಕ: ‘ಈ ಯೋಜನೆಯಡಿ ಅಳವಡಿಸುವ ಫಲಕಗಳು ಮರಗಳಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡುವುದಿಲ್ಲ. ಮೊಳೆ ಹೊಡೆಯುವುದು, ರಾಸಾಯನಿಕ ಲೇಪನ ಸೇರಿದಂತೆ ಯಾವುದೇ ಅಪಾಯಕಾರಿ ವಿಧಾನಗಳನ್ನು ಬಳಸುವುದಿಲ್ಲ. ಫಲಕ ಅಳವಡಿಕೆಗೆ ಆಧುನಿಕ ವಿಧಾನ ಅನುಸರಿಸಲಾಗುವುದು. ಫಲಕಕ್ಕೆ ‘ಸ್ಪ್ರಿಂಗ್’ ಮಾದರಿಯ ವಸ್ತುಗಳನ್ನು ಬಳಸಲಾಗುವುದು. ಇವು ಮರದ ಬೆಳವಣಿಗೆಗೆ ಅಡ್ಡಿಪಡಿಸುವುದಿಲ್ಲ’ ಎಂದು ಎಚ್.ಪಿ.ಬಾಲಕೃಷ್ಣ ವಿವರಿಸಿದರು.



ಕಬ್ಬನ್ ಉದ್ಯಾನದಲ್ಲಿರುವ ಮರಗಳು – ಪ್ರಜಾವಾಣಿ ಚಿತ್ರ /ಅನೂಪ್ ರಾಘ.ಟಿ.

ಅಂಕಿ-ಅಂಶಗಳು

8 ಸಾವಿರ
ಉದ್ಯಾನದಲ್ಲಿನ ಮರಗಳು (ಅಂದಾಜು)

₹23 ಲಕ್ಷ
ಯೋಜನೆಯ ವೆಚ್ಚ

ಮರಗಳಿಗೆ ಜಿಪಿಎಸ್, ಕ್ಯೂಆರ್ ಕೋಡ್

‘ಸ್ಮಾರ್ಟ್‌ಸಿಟಿ ಯೋಜನೆಯಡಿ ಮರಗಳಿಗೆ ಫಲಕದೊಂದಿಗೆ ಜಿಪಿಎಸ್ ಸಹ ಅಳವಡಿಸಲಾಗುವುದು. ಫಲಕದಲ್ಲಿ ಒಂದು ಕ್ಯೂಆರ್ ಕೋಡ್ ನೀಡಲಿದ್ದೇವೆ. ಅದನ್ನು ಸ್ಕ್ಯಾನ್ ಮಾಡಿಯೂ ಮರದ ವಿವರ ಪಡೆದುಕೊಳ್ಳಬಹುದು. ಇದಕ್ಕಾಗಿ ಪ್ರತ್ಯೇಕವಾಗಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗುವುದು. ಮರದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಲು ಆ್ಯಪ್ ಸಹಾಯಕಾರಿಯಾಗಲಿದೆ. ಯೋಜನೆಯ ರೂಪರೇಷೆ ಸಿದ್ಧಗೊಂಡಿದ್ದು, ಮುಂದಿನ ವಾರದಿಂದಲೇ ಇದರ ಕೆಲಸ ಗಳು ಆರಂಭಗೊಳ್ಳಲಿವೆ’ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಬಾಲಕೃಷ್ಣ ಮಾಹಿತಿ ನೀಡಿದರು.

ರಾಜ್ಯದಲ್ಲಿ ₹ 50.23 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಮಾದಕವಸ್ತು ವಿರೋಧಿ ದಿನದಲ್ಲಿ ಸಚಿವ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ 12 ತಿಂಗಳಿನಲ್ಲಿ ಜಪ್ತಿ ಮಾಡಿರುವ ₹ 50.23 ಕೋಟಿ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ನ್ಯಾಯಾಲಯದ ಆದೇಶದನ್ವಯ ನಾಶಪಡಿಸಲಾಗಿದ್ದು, ಇದು ದೇಶದಲ್ಲೇ ಐತಿಹಾಸಿಕ ದಾಖಲೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಮಾದಕ ವಸ್ತು ಮಾರಾಟ ಹಾಗೂ ಸಾಗಣೆ ವಿರುದ್ಧ ರಾಜ್ಯದ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ 2020ರಲ್ಲಿ 4,066 ಪ್ರಕರಣ ದಾಖಲಿಸಿಕೊಂಡಿದ್ದು, 5,291 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. 3 ಸಾವಿರ ಕೆ.ಜಿ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಇದು ಐತಿಹಾಸಿಕ ದಾಖಲೆ ಆಗಿದೆ’ ಎಂದೂ ಅವರು ತಿಳಿಸಿದರು.

‘ಡಾರ್ಕ್ ವೆಬ್ ಮೂಲಕ ನಡೆಯುತ್ತಿರುವ ಜಾಲವನ್ನು ಪೊಲೀಸರು ಯಶಸ್ವಿಯಾಗಿ ಭೇದಿಸುತ್ತಿದ್ದಾರೆ. ಬೆಂಗಳೂರಿನ ಎಂಟು ವಿಭಾಗ ಹಾಗೂ ಸಿಸಿಬಿಯ ಪ್ರತ್ಯೇಕ ದಳವು ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದೆ. ಆರು ತಿಂಗಳಿನಲ್ಲಿ 382 ಪ್ರಕರಣಗಳು ದಾಖಲಾಗಿವೆ’ ಎಂದೂ ಹೇಳಿದರು.

ಪೊಲೀಸರಿಗೆ ಮೆಚ್ಚುಗೆ: ‘ಡ್ರಗ್ಸ್ ವಿರುದ್ಧದ ನಮ್ಮ ಹೋರಾಟದಲ್ಲಿ ರಾಜ್ಯದ ಪೊಲೀಸರು ಒಳ್ಳೆಯ ಕೆಲಸ ಮಾಡಿದ್ದಾರೆ. ಸಾಮಾನ್ಯವಾಗಿ ಇದುವರೆಗೂ ಬೇರೆ ಬೇರೆ ವಿಭಾಗಗಳು, ಅಪರಾಧ ತಡೆ ಕುರಿತು ಜಾಗೃತಿ ಮೂಡಿಸುತ್ತಿದ್ದವು. ಆದರೆ, ಈಗ ರಾಜ್ಯದ ಪೊಲೀಸರು ಅಪರಾಧ ಪತ್ತೆಗೆ ಒತ್ತು ನೀಡಿದ್ದಾರೆ. ಡ್ರಗ್ಸ್ ವಿಚಾರದಲ್ಲಿ ಎಲ್ಲರನ್ನೂ ಜಾಗೃತಗೊಳಿಸುತ್ತಿದ್ದಾರೆ’ ಎಂದೂ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹಾಗೂ ಪೊಲೀಸ್ ಕಮಿಷನರ್ ಕಮಲ್ ಪಂತ್ ಹಾಜರಿದ್ದರು.



ಬೆಂಗಳೂರು ಪೊಲೀಸರು ಜಪ್ತಿ ಮಾಡಿದ್ದ ಡ್ರಗ್ಸ್ ಮಾದರಿಗಳನ್ನು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ವೀಕ್ಷಿಸಿದರು

ಮುಖ್ಯಾಂಶಗಳು

- ಆರು ತಿಂಗಳಲ್ಲಿ 382 ಪ್ರಕರಣಗಳು ದಾಖಲು
- 3 ಸಾವಿರ ಕೆ.ಜಿ. ಮಾದಕ ವಸ್ತುಗಳು ಜಪ್ತಿ

ವಾರ್ ರೂಮ್‌ನಲ್ಲಿ ಅಳವಡಿಸಿದ್ದ ಇಂಡೆಕ್ಸ್ ಆ್ಯಪ್‌ಗೆ ಕೇಂದ್ರ ಸರ್ಕಾರ ಮೆಚ್ಚುಗೆ

ಕೋವಿಡ್ ನಿರ್ವಹಣೆ: ಬೆಂಗಳೂರಿಗೆ ವಿಶೇಷ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನವನ್ನು ಬಳಸಿಕೊಂಡು ಕೋವಿಡ್ ತುರ್ತು ಪರಿಸ್ಥಿತಿಯನ್ನು ಉತ್ತಮವಾಗಿ ನಿರ್ವಹಿಸಿದ್ದಕ್ಕೆ ಬಿಬಿಎಂಪಿಗೆ ಕೇಂದ್ರ ಸರ್ಕಾರ ವಿಶೇಷ ಪುರಸ್ಕಾರ ನೀಡಿದೆ. ಅಲ್ಲದೇ, ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಲ್ಲಿ ಪದವೀಧರರ ಇಂಟರ್ನ್‌ಶಿಪ್‌ಗೆ ಅವಕಾಶ ನೀಡುವ ಯೋಜನೆಗೆ 'ಬೆಂಗಳೂರು ಸ್ಮಾರ್ಟ್ ಸಿಟಿಯು' ದೇಶದಲ್ಲಿಯೇ ಎರಡನೇ ಸ್ಥಾನ ಪಡೆದಿದೆ.

ದೇಶದ ವಿವಿಧೆಡೆ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಿಗೆ ಉತ್ತೇಜನ ನೀಡಲು ಸ್ಮಾರ್ಟ್ ಸಿಟಿ ಕಂಪನಿಗಳ ನಡುವೆ ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ಸ್ಪರ್ಧೆ



ಏರ್ಪಡಿಸಿತ್ತು. ವಿವಿಧ ವಲಯ ಅಥವಾ ಕ್ಷೇತ್ರಗಳಲ್ಲಿನ ಸಾಧನೆ ಪರಿಗಣಿಸಿ, ಅದಕ್ಕೆ ತಕ್ಕಂತೆ ಬಹುಮಾನವನ್ನು ಸರ್ಕಾರ ಘೋಷಿಸಿದೆ.

ವಿವಿಧ ವಲಯಗಳಲ್ಲಿ 2,800 ಅಂಕಗಳಿಗೆ 1,271 ಅಂಕಗಳನ್ನು ಪಡೆಯುವ ಮೂಲಕ ಒಟ್ಟಾರೆ ಮೂರು ಸ್ಟಾರ್‌ಗಳನ್ನು ಬೆಂಗಳೂರು

ಬೆಂಗಳೂರು ಸ್ಮಾರ್ಟ್ ಸಿಟಿ ಸಾಧನೆ

ವಲಯ/ಕ್ಷೇತ್ರ	ಗರಿಷ್ಠ ಅಂಕ	ಪಡೆದ ಅಂಕ
ಇಂಧನ ಮತ್ತು ಹಸಿರು ವೃದ್ಧಿ	600	330
ನಗರ ಯೋಜನೆ, ಜೀವವೈವಿಧ್ಯ	500	244
ಕಸ ನಿರ್ವಹಣೆ	600	395
ಸಂಚಾರ ವ್ಯವಸ್ಥೆ–ಗಾಳಿಯ ಗುಣಮಟ್ಟ	500	187
ಜಲ ನಿರ್ವಹಣೆ	600	115

ಪಡೆದುಕೊಂಡಿದೆ.

ಇಂಡೆಕ್ಸ್ ಆ್ಯಪ್‌ಗೆ ಮೆಚ್ಚುಗೆ: ಕೋವಿಡ್ ನಿರ್ವಹಣೆಯ ವಾರ್ ರೂಮ್‌ನಲ್ಲಿ ಅಳವಡಿಸಿದ್ದ ಇಂಡೆಕ್ಸ್ ಆ್ಯಪ್‌ಗೆ ಕೇಂದ್ರ ಸರ್ಕಾರ ಮೆಚ್ಚುಗೆ ವ್ಯಕ್ತಪಡಿಸಿದ್ದು, ಅನ್ವೇಷಣಾ ಪುರಸ್ಕಾರ ಘೋಷಿಸಿದೆ.

ವಾರ್ ರೂಮ್‌ನಲ್ಲಿ ಚಾಲಕ ಶಕ್ತಿಯಂತೆ ಇಂಡೆಕ್ಸ್ ಆ್ಯಪ್ ಕಾರ್ಯನಿರ್ವಹಿಸಿತ್ತು. ಕೊರೊನಾ ಎರಡನೇ ಅಲೆಯ ನಿರ್ವಹಣೆಯ ವೇಳೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆಗೆ ಕೇಂದ್ರೀಕೃತ ವ್ಯವಸ್ಥೆ, ಕೋವಿಡ್ ಸೋಂಕಿತರ ಸಂಪರ್ಕಕ್ಕೆ ಬಂದವರ ಪತ್ತೆಗೆ ಆ್ಯಪ್, ಮನೆ ಆರೈಕೆಯಲ್ಲಿರುವವರ ವಿವರ ದಾಖಲಿಸುವ ಪರಿಹಾರ್ ಆ್ಯಪ್ ಜೊತೆಗೆ ಈ ಇಂಡೆಕ್ಸ್ ಆ್ಯಪ್ ಅನ್ನು ಸಂಯೋಜಿಸಲಾಗಿತ್ತು. ಈ ಆ್ಯಪ್‌ನ ಸಹಾಯದಿಂದ ಸ್ಪಂದನಾ ಸಮಯವೂ (ರೆಸ್ಪಾನ್ಸ್ ಟೈಮ್) ಸಾಕಷ್ಟು ಕಡಿತಗೊಂಡಿತ್ತು. ಅಂದರೆ, ತಕ್ಷಣಕ್ಕೆ ಸ್ಪಂದಿಸಲು ಸಹಾಯವಾಗಿತ್ತು.

ಬಿಬಿಎಂಪಿ ವ್ಯಾಪ್ತಿ ಮಾತ್ರವಲ್ಲದೆ, ಕೊರೊನಾ ಮೂರನೇ ಅಲೆ ಸಂಭವಿಸಿದರೆ ಅದರ ನಿರ್ವಹಣೆಗೆ ರಾಜ್ಯದಾದ್ಯಂತ ಈ ಆ್ಯಪ್ ಬಳಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಸ್ಮಾರ್ಟ್ ಸಿಟಿ ಯೋಜನೆಗೆ ಮೆಚ್ಚುಗೆ: ಸ್ಮಾರ್ಟ್ ಸಿಟಿಯಲ್ಲಿನ ಉತ್ತಮ ವಾತಾವರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯು ಎರಡನೇ ಸ್ಥಾನ ಪಡೆದಿದೆ.

ಯೋಜನೆಯ ವಿವರ ಅಥವಾ ದಾಖಲೆಗಳನ್ನು ಸಂಗ್ರಹಿಸಿ, ವರದಿ ಸಿದ್ಧಪಡಿಸಲೆಂದೇ ನೋಡಲ್ ಅಧಿಕಾರಿಯನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಂಪನಿಯು ನೇಮಕ ಮಾಡಿತ್ತು. ಇವರು ಯೋಜನೆಯ ಎಲ್ಲ ಪಾಲುದಾರ ಸಂಸ್ಥೆಗಳಾದ ಬಿಬಿಎಂಪಿ, ಬೆಸ್ಕಾಂ ಮತ್ತು ಜಲಮಂಡಳಿಯಿಂದ ಮಾಹಿತಿ ಸಂಗ್ರಹಿಸಿ, ವರದಿ ಸಿದ್ಧ ಮಾಡಿ ಕೇಂದ್ರಕ್ಕೆ ಸಲ್ಲಿಸಿದ್ದರು. ಪಾರದರ್ಶಕವಾಗಿ ಪರಿಶೀಲನೆ ನಡೆಸಿ, ನಿಖರ ವರದಿಯನ್ನು ಅಂಕಿ–ಅಂಶ ಮತ್ತು ಪ್ರಗತಿಯ ವಿವರಗಳೊಂದಿಗೆ ಸಲ್ಲಿಸಲಾಗಿತ್ತು.

ಜಲ ನಿರ್ವಹಣೆಗೆ ಒಂದೇ ಸ್ಟಾರ್: ಕಸ ನಿರ್ವಹಣೆಯಲ್ಲಿ ಬೆಂಗಳೂರು ನಾಲ್ಕು ಸ್ಟಾರ್‌ಗಳನ್ನು ಪಡೆದಿದ್ದರೆ, ಜಲ ನಿರ್ವಹಣೆಯಲ್ಲಿ ಕೇವಲ ಒಂದೇ ನಕ್ಷತ್ರಕ್ಕೆ ತೃಪ್ತಿಪಟ್ಟುಕೊಂಡಿದೆ. ಸಂಚಾರ ವ್ಯವಸ್ಥೆ ಮತ್ತು ಗಾಳಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಎರಡು ನಕ್ಷತ್ರಗಳನ್ನು ಪಡೆದಿದೆ.

ಅಭಿನಂದನೆ: ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಅಧ್ಯಕ್ಷ ಹಾಗೂ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ಈ ಸಾಧನೆಗೆ ಸಿಬ್ಬಂದಿಯನ್ನು ಅಭಿನಂದಿಸಿದ್ದಾರೆ.

ಸುದ್ದಿ 2 ನಿಮಿಷ

ಸಚಿವ ಹೆಬ್ಬಾರ್ ವಿರುದ್ಧ ಮಾನನಷ್ಟ ಮೊಕದ್ದಮೆ

ಬೆಂಗಳೂರು: ತಮ್ಮ ವಿರುದ್ಧ ಅನಗತ್ಯವಾಗಿ ಟೀಕಿಸಿ, ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿರುವ ನಟ ಚೇತನ್ ಅಹಿಂಸಾ ಅವರು, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

'ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿರುವ ಚೇತನ್, ತಮಗಾದ ಮಾನನಷ್ಟಕ್ಕೆ ₹1 ಪರಿಹಾರ ನೀಡಬೇಕು. ಶಿವರಾಮ ಹೆಬ್ಬಾರ್ ಅವರು ಬೇಷರತ್ ಕ್ಷಮೆ ಯಾಚಿಸಬೇಕು' ಎಂದು ಕೋರಿದ್ದಾರೆ. ನ್ಯಾಯಾಲಯ ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿದೆ.

'ಸಮಾಜದಲ್ಲಿ ತಾನು ಗುರುತಿಸಿಕೊಳ್ಳಬೇಕು ಅಂತಲೋ, ಗಂಜೀ ಕಾಸಿನ ಆಸೆಗೋ ಹೇಳಿಕೆ ಕೊಡುವ ಇಂತಹ ಸಮಾಜ ಕಂಟಕರನ್ನು ಕಾನೂನಿನ ಚೌಕಟ್ಟಿನಲ್ಲಿ ಬಂಧಿಸಿ ಕಠಿಣ ಕ್ರಮ ಜರುಗಿಸಬೇಕೆಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ' ಎಂದು ಶಿವರಾಮ ಹೆಬ್ಬಾರ್ ಟ್ವೀಟ್ ಮಾಡಿದ್ದರು. ಅವರ ಕಮೆಂಟ್‌ಗಳಲ್ಲಿ ಸತ್ಯಾಂಶ ಇಲ್ಲ. ನನ್ನ ಪ್ರತಿಷ್ಠೆ, ವೈಯಕ್ತಿಕ ಹಾಗೂ ವೃತ್ತಿಪರ ಖ್ಯಾತಿ ಹಾಳು ಮಾಡುವ ಉದ್ದೇಶ ಹೊಂದಿದೆ' ಎಂದು ದೂರಿನಲ್ಲಿ ಚೇತನ್ ತಿಳಿಸಿದ್ದಾರೆ.

ಬ್ರಾಹ್ಮಣ್ಯವನ್ನು ಟೀಕಿಸಿ ಚೇತನ್ ನೀಡಿದ ಹೇಳಿಕೆ ಉಲ್ಲೇಖಿಸಿದ್ದ ಬ್ರಾಹ್ಮಣರ ಅಭಿವೃದ್ಧಿ ಮಂಡಳಿ ಅಧ್ಯಕ್ಷರು, ಬ್ರಾಹ್ಮಣರನ್ನು ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಈ ಪ್ರಕರಣದ ಸಂಬಂಧ ಚೇತನ್, ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿದ್ದರು.



ತೃತೀಯ ಲಿಂಗಿಗಳಿಗೆ ಲಸಿಕಾ ಅಭಿಯಾನ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಆಸ್ಪತ್ರೆಯಲ್ಲಿ ಇದೇ 29ರಿಂದ ಜುಲೈ 3ರವರೆಗೆ ತೃತೀಯ ಲಿಂಗಿಗಳಿಗೆ ಕೋವಿಡ್ ಲಸಿಕೆ ಹಾಕಿಸಲು ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ಲಸಿಕೆ ಹಾಕಿಸಿಕೊಳ್ಳಲು ತೃತೀಯ ಲಿಂಗಿಗಳು ಹಿಂದೇಟು ಹಾಕುತ್ತಿರುವ ಕಾರಣ ಅವರಿಗೆ ಜಾಗೃತಿ ಮೂಡಿಸಲು ಹಾಗೂ ಲಸಿಕೆ ಒದಗಿಸಲು ಈ ಅಭಿಯಾನವನ್ನು ಆಯೋಜಿಸಲಾಗಿದೆ. ಅವರಿಗೆ ಪ್ರತ್ಯೇಕ ಕೌಂಟರ್ ಗೊತ್ತುಪಡಿಸಲಾಗುತ್ತದೆ.

ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈವೆಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾರ್ತಿಕ್ ರಾಜಗೋಪಾಲ್, 'ಕೊರೊನಾ ಸೋಂಕಿನ ವಿರುದ್ಧ ಎಲ್ಲರೂ ಒಟ್ಟಾಗಿ ಹೋರಾಟ ನಡೆಸಬೇಕಿದೆ. ಧರ್ಮ, ಜಾತಿ, ಬಣ್ಣ ಹಾಗೂ ಲಿಂಗಗಳ ಆಧಾರದ ಮೇಲೆ ಯಾರೂ ಲಸಿಕೆಯಿಂದ ವಂಚಿತರಾಗಬಾರದು. ಹೀಗಾಗಿ, ತೃತೀಯ ಲಿಂಗಿಗಳಿಗೆ ಲಸಿಕೆ ಪಡೆಯಲು ಪ್ರತ್ಯೇಕ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸ್ಪುಟ್ನಿಕ್ ವಿ', 'ಕೋವ್ಯಾಕ್ಸಿನ್' ಹಾಗೂ 'ಕೋವಿಶೀಲ್ಡ್' ಲಸಿಕೆ ಲಭ್ಯವಿರಲಿದೆ. ಇದಕ್ಕೆ ಕ್ರಮವಾಗಿ ₹ 1145, ₹ 1410 ಹಾಗೂ ₹ 780 ಪಾವತಿಸಬೇಕಾಗುತ್ತದೆ. ಜನಸಾಮಾನ್ಯರಿಗೆ ಸಹ ಇದೇ 29ರಿಂದ 'ಸ್ಪುಟ್ನಿಕ್ ವಿ' ಲಸಿಕೆ ವಿತರಣೆಯನ್ನು ಪ್ರಾರಂಭಿಸಲಾಗುತ್ತಿದೆ ಎಂದು ಆಸ್ಪತ್ರೆ ತಿಳಿಸಿದೆ.

'ನಿರೀಕ್ಷಣಾ ಜಾಮೀನು ತಿರಸ್ಕರಿಸಲಾಗದು'

ಬೆಂಗಳೂರು: ಅಪರಾಧ ದಂಡ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 41–ಎ ಅಡಿಯಲ್ಲಿ ಪೊಲೀಸರು ನೋಟಿಸ್ ನೀಡಿದಾಗ ಬಂಧನದ ಭೀತಿಯಲ್ಲಿರುವ ವ್ಯಕ್ತಿ ನಿರೀಕ್ಷಣಾ ಜಾಮೀನು ಕೋರಿದ ಮನವಿ ತಿರಸ್ಕರಿಸಲು ಆಗುವುದಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ನಿವಾಸಿ ರಾಮಪ್ಪ (ರಮೇಶ್) ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಜಾಮೀನು ಮಂಜೂರು ಮಾಡಿದ ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ ಅವರಿದ್ದ ಪೀಠ, ಈ ಅಭಿಪ್ರಾಯಪಟ್ಟಿತು.

'ಅರಣ್ಯ ಅಪರಾಧಕ್ಕೆ ಸಂಬಂಧಿಸಿದಂತೆ ಬನಹಟ್ಟಿ ವಲಯ ಅರಣ್ಯಾಧಿಕಾರಿ ನೋಟಿಸ್ ನೀಡಿದ್ದು, ತನಿಖೆ ಇನ್ನೂ ಪ್ರಗತಿಯಲ್ಲಿದೆ. ಬಂಧಿಸಬಹುದು ಎಂಬ ಆತಂಕ ಇರುವುದರಿಂದ ನಿರೀಕ್ಷಿತ ಜಾಮೀನು ಪಡೆಯಲು ಅರ್ಜಿದಾರರು ಅರ್ಹರು' ಎಂದು ಪೀಠ ಹೇಳಿತು.

'₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ನೀಡಬೇಕು ಮತ್ತು 15 ದಿನಗಳಲ್ಲಿ ತನಿಖಾಧಿಕಾರಿ ಮುಂದೆ ಸ್ವಯಂ ಪ್ರೇರಣೆಯಿಂದ ಹಾಜರಾಗಬೇಕು' ಎಂದು ಅರ್ಜಿದಾರರಿಗೆ ನಿರ್ದೇಶನ ನೀಡಿತು.

ಕೋವಿಡ್ ಸಂತ್ರಸ್ತರಿಗೆ ಸಾಂತ್ವನ, ಸ್ಪಂದನೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಸಾಂತ್ವನ, ಸಂಕಷ್ಟದಲ್ಲಿ ಸಿಲುಕಿದವರಿಗೆ ಸ್ಪಂದಿಸಲು ಪಕ್ಷದ ವತಿಯಿಂದ ಒಂದು ತಿಂಗಳ ಜನಸಂಪರ್ಕ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಚಾಮರಾಜನಗರದಲ್ಲಿ ಸಾಂಕೇತಿಕವಾಗಿ ಭಾನುವಾರ (ಜೂನ್ 27) ಚಾಲನೆ ನೀಡಲಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಾರ್ಯಕ್ರಮದ ಬಗ್ಗೆ ಪಕ್ಷದ ನಾಯಕರ ಜೊತೆ ಶನಿವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, 'ಸಭೆಯಲ್ಲಿ 315 ನಾಯಕರು ಭಾಗವಹಿಸಿದ್ದು, ಕೆಲವರು ಸಲಹೆಗಳನ್ನು ನೀಡಿದ್ದಾರೆ. ಈ ಕಾರ್ಯಕ್ರಮದ ಹೆಸರನ್ನು ಶೀಘ್ರ ಪ್ರಕಟಿಸಲಾಗುವುದು' ಎಂದರು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ದೆಹಲಿಯಿಂದ ಭಾಗವಹಿಸಬೇಕಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗಲಿಲ್ಲ.

'ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರು, ಕಾರ್ಮಿಕರು, ಉದ್ಯೋಗ ಕಳೆದುಕೊಂಡವರು, ಮೃತಪಟ್ಟವರ ಕುಟುಂಬ ಸದಸ್ಯರು, ಕಾರ್ಮಿಕರು, ಚಾಲಕರು ಸೇರಿದಂತೆ ಎಲ್ಲ ವರ್ಗದವರನ್ನು ಭೇಟಿ ಮಾಡುವ ಕಾರ್ಯಕ್ರಮವನ್ನು ಜುಲೈ 1ರಿಂದ ಪಕ್ಷ ರೂಪಿಸಿದೆ. ನಮ್ಮ ಕಾರ್ಯಕ್ರಮ ಕೇವಲ ಸಾಂತ್ವನ ಹೇಳಲು ಮಾತ್ರ ಸೀಮಿತವಲ್ಲ. ಸಮಸ್ಯೆ ಆಲಿಸಿ, ಪರಿಹಾರ ಕೊಡಿಸುವ ಕೆಲಸ ಮಾಡಲಾಗುವುದು. ಚುನಾವಣೆಯಲ್ಲಿ ಗೆದ್ದವರು, ಸೋತವರು, ಬ್ಲಾಕ್ ಮಟ್ಟದ ನಾಯಕರು ತಂಡಗಳಾಗಿ ಮನೆ, ಮನೆಗೆ ಭೇಟಿ ನೀಡಲಿದ್ದಾರೆ' ಎಂದರು.



ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸತೀಶ ಜಾರಕಿಹೊಳಿ, ಈಶ್ವರ ಖಂಡ್ರೆ, ಧ್ರುವನಾರಾಯಣ, ಸಲೀಂ ಅಹ್ಮದ್, ರಾಮಲಿಂಗಾ ರೆಡ್ಡಿ ಜೊತೆ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮಾಲೋಚನೆ ನಡೆಸಿದರು

ಮತ್ತೆ ಟೊಂಕ ಕಟ್ಟಿ: ವಿಡಿಯೊ ಸಂವಾದದಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಕೋವಿಡ್ ಮೂರನೇ ಅಲೆಯ ಆತಂಕ ಆರಂಭವಾಗಿದ್ದು, ಜನರ ನೆರವಿಗೆ ಮತ್ತೆ ಟೊಂಕ ಕಟ್ಟಿ ನಿಲ್ಲುವಂತೆ ಪಕ್ಷದ ಶಾಸಕರು, ಸಂಸದರು, ಮುಖಂಡರಲ್ಲಿ ಮನವಿ ಮಾಡಿದರು.

'ಸರ್ಕಾರ ಘೋಷಿಸಿರುವ ಕೋವಿಡ್ ಪ್ಯಾಕೇಜ್ ಜನರನ್ನು ತಲುಪಿಯೇ ಇಲ್ಲ. ಪರಿಹಾರ ಪಡೆಯುವ ಮಾರ್ಗ ತಿಳಿಯದೆ ಜನ ಪರದಾಡುತ್ತಿದ್ದಾರೆ. ಈ ಕುರಿತಾಗಿಯೂ ಶಾಸಕರು ಜನರಿಗೆ ನೆರವಾಗಬೇಕು. ಸಂಕಷ್ಟಕ್ಕೆ ಒಳಗಾದವರ ಕೂಗು ಕೇಂದ್ರ, ರಾಜ್ಯ ಸರ್ಕಾರಕ್ಕೆ ಕೇಳಿಸುತ್ತಿಲ್ಲ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯನ್ನೂ ಸರ್ಕಾರ ಮುಚ್ಚಿಡುತ್ತಿದ್ದು ಸುಳ್ಳು ಅಂಕಿ ಅಂಶ ತೋರಿಸುತ್ತಿದೆ. ಅದನ್ನು ಬಯಲಿಗೆಳೆಯುವ ಕೆಲಸವೂ ಆಗಬೇಕು' ಎಂದಿದ್ದಾರೆ.

ಒಗ್ಗಟ್ಟಿರಲಿ: ಕೈ ಮುಗಿದ ಕೋಳಿವಾಡ!

'ಇಬ್ಬರು ನಾಯಕರು ಒಗ್ಗಟ್ಟಿನಲ್ಲಿ ಹೋಗಬೇಕು. ನಮ್ಮಲ್ಲಿಯೇ ಕಚ್ಚಾಟ ಸರಿಯಲ್ಲ. ಈಗಲೇ ಮುಂದಿನ ಮುಖ್ಯಮಂತ್ರಿ ಬಗ್ಗೆ ಮಾತನಾಡುವುದು ಸರಿಯಲ್ಲ.ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಒಗ್ಗಟಿನಿಂದ ಚುನಾವಣೆ ಮಾಡಿ. ಕೈ ಮುಗಿದು ಕೇಳಿಕೊಳ್ಳುತ್ತೇನೆ. ' ಎಂದು ವಿಡಿಯೊ ಸಂವಾದದಲ್ಲಿ ಮಾತನಾಡಿದ ಪಕ್ಷದ ಹಿರಿಯ ಮುಖಂಡ ಕೆ.ಬಿ. ಕೋಳಿವಾಡ ಮನವಿ ಮಾಡಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮರು ಮಾತನಾಡದೆ ಕೋಳಿವಾಡ ಅವರ ಮಾತು ಆಲಿಸಿದರು. ಪಕ್ಷದಲ್ಲಿ ಒಗ್ಗಟ್ಟಿನ ಬಗ್ಗೆ ಹಿರಿಯ ನಾಯಕಿ ಮೋಟಮ್ಮ ಕೂಡಾ ಧ್ವನಿ ಎತ್ತಿದರು.

'ಸಕ್ರಿಯರಲ್ಲದ ಪದಾಧಿಕಾರಿಗಳು ಬದಲು'

'ಬ್ಲಾಕ್, ಜಿಲ್ಲಾ ಘಟಕಗಳಲ್ಲಿ ಸಕ್ರಿಯವಾಗಿ ಇಲ್ಲದಿರುವವರನ್ನು ಬದಲಾಯಿಸುವ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಸಿದ್ದೇವೆ' ಎಂದು ಶಿವಕುಮಾರ್ ತಿಳಿಸಿದರು.

ಪಕ್ಷ ಸಂಘಟನೆ ಬಗ್ಗೆ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಸತೀಶ ಜಾರಕಿಹೊಳಿ ಮತ್ತು ಆರ್. ಧ್ರುವನಾರಾಯಣ ಜೊತೆ ಈ ಬಗ್ಗೆ ಸಮಾಲೋಚನೆ ನಡೆಸಿದ ಶಿವಕುಮಾರ್, ಬಳಿಕ ಮಾತನಾಡಿದರು.

ಮುನಿಯಪ್ಪ ಮನೆಯಲ್ಲಿ ಪರಮೇಶ್ವರ, ಹರಿಪ್ರಸಾದ್ ಚರ್ಚೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂದು ಸಿದ್ದರಾಮಯ್ಯ ಪರ ಶಾಸಕರು ಪದೇ ಪದೇ ಹೇಳಿಕೆ ನೀಡುತ್ತಿರುವ ಬೆನ್ನಲ್ಲೇ, ಪಕ್ಷದ ಹಿರಿಯ ನಾಯಕ ಕೆ.ಎಚ್. ಮುನಿಯಪ್ಪ ಮನೆಯಲ್ಲಿ ಜಿ. ಪರಮೇಶ್ವರ ಮತ್ತು ಬಿ.ಕೆ. ಹರಿಪ್ರಸಾದ್ ಚರ್ಚೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಬಹುಮತ ಪಡೆದರೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಸುದೀರ್ಘ ಅವಧಿ ನಿಭಾಯಿಸಿರುವ ಪರಮೇಶ್ವರ ಅವರೂ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿ. ಅಲ್ಲದೆ, ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಮುಖ್ಯಮಂತ್ರಿ ಆಗಬೇಕೆಂಬ ಕೂಗು ಮೊದಲಿನಿಂದಲೇ ಕಾಂಗ್ರೆಸ್‌ನಲ್ಲಿ ಇದ್ದು, ಇತ್ತೀಚಿನ ವರ್ಷಗಳಲ್ಲಿ ಮತ್ತಷ್ಟು ಬಲಗೊಳ್ಳುತ್ತಿದೆ. ಹೀಗಾಗಿ, ಮುಂದಿನ ಚುನಾವಣೆಯ ವೇಳೆಗೆ 'ಪರಿಶಿಷ್ಟ ಜಾತಿಯ ಮುಖ್ಯಮಂತ್ರಿ' ವಿಚಾರ ಮತ್ತೊಮ್ಮೆ ಮುಂಚೂಣಿಗೆ ಬಂದರೂ ಅಚ್ಚರಿ ಇಲ್ಲ ಎಂಬ ಮಾತು ಕಾಂಗ್ರೆಸ್ ಪಡಸಾಲೆಯಲ್ಲಿ ಕೇಳಿ ಬರುತ್ತಿದೆ.

ಪಕ್ಷದ ಹಿರಿಯ ನಾಯಕರೂ ಆಗಿರುವ ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಮನೆಯಲ್ಲಿ ಇನ್ನೊಬ್ಬ ಹಿರಿಯ ನಾಯಕ ಹಾಗೂ ಹಲವು ವರ್ಷ ಹೈಕಮಾಂಡ್ ಮಟ್ಟದಲ್ಲಿ ಸಕ್ರಿಯವಾಗಿ ರಾಜಕೀಯ ನಡೆಸಿ ರಾಜ್ಯಕ್ಕೆ ಬಂದಿರುವ ಬಿ.ಕೆ. ಹರಿಪ್ರಸಾದ್ ಚರ್ಚೆ ನಡೆಸಿರುವುದು, ಪರಿಶಿಷ್ಟ ಜಾತಿಗೆ ಮುಖ್ಯಮಂತ್ರಿ ಪಟ್ಟ ಸಿಗಬೇಕು ಎಂಬ ವಿಚಾರ ಮತ್ತೆ ಮುಂಚೂಣಿಗೆ ತರುವ ಯತ್ನಕ್ಕೆ ಮುನ್ನುಡಿಯೇ ಎಂಬ ಚರ್ಚೆಗೂ ಕಾರಣವಾಗಿದೆ.



ಕೆ.ಎಚ್. ಮುನಿಯಪ್ಪ ಮನೆಯಲ್ಲಿ ಜಿ. ಪರಮೇಶ್ವರ ಮತ್ತು ಬಿ.ಕೆ. ಹರಿಪ್ರಸಾದ್ ಚರ್ಚೆ

'ಮನೆಗೆ ಬಂದ ಸೊಸೆ ಹಾಗೆ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಗೆ ಬರುವಾಗ ಸೊಸೆ ಹೊಸದಾಗಿಯೇ ಬರುವುದು. ಸೊಸೆಗೆ ನೀನು ವಲಸೆ ಬಂದವಳೆಂದು ಹೇಳಲು ಆಗುತ್ತದೆಯೇ? ಸ್ವಲ್ಪ ದಿನವಾದರೆ ಅವಳ ಕೈಗೆ ಕೀಲಿ ಕೈ ಹೋಗುತ್ತದೆ. ಹಾಗೆಯೇ ಈಗ ಸಿದ್ದರಾಮಯ್ಯ ಕೈಗೆ ಕೀಲಿ ಕೈ ಸಿಕ್ಕಿದೆ. ಹಾಗಾಗಿ ವಲಸಿಗ, ಹೊಸಬ ಎನ್ನುವ ಭೇದಭಾವ ಇಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

'ಬೇರೆ ಪಕ್ಷದಿಂದ ಬಂದು ಕಾಂಗ್ರೆಸ್ ಅನ್ನು ಹಾಳು ಮಾಡಬೇಡಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಳಿದ್ದರು.

ಸಿದ್ದರಾಮಯ್ಯ ಪರ ತಮ್ಮದೇ ಶೈಲಿಯಲ್ಲಿ ಶನಿವಾರ ಮಾತನಾಡಿದ ಇಬ್ರಾಹಿಂ, 'ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದು ಯಾರು? ಬಳ್ಳಾರಿ ಪಾದಯಾತ್ರೆಯಲ್ಲಿ ಅವರನ್ನು ಮುಂದೆ ತಂದವರು ಯಾರು? ಅವರು ಮುಖ್ಯಮಂತ್ರಿ ಆಗಬೇಕೆಂದು ನಾವೇ ಹೇಳಿದ್ದು ಅಲ್ಲವೇ? ಇಂಥವರೊಬ್ಬರು ಇದ್ದಾರೆ ಅಂತ ಹೇಳಿದ್ದೇ ನಾವು. ಸಿದ್ದರಾಮಯ್ಯ ಅವರಿಗೆ ಮೇಕಪ್ ಮಾಡಿದವರೇ ನಾವು' ಎಂದು ಬಣ್ಣಿಸಿದರು.

'ಸಿದ್ದರಾಮಯ್ಯ ಹೀರೋ ಇದ್ದರೂ ಹಿನ್ನೆಲೆ ಗಾಯಕರು ಯಾರು? ಸ್ವಲ್ಪ ಕ್ಯಾಸೆಟ್ ತೆಗೆದು ನೋಡಿ. ಅದರಲ್ಲಿ ನಿಮಗೆ ಹಿನ್ನೆಲೆ ಗಾಯಕ ಯಾವತ್ತೂ ಕಾಣಲ್ಲ. ಒಂದು ರೂಗೆ ಒಂದು ಕಿಲೋ ಅಕ್ಕಿ, ಮಧ್ಯಾಹ್ನದ ಊಟ ತಂದವರು ಯಾರು? ತಮಿಳುನಾಡಿನಲ್ಲಿ ಎರಡು ದಿನ ಕುಳಿದು ಅಧ್ಯಯನ ಮಾಡಿ ನಾನು ಆ ಯೋಜನೆ ತಂದೆ. ಅದು ಯಶಸ್ವಿ ಆಯಿತು. ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ಯೋಜನೆ ಕೊಟ್ಟೆ' ಎಂದು ಇಬ್ರಾಹಿಂ ಹೇಳಿದರು.

ಪಕ್ಷದ ಶಾಸಕರು 'ಮುಂದಿನ ಮುಖ್ಯಮಂತ್ರಿ' ಬಗ್ಗೆ ಹೇಳಿಕೆ ನೀಡುತ್ತಿರುವ ಚರ್ಚೆಗೆ ಅಭಿಪ್ರಾಯ ವ್ಯಕ್ತಪಡಿಸಿದ ಇಬ್ರಾಹಿಂ, 'ಮೊದಲು ಎಂಎಲ್‌ಎ ಎಲೆಕ್ಷನ್ ಆಗಿ ಕಾಂಗ್ರೆಸ್ ಪಕ್ಷ ಗೆಲ್ಲಲಿ. ನಂತರ ಶಾಸಕರ ಅಭಿಪ್ರಾಯ ಪಡೆದು ತೀರ್ಮಾನ ಮಾಡಬಹುದು. ರಾಷ್ಟ್ರೀಯ ಪಕ್ಷದಲ್ಲಿ ಒಂದು ಪದ್ಧತಿ ಇರುತ್ತದೆ. ಶೇ 90ರಷ್ಟು ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಕಾಂಗ್ರೆಸ್ ಹೈಕಮಾಂಡ್ ಈ ವಿಚಾರದಲ್ಲಿ ಯಾವ ತೀರ್ಮಾನ ತೆಗೆದುಕೊಳ್ಳುತ್ತದೆ ನೋಡೋಣ' ಎಂದು ಪ್ರತಿಕ್ರಿಯಿಸಿದರು.


'ಸಿದ್ದರಾಮಯ್ಯಗೆ ಒಂದು ತಂಡ ಸಿಕ್ಕಿತು. ಆದರೆ, ಯಡಿಯೂರಪ್ಪಗೆ ಅಂಥ ಟೀಮ್ ಸಿಗಲಿಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ ಇಬ್ಬರೇ ಟೀಮ್. ಯಡಿಯೂರಪ್ಪಗೆ ಜಾತಿ ಬೆಂಬಲ ಇದೆ. ಯಡಿಯೂರಪ್ಪ ಬಿಟ್ಟು ಹೋದರೆ ಬಿಜೆಪಿಗೆ ಬರೋದು ಕೇವಲ 40 ಸೀಟು ಮಾತ್ರ' ಎಂದು ವ್ಯಂಗ್ಯವಾಡಿದರು.

ಒಕ್ಕಲಿಗರ ಕ್ಷಮೆ ಕೇಳಿದ ಸಿ.ಎಂ. ಇಬ್ರಾಹಿಂ

'ಕುಮಾರಸ್ವಾಮಿ ಮತ್ತು ಒಕ್ಕಲಿಗ ಸಮಾಜದ ಬಗ್ಗೆ ಸಮಾಜದ ಕೆಲವು ಮುಖಂಡರು ಮಾತನಾಡಿದ್ದರಿಂದ ಅವರ ಮನನೊಂದಿದೆ ಎಂದು ಕೇಳಿ ಮನಸ್ಸಿಗೆ ನೋವಾಯಿತು. ಅದಕ್ಕೆ ದೇವೇಗೌಡ, ಕುಮಾರಸ್ವಾಮಿ ಸೇರಿದಂತೆ ಇಡೀ ಒಕ್ಕಲಿಗ ಸಮಾಜದ ಕ್ಷಮೆ ಕೇಳುತ್ತೇನೆ' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದ್ದಾರೆ.

ಮುಖ್ಯಮಂತ್ರಿಯಾಗಿದ್ದಾಗ ಕುಮಾರಸ್ವಾಮಿ ಇರುತ್ತಿದ್ದ ಸದಾಶಿವನಗರದಲ್ಲಿರುವ ಗೆಸ್ಟ್‌ಹೌಸ್ ವಿಚಾರದಲ್ಲಿ ಅವರ ವಿರುದ್ಧ ಇತ್ತೀಚೆಗೆ ಚಾಮರಾಜಪೇಟೆ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಏಕವಚನದಲ್ಲಿ ಮಾತನಾಡಿದ್ದರು. ಜಮೀರ್ ಹೆಸರನ್ನು ಪ್ರಸ್ತಾಪಿಸದೇ ಇಬ್ರಾಹಿಂ ಹೇಳಿಕೆ ನೀಡಿದ್ದಾರೆ.

'ಇತ್ತೀಚೆಗೆ ನನ್ನ ತಾಯಿ ನಿಧನರಾಗಿದ್ದರಿಂದ ಮಾಧ್ಯಮಗಳಿಗೆ ಹೇಳಿಕೆ ಕೊಡಲು ಸಾಧ್ಯವಾಗಿಲ್ಲ. ಎಲ್ಲರೂ ಕೂಡಿಕೊಂಡು ಬದುಕಬೇಕು. ಯಾರಿಗಾದರೂ ಮನಸ್ಸಿಗೆ ನೋವಾಗಿದ್ದರೆ ದಯವಿಟ್ಟು ಕ್ಷಮಿಸಿ' ಎಂದು ಮನವಿ ಮಾಡಿದ್ದಾರೆ.



ಇಬ್ರಾಹಿಂ

'ಟಿಪ್ಪು ಸುಲ್ತಾನ್‌ನ ಮಕ್ಕಳನ್ನು ಬ್ರಿಟಿಷರು ಒತ್ತೆ ಇಟ್ಟಾಗ ಮಂಡ್ಯ, ಶ್ರೀರಂಗಪಟ್ಟಣದ, ಚನ್ನಪಟ್ಟಣ ಸೇರಿದಂತೆ ಹಳೆ ಮೈಸೂರಿನ ರೈತಾಪಿ ಒಕ್ಕಲಿಗರು ದುಡ್ಡು ಕೊಟ್ಟು ಬಿಡಿಸುವ ಕೆಲಸ ಮಾಡಿದ್ದರು. ನೂರಾರು ವರ್ಷಗಳಿಂದ ಒಕ್ಕಲಿಗರು– ಮುಸಲ್ಮಾನರು ಕೂಡಿಕೊಂಡು ಜೀವಿಸಿದ್ದೇವೆ. ಇವತ್ತೂ ಹಳ್ಳಿಗಳಲ್ಲಿ ಜೀವನ ಸುಭದ್ರವಾಗಿದೆ. ಯಾರು ಏನೇ ಹೇಳಿದರೂ ಈ ಸಮಾಜದಲ್ಲಿ ಬಿರುಕು ಸಾಧ್ಯವಿಲ್ಲ' ಎಂದಿದ್ದಾರೆ.

'ದೇವೇಗೌಡರು ಉತ್ತಮ ನಾಯಕ. ಕುಮಾರಸ್ವಾಮಿ ಕೂಡಾ ಮುಖ್ಯಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಜಕೀಯವಾಗಿ ಟೀಕೆ ಮಾಡುವುದು ಬೇರೆ. ಆದರೆ, ವ್ಯಕ್ತಿಗತವಾಗಿ ಟೀಕೆ ಮಾಡಿದಾಗ ಏಕವಚನ ಬಳಕೆ ನಮ್ಮ ಸಂಸ್ಕೃತಿ ಅಲ್ಲ. ಹೀಗೆ ಯಾರಿಂದಲಾದರೂ ನೋವಾಗಿದ್ದರೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಆ ವಿಷಯ ಮರೆತುಬಿಡಿ. ಕೂಡಿ ಬಾಳೋಣ' ಎಂದೂ ಇಬ್ರಾಹಿಂ ಕೋರಿದ್ದಾರೆ.

'ಭಾವಿ ನಾಯಕತ್ವಕ್ಕಾಗಿನ ಹೋರಾಟ ಅನಪೇಕ್ಷಿತ'

ಬೆಂಗಳೂರು: 'ಕಾಂಗ್ರೆಸ್‌ನಲ್ಲಿ ಭಾವಿ ನಾಯಕತ್ವಕ್ಕಾಗಿ ನಡೆಯುತ್ತಿರುವ ಹೋರಾಟ ಒಳ್ಳೆಯ ಬೆಳವಣಿಗೆಯಲ್ಲ. ರಾಜ್ಯದ ಬೊಕ್ಕಸ ಬರಿದಾಗಿರುವ ಈ ಸಂದರ್ಭದಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್, ಬಿಜೆಪಿ ವಿರುದ್ಧ ಯುದ್ಧ ಸಾರಬೇಕಾಗಿದೆ' ಎಂದು ಲೋಹಿಯಾ ವಿಚಾರ ವೇದಿಕೆ ಹೇಳಿದೆ.

'ಭಾವಿ ನಾಯಕತ್ವಕ್ಕಾಗಿನ ಹೋರಾಟದಲ್ಲಿ ರಾಜಕೀಯ ಶತ್ರುಗಳು ಶಕ್ತಿ ಸಂಚಯ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡಬಾರದು. ಈ ಸತ್ಯವನ್ನು ಬೇಗ ಅರ್ಥ ಮಾಡಿಕೊಂಡು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜೋಡೆತ್ತಿನಂತೆ ಕೆಲಸ ಮಾಡಬೇಕು' ಎಂದು ವೇದಿಕೆಯ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ ಸಲಹೆ ನೀಡಿದ್ದಾರೆ.

'ಕಳೆದ ವರ್ಷ ಪ್ರವಾಹದಿಂದಾಗಿ ಹಲವರು ಪ್ರಾಣ ಕಳೆದುಕೊಂಡರು. ₹50 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ಸ್ವತ್ತು ನಷ್ಟವಾಯಿತು. ಆದರೆ ಕೇಂದ್ರ ಸರ್ಕಾರ ಪ್ರಕೃತಿ ವಿಕೋಪ ನಿಧಿಯ ಮೂಲಕ ಪರಿಹಾರ ನೀಡುವಾಗಲೂ ರಾಜ್ಯಕ್ಕೆ ಅನ್ಯಾಯ ಎಸಗಿತು. ಕೋವಿಡ್ ನಿಯಂತ್ರಣಕ್ಕೆ ಲಸಿಕೆ ವಿತರಣೆಯಲ್ಲೂ ತಾರತಮ್ಯ ಎಸಗಲಾಗುತ್ತಿದೆ. ಇದೆಲ್ಲವನ್ನೂ ಪ್ರಶ್ನೆ ಮಾಡುವ ಶಕ್ತಿ ಹಾಗೂ ನೈತಿಕ ಸ್ಥೈರ್ಯ ಇರುವುದು ಸಿದ್ದರಾಮಯ್ಯನವರಲ್ಲಿ ಮಾತ್ರ' ಎಂದೂ ಅವರು ಹೇಳಿದ್ದಾರೆ.

'ಕಾಂಗ್ರೆಸ್‌ನ ತತ್ವ ಸಿದ್ಧಾಂತದಲ್ಲಿ ಅಚಲ ನಿಷ್ಠೆ ಹೊಂದಿರುವ ಸಿದ್ದರಾಮಯ್ಯ ಪಕ್ಷದ ವರಿಷ್ಠರ ಸೂಚನೆಗೆ ವಿರುದ್ಧವಾಗಿ ಎಂದೂ ನಡೆದುಕೊಂಡಿಲ್ಲ, ನಡೆದುಕೊಳ್ಳುವುದೂ ಇಲ್ಲ. ಚುನಾವಣೆಗೆ ಮುಂಚಿತವಾಗಿಯೇ ಇಂಥವರೇ ಮುಖ್ಯಮಂತ್ರಿ ಎಂದು ಸಾರುವುದು ಹಾಗೂ ಅವರ ನಾಯಕತ್ವದಲ್ಲೇ ಚುನಾವಣೆ ಎದುರಿಸುವ ಪರಂಪರೆಯನ್ನು ಕಾಂಗ್ರೆಸ್ ಎಂದೂ ಪಾಲಿಸಿಲ್ಲ. ಇಲ್ಲೇನಿದ್ದರೂ ಸಾಮೂಹಿಕ ನಾಯಕತ್ವ. ಚುನಾವಣೆಯಲ್ಲಿ ಗೆದ್ದ ನಂತರ ಶಾಸಕರ ಅಭಿಪ್ರಾಯವನ್ನು ಆಧರಿಸಿ ಯಾರನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಬೇಕೆಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಭಾವಿ ಮುಖ್ಯಮಂತ್ರಿ ಯಾರೆಂಬ ವಿಚಾರದಲ್ಲಿ ಸೃಷ್ಟಿಯಾಗಿರುವ ಗೊಂದಲ ಸದ್ಯದ ಮಟ್ಟಿಗೆ ಅನಪೇಕ್ಷಿತ' ಎಂದೂ ಶಿವಣ್ಣ ಹೇಳಿದ್ದಾರೆ.

ರಕ್ತದ ಕ್ಯಾನ್ಸರ್: ರೋಗಿಗೆ ನೆರವಾದ ಟೆಕ್ಕಿ

ಬೆಂಗಳೂರು: ಕೋವಿಡ್ ಜಯಿಸಿದ 22 ವರ್ಷದ ಕೇರಳದ ಟೆಕ್ಕಿಯೊಬ್ಬರು ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಗರದ ರೋಗಿಯೊಬ್ಬರಿಗೆ ರಕ್ತದ ಆಕರಕೋಶ (ಬ್ಲಡ್ ಸ್ಟೆಮ್ ಸೆಲ್) ದಾನ ಮಾಡಿದ್ದಾರೆ.

ಖಾಸಗಿ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿರುವ ಮಿಥುಲ್ ರಕ್ತದ ಆಕರ ಕೋಶಗಳ ನೋಂದಣಿ ಸೇವಾ ಸಂಸ್ಥೆಯಾದ 'ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್' ಅಡಿ ಹೆಸರು ನೋಂದಾಯಿಸಿಕೊಂಡಿದ್ದರು. ಮಾರ್ಚ್ ತಿಂಗಳಲ್ಲಿ ಅವರು ರಕ್ತದ ಆಕರ ಕೋಶ ದಾನ ಮಾಡಲು ನಗರಕ್ಕೆ ಬಂದಿದ್ದರು. ಆ ವೇಳೆ ಅವರಿಗೆ ಕೊರೊನಾ ಸೋಂಕು ತಗುಲಿದ ಕಾರಣ ದಾನ ಮಾಡಲು ಸಾಧ್ಯವಾಗಲಿಲ್ಲ. ಹಾಗಾಗಿ, ಈಗ ಪುನಃ ಬೆಂಗಳೂರಿಗೆ ಬಂದು ರಕ್ತದ ಆಕರ ಕೋಶವನ್ನು ದಾನ ಮಾಡಿದ್ದಾರೆ.

'ರೋಗಿಯೊಬ್ಬರಿಗೆ ನನ್ನ ರಕ್ತದ ಆಕರ ಕೋಶ ಹೊಂದಾಣಿಕೆಯಾಗುತ್ತದೆ ಎಂದು ತಿಳಿದಾಗ ಅತೀವ ಸಂತೋಷವಾಯಿತು. ಆದರೆ, ಕೋವಿಡ್ ಪೀಡಿತನಾದ ಕಾರಣ ದಾನ ಮಾಡಲು ಸಾಧ್ಯವಾಗಿರಲಿಲ್ಲ. ಇದರಿಂದ ರೋಗಿಯ ಜೀವಕ್ಕೆ ಇನ್ನಷ್ಟು ಅಪಾಯವಾಗಬಹುದು ಎಂದು ಚಿಂತೆಗೆ ಒಳಗಾಗಿದ್ದೆ. ಕೋವಿಡ್‌ನಿಂದ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡ ಬಳಿಕ ರಕ್ತದ ಆಕರ ಕೋಶವನ್ನು ದಾನ ಮಾಡಿದೆ. ಹೆತ್ತವರು ನನಗೆ ಪೂರ್ಣ ಪ್ರಮಾಣದಲ್ಲಿ ಬೆಂಬಲ ನೀಡಿದರು' ಎಂದು ಮಿಥುನ್ ತಿಳಿಸಿದರು.

ಡಿ ಕೆ ಎಂ ಎ ಸ್ - ಬಿ ಎಂ ಎ ಸ್ ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ಶೇ 30ರಷ್ಟು ರೋಗಿಗಳಿಗೆ ಮಾತ್ರ ಕುಟುಂಬದ ಸದಸ್ಯರು ಅಥವಾ ಸಂಬಂಧಿಗಳ ರಕ್ತದ ಆಕರ ಕೋಶ ಹೊಂದಾಣಿಕೆಯಾಗುತ್ತದೆ. ಶೇ 70ರಷ್ಟು ರೋಗಿಗಳಿಗೆ ರಕ್ತದ ಆಕರ ಕೋಶ ಹೊಂದಾಣಿಕೆಯಾಗುವ ದಾನಿಗಳನ್ನು ಹುಡುಕಬೇಕಾಗುತ್ತದೆ. ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಚಲನಚಿತ್ರ-ರಂಗಭೂಮಿ ಕಲಾವಿದರಿಗೆ ದಿನಸಿ ಕಿಟ್ ವಿತರಣೆ: ಕೆಂಪೇಗೌಡ ಪ್ರತಿಮೆಗೆ ಪುಷ್ಪಾರ್ಚನೆ– ವಸತಿ ಸಚಿವ ವಿ.ಸೋಮಣ್ಣ, ಭಾಗವಹಿಸುವವರು–ಶೈಲಜಾ ಸೋಮಣ್ಣ, ನಟಿ ತಾರಾ ಅನೂರಾಧ, ಜೆ.ಕೆ.ಶ್ರೀನಿವಾಸ ಮೂರ್ತಿ, ವಿ.ನಾಗೇಂದ್ರ ಪ್ರಸಾದ್, ಆಯೋಜನೆ–ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ–ಕೆಂಪೇಗೌಡ ಪ್ರತಿಮೆ, ವಿಜಯನಗರ ಬಸ್ ನಿಲ್ದಾಣದ ಹತ್ತಿರ, ಬೆಳಿಗ್ಗೆ 9




ತಾರಾ ಅನುರಾಧಾ

ಕೆಂಪೇಗೌಡರ ಜಯಂತಿ ಅಂಗವಾಗಿ ಅಂಚೆ ಚೀಟಿ ಲೋಕಾರ್ಪಣೆ ಹಾಗೂ ಜ್ಞಾನಭಾರತಿಯ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಂಪೇಗೌಡರ ಅಧ್ಯಯನ ಕೇಂದ್ರ ನಿರ್ಮಾಣಕ್ಕೆ ಆನ್‌ಲೈನ್ ಚಾಲನೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅತಿಥಿಗಳು– ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ– ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಬೆಲೆ ಏರಿಕೆ ವಿರೋಧಿಸಿ, ಕೋವಿಡ್ ಮೂರನೇ ಅಲೆಗೆ ಸನ್ನದ್ಧರಾಗಲು ಒತ್ತಾಯಿಸಿ ಬಹಿರಂಗ ಸಭೆ: ಮಾತನಾಡುವವರು–ಬೃಂದಾ ಕಾರಟ್, ಬಿನೊಯ್ ವಿಶ್ವಂ, ಕೆ.ರಾಧಾಕೃಷ್ಣನ್, ಕವಿತಾ ಕೃಷ್ಣನ್, ಬಿ.ದೇವರಾಜನ್, ಪ್ರಕಾಶ್ ಅಂಬೇಡ್ಕರ್, ಅವಿಕ್ ಶಾ, ಆಯೋಜನೆ–ಸಿಪಿಐ, ಎಸ್‌ಯುಸಿಐ, ಆರ್‌ಪಿಐ, ಸ್ವರಾಜ್ ಇಂಡಿಯಾ ಹಾಗೂ ಇತರ ಸಂಘಟನೆಗಳು, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

'ಸಮಕಾಲೀನ ಸಾಮಾಜಿಕ ವಿಷಮತೆಗೆ ಪ್ರತಿದ್ವಂದ್ವಿಯಾಗಿ ಹುಟ್ಟಿದ್ದು ವಚನ ಚಳವಳಿ' ಕುರಿತು ವಿಷಯ ಮಂಡನೆ–ಜೆ.ಎಸ್.ಪಾಟೀಲ, ಅಧ್ಯಕ್ಷತೆ– ಪ್ರೊ.ಎ.ಎಸ್.ನಟರಾಜ್, ಭಾಗವಹಿಸುವವರು– ಆರ್.ನಾಗೇಶ್, ಆಯೋಜನೆ– ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಸಿಜಿಕೆ 70ರ ಸವಿನೆನಪು ಹಾಗೂ ಕವಿ ಸಿದ್ದಲಿಂಗಯ್ಯ ಅವರಿಗೆ ನುಡಿನಮನ: ಸಾನ್ನಿಧ್ಯ–ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು– ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಸಿ.ಎನ್.ಮಂಜುನಾಥ್, ಚಿಂತಕಿ ಎಂ.ಎಸ್.ಆಶಾದೇವಿ, ಎಲ್.ಎನ್. ಮುಕುಂದರಾಜು, ಶಶಿಧರ್ ಅಡಪ, ಆಯೋಜನೆ–ರಂಗಚಂದಿರ ಮತ್ತು ರಂಗ ವಿಜಯಾ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)



ಡಾ.ಸಿ.ಎನ್. ಮಂಜುನಾಥ್



ಸಮರ್ಥನಂ ಅಂಗವಿಕಲರ ಸಂಸ್ಥೆಯು ಎಲ್ ಆ್ಯಂಡ್ ಟಿ ಟೆಕ್ನಾಲಜಿ ಸರ್ವಿಸಸ್ ಕಂಪನಿಯ ಸಹಯೋಗದಲ್ಲಿ ಕೋವಿಡ್ ಪೀಡಿತರ ಚಿಕಿತ್ಸೆಗೆ ಎರಡು ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಿತು. ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಂಸ್ಥಾಪಕ ಡಾ. ಮಹಾಂತೇಶ್ ಜಿ.ಕೆ, ಕಂಪನಿಯ ನಿರ್ದೇಶಕ ಸುದೀಪ್ ಬ್ಯಾನರ್ಜಿ ಮತ್ತಿತರರು ಇದ್ದರು.

ಷರತ್ತು ಬದಲಾವಣೆ: ಹೈಕೋರ್ಟ್ ಅಸಮಾಧಾನ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಕಸವನಹಳ್ಳಿಯಲ್ಲಿನ ಮಾತಾ ಅಮೃತಾನಂದಮಯಿ ಟ್ರಸ್ಟ್‌ಗೆ 21 ವರ್ಷಗಳ ಹಿಂದೆ ಭೂಮಿ ಮಂಜೂರು ಮಾಡಿದ್ದಾಗ ವಿಧಿಸಿದ್ದ ಷರತ್ತುಗಳನ್ನು ಬದಲಾಯಿಸಿದ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

'2000ನೇ ಇಸವಿಯಲ್ಲಿ ಭೂಮಿ ಮಂಜೂರು ಮಾಡಿದ್ದು, 2021ರ ಏಪ್ರಿಲ್‌ನಲ್ಲಿ ಷರತ್ತುಗಳನ್ನು ಮಾರ್ಪಡಿಸಲಾಗಿದೆ. ಈ ಸಂದರ್ಭದಲ್ಲಿ ನ್ಯಾಯಾಲಯದ ನಿರ್ದೇಶನಗಳನ್ನು ನಿರ್ಲಕ್ಷಿಸಲಾಗಿದೆ' ಎಂದು ಕವಿತಾ ಮತ್ತು ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬಡ ವಿಧವೆಯರಿಗೆ ಮನೆಗಳನ್ನು ನಿರ್ಮಿಸುವ ಬದಲು ಎಂಜಿನಿಯರಿಂಗ್ ಕಾಲೇಜು ನಡೆಸಲಾಗುತ್ತಿದೆ. ಷರತ್ತುಗಳ ಉಲ್ಲಂಘನೆ ಆಗಿರುವ ಸಂಬಂಧ 2021ರ ಫೆಬ್ರುವರಿ 22ರಂದು ರಾಜ್ಯ ಸರ್ಕಾರವೇ ವರದಿಯೊಂದನ್ನು ಸಿದ್ಧಪಡಿಸಿದೆ' ಎಂದು ಅರ್ಜಿದಾರರು ವಿವರಿಸಿದರು.

ಈ ವರದಿ ಆಧರಿಸಿ ಟ್ರಸ್ಟ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ 2021ರ ಏಪ್ರಿಲ್ 23ರಲ್ಲಿ ನ್ಯಾಯಾಲಯ ನಿರ್ದೇಶನ ನೀಡಿತ್ತು. ಕ್ರಮ ಕೈಗೊಳ್ಳುವ ಬದಲು 2021ರ ಏಪ್ರಿಲ್ 29ರಂದು ಹೊಸ ಆದೇಶ ಹೊರಡಿಸಿ, ಶೈಕ್ಷಣಿಕ ಉದ್ದೇಶಕ್ಕೆ ಭೂಮಿ ಬಳಸಬಹುದು ಎಂದು ತಿಳಿಸಿದೆ. ಆ ಮೂಲಕ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ರಾಜ್ಯ ಸರ್ಕಾರ ಹೊಸ ಆದೇಶ ಹೊರಡಿಸಿದೆ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಸರ್ಕಾರದ ಈ ನಡವಳಿಕೆ ಬಗ್ಗೆ ಅಫಿಡವಿಟ್ ಸಲ್ಲಿಸುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪೀಠ ನಿರ್ದೇಶನ ನೀಡಿತು. ವಿಚಾರಣೆಯನ್ನು ಜುಲೈ 5ಕ್ಕೆ ಮುಂದೂಡಿತು.

ಆರ್ಥಿಕ ವರ್ಷ ಆರಂಭವಾಗಿ ಎರಡೂವರೆ ತಿಂಗಳ ಬಳಿಕ ಲೋಪ ಸರಿಪಡಿಸಿದ ಬಿಡಿಎ

ಬಿಡಿಎ: ಆನ್‌ಲೈನ್ ತೆರಿಗೆ ಪಾವತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬಿಡಿಎ ಸುದ್ದಿ

ವರದಿ ಫಲಶ್ರುತಿ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 2021–22ನೇ ಸಾಲಿನ ಆಸ್ತಿ ತೆರಿಗೆಯ ಆನ್‌ಲೈನ್ ಪಾವತಿಗೆ ಕೊನೆಗೂ ಅವಕಾಶ ಕಲ್ಪಿಸಿದೆ.

2021–22ನೇ ಆರ್ಥಿಕ ವರ್ಷ ಆರಂಭವಾಗಿ ಎರಡೂವರೆ ತಿಂಗಳ ಬಳಿಕವೂ ತನ್ನ ವೆಬ್‌ಸೈಟ್‌ನಲ್ಲಿ (bdabangalore.org) ಆನ್‌ಲೈನ್ ತೆರಿಗೆ ಪಾವತಿಗೆ ಅವಕಾಶ ಕಲ್ಪಿಸಿರಲಿಲ್ಲ. ಬಿಡಿಎ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ನಿವೇಶನದಾರರು ತೆರಿಗೆ ಪಾವತಿಸಲು ವೆಬ್‌ಸೈಟ್ ತೆರೆದಾಗ, 'ಕೋವಿಡ್‌ನಿಂದ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದು, ಕಚೇರಿಯಲ್ಲಿ ಶೇ 50ರಷ್ಟು ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಆಸ್ತಿ ತೆರಿಗೆ ಪರಿಷ್ಕರಣೆಗೊಳಿಸಿ ಅಂತರ್ಜಾಲದಲ್ಲಿ ತೆರಿಗೆ ಪಾವತಿಸಲು ಶೀಘ್ರದಲ್ಲೇ ಅವಕಾಶ ಮಾಡಿಕೊಡಲಾಗುತ್ತದೆ' ಎಂಬ ಸಂದೇಶ ಕಾಣಿಸಿಕೊಳ್ಳುತ್ತಿತ್ತು. ಈ ಬಗ್ಗೆ 'ಪ್ರಜಾವಾಣಿ'ಯು ಇದೇ 23ರ ಸಂಚಿಕೆಯಲ್ಲಿ 'ಬಿಡಿಎ: ಆಸ್ತಿ ತೆರಿಗೆ ಪಾವತಿಗೆ ಇನ್ನೂ ತೆರೆದಿಲ್ಲ ಕಿಂಡಿ' ಎಂಬ ವಿಶೇಷ ವರದಿ ಪ್ರಕಟಿಸಿತ್ತು. ಇದರ ಬೆನ್ನಲ್ಲೇ ಲೋಪಗಳನ್ನು ಸರಿಪಡಿಸಿ, ವೆಬ್‌ಸೈಟ್ ಮೂಲಕವೇ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಿದೆ.

ಕೋವಿಡ್ ನಡುವೆಯೇ ಶುಲ್ಕ ಹೆಚ್ಚಳ: ಬಿಡಿಎ ಕೋವಿಡ್ ಸಂಕಷ್ಟದ ಕಾಲದಲ್ಲೇ ನಾಗರಿಕ ಸೇವೆಗಳ ಶುಲ್ಕವನ್ನು ಕಳೆದ ಸಾಲಿನಲ್ಲಿ ಹೆಚ್ಚಳ ಮಾಡಿತ್ತು. ಖಾತಾ ಶುಲ್ಕ, ಫ್ಲ್ಯಾಟ್ ಖರೀದಿಯ ಅರ್ಜಿ ಶುಲ್ಕ, ನೋಂದಣಿ ಶುಲ್ಕ, ನಿರ್ವಹಣಾ ಶುಲ್ಕ, ಖಾಲಿ ನಿವೇಶನಗಳಿಗೆ ವಿಧಿಸುವ ದಂಡದ ಶುಲ್ಕಗಳೆಲ್ಲವೂ ಸೇರಿ ಶೇ 250ರಷ್ಟು ಹೆಚ್ಚಿಸುವ ಪ್ರಸ್ತಾವಕ್ಕೆ 2020ರ ಆ.28ರಂದು ನಡೆದಿದ್ದ ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಸಿಕ್ಕಿತ್ತು. 2020ರ ಅ.6ರಿಂದಲೇ ಪರಿಷ್ಕೃತ ದರಗಳನ್ನು ಜಾರಿಗೆ ತರಲು ಬಿಡಿಎ ನಿರ್ಣಯ ಕೈಗೊಂಡಿತ್ತು. ಈ ಬಗ್ಗೆ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಆ ಬಳಿಕ ಪರಿಷ್ಕೃತ ಆಸ್ತಿ ತೆರಿಗೆಯನ್ನು ಆರ್ಥಿಕ ವರ್ಷದ ಮಧ್ಯದಲ್ಲಿ ಜಾರಿಗೆ ತರುವ ಪ್ರಸ್ತಾವನೆಯನ್ನು ಪ್ರಾಧಿಕಾರವು ಕೈಬಿಟ್ಟಿತ್ತು. ಆದರೆ, ಖಾತಾ ಶುಲ್ಕ, ಅರ್ಜಿ ಶುಲ್ಕ, ನೋಂದಣಿ ಶುಲ್ಕಗಳ ಪರಿಷ್ಕೃತ ದರಗಳನ್ನು 2020ರ ಅಕ್ಟೋಬರ್‌ನಿಂದಲೇ ಜಾರಿಗೆ ತಂದಿತ್ತು.

ಆಸ್ತಿ ತೆರಿಗೆ ಹಾಗೂ ನಿರ್ವಹಣಾ ಶುಲ್ಕವನ್ನು ಬಿಡಿಎ 2021–22ನೇ ಆರ್ಥಿಕ ವರ್ಷದಲ್ಲಿ ಜಾರಿಗೆ ತಂದಿದೆ. ಬಿಡಿಎ ವೆಬ್‌ಸೈಟ್‌ನಲ್ಲಿ ಆಸ್ತಿ ತೆರಿಗೆಗೆ ಸಂಬಂಧಿಸಿದ ಕಿಂಡಿಯಲ್ಲೂ ಪರಿಷ್ಕೃತ ದರವನ್ನು ಅಳವಡಿಸಲಾಗಿದೆ. ಹಾಗಾಗಿ ನಿವೇಶನದಾರರು ಪ್ರಸಕ್ತ ಸಾಲಿನಿಂದ ಆಸ್ತಿ ತೆರಿಗೆ ಹೆಚ್ಚಳದ ಹೊರೆ ಹೊರಬೇಕಾಗಿದೆ.

ಖಾತಾ ಶುಲ್ಕ ಪರಿಷ್ಕರಣೆ- ಯಾವುದಕ್ಕೆ ಎಷ್ಟು? (₹ಗಳಲ್ಲಿ)

ನಿವೇಶನದ ವಿಸ್ತೀರ್ಣ	ಈಗಿನ ದರ	ಪರಿಷ್ಕೃತ ದರ
20x30 ಅಡಿ	500	1 ಸಾವಿರ
30x40 ಅಡಿ	2 ಸಾವಿರ	4 ಸಾವಿರ
40x60 ಅಡಿ	5 ಸಾವಿರ	10 ಸಾವಿರ
50x80 ಅಡಿ	10 ಸಾವಿರ	20 ಸಾವಿರ
50x80 ಅಡಿ ಮೇಲ್ಪಟ್ಟು	15 ಸಾವಿರ	30 ಸಾವಿರ

ನಿವೇಶನಗಳ ನಿರ್ವಹಣಾ ಶುಲ್ಕ (₹ಗಳಲ್ಲಿ)

ನಿವೇಶನ ವಿಸ್ತೀರ್ಣ	ಈಗಿನ ದರ	ಪರಿಷ್ಕೃತ ದರ
20x30 ಅಡಿವರೆಗಿನ	600	1200
20x30 ಅಡಿಯಿಂದ 30x40 ಅಡಿವರೆಗೆ	600-1200	1800
30x40 ಅಡಿಯಿಂದ 40x60 ಅಡಿವರೆಗೆ	1200-2,400	2,400
40x60 ಅಡಿಯಿಂದ 50x80 ಅಡಿವರೆಗೆ	2,400-4,000	3000
50x80 ಅಡಿ ಮೇಲ್ಪಟ್ಟು	4,000	3,600

'ನಿರ್ವಹಣೆ ಶುಲ್ಕ ರದ್ದುಪಡಿಸಿ'

ಬಡಾವಣೆಯಲ್ಲಿ ಯಾವುದೇ ಸೌಕರ್ಯ ಕಲ್ಪಿಸದೆಯೇ ಆಸ್ತಿ ತೆರಿಗೆ ಮತ್ತು ನಿರ್ವಹಣಾ ಶುಲ್ಕ ವಸೂಲಿ ಮಾಡುತ್ತಿರುವುದಕ್ಕೆ ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಆಕ್ಷೇಪ ವ್ಯಕ್ತಪಡಿಸಿದೆ.

ಆಸ್ತಿ ತೆರಿಗೆ ಹಾಗೂ ನಿರ್ವಹಣೆ ಶುಲ್ಕಗಳನ್ನು ರದ್ದುಪಡಿಸಬೇಕು ಎಂದು ಕೋರಿ ವೇದಿಕೆಯು ಬಿಡಿಎ ಆಯುಕ್ತರಿಗೆ ಮನವಿ ಸಲ್ಲಿಸಿದೆ.

'ಬಡಾವಣೆಯಲ್ಲಿ ಉದ್ಯಾನವಿಲ್ಲ. ಆಟದ ಮೈದಾನವಿಲ್ಲ, ರಸ್ತೆಗಳಿಲ್ಲ. ನೀರು ಪೂರೈಕೆ ಆರಂಭವಾಗಿಲ್ಲ. ವಿದ್ಯುತ್ ಸಂಪರ್ಕ ಒದಗಿಸಿಲ್ಲ. ಒಳಚರಂಡಿ ಸಂಪರ್ಕವಿಲ್ಲ. ಇಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಲ್ಲ. ಈ ಹಂತದಲ್ಲೇ ನಿರ್ವಹಣೆ ಶುಲ್ಕ ವಿಧಿಸುವ ತರ್ಕ ಅರ್ಥವಾಗುತ್ತಿಲ್ಲ. ಯಾವುದೇ ಮೂಲಸೌಕರ್ಯ ಒದಗಿಸದೆಯೇ ನಿವೇಶನ ಹಂಚಿಕೆ ಮಾಡಿದ್ದೇ ತಪ್ಪು. ಅದಲ್ಲದೇ, ಬಿಡಿಎ ಅಧಿಕಾರಿಗಳು ತಪ್ಪಾಗಿ ಕೆಂಪೇಗೌಡ ಬಡಾವಣೆಯನ್ನೂ ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರಿಸಿದ್ದಾರೆ' ಎಂದು ವೇದಿಕೆ ಹೇಳಿದೆ.

'ಜನರ ಸಂಕಷ್ಟಕ್ಕೆ ಸ್ಪಂದಿಸಿ ₹10 ಸಾವಿರ ಪರಿಹಾರ ನೀಡಿ'

ಪ್ರಜಾವಾಣಿ ವಾರ್ತೆ



ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಆರ್‌.ಕೆ. ರಮೇಶ್ ಹಾಗೂ ಇತರರು ಇದ್ದರು.

ಬೆಂಗಳೂರು: 'ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರು, ವ್ಯಾಪಾರಿಗಳು, ವಾಹನ ಚಾಲಕರು ಹಾಗೂ ಬಡವರಿಗೆ ಸರ್ಕಾರ ಕನಿಷ್ಠ ₹10 ಸಾವಿರ ಪರಿಹಾರಧನ ನೀಡಬೇಕು' ಎಂದು ಸಂಸದ ಡಿ.ಕೆ.ಸುರೇಶ್ ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಆರ್‌.ಕೆ. ರಮೇಶ್ ನೇತೃತ್ವದಲ್ಲಿ ಜಿಗಣಿಯಲ್ಲಿ ಹಮ್ಮಿಕೊಂಡಿದ್ದ ಕೊರೊನಾ ಸೇನಾನಿಗಳಿಗೆ ಅಭಿನಂದನೆ ಹಾಗೂ ಬಡವರಿಗೆ ದಿನಸಿ ಕಿಟ್ ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೋವಿಡ್ ತೀವ್ರವಾಗಿ ಹರಡಿದ್ದ ಸಂದರ್ಭದಲ್ಲಿ ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರಗಳು ಹಾಸಿಗೆ, ಆಮ್ಲಜನಕ ಹಾಗೂ ಚಿಕಿತ್ಸೆ ನೀಡದೆ ಜನರ ಸಾವಿಗೆ ಕಾರಣವಾಗಿವೆ. ಕಣ್ಣು, ಕಿವಿ ಹಾಗೂ ಹೃದಯವಂತಿಕೆ ಇಲ್ಲದ ಇಂತಹ ಭ್ರಷ್ಟ ಸರ್ಕಾರದ ನಿರ್ಮೂಲನೆಗೆ ಜನ ಕಾಯುತ್ತಿದ್ದಾರೆ' ಎಂದರು.

'ಕಾಂಗ್ರೆಸ್ ಸರ್ಕಾರದಲ್ಲಿ ತೈಲ ದರ ಕೊಂಚ ಏರಿಕೆಯಾದರೂ ಬಿಜೆಪಿಯವರು ಕೂಗಾಡುತ್ತಿದ್ದರು. ಈಗ ಅವರೇ ಬೆಲೆ ಏರಿಸಿ, ಕಾಂಗ್ರೆಸ್ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ತೈಲ ದರ, ಅಡುಗೆ ಎಣ್ಣೆ ಹಾಗೂ ಅಡುಗೆ ಅನಿಲ ದರಗಳನ್ನು ಏರಿಸಿ, ಜನರ ಕೈಯಲ್ಲಿ ತಟ್ಟೆ, ಜಾಗಟೆ ಬಾರಿಸಲು ಹೇಳಿದ್ದಾರೆ. ಕೊರೊನಾ ಹೆಸರಿನಲ್ಲಿ ಕೋಟ್ಯಂತರ ಹಣ ಲೂಟಿ ಮಾಡಿರುವುದೇ ಸರ್ಕಾರದ ದೊಡ್ಡ ಸಾಧನೆ' ಎಂದು ಟೀಕಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ,'ಬಿಜೆಪಿಗೆ ಒಳ್ಳೆಯದಾಗಲಿ ಎಂದು ದೇವಸ್ಥಾನಗಳಲ್ಲಿ ನಿತ್ಯ ಪೂಜೆ ಮಾಡುತ್ತಿದ್ದ ಅರ್ಚಕರ ಬದುಕೇ ಸಂಕಷ್ಟಕ್ಕೆ ಸಿಲುಕಿದೆ. ಕೋವಿಡ್ ಅವಧಿಯಲ್ಲಿ ಮನೆಯಿಂದ ಹೊರ ಬರದ ನಾಯಕರು, ಈಗ ಇಲ್ಲಸಲ್ಲದ ಪ್ರಚಾರ ಪಡೆಯುತ್ತಿದ್ದಾರೆ' ಎಂದು ದೂರಿದರು.

ಕಾಂಗ್ರೆಸ್ ಮುಖಂಡ ಆರ್‌.ಕೆ. ರಮೇಶ್, 'ಸಂಕಷ್ಟದ ಸಮಯದಲ್ಲಿ ಬಿಜೆಪಿ ಸರ್ಕಾರ ಬಡವರಿಗೆ ಸಹಾಯ ಮಾಡದೇ, ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡಿ ಜನರ ಜೀವನದ ಜೊತೆ ಆಟ ಆಡುತ್ತಿದೆ' ಎಂದು ದೂರಿದರು.

ಶಾಸಕ ಬಿ.ಶಿವಣ್ಣ, 'ಬಿಜೆಪಿ ನಾಯಕರು ಕೊರೊನಾ ಹೆಸರಿನಲ್ಲಿ ಕೋಟಿಗಟ್ಟಲೆ ಲೂಟಿ ಮಾಡಿದ್ದಾರೆ. ಆರ್‌ಎಸ್‌ಎಸ್ ಹಾಗೂ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರು ಇದನ್ನು ಪ್ರಶ್ನಿಸುವ ಬದಲು ಮೌನಕ್ಕೆ ಶರಣಾಗಿದ್ದಾರೆ' ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.13 ಕೋಟಿ	3.02 ಕೋಟಿ
ಸಕ್ರಿಯ ಪ್ರಕರಣ	1.15 ಕೋಟಿ	5.81 ಲಕ್ಷ
ಗುಣಮುಖ	16.98 ಕೋಟಿ	2.92 ಕೋಟಿ
ಸಾವು	39.29 ಲಕ್ಷ	3.95 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.09 ಲಕ್ಷ	49,603
ಗುಣಮುಖ	3.42 ಲಕ್ಷ	57,201
ಸಾವು	8,729	1,252

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 32,733 ಕೊಲಂಬಿಯಾ; 79,277 ಬ್ರೆಜಿಲ್; 24,023 ಅರ್ಜೆಂಟಿನಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 49.66 ಅಮೆರಿಕ; 12.63 ಬ್ರೆಜಿಲ್; 3.47 ರಷ್ಯಾ

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.20 ಲಕ್ಷ ಮಹಾರಾಷ್ಟ್ರ; 24,961 ದೆಹಲಿ; 32,199 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 60.26 ಮಹಾರಾಷ್ಟ್ರ; 28.77 ಕೇರಳ; 24.60 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಕೃಷಿ ಕಾಯ್ದೆಗಳನ್ನು ಹಿಂಪಡೆಯಲು ಕೇಂದ್ರ ಸರ್ಕಾರಕ್ಕೆ ಪ್ರತಿಭಟನಕಾರರ ಆಗ್ರಹ

ರಾಜಭವನ ಚಲೋ ಯತ್ನ: ರೈತ ಮುಖಂಡರ ಬಂಧನ

ಪ್ರಜಾವಾಣಿ ವಾರ್ತೆ



ರಾಜಭವನದತ್ತ ಸಾಗುತ್ತಿದ್ದ ಪ್ರತಿಭಟನಾ ನಿರತ ರೈತ ಮುಖಂಡರನ್ನು ಪೊಲೀಸರು ಅರಮನೆ ರಸ್ತೆಯಲ್ಲಿ ತಡೆದರು

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಶನಿವಾರ ರಾಜಭವನ ಚಲೋ ನಡೆಸಲು ಮುಂದಾಗಿದ್ದ ರೈತ ಮುಖಂಡರು ಹಾಗೂ ಪ್ರತಿಭಟನಕಾರರನ್ನು ಬಂಧಿಸಿದ ಪೊಲೀಸರು, ಬಳಿಕ ಬಿಡುಗಡೆ ಮಾಡಿದರು.

ದೆಹಲಿಯಲ್ಲಿ ರೈತರ ಪ್ರತಿಭಟನೆ ಬೆಂಬಲಿಸಿ ಹಾಗೂ ವಿದ್ಯುತ್ ಖಾಸಗೀಕರಣಕ್ಕೆ ವಿರೋಧ, ಬೆಳೆ ವಿಮೆ ನೀಡುವುದು ಹಾಗೂ ತೈಲ ದರ ಇಳಿಕೆ ಮಾಡಬೇಕೆಂಬ ಹಕ್ಕೊತ್ತಾಯಗಳೊಂದಿಗೆ ಕರೆ ನೀಡಲಾಗಿದ್ದ ಪ್ರತಿಭಟನೆಗೆ ರಾಜ್ಯ ರೈತ ಸಂಘ, ಹಸಿರು ಸೇನೆ, ಕಬ್ಬು ಬೆಳೆಗಾರರ ಸಂಘ ಹಾಗೂ ವಿವಿಧ ರೈತ ಸಂಘಟನೆಗಳು ರಾಜಭವನ ಚಲೋಗೆ ಬೆಂಬಲ ಸೂಚಿಸಿದ್ದವು.

ಮೌರ್ಯ ವೃತ್ತ ಹಾಗೂ ಅರಮನೆ ರಸ್ತೆಯಲ್ಲಿ ಪ್ರತಿಭಟನೆಗಳನ್ನು ಆರಂಭಿಸಿ, ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಲು ರಾಜಭವನದತ್ತ ಪ್ರತಿಭಟನಾ ಮೆರವಣಿಗೆ ಆರಂಭಿಸಿದ್ದರು. ಈ ವೇಳೆ ಮಧ್ಯಪ್ರವೇಶಿಸಿದ ಪೊಲೀಸರು ಪ್ರತಿಭಟನಾ ನಿರತರನ್ನು ತಡೆದರು.

ಕೋವಿಡ್ ನಿಯಮಾವಳಿ ಕಾರಣ ಪ್ರತಿಭಟನೆ ಕೈ ಬಿಡುವಂತೆ ಪೊಲೀಸರು ಮನವಿ ಮಾಡಿದರು. ಇದಕ್ಕೆ ಒಪ್ಪದ ಕಾರಣ ರೈತ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಬಡಗಲಪುರ ನಾಗೇಂದ್ರ, ಕುರುಬೂರು ಶಾಂತ ಕುಮಾರ್ ಸೇರಿದಂತೆ ಹಲವರನ್ನು ಪೊಲೀಸರು ಬಂಧಿಸಿದರು. ಎಲ್ಲರನ್ನೂ ಬಸ್‌ನಲ್ಲಿ ಮೈಸೂರು ರಸ್ತೆಯ ಸಿಎಆರ್ ಮೈದಾನ ಹಾಗೂ ಹೈಗ್ರೌಂಡ್ಸ್ ಬಳಿಗೆ ಕರೆದೊಯ್ದು, ಕೆಲವು ಗಂಟೆಗಳ ಬಳಿಕ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, 'ಕುಮಾರ ಕೃಪಾ ವಸತಿ ಗೃಹದಲ್ಲಿ ಕೊರೊನಾ ನಿಯಮ ಉಲ್ಲಂಘಿಸಿ, ನೂರಾರು ಜನ ಶಾಸಕರು ಹಾಗೂ ಸಂಸದರು ಸಭೆ ನಡೆಸಿದರು. ಆಗ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಂದು ರೈತರಿಗೆ ಉಪದೇಶ ನೀಡಲು ಬಂದಿದ್ದೀರಿ' ಎಂದು ಪೊಲೀಸರ ವಿರುದ್ಧ ಹರಿಹಾಯ್ದರು.

'ದೆಹಲಿಯಲ್ಲಿ ನೂರಾರು ದಿನಗಳಿಂದ ಹೋರಾಟ ನಡೆಸಿದ್ದು, ಈ ವೇಳೆ 550 ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ. ಮೋದಿ ಆಡಳಿತದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿ ಮಾಡಿ, ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿದೆ. ರೈತ ಚಳವಳಿ ಹತ್ತಿಕ್ಕುವ ಮೂಲಕ ದಮನಕಾರಿ ನಡೆ ತೋರಿದ್ದಾರೆ' ಎಂದರು.

ಬಡಗಲಪುರ ನಾಗೇಂದ್ರ ಮಾತನಾಡಿ,'ತುರ್ತು ಪರಿಸ್ಥಿತಿ ವಿರೋಧಿಸಿದವರೇ ಇಂದು ಮತ್ತೆ ಅದನ್ನು ತಂದಿದ್ದಾರೆ. ದೇಶದ ವ್ಯವಸ್ಥೆಯನ್ನೇ ಖಾಸಗೀಕರಣ ಮಾಡಲು ಹೊರಟಿರುವ ಇಂತಹ ಜನವಿರೋಧಿ ಹಾಗೂ ದೇಶ ವಿರೋಧಿ ಕಾನೂನುಗಳು ಜಾರಿಯಾಗಬಾರದು' ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳಿಗೆ ನಾಳೆ ಮನವಿ

'ರೈತರ ಪ್ರತಿಭಟನೆಗೆ ಅಡ್ಡಿಪಡಿಸಿರಬಹುದು. ಆದರೆ, ಎಲ್ಲ ಜಿಲ್ಲೆಗಳಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜೂ.28ರಂದು ಪ್ರತಿಭಟನಾ ಧರಣಿ ನಡೆಸಲಾಗುವುದು. ಈ ಮೂಲಕ ನಮ್ಮ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮುಖೇನ ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುವುದು' ಎಂದು ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

'ನನಗೂ ಮುಖ್ಯಮಂತ್ರಿ ಆಗುವ ಆಸೆ'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಬಿ.ಎಸ್. ಯಡಿಯೂರಪ್ಪ ಅವರು ಬಿಟ್ಟು ಕೊಟ್ಟರೆ ಮುಖ್ಯಮಂತ್ರಿ ಆಗುವ ಆಸೆ ನನಗೂ ಇದೆ. ಅದು ಸಾಧ್ಯನಾ? ಪ್ರತಿಯೊಬ್ಬರು ಅವರದೇ ಆದ ಆಸೆ ಇಟ್ಟು ಕೊಂಡಿರುತ್ತಾರೆ. ಆಸೆ ಇಲ್ಲದವರು ಯಾರೂ ಇಲ್ಲ'ಎಂದು ಸಚಿವ ಎಂ.ಟಿ.ಬಿ. ನಾಗರಾಜ್ ಹೇಳಿದರು.

ದೇವನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜಕೀಯದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಆಸೆ ಇರುತ್ತದೆ. ಆದರೆ, ಅದಕ್ಕೆ ಕಾಲ ಕೂಡಿಬರಬೇಕು' ಎಂದು ಹೇಳಿದರು.

'ಮಾದಕ ವ್ಯಸನ ನಿರ್ಮೂಲನೆ ಧರ್ಮಸ್ಥಳದ ಕೊಡುಗೆ ಅನನ್ಯ'

ಪ್ರಜಾವಾಣಿ ವಾರ್ತೆ



ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆಯು ಅಂತರರಾಷ್ಟ್ರೀಯ ಮಾದಕ ವಸ್ತು ಹಾಗೂ ಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ ಹೊರ ತಂದಿರುವ ಕರಪತ್ರಗಳನ್ನು ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ ಬಿಡುಗಡೆ ಮಾಡಿದರು. ವೇದಿಕೆಯ ಅಧ್ಯಕ್ಷ ರಾಮಸ್ವಾಮಿ, ಜಿಲ್ಲಾ ಘಟಕದ ಅಧ್ಯಕ್ಷ ಬಿ.ಕೆ.ನಾರಾಯಣಸ್ವಾಮಿ, ಉಪಾಧ್ಯಕ್ಷೆ ವೀಣಾ ರಮೇಶ್, ಪ್ರಾದೇಶಿಕ ನಿರ್ದೇಶಕ ಎಂ.ಸೀನಪ್ಪ, ಯೋಜನಾಧಿಕಾರಿ ಗಣೇಶ್ ಆಚಾರ್ಯ ಇದ್ದರು.

ಬೆಂಗಳೂರು: 'ಮದ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆಯಿಂದ ಎದುರಾಗುವ ಅಪಾಯಗಳ ಕುರಿತು ಶ್ರೀ ಕ್ಷೇತ್ರ ಧರ್ಮಸ್ಥಳವು ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ವಿವಿಧ ಕಾರ್ಯಕ್ರಮಗಳ ಮೂಲಕ ಜನರನ್ನು ಮಾದಕ ವ್ಯಸನದಿಂದ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ, ಅಂತರರಾಷ್ಟ್ರೀಯ ಮಾದಕ ವಸ್ತು ಹಾಗೂ ಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ ಹೊರ ತಂದಿರುವ ಕರಪತ್ರಗಳನ್ನು ಶುಕ್ರವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಸಮಸ್ಯೆಗಳನ್ನು ತೊಡೆದುಹಾಕಿ, ಉತ್ತಮ ಸಮಾಜ ಕಟ್ಟುವ ಕೆಲಸವನ್ನು ಶ್ರೀಕ್ಷೇತ್ರ ಧರ್ಮಸ್ಥಳವು ಮಾಡುತ್ತಿದೆ. ಡಾ.ವೀರೇಂದ್ರ ಹೆಗ್ಗಡೆಯವರು ಜನಸಾಮಾನ್ಯರ ಬದುಕನ್ನು ಹಸನಾಗಿಸಲು ಸಾಕಷ್ಟು ಶ್ರಮಿಸುತ್ತಿದ್ದಾರೆ. ಅವರ ಕಾರ್ಯ ಇಡೀ ರಾಜ್ಯಕ್ಕೆ ಮಾದರಿ' ಎಂದು ಅವರು ಹೇಳಿದರು.

ಕೋವಿಡ್‌ನಿಂತ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ ತಲಾ ₹10 ಸಾವಿರ ಪರಿಹಾರ ನೀಡಲು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ತೀರ್ಮಾನಿಸಿದೆ.

ಕೆಯುಡಬ್ಲ್ಯುಜೆ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಸಂಕಷ್ಟದಲ್ಲಿರುವ ಪತ್ರಕರ್ತರ ಕುಟುಂಬಕ್ಕೆ ಕಳೆದ ವರ್ಷ ನೀಡಿದಂತೆ ಸರ್ಕಾರದಿಂದ ₹5ಲಕ್ಷ ನೆರವು ಕೊಡಿಸುವುದು, ಬೆಂಗಳೂರಿನಲ್ಲಿ ಪತ್ರಕರ್ತರ ಭವನ ನಿರ್ಮಾಣಕ್ಕೆ ಶೀಘ್ರ ಶಂಕುಸ್ಥಾಪನೆ ನೆರವೇರಿಸಲು ನಿರ್ಣಯಿಸಲಾಯಿತು.

ಪತ್ರಕರ್ತರ ಕುಟುಂಬಕ್ಕೆ ಪಡಿತರ ಕಿಟ್ ಕೊಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಇತ್ತೀಚೆಗೆ ಅಗಲಿದ ಪತ್ರಕರ್ತರು ಮತ್ತು ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಘದ ಪದಾಧಿಕಾರಿಗಳಾದ ಮತ್ತಿಕೆರೆ ಜಯರಾಂ, ಜೆ.ಸಿ.ಲೋಕೇಶ್, ಸಂಜೀವ ರಾವ್ ಕುಲಕರ್ಣಿ, ಬಂಗ್ಲೆ ಮಲ್ಲಿಕಾರ್ಜುನ, ಕಟ್ಟಡ ಸಮಿತಿ ಸದಸ್ಯರಾದ ಎಚ್‌.ಬಿ.ಮದನಗೌಡ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,10,642
ಸಕ್ರಿಯ ಪ್ರಕರಣಗಳು	65,997
ಗುಣಮುಖರಾದವರು	11,29,074
ಒಟ್ಟು ಸಾವು	15,570

ದಿನದ ಏರಿಕೆ

ಹೊಸ ಪ್ರಕರಣ	955
ಗುಣಮುಖ	1,174
ಸಾವು	16

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ರಾಜಕಾರಣ ಪ್ರವೇಶಿಸಿದರೂ ರಾಜಕಾರಣಿಯಾಗಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ಧಲಿಂಗಯ್ಯ ಅವರು ರಾಜಕಾರಣ ಪ್ರವೇಶಿಸಿದರೂ ರಾಜಕಾರಣಿಯಾಗಿ ಬದಲಾಗಲಿಲ್ಲ. ಅವರು ಜೀವ ಪರವಾದ ಬರಹಗಳಿಂದ ಹೆಸರಾಗಿದ್ದರು. ಭಾಷೆ, ನೆಲ, ಜಲ ಹಾಗೂ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದರು. ವಿಧಾನಪರಿಷತ್ ಸದಸ್ಯರಾಗಿದ್ದ ಅವಧಿಯಲ್ಲಿ ಸದನದಲ್ಲಿ ಈ ಕುರಿತೇ ಪ್ರಶ್ನೆಗಳನ್ನು ಕೇಳುತ್ತಿದ್ದರು' ಎಂದು ಸಾಹಿತಿ ಮತ್ತು ಪತ್ರಕರ್ತ ಸರಜೂ ಕಾಟ್ಕರ್ ತಿಳಿಸಿದರು.

ಸಾಹಿತ್ಯ ಅಕಾಡೆಮಿ ಶನಿವಾರ ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಸಿದ್ಧಲಿಂಗಯ್ಯ ಜೊತೆಗಿನ ಒಡನಾಟ ಮೆಲುಕು ಹಾಕಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, 'ಸಿದ್ಧಲಿಂಗಯ್ಯ ನನ್ನ ವಿದ್ಯಾರ್ಥಿ ಮಿತ್ರ. ತುಂಬಾ ಸೃಜನಶೀಲ ವ್ಯಕ್ತಿ. ಅವರ ಕಾವ್ಯಗಳು ಹೊಸತನದಿಂದ ಕೂಡಿದ್ದವು. ಸಭೆ, ಸಮಾರಂಭಗಳಲ್ಲಿ ಅವರ ಮಾತುಗಳನ್ನು ಎಲ್ಲರೂ ಕಿವಿಗೊಟ್ಟು ಕೇಳುತ್ತಿದ್ದರು. ಅವರು ಅಷ್ಟು ಉತ್ತಮ ಭಾಷಣಕಾರ' ಎಂದರು.

ಕೆ.ಶಿವಾರೆಡ್ಡಿ, 'ಸಿದ್ಧಲಿಂಗಯ್ಯನವರು ಆತ್ಮವಿಶ್ವಾಸದ ಗಣಿಯಾಗಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದರು' ಎಂದು ಸ್ಮರಿಸಿದರು.

ವಿಮರ್ಶಕ ಎಸ್‌.ಆರ್‌. ವಿಜಯಶಂಕರ, 'ಸಿದ್ಧಲಿಂಗಯ್ಯ, ಅಂಬೇಡ್ಕರ್ ಅವರ ಬಹುದೊಡ್ಡ ಅನುಯಾಯಿ. ದಲಿತರ ಧ್ವನಿಯೂ ಆಗಿದ್ದ ಅವರು ವಿಧಾನಪರಿಷತ್ ಸದಸ್ಯರಾಗಿದ್ದಾಗ ಸಾಮಾಜಿಕ ಪಿಡುಗುಗಳ ವಿರುದ್ಧ ಗಟ್ಟಿ ಧ್ವನಿ ಎತ್ತಿದ್ದರು' ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, 'ಸಿದ್ಧಲಿಂಗಯ್ಯ ಸಾರ್ವಕಾಲಿಕ ಕವಿ. ಕರ್ನಾಟಕದ ಆಚೆಗೂ ಖ್ಯಾತಿ ಹೊಂದಿದ್ದರು. ಮಾನವತೆ ಮತ್ತು ಸಮಾನತೆ ಅವರ ಕಾವ್ಯದ ಜೀವಾಳ' ಎಂದು ಹೇಳಿದರು.

ತಮಿಳಿನ ಹಿರಿಯ ಲೇಖಕ ಸಿರ್ಪಿ ಬಾಲಸುಬ್ರಹ್ಮಣ್ಯಂ, 'ಸಿದ್ಧಲಿಂಗಯ್ಯ ಅವರು ಮಾನವೀಯತೆಯ ಪ್ರತಿರೂಪದಂತಿದ್ದರು' ಎಂದರು.

ಸತೀಶ್ ಕುಲಕರ್ಣಿ, ಪದ್ಮಿನಿ ನಾಗರಾಜು, ಎಲ್‌.ಎನ್‌. ಮುಕುಂದ ರಾಜ್, ಪ್ರಭಾ ವರ್ಮಾ, ಕೆ.ಶ್ರೀನಿವಾಸರಾವ್, ಮಹಾಲಿಂಗಯ್ಯ ಇದ್ದರು.

ಅಂಗಾಂಗ ದಾನ: ಐವರಿಗೆ ಜೀವದಾನ ಮಾಡಿದ ಮಹಿಳೆ

ಧಾರವಾಡ: ಮನೆಯಲ್ಲಿ ಆಯತಪ್ಪಿ ಬಿದ್ದ ಪರಿಣಾಮ ಮಿದುಳು ನಿಷ್ಕ್ರಿಯಗೊಂಡ ಶಿರಸಿ ಮೂಲದ ಮಹಿಳೆಯ ಕುಟುಂಬದವರು, ಅಂಗಾಂಗ ದಾನದ ಮೂಲಕ ಐವರಿಗೆ ಹೊಸ ಜೀವನ ನೀಡಿ ಸಾರ್ಥಕತೆ ಮೆರೆದಿದ್ದಾರೆ.

53 ವರ್ಷದ ಮಹಿಳೆಯ ತಲೆಗೆ ಬಲವಾಗಿ ಪೆಟ್ಟಾಗಿತ್ತು. ಅವರನ್ನು ಇಲ್ಲಿನ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದ ಅವರ ಮಿದುಳು ನಿಷ್ಕ್ರಿಯಗೊಂಡಿದೆ ಎಂದು ಜೂನ್ 25ರಂದು ವೈದ್ಯರು ಘೋಷಿಸಿದ ಮೇಲೆ ಹೀಗಾಗಿ ಮಹಿಳೆಯ ಅಂಗಾಂಗ ದಾನಕ್ಕೆ ಕುಟುಂಬ ಸದಸ್ಯರು ಒಪ್ಪಿಗೆ ಸೂಚಿಸಿದರು.

'ಶನಿವಾರ ಬೆಳಿಗ್ಗೆ 9ರಿಂದ 11ರ ವರೆಗೆ ಶಸ್ತ್ರಕ್ರಿಯೆ ಮೂಲಕ ಯಕೃತ್, ಎರಡು ಮೂತ್ರಪಿಂಡ, ಎರಡು ಕಣ್ಣುಗಳನ್ನು ಬೇರ್ಪಡಿಸಿ ಸರ್ಕಾರಿ ಸ್ವಾಮ್ಯದ 'ಜೀವ ಸಾರ್ಥಕತೆ'ಯಲ್ಲಿ ನೋಂದಾಯಿಸಿದವರಿಗೆ ಅಂಗಾಂಗ ಕಸಿ ಮಾಡಲು ಕಳುಹಿಸಲಾಯಿತು' ಎಂದು ಎಸ್‌ಡಿಎಂ ವಿಶ್ವವಿದ್ಯಾಲಯದ ಕುಲಪತಿ ಡಾ. ನಿರಂಜನ ಕುಮಾರ್ ತಿಳಿಸಿದರು.

'ಎರಡು ಕಣ್ಣು ಹಾಗೂ ಮೂತ್ರ ಪಿಂಡಗಳನ್ನು ಎಸ್‌ಡಿಎಂ ಆಸ್ಪತ್ರೆಯಲ್ಲಿ ದಾಖಲಾದ ನೋಂದಾಯಿತ ವ್ಯಕ್ತಿಗಳಿಗೆ ಕಸಿ ಮಾಡಲಾಯಿತು. ಯಕೃತ್ ಅನ್ನು ಬೆಂಗಳೂರಿನ ಆಸ್ಟರ್ ಆರ್‌.ವಿ. ಆಸ್ಪತ್ರೆಗೆ ಸಾಗಿಸ ಲಾಯಿತು. ಹುಬ್ಬಳ್ಳಿ ವಿಮಾನ ನಿಲ್ದಾಣದವರೆಗೆ ಶೂನ್ಯ ಟ್ರಾಫಿಕ್ ವ್ಯವಸ್ಥೆ ಮಾಡಲಾಗಿತ್ತು' ಎಂದರು.



ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಮನೆ ಮನೆಗೆ ತೆರಳಿ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ಶನಿವಾರ ಚಾಲನೆ ನೀಡಿದರು. ಆ್ಯಕ್ಟ್ ಫೈಬರ್ ನೆಟ್ ಸಂಸ್ಥೆಯ ಸಿಇಒ ಬಾಲಾ ಮಲ್ಲಾಡಿ, ಸಂಸ್ಥೆಯ ಕಾರ್ಪೊರೇಟ್ ವ್ಯವಹಾರಗಳ ಮುಖ್ಯಸ್ಥ ಸುನೀಲ್ ಯಜಮಾನ್ ಇದ್ದರು.

ಅಪ್ರಾಪ್ತ ಬಾಲಕನನ್ನು ವರಿಸಿದ ಯುವತಿ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕಡೂರು: ತಾಲ್ಲೂಕಿನಲ್ಲಿ ಯುವತಿಯೊಬ್ಬಳು ತನಗಿಂತ ಕಿರಿಯ ಅಪ್ರಾಪ್ತ ವಯಸ್ಸಿನ ಬಾಲಕನನ್ನು ವರಿಸಿದ್ದು, ಈ ಸಂಬಂಧ ಯುವತಿ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಪ್ರಕರಣ ದಾಖಲಾಗಿದೆ.

20 ವರ್ಷದ ಯುವತಿಗೆ, ಫೇಸ್‌ಬುಕ್ ಮೂಲಕ 17 ವರ್ಷದ ಹುಡುಗನ ಪರಿಚಯವಾಗಿದೆ. ಈ ಪರಿಚಯ ಪ್ರೇಮಕ್ಕೆ ತಿರುಗಿದ್ದು, ಇಬ್ಬರೂ ವಿವಾಹವಾಗಲು ನಿರ್ಧರಿಸಿದ್ದರು. ಆದರೆ, ಹುಡುಗ, ಯುವತಿಗಿಂತ ಮೂರು ವರ್ಷ ಚಿಕ್ಕವನೆಂಬ ವಿಷಯ ತಿಳಿದಿದ್ದರೂ, ಎರಡೂ ಮನೆಯವರು ಪ್ರೇಮವಿವಾಹಕ್ಕೆ ಸಮ್ಮತಿಸಿದ್ದರು. ಹುಡುಗನ ಮನೆಯಲ್ಲೆ ಎರಡೂ ಕಡೆಯ ಹಿರಿಯರು ಮತ್ತು ಗ್ರಾಮಸ್ಥರ ಸಮ್ಮುಖದಲ್ಲೇ ಜೂನ್ 16ರಂದು ಮದುವೆಯೂ ನಡೆದಿದೆ.

ಈ ಬಗ್ಗೆ ಮಕ್ಕಳ ಸಹಾಯವಾಣಿಗೆ ಜೂನ್ 23ರಂದು ಮಾಹಿತಿ ದೊರೆತಿತ್ತು. ಪೊಲೀಸರೊಡನೆ ಅಂಗನವಾಡಿ ಮೇಲ್ವಿಚಾರಕಿ ಜಾಕೀರ್ ತಾಜ್, ಮಕ್ಕಳ ಸಹಾಯವಾಣಿ ಸಿಬ್ಬಂದಿ ಮೇಘರಾಜ್ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸ್ಥಳಕ್ಕೆ ತೆರಳಿ ಯುವತಿಯನ್ನು ವಶಕ್ಕೆ ಪಡೆದಿದ್ದಾರೆ.

ಆಕೆಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯುವತಿಯನ್ನು ಜಿಲ್ಲೆಯ ಸ್ವಾಧಾರ ಕೇಂದ್ರಕ್ಕೆ ಕಳುಹಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಡಳಿತ ನ್ಯಾಯಾಧೀಕರಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಶಿಷ್ಯವೇತನ ಸಹಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆಯಾದವರನ್ನು ಹಿರಿಯ ವಕೀಲರಲ್ಲಿ ತರಬೇತಿಗೆ ನಿಯೋಜಿಸಲಾಗುವುದು. ಎರಡು ವರ್ಷದ ತರಬೇತಿ ವೇಳೆ ತಿಂಗಳಿಗೆ ₹10 ಸಾವಿರ ಶಿಷ್ಯವೇತನ ನೀಡಲಾಗುವುದು.

40 ವರ್ಷದೊಳಗಿನ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು www.sw.kar.nic.in ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು www.tw.kar.nic.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಆಗಸ್ಟ್ 14 ಅರ್ಜಿ ಸಲ್ಲಿಸಲು ಕೊನೆಯ ದಿನ. **ವಿಳಾಸ:** ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ, 4ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ, ಸಂಪಂಗಿರಾಮ ಠಾಣೆ ಎದುರು, ಸಂಪಂಗಿ ರಾಮನಗರ.

ಉದ್ಯಮ ತರಬೇತಿ

ಬೆಂಗಳೂರು: ಸಾಥಿಯಾ ಸ್ಕಿಲ್ಲಿಂಗ್ ಅಕಾಡೆಮಿಯು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್ ಉದ್ಯಮದಲ್ಲಿ ವೃತ್ತಿ ಜೀವನ ಆರಂಭಿಸಲು ಇಚ್ಛಿಸುವವರಿಗೆ ಆನ್‌ಲೈನ್ ಮೂಲಕ ಒಂಬತ್ತು ವಾರಗಳ ತರಬೇತಿ ನೀಡಲಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೊಮ ಪೂರೈಸಿರುವ 18ರಿಂದ 30 ವರ್ಷದೊಳಗಿನವರು ತರಬೇತಿಗೆ ಅರ್ಜಿ ಸಲ್ಲಿಸಬಹುದು. ಆಸಕ್ತರು 9743416957 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗೋಶಾಲೆ: 500 ಎಕರೆ ಭೂಮಿಗೆ ಬೇಡಿಕೆ



ಬಸನಗೌಡ ಪಾಟೀಲ

ವಿಜಯಪುರ: 'ಶ್ರೀ ಸಿದ್ದೇಶ್ವರ ಸಂಸ್ಥೆಗೆ ಗೋಶಾಲೆ ಆರಂಭಕ್ಕೆ 500 ಎಕರೆ ಭೂಮಿ ನೀಡಿ' ಎಂದು ಸಂಸ್ಥೆಯ ಅಧ್ಯಕ್ಷ, ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯಕ್ಕೆ ಮಾದರಿಯಾಗುವಂತೆ 10 ಸಾವಿರ ಗೋವುಗಳ ಗೋಶಾಲೆ ಅರಂಭಿಸಲು ಸಂಸ್ಥೆ ಚಿಂತನೆ ನಡೆಸಿದ್ದು, ರಾಜ್ಯದ ಯಾವುದೇ ಮೂಲೆಯಲ್ಲಾದರೂ ನೀಡುವಂತೆ ಎಂದು ಕೋರಿದ್ದಾರೆ.

ರಾಜ್ಯ ಸರ್ಕಾರವು ಕೆಲವು ಷರತ್ತುಗಳೊಡನೆ ಜಿಂದಾಲ್ ಕಂಪನಿಗೆ ಎಕರೆಗೆ ₹1.50 ಲಕ್ಷದಂತೆ ಜಮೀನು ನೀಡಲು ಮುಂದಾಗಿರುವಂತೆ, ನಮ್ಮ ಸಂಸ್ಥೆಗೂ ಭೂಮಿ ನೀಡಬೇಕು. ಇದಕ್ಕಾಗಿ ಪ್ರತಿ ಎಕರೆಗೆ ₹ 2 ಲಕ್ಷ ಪಾವತಿಸುತ್ತೇನೆ ಎಂದು ಹೇಳಿದ್ದಾರೆ.

ಸಂಸ್ಥೆ ವತಿಯಿಂದ ಈಗಾಗಲೇ ಕಗ್ಗೋಡ ಗ್ರಾಮದಲ್ಲಿ ಗೋರಕ್ಷಾ ಕೇಂದ್ರ ಸ್ಥಾಪನೆ ಮಾಡಲಾಗಿದೆ. ದೇಶಿ ಗೋವುಗಳ ಸಂತತಿ, ತಳಿ ಅಭಿವೃದ್ಧಿ ಮತ್ತು ಸಂಶೋಧನೆ ಜೊತೆಗೆ ಗೋವುಗಳ ರಕ್ಷಣೆ ಮಾಡಲಾಗುತ್ತಿದೆ. ಇಲ್ಲಿ 1,000ಕ್ಕೂ ಹೆಚ್ಚು ಗೋವುಗಳು ಆಶ್ರಯ ಪಡೆದಿವೆ ಎಂದು ಅವರು ತಿಳಿಸಿದ್ದಾರೆ.

ಸಚಿವರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಆರ್. ಅಶೋಕ ಅವರನ್ನು ಒಳಗೊಂಡ ಉಪಸಮಿತಿ ಮೂಲಕ ಭೂಮಿ ಮಂಜೂರಾತಿಗೆ ಕ್ರಮಕೈಗೊಳ್ಳಬೇಕು ಎಂದು ಕೋರಿದ್ದಾರೆ.

ಸಾಹಿತಿ ಬಂಜಗೆರೆ ಜಯಪ್ರಕಾಶ್ ಬೇಸರ

ಹೊಸ ಮೌಢ್ಯಕ್ಕೆ ಸಿಲುಕುತ್ತಿರುವ ನವ ವಿದ್ಯಾವಂತರು

ಪ್ರಜಾವಾಣಿ ವಾರ್ತೆ



ಬಂಜಗೆರೆ ಜಯಪ್ರಕಾಶ್

ಬೆಂಗಳೂರು: 'ನವ ವಿದ್ಯಾವಂತರು ಹೊಸ ಮೌಢ್ಯಕ್ಕೆ ಸಿಲುಕುತ್ತಿದ್ದಾರೆ. ಇವರು ಸ್ವಯಂ ಬಂಧಿಗಳಾಗಿದ್ದಾರೆ. ಬದುಕಿನ ಭ್ರಮೆ, ಮನೋ ಖಿನ್ನತೆಯಿಂದ ಆ ವರ್ತುಲಕ್ಕೆ ಸಿಲುಕುತ್ತಿದ್ದಾರೆ' ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಬೇಸರ ವ್ಯಕ್ತಪಡಿಸಿದರು.

ಪುಸ್ತಕ ಪ್ರೀತಿ ಬಳಗವು ಶನಿವಾರ ಆಯೋಜಿಸಿದ ತಿಂಗಳ ಮಾತುಕತೆ ಕಾರ್ಯಕ್ರಮದಲ್ಲಿ ಕವಿ ಸಿದ್ಧಲಿಂಗಯ್ಯ ಅವರ 'ಅವತಾರಗಳು' ಕೃತಿಯ ಕುರಿತು ಅವರು ಮಾತನಾಡಿದರು.

'ನವ ವಿದ್ಯಾವಂತರು, ನವ ಶ್ರೀಮಂತರು ಮೌಢ್ಯಕ್ಕೆ ಒಳಗಾಗುತ್ತಿರುವುದನ್ನು ನೋಡಿ, ಉಳಿದವರೂ ಅವರನ್ನು ಅನುಕರಣೆ ಮಾಡುತ್ತಿದ್ದಾರೆ. ಇತ್ತೀಚೆಗೆ ಶ್ವೇತಕ್ರಾಂತಿ ನಡೆಯುತ್ತಿದೆ. ಅಂದರೇ, ಕಾವಿ ಬಟ್ಟೆಯವರು ಕಡಿಮೆಯಾಗಿದ್ದಾರೆ. ಬಿಳಿ ಬಟ್ಟೆಯವರು ಜಾಸ್ತಿಯಾಗಿದ್ದಾರೆ. ಅವರಿಗೆ ದೇಶ ವಿದೇಶಗಳಲ್ಲಿ ಸಾಮ್ರಾಜ್ಯಗಳು ಸೃಷ್ಟಿಯಾಗುತ್ತಿವೆ. ಇವು ಜನರನ್ನು ಬೇರೆ ಬೇರೆ ರೀತಿಯಲ್ಲಿ ಮೌಢ್ಯಕ್ಕೆ ಸಿಲುಕಿಸುತ್ತವೆ' ಎಂದರು.

'ಸಿದ್ಧಲಿಂಗಯ್ಯ ಅವರು 'ಅವತಾರಗಳು' ಕೃತಿಯಲ್ಲಿ ಮೌಢ್ಯಗಳನ್ನು ತೊಲಗಿಸಿ, ವಿಚಾರವಾದವನ್ನು ಸಾರಿದ್ದಾರೆ. ಈ ದೇವರೇ ನಮ್ಮ ಏಳ್ಗೆಗೆ ಅಡ್ಡಿಯಾಗಿದ್ದು, ದೇವರನ್ನು ಬಿಡುಗಡೆಗೊಳಿಸಿದರೆ ಜನ ಕೂಡ ಸ್ವತಂತ್ರರಾಗುತ್ತಾರೆ ಎಂಬ ಚಿಂತನೆ ಅವರಲ್ಲಿತ್ತು. ಸಮಾಜದ ಬದಲಾವಣೆಗಾಗಿ ವ್ಯವಸ್ಥೆಗೆ ಅಪಮಾನ, ಗೇಲಿಯನ್ನು ಮಾಡಲಿಲ್ಲ. ಜನತೆಯ ವರ್ತನೆ ಬಗ್ಗೆ ಅವರಿಗೆ ಸಹಾನುಭೂತಿಯಿತ್ತು' ಎಂದು ಹೇಳಿದರು.

'ಎಂತಹದ್ದೇ ಗಂಭೀರವಾದ ವಿಷಯವನ್ನಾದರೂ ಹಾಸ್ಯದ ಮೂಲಕ ನಿರೂಪಿಸುವ ಕಲೆ ಸಿದ್ಧಲಿಂಗಯ್ಯ ಅವರಿಗೆ ಕರಗತವಾಗಿತ್ತು. ಇದರಿಂದಾಗಿಯೇ ಅವರು ಜನಪ್ರಿಯ ಹಾಗೂ ಜನಪರ ಕವಿಯಾದವರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಸರ್ಕಾರಗಳಿಗೆ ತುರ್ತು ಪರಿಸ್ಥಿತಿ ಪಾಠವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತುರ್ತು ಪರಿಸ್ಥಿತಿಯು ಭಾರತೀಯ ಇತಿಹಾಸದ ಕರಾಳ ಅಧ್ಯಾಯ. ಇದರಿಂದ ಆಳುವ ಸರ್ಕಾರಗಳು ಪಾಠ ಕಲಿಯಬೇಕು. ಸರ್ಕಾರದ ದಮನಕಾರಿ ನೀತಿಗಳ ವಿರುದ್ಧ ಜನ ಧ್ವನಿ ಎತ್ತಿದರೆ ಅದನ್ನು ದೇಶದ್ರೋಹ ಎನ್ನಲಾಗದು. ಇದನ್ನು ಅರಿತುಕೊಂಡರೆ ಪ್ರಜಾಪ್ರಭುತ್ವ ಉಳಿಯುತ್ತದೆ. . .’

‘ತುರ್ತು ಪರಿಸ್ಥಿತಿಯ ಹಿಂದೆ–ಮುಂದೆ’ ಎಂಬ ವಿಷಯ ಕುರಿತು ‘ಪ್ರಜಾವಾಣಿ’ ಶನಿವಾರ ಹಮ್ಮಿಕೊಂಡಿದ್ದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

‘ಪ್ರಜಾಪ್ರಭುತ್ವದ ಹೆಸರಿನಲ್ಲಿ ತುರ್ತು ಪರಿಸ್ಥಿತಿ ಹೇರಲಾಗುತ್ತಿದೆ’

‘ಇಂದಿರಾಗಾಂಧಿ ಅವರು 20 ಅಂಶಗಳ ಕಾರ್ಯಕ್ರಮ ಜಾರಿಗೆ ತಂದಿದ್ದರಿಂದ ಅನೇಕರಿಗೆ ಅನುಕೂಲವಾಯಿತು. ಭೂಮಾಲೀಕರು, ಬಂಡವಾಳಶಾಹಿಗಳು ಹಾಗೂ ಬಡ್ಡಿದಾರರ ಕೈಯಲ್ಲಿ ಸಿಲುಕಿ ಒದ್ದಾಡುತ್ತಿದ್ದ ಕೋಟ್ಯಂತರ ಮಂದಿ ಅಸ್ಪೃಶ್ಯರ ಬಿಡುಗಡೆಯ ಆಶಾಕಿರಣವಾಗಿ ನಮಗೆ ತುರ್ತು ಪರಿಸ್ಥಿತಿ ಗೋಚರಿಸಿತ್ತು. ತುರ್ತು ಪರಿಸ್ಥಿತಿಯನ್ನು ಎರಡನೇ ಸ್ವಾತಂತ್ರ್ಯ ಹೋರಾಟ ಎಂದು ಕರೆಯಲಾಗುತ್ತದೆ. ಎರಡನೇ ಸ್ವಾತಂತ್ರ್ಯ ಹೋರಾಟದಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸಿದ್ದವರು ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ ಇರಲಿಲ್ಲ’.



‘ತುರ್ತು ಪರಿಸ್ಥಿತಿಯಿಂದ ನಾವು ಪಾಠ ಕಲಿತಿದ್ದೇವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. 2014ರಿಂದ 2019ರವರೆಗೆ ದೇಶದ್ರೋಹದ ಕಾನೂನಿನ ಅಡಿಯಲ್ಲಿ 326 ಪ್ರಕರಣಗಳನ್ನು ದಾಖಲಿಸಲಾಗಿದೆ. 2019ರ ನವೆಂಬರ್‌ನಲ್ಲಿ ಜಾರ್ಖಂಡ್‌ನ ಕುಂತಿ ಜಿಲ್ಲೆಯಲ್ಲಿ 10 ಸಾವಿರ ಮಂದಿ ಆದಿವಾಸಿಗಳ ಮೇಲೆ ಐಪಿಸಿ ಸೆಕ್ಷನ್ 124–ಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದು ತುರ್ತು ಪರಿಸ್ಥಿತಿಗಿಂತಲೂ ಭೀಕರವಾದದ್ದು. ಸುಧಾ ಭಾರದ್ವಾಜ್, ರೋನಾ ವಿಲ್ಸನ್, ವರವರರಾವ್ ಹೀಗೆ ಅನೇಕರನ್ನು ಭೀಮಾ ಕೋರೆಗಾಂವ್ ಪ್ರಕರಣದಡಿಯಲ್ಲಿ ಬಂಧಿಸಿ ಜೈಲಿಗಟ್ಟಲಾಗಿದೆ. ಇದು ತುರ್ತು ಪರಿಸ್ಥಿತಿಗಿಂತಲೂ ಬಹಳ ಭಿನ್ನವೇನಲ್ಲ’.

‘ಈಗಿನ ಸರ್ಕಾರ ಪ್ರಜಾಪ್ರಭುತ್ವದ ಹೆಸರಿನಲ್ಲಿ ತುರ್ತು ಪರಿಸ್ಥಿತಿ ಹೇರುತ್ತಿದೆ. ನ್ಯಾಯಾಂಗಕ್ಕೆ ಇದ್ದ ಪಾವಿತ್ರ್ಯತೆಯೇ ಮರೆಯಾಗಿದೆ. ಇನ್ನೊಂದು ತುರ್ತು ಪರಿಸ್ಥಿತಿ ಈ ದೇಶದಲ್ಲಿ ಬರಬಾರದು. ಇದಕ್ಕೆ ಹಿಂದಿನ ತುರ್ತು ಪರಿಸ್ಥಿತಿ ಪಾಠವಾಗಬೇಕು’.

ಎಲ್.ಹನುಮಂತಯ್ಯ, ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ

‘ಈಗ ತುರ್ತು ಪರಿಸ್ಥಿತಿ ಇಲ್ಲ’



‘ತುರ್ತು ಪರಿಸ್ಥಿತಿಯ ಕಲ್ಪನೆ ಯಾರಿಗೂ ಇರಲಿಲ್ಲ. ಇಂದಿರಾಗಾಂಧಿಯವರು ಭ್ರಷ್ಟಾಚಾರವನ್ನು ಪೋಷಣೆ ಮಾಡಿಕೊಂಡು ಬಂದಿದ್ದರು. ಹೀಗಾಗಿ ಜಯಪ್ರಕಾಶ್ ನಾರಾಯಣ್ ಅವರು ಸಮಗ್ರ ಕ್ರಾಂತಿಗೆ ಕರೆ ನೀಡಿದ್ದರು. ಅದಕ್ಕೆ ಲಕ್ಷಾಂತರ ಯುವಕರು ಬೆಂಬಲ ಸೂಚಿಸಿದ್ದರು. ಸಮಗ್ರ ಕ್ರಾಂತಿಯಿಂದ ದೇಶದಲ್ಲಿ ಬದಲಾವಣೆ ಸಾಧ್ಯ ಎಂಬ ನಿರೀಕ್ಷೆಯಲ್ಲಿದ್ದವರಿಗೆ ಭ್ರಮನಿರಸನವಾಯಿತು. ಜನತಾ ಪಕ್ಷದವರು ಕುರ್ಚಿಗಾಗಿ ಕಿತ್ತಾಡಿಕೊಂಡರು. ಹೀಗಾಗಿ ಜನ ಬೇರೆ ಆಯ್ಕೆ ಇಲ್ಲದೆ ಮತ್ತೊಮ್ಮೆ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದ್ದರು’.

‘ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಮ್ಮನ್ನು ಬಂಧಿಸಿದ್ದು ತಪ್ಪು, ಎಲ್ಲರನ್ನೂ ಬಿಡುಗಡೆ ಮಾಡಬೇಕು ಎಂಬ ಕೂಗು ಕೇಳಿಬಂದಿತ್ತು. ನ್ಯಾಯಾಲಯಗಳಲ್ಲಿ ವಾದ ಮಂಡಿಸಲಾಯಿತು. ನಮಗೆ ಜೀವಿಸುವ ಹಕ್ಕೇ ಇಲ್ಲ, ನಮ್ಮನ್ನೆಲ್ಲಾ ಕೊಂದರೂ ಯಾರು ಕೇಳುವಂತಿಲ್ಲ ಎಂದು ಅಂದಿನ ಸರ್ಕಾರ ಹೇಳಿತ್ತು’.

‘ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸುವುದು ತಪ್ಪಲ್ಲ. ಅದನ್ನು ದೇಶದ್ರೋಹ ಎಂದೂ ಹೇಳಲಾಗದು. ಆ ಕೆಲಸ ಈಗ ಆಗಿಲ್ಲ. ದೇಶವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದವರನ್ನು ಬಂಧಿಸಬೇಕಾಗುತ್ತದೆ. ಅದನ್ನು ತಪ್ಪು ಎಂದರೆ ಹೇಗೆ. ತುರ್ತುಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸುತ್ತಿದ್ದವರ ಕಾನೂನು ಹೋರಾಟ ನಡೆಸುತ್ತಿದ್ದ ರಾಮಾ ಜೋಯಿಸರನ್ನು ಇಂದಿರಾಗಾಂಧಿ ಅವರು ಜೈಲಿಗೆ ಹಾಕಿಸಿದ್ದರು. ಆ ಕೆಲಸವನ್ನು ನರೇಂದ್ರ ಮೋದಿ ಮಾಡಿಲ್ಲ. ಮಾಡಲೂಬಾರದು. ಒಂದೊಮ್ಮೆ ಅಂತಹ ಕೆಲಸ ಮಾಡಿದರೆ ಅದನ್ನು ಖಂಡಿಸಬೇಕಾಗುತ್ತದೆ’.

ಡಿ.ಎಚ್.ಶಂಕರಮೂರ್ತಿ, ಬಿಜೆಪಿ ನಾಯಕ

ಪ್ರಜಾವಾಣಿ facebook LIVE

‘ಜನರಿಗೆ ಕರಾಳತೆಯ ಬಿಸಿ ತಟ್ಟಿರಲಿಲ್ಲ’

‘ಸಂವಿಧಾನದ ಚೌಕಟ್ಟಿನ ಅಡಿಯಲ್ಲೇ ಸಂವಿಧಾನ ವಿರೋಧಿ ಕ್ರಮಗಳು ನಡೆಯುತ್ತಿರುತ್ತವೆ. ಅದು ಆಗಬಾರದು. ಆ ಪಾಠವನ್ನು ತುರ್ತುಪರಿಸ್ಥಿತಿಯಿಂದ ಕಲಿಯಬೇಕು. ತುರ್ತು ಪರಿಸ್ಥಿತಿಯ ವೇಳೆ ಜನ ನಿರಾಳರಾಗಿದ್ದರು. ಅವರಿಗೆ ಈ ಕರಾಳತೆಯ ಬಿಸಿ ತಟ್ಟಲಿಲ್ಲ. ನಾವು ಹಕ್ಕುಗಳ ಬಗ್ಗೆ ಮಾತನಾಡಿದ್ದೆವು. ಅವರು ಬದುಕುವ ಬಗ್ಗೆ ಆಲೋಚಿಸಿದ್ದರು. ತುರ್ತು ಪರಿಸ್ಥಿತಿಯನ್ನು ವಿರೋಧಿಸುತ್ತಿರುವಾಗಲೇ ಈ ಕರಾಳ ಮತ್ತು ನಿರಾಳಗಳ ನಡುವಣ ವೈರುಧ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅದು ನಿಜವಾದ ಭಾರತೀಯ ರಾಜಕಾರಣದ ಅರ್ಥೈಸುವಿಕೆ’.

‘1977ರಲ್ಲಿ ಇಂದಿರಾಗಾಂಧಿಯವರ ಜೊತೆ ಕಾಂಗ್ರೆಸ್ ಕೂಡ ಸೋತಿತ್ತು. ಆದರೆ 1980ರ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೇರಿತ್ತು. ಕಾಂಗ್ರೆಸ್‌ನ 353 ಮಂದಿ ಸಂಸದರಾಗಿ ಆಯ್ಕೆಯಾಗಿದ್ದರು. ಮೂರೇ ವರ್ಷದಲ್ಲಿ ಜನ ಏಕೆ ಕಾಂಗ್ರೆಸ್‌ಗೆ ಬಹುಮತ ನೀಡಿದ್ದರು. ಭಾರತೀಯ ರಾಜಕಾರಣದಲ್ಲಿ ಈ ಪ್ರಶ್ನೆಗಳೂ ಮುಖ್ಯವಾಗುತ್ತವೆ’.



‘ಕಾಂಗ್ರೆಸ್‌ನವರು ಉದಾರಿಕರಣ, ಜಾಗತೀಕರಣ ಎಂದುಕೊಂಡು ಬಂಡವಾಳಶಾಹಿ ಆರ್ಥಿಕ ನೀತಿಯನ್ನು ಜಾರಿಗೊಳಿಸಿದರು. ಅದು ಈಗ ಆಕ್ರಮಣಶೀಲವಾಗಿ ಅನುಷ್ಠಾನಗೊಳ್ಳುತ್ತಿರುವ ಹೊತ್ತಿನಲ್ಲಿ ವಿಭಜನೆ ಹೆಚ್ಚುತ್ತಿದೆ. ಒಂದು ಕಡೆ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಸಾಮಾನ್ಯ ಜನ ಸಮಾನತೆಯನ್ನು ಬಯಸುತ್ತಿದ್ದಾರೆ. ಇವೆರಡನ್ನು ಒಟ್ಟುಗೂಡಿಸುವುದು ಹೇಗೆ ಎಂಬುದರ ಬಗ್ಗೆ ಯೋಚಿಸಬೇಕಿದೆ. ಸರ್ಕಾರದ ವಿರುದ್ಧದ ಟೀಕೆಗಳನ್ನು ದೇಶದ್ರೋಹವೆಂದು ಭಾವಿಸಿಕೊಳ್ಳುವುದು ಹಾಗೂ ಆರೋಪಿಸುವುದು ತಪ್ಪು’.

ಬರಗೂರು ರಾಮಚಂದ್ರಪ್ಪ, ಹಿರಿಯ ಸಾಹಿತಿ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos/968366210663707/

ಸುದ್ದಿ 2 ನಿಮಿಷ

ಕೇಂದ್ರ ಸಂಪುಟ ವಿಸ್ತರಣೆ: ರಾಜ್ಯಕ್ಕೆ ಎರಡು ಸ್ಥಾನದ ನಿರೀಕ್ಷೆ

ಶಿವಮೊಗ್ಗ: ಕೇಂದ್ರ ಸಚಿವ ಸಂಪುಟ ವಿಸ್ತರಣೆ ವೇಳೆ ರಾಜ್ಯಕ್ಕೆ ಎರಡು ಸ್ಥಾನ ಸಿಗುವ ಸಾಧ್ಯತೆ ಇದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಶನಿವಾರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸುರೇಶ್ ಅಂಗಡಿ ನಿಧನದಿಂದ ಒಂದು ಸ್ಥಾನ ತೆರವಾಗಿದೆ. ಅದರ ಜತೆಗೆ ರಾಜ್ಯಕ್ಕೆ ಮತ್ತೊಂದು ಸ್ಥಾನ ನೀಡುವಂತೆ ಮನವಿ ಮಾಡುತ್ತೇವೆ. ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಅವರಿಗೆ ಸ್ಥಾನ ದೊರಕುವ ಬಗ್ಗೆ ನನಗೆ ಮಾಹಿತಿ ಇಲ್ಲ’ ಎಂದರು.



‘ಸಚಿವ ಸಿ.ಪಿ. ಯೋಗೇಶ್ವರ್ ದೆಹಲಿ ಭೇಟಿ ವಿಚಾರದಲ್ಲಿ ಯಾವುದೇ ವಿಶೇಷ ಇಲ್ಲ. ರಾಜ್ಯದ ಸಚಿವರು ದೆಹಲಿಗೆ ಹೋಗಬಾರದು ಎಂದು ಸಂವಿಧಾನದಲ್ಲಿ ಏನಾದರೂ ಬರೆದಿದ್ದಾರೆಯೇ? ಬಿಜೆಪಿ ನಾಯಕರು ದೆಹಲಿಗೆ ಹೋದರೆ ಏಕೆ ಪ್ರಶ್ನೆ ಮಾಡ್ತೀರಿ’ ಎಂದು ಈಶ್ವರಪ್ಪ ಮರು ಪ್ರಶ್ನೆ ಹಾಕಿದರು.

ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ: ತುಮಕೂರು ನಗರಕ್ಕೆ ರಾಷ್ಟ್ರಪ್ರಶಸ್ತಿ

ತುಮಕೂರು: ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ ರೂಪಿಸಿರುವುದಕ್ಕೆ ರಾಷ್ಟ್ರಮಟ್ಟದಲ್ಲಿ ತುಮಕೂರು ನಗರಕ್ಕೆ ಮೂರನೇ ಸ್ಥಾನ ಲಭಿಸಿದೆ. ಸ್ಮಾರ್ಟ್ ಸಿಟಿ ಯೋಜನೆಯ ಅನುದಾನ ಬಳಸಿ ಓದುಗರಿಗೆ ಡಿಜಿಟಲ್ ಮೂಲಕ ಗ್ರಂಥಾಲಯ ಸೌಲಭ್ಯ ಕಲ್ಪಿಸಿರುವುದಕ್ಕೆ ಕೇಂದ್ರ ಸರ್ಕಾರ ಈ ಪುರಸ್ಕಾರಕ್ಕೆ ಆಯ್ಕೆಮಾಡಿದೆ. ಸ್ಮಾರ್ಟ್ ಸಿಟಿ ಯೋಜನೆ 6ನೇ ವಾರ್ಷಿಕೋತ್ಸವದ ನಿಮಿತ್ತ ನಡೆದ ಅಂತರರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಆಯ್ಕೆಯಾಗಿದೆ.

ವಿಶೇಷ: ಡಿಜಿಟಲ್ ಗ್ರಂಥಾಲಯವು ಸಾಂಪ್ರದಾಯಿಕ ಗ್ರಂಥಾಲಯಕ್ಕಿಂತ ವಿಭಿನ್ನವಾಗಿದೆ. ‘ಎಲ್ಲಿಂದಾದರೂ ಓದು’ ಈ ಯೋಜನೆಯ ವಿಶೇಷತೆ. ಅಪರೂಪದ ಪುಸ್ತಕಗಳು, ವಿವಿಧ ಕ್ಷೇತ್ರ, ಕೋರ್ಸ್‌ಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಡಿಜಿಟಲ್ ಲೈಬ್ರರಿಯಲ್ಲಿ ಸಂಗ್ರಹಿಸಲಾಗಿದೆ.

ಈವರೆಗೂ 26 ಸಾವಿರಕ್ಕಿಂತ ಹೆಚ್ಚು ಮಂದಿ (ಮಕ್ಕಳು, ವಿದ್ಯಾರ್ಥಿಗಳು, ಶಿಕ್ಷಕರು, ಪ್ರಾಧ್ಯಾಪಕರು, ಸರ್ಕಾರಿ ನೌಕರರು, ಕೈಗಾರಿಕೆ ವೃತ್ತಿಪರರು) ಡಿಜಿಟಲ್ ಲೈಬ್ರರಿ ಪೋರ್ಟಲ್ (https://tumakurudigitallibrary.in/) ಬಳಕೆ ಮಾಡುತ್ತಿದ್ದಾರೆ.

ಆರ್‌ಎಸ್‌ಎಸ್ ಮುಖಂಡ ದೇಶಪಾಂಡೆ ಭೇಟಿಯಾದ ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಅಥಣಿ/ಬೆಳಗಾವಿ: ಆರ್‌ಎಸ್‌ಎಸ್ ಮುಖಂಡ ಅರವಿಂದರಾವ್ ದೇಶಪಾಂಡೆ ಅವರನ್ನು ಶನಿವಾರ ಅಥಣಿಯಲ್ಲಿ ಭೇಟಿಯಾದ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಗೋಪ್ಯವಾಗಿ ಮಾತುಕತೆ ನಡೆಸಿದ್ದಾರೆ.

ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಹೇಳಿರುವ ರಮೇಶ, ಮುಂಬೈನಲ್ಲಿ ಬಿಜೆಪಿ ನಾಯಕ ದೇವೇಂದ್ರ ಫಡಣವಿಸ್ ಅವರನ್ನು ಭೇಟಿಯಾಗಿದ್ದರು. ನಾಗಪುರದ ಆರ್‌ಎಸ್‌ಎಸ್ ಕಚೇರಿಗೂ ಭೇಟಿ ನೀಡಿದ್ದರು. ಈಗ, ಆರ್‌ಎಸ್‌ಎಸ್ ಪ್ರಭಾವಿ ಮುಖಂಡರ ಜೊತೆಗಿನ ಚರ್ಚೆ ಕುತೂಹಲಕ್ಕೆ ಕಾರಣವಾಗಿದೆ.



ಲಸಿಕೆಗಾಗಿ... ಹುಬ್ಬಳ್ಳಿಯ ಟೌನ್ ಹಾಲ್ ಬಳಿ ಕೋವಿಡ್ ಲಸಿಕೆಗಾಗಿ ಶನಿವಾರ ವ್ಯಕ್ತಿಗತ ಅಂತರ ಮರೆತು ಹೆಚ್ಚಿನ ಸಂಖ್ಯೆಯಲ್ಲಿ ಜನರು ಗುಂಪುಗೂಡಿದ್ದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಜಿ.ಪಂ., ತಾ.ಪಂ. ಚುನಾವಣಾ ಸಿದ್ಧತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಪೂರಕವಾಗಿ ರಾಜ್ಯದಾದ್ಯಂತ ಪಕ್ಷ ಸಂಘಟನೆಯನ್ನು ಬಲಪಡಿಸಲು ಶನಿವಾರ ವರ್ಚ್ಯುಯಲ್ ರೂಪದಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ಡಿಸೆಂಬರ್‌ನಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆ ನಡೆಯುವ ಸಾಧ್ಯತೆ ಇದೆ. ಅದಕ್ಕೆ ಪೂರಕವಾಗಿ ಜಿಲ್ಲಾ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಸಮಾವೇಶಗಳನ್ನು ನಡೆಸಬೇಕು. ರಾಜ್ಯ ಮಟ್ಟದಲ್ಲಿ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಮಾವೇಶ ನಡೆಸುವ ಮೂಲಕ ಚುನಾವಣಾ ಸಿದ್ಧತೆಗೆ ಚಾಲನೆ ನೀಡಬೇಕು ಎಂಬ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಭೆಯಲ್ಲಿ ಪಾಲ್ಗೊಂಡಿದ್ದ ಸುಮಾರು 400 ಮುಖಂಡರಿಗೆ ಪಕ್ಷ ಸಂಘಟನೆ ಕುರಿತು ಸೂಚನೆಗಳನ್ನು ನೀಡಿದ ಬಿಜೆಪಿ ರಾಜ್ಯ ಘಟಕದ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ‘ಜುಲೈ 1ರಿಂದ ಜುಲೈ 15ರವರೆಗೆ ಜಿಲ್ಲಾ ಮಟ್ಟದ ಕಾರ್ಯಕಾರಿಣಿ ಸಭೆಗಳನ್ನು ವರ್ಚ್ಯುಯಲ್ ರೂಪದಲ್ಲೇ ಮುಗಿಸಬೇಕು. ಜುಲೈ 16ರಿಂದ 30ರ ವರೆಗೆ ಮಂಡಲ ಮಟ್ಟದ ಕಾರ್ಯಕಾರಿಣಿ ಸಭೆಗಳನ್ನೂ ವರ್ಚ್ಯುಯಲ್ ಆಗಿ ನಡೆಸಬೇಕು’ ಎಂದರು.

ಪಕ್ಷದ ಮತಗಟ್ಟೆ ಹಂತದ ಸಮಿತಿಗಳ ಅಧ್ಯಕ್ಷರಿಗೆ ಶೀಘ್ರದಲ್ಲಿ ನಾಮಫಲಕಗಳನ್ನು ವಿತರಿಸಲಾಗುವುದು. ಪಕ್ಷ ಸಂಘಟನೆಗೆ ಪೂರಕವಾಗಿ ಏಳರಿಂದ ಎಂಟು ವಿಷಯಗಳನ್ನು ಜೋಡಿಸಿಕೊಂಡು ಎಲ್ಲ ಹಂತದಲ್ಲೂ ‘ಇ- ಚಿಂತನ ಪ್ರಶಿಕ್ಷಣ ವರ್ಗ’ ನಡೆಸಬೇಕು. ಮಂಡಲ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಈ ಕಾರ್ಯಕ್ರಮ ನಡೆಸಬೇಕು ಎಂದು ಸೂಚಿಸಿದರು.

ಕೋವಿಡ್ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಪಕ್ಷದ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಆಯಾ ಗ್ರಾಮಗಳ ಎಲ್ಲರೂ ಲಸಿಕೆ ಪಡೆಯುವಂತೆ ಮನವೊಲಿಸಬೇಕು. ಕೋವಿಡ್ ಎದುರಿಸುವುದಕ್ಕಾಗಿ ಎರಡು ಲಕ್ಷ ಕಾರ್ಯಕರ್ತರಿಗೆ ಆರೋಗ್ಯ ಸಂಬಂಧಿ ತರಬೇತಿ ನೀಡಲಾಗುವುದು. ಪಲ್ಸ್ ಆಕ್ಸಿಮೀಟರ್ ಬಳಕೆ, ಕೋವಿಡ್ ಮುನ್ನೆಚ್ಚರಿಕೆ ಕುರಿತು ಅವರಿಗೆ ಮಾಹಿತಿ ನೀಡಿ, ಜನರ ಸೇವೆಗೆ ನಿಯೋಜಿಸಲಾಗುವುದು ಎಂದರು.

ಸಾರಿಗೆ ಮುಷ್ಕರ: ಡಿ.31ರವರೆಗೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ಸೇವೆಗಳ ಅಡಿಯಲ್ಲಿ ಸಾರಿಗೆ ನೌಕರರ ಮುಷ್ಕರವನ್ನು ಇದೇ 30ರವರೆಗೆ ನಿಷೇಧಿಸಿದ್ದ ರಾಜ್ಯ ಸರ್ಕಾರ, ಇದೀಗ ಡಿ. 31ರವರೆಗೆ ಆ ಆದೇಶವನ್ನು ವಿಸ್ತರಿಸಿದೆ.

‘ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣೆ ಕಾಯ್ದೆ– 2013ರಡಿ ಅಗತ್ಯ ಸೇವೆಗಳಲ್ಲಿ ಮುಷ್ಕರ ನಿಷೇಧಿಸಿ, ಫೆ. 2ರಂದು ಆದೇಶ ಹೊರಡಿಸಲಾಗಿತ್ತು. ಪ್ರತಿ ಆರು ತಿಂಗಳಿಗೊಮ್ಮೆ ಇಂಥ ಆದೇಶ ಹೊರಡಿಸಲಾಗುತ್ತದೆ’ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ

‘ನೀಡಿದ್ದ ಭರವಸೆಗಳನ್ನು ಸರ್ಕಾರ ಈಡೇರಿಸಿಲ್ಲ ಎಂದು ಮತ್ತೆ ಮುಷ್ಕರಕ್ಕೆ ಸಿದ್ಧವಾಗುತ್ತಿರುವ ಸುಳಿವು ಸಿಕ್ಕಿದ ಕಾರಣಕ್ಕೆ, ಜುಲೈ ಒಂದರಿಂದ, ಡಿಸೆಂಬರ್ ಅಂತ್ಯದವರೆಗೆ ಅದಕ್ಕೆ ಅವಕಾಶ ನೀಡದಿರಲು, ಮುಷ್ಕರ ಹತ್ತಿಕ್ಕಲು ಸರ್ಕಾರ ಈ ಕ್ರಮ ತೆಗೆದುಕೊಂಡಿದೆ’ ಎನ್ನುವುದು ಸಾರಿಗೆ ನೌಕರರ ಆರೋಪ.

ಈ ಬಾರಿ ಕುಟುಂಬಸಹಿತ ಬೀದಿಗಿಳಿದು ಪ್ರತಿಭಟಿಸಲು ನೌಕರರು ರೂಪುರೇಷೆ ಸಿದ್ಧಪಡಿಸುತ್ತಿದ್ದು, ಜುಲೈ ಮೊದಲ ವಾರ ಸಭೆ ನಡೆಸಿ ದಿನ ನಿಗದಿಪಡಿಸಲು ಮುಂದಾಗಿದ್ದರು. ಸರ್ಕಾರ ಕೊಟ್ಟ ಮಾತಿನಂತೆ ಆರನೇ ವೇತನ ಆಯೋಗ ಜಾರಿ ಮಾಡಬೇಕು, ಮುಷ್ಕರದಲ್ಲಿ ಭಾಗಿಯಾದ ನೌಕರರ ವರ್ಗಾವಣೆ, ಅಮಾನತು ಆದೇಶ ರದ್ದುಪಡಿಸಬೇಕು. ಬಾಕಿ ವೇತನ ಪಾವತಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಲು ನೌಕರರು ಚಿಂತನೆ ನಡೆಸಿದ್ದಾರೆ.

₹ 4ಸಾವಿರ ಕೋಟಿ ನಷ್ಟ

ಬೆಳಗಾವಿ: ‘ಕೋವಿಡ್ ಅವಧಿಯಲ್ಲಿ ಸಾರಿಗೆ ಇಲಾಖೆಗೆ ಈವರೆಗೆ ₹ 4 ಸಾವಿರ ಕೋಟಿ ನಷ್ಟ ಉಂಟಾಗಿದೆ’ ಎಂದು ಸಚಿವ ಲಕ್ಷ್ಮಣ ಸವದಿ ತಿಳಿಸಿದರು.

ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ನೌಕರರಿಗೆ ಸಂಪೂರ್ಣ ವೇತನ ಕೊಡುತ್ತಿದ್ದೇವೆ. ಈಗ ಬರುತ್ತಿರುವ ಆದಾಯದಿಂದ ವೇತನ ಕೊಡಲು ಹಾಗೂ ಇಂಧನಕ್ಕೂ ಕೊರತೆ ಆಗುತ್ತಿದೆ’ ಎಂದು ಹೇಳಿದರು.

ಜುಲೈ 5ರ ಬಳಿಕ ಸಾರಿಗೆ ಸಿಬ್ಬಂದಿ ಮತ್ತೆ ಹೋರಾಟ ಮಾಡಲಿದ್ದಾರೆ ಎಂಬ ಬಗ್ಗೆ ಅವರು, ‘ಪ್ರತಿಭಟನೆ ನಡೆಸುವುದಿಲ್ಲ ಎಂದು ಮುಖಂಡರು ತಿಳಿಸಿದ್ದಾರೆ. ತಪ್ಪು ಮಾಹಿತಿ, ಹುನ್ನಾರದಿಂದ ಮುಷ್ಕರ ನಡೆಸಿದ್ದೆವು. ಈಗ, ನಿಮ್ಮೊಂದಿಗೆ ಇರುತ್ತೇವೆ ಎಂದಿದ್ದಾರೆ’ ಎಂದು ತಿಳಿಸಿದರು.

‘ಇಲಾಖೆ ಜವಾಬ್ದಾರಿ ತಗೆದುಕೊಂಡ ಬಳಿಕ 20 ಜಿಲ್ಲೆಗಳಲ್ಲಿ ಅತಿವೃಷ್ಟಿ, ನೆರೆ ಉಂಟಾಯಿತು. ಚೇತರಿಸಿಕೊಳ್ಳುವಷ್ಟರಲ್ಲಿ ಕೊರೊನಾ ಮೊದಲ ಅಲೆ, ಬಳಿಕ ಸಿಬ್ಬಂದಿ ಮುಷ್ಕರ, ಈಗ 2ನೇ ಅಲೆ ಎದುರಾಯಿತು’ ಎಂದು ಇಲಾಖೆ ಎದುರಿಸಿದ ಸಮಸ್ಯೆಗಳನ್ನು ಪಟ್ಟಿಮಾಡಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್	124.80	95.00	3,307	5,579
ಹಾರಂಗಿ	2,859	2,839.68	507	80
ಕಬಿನಿ	2284.00	2,275.10	1,649	700
ಹೇಮಾವತಿ	2,922	2,894.90	1,811	200
ಸೂಪಾ (ಮೀ)	560	539.17	3,128	4,881
ತುಂಗಭದ್ರಾ (ಅಡಿ)	1,633	1,607.48	11,441	266
ಮಲಪ್ರಭಾ	2,079.50	2,062.30	1,201	194
ಘಟಪ್ರಭಾ	2175	2,131.23	4,715	120
ಆಲಮಟ್ಟಿ (ಮೀ)	519.60	517.38	20,451	20,451
ನಾರಾಯಣಪುರ (ಮೀ)	492.25	489.07	25,000	26,790

* ನೆಲಮಟ್ಟದಿಂದ

ಕರಾವಳಿ, ಕೊಡಗಿನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ: ಕರಾವಳಿ ಜಿಲ್ಲೆಗಳಲ್ಲಿ ಶನಿವಾರ ಮಳೆ ಆರಂಭವಾಗಿದೆ. ಹಲವೆಡೆ ಸಾಧಾರಣ ಮಳೆ ಸುರಿದಿದ್ದು, ಕರಾವಳಿಯಲ್ಲಿ ಕಡಲ್ಕೊರೆತ ಉಂಟಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಮಳೆ ಬಿರುಸಾಗಿದ್ದು, ಪಡುಬಿದ್ರಿಯಲ್ಲಿ ಕಡಲ್ಕೊರೆತವಾಗಿದೆ. ಕಾಪು ತಾಲ್ಲೂಕು ಮೂಳೂರಿನಲ್ಲಿ ಮನೆ ಚಾವಣಿ ಕುಸಿದು, ಮಹಿಳೆ ಗಾಯಗೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆ, ಕೊಪ್ಪ, ಎನ್.ಆರ್.ಪುರ ಭಾಗದಲ್ಲಿ ಮಳೆಯಾಗಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಚೇರಂಬಾಣೆ, ಬಕ್ಕ, ನಾಪೋಕ್ಲು, ತಲಕಾವೇರಿ ಸೇರಿ ವಿವಿಧೆಡೆ ಮಳೆಯಾಗುತ್ತಿದೆ. ಮೈಸೂರು ನಗರ ಸೇರಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಕಲಬುರ್ಗಿ ಜಿಲ್ಲೆಯ ಸೇಡಂ, ಚಿತ್ತಾಪುರ, ಕಾಳಗಿ ಮತ್ತು ಯಡ್ರಾಮಿ, ಯಾದಗಿರಿ ಜಿಲ್ಲೆಯ ಸುರಪುರ, ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಮತ್ತು ಬೀದರ್‌ನಲ್ಲಿ ಮಳೆಯಾಗಿದೆ.

ಮಣ್ಣು ಕುಸಿತ: ಹಾಸನ ಜಿಲ್ಲೆಯ ದ್ಯಾವೇನಹಳ್ಳಿ ಗ್ರಾಮದ ಬಳಿ ಬಳೀ ಹೇಮಾವತಿ ನಾಲೆಯ ಪಂಪ್‌ಹೌಸ್ ಸಮೀಪ, 80 ಅಡಿ ಎತ್ತರದಿಂದ ನಾಲೆಗೆ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದೆ.

ಕರಾವಳಿ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ನಾಳೆಯಿಂದ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಕರಾವಳಿ ಜಿಲ್ಲೆಗಳಲ್ಲಿ ಜೂ.28ರಿಂದ ಜುಲೈ 1ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಕೆಲ ದಿನಗಳಿಂದ ತಗ್ಗಿದ್ದ ಮಳೆ ಮತ್ತೆ ಬಿರುಸುಗೊಳ್ಳಲಿದೆ. ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಜು.1ರವರೆಗೆ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ’.

‘ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇದೇ 29ರಿಂದ ಮಳೆ ಹೆಚ್ಚಾಗಲಿದ್ದು, ಈ ಜಿಲ್ಲೆಗಳಿಗೂ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಒಣಹವೆ ಇರಲಿದೆ’ ಎಂದೂ ತಿಳಿಸಿದೆ.

ಮಳೆ-ಎಲ್ಲಿ, ಎಷ್ಟು?: ಗೋಕರ್ಣದಲ್ಲಿ 5 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕಾರವಾರ 4, ಶಿರಸಿ 3, ಕುಂದಾಪುರ, ಪುತ್ತೂರು 2, ಕಾರ್ಕಳ, ಮಂಗಳೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ರಾಯಚೂರಿನಲ್ಲಿ 33 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.


ಶಿಕ್ಷಕರ ವರ್ಗಾವಣೆ: ಹೊಸ ಅಧಿಸೂಚನೆ ಶೀಘ್ರ

ಒಂದನೇ ಪುಟದಿಂದ...

ಅರ್ಜಿದಾರರ ವಾದವನ್ನು ಕೆಎಟಿ ಎತ್ತಿಹಿಡಿದಿತ್ತು. ಅದನ್ನು ಪ್ರಶ್ನಿಸಿ ಶಿಕ್ಷಣ ಇಲಾಖೆ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾ ಮಾಡಿತ್ತು. ಹೀಗಾಗಿ, ಸುಗ್ರೀವಾಜ್ಞೆ ಮೂಲಕ ಕಾಯ್ದೆಗೇ ತಿದ್ದುಪಡಿ ತರಲಾಗಿತ್ತು.

ಹಳೆ ಅಧಿಸೂಚನೆಯಲ್ಲಿರುವ ಅಂಶಗಳ ಜೊತೆಗೆ ಹೊಸ ಅಧಿಸೂಚನೆಯಲ್ಲಿರುವ ನಿಯಮಗಳಿಗೆ ಅನುಗುಣವಾಗಿ ಶಿಕ್ಷಕರು ವರ್ಗಾವಣೆಗೆ ಅರ್ಹತೆ ಪಡೆಯಲಿದ್ದಾರೆ. ಹಳೆ ಅಧಿಸೂಚನೆಯ ಬಳಿಕ ಕೆಲವರು ನಿವೃತ್ತರಾಗಿದ್ದು, ಇನ್ನೂ ಕೆಲವರು ಅನರ್ಹರಾಗುವ ಸಾಧ್ಯತೆಗಳಿವೆ. ಒಂದು ವರ್ಷದ ಮಗು ಇದೆ ಎಂಬ ಕಾರಣಕ್ಕೆ ಹಿಂದೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದವರು ಈಗ ಅನರ್ಹರಾಗಬಹುದು. ವಿಶೇಷ ಕೌನ್ಸೆಲಿಂಗ್‌ಗೆ ಲಭ್ಯವಿರುವ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಿಸಿದ ಬಳಿಕ, ಅದಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗುತ್ತದೆ. ಬಳಿಕ 2019–20ರಲ್ಲಿನ ಕೌನ್ಸೆಲಿಂಗ್ ಕ್ರಮಾಂಕ ಪರಿಗಣಿಸಿ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಆಕ್ಷೇಪಣೆ ಆಹ್ವಾನಿಸಿ ವರ್ಗಾವಣೆ ಅಂತಿಮಗೊಳಿಸಲಾಗುವುದು ಎಂದೂ ಇಲಾಖೆಯ ಮೂಲಗಳು ಹೇಳಿವೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 27-6-1996

● **ಸಚಿವರ ವಜಾಕ್ಕೆ ಗೌಡರ ಬಣದ ಪಟ್ಟು**

ಬೆಂಗಳೂರು, ಜೂನ್ 26– ಉಚ್ಚಾಟಿತ ನಾಯಕ ರಾಮಕೃಷ್ಣ ಹೆಗಡೆಯವರ ಬೆಂಬಲಿಗ ಸಚಿವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಬರುತ್ತಿರುವ ಒತ್ತಡಕ್ಕೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮಣಿಯದಿರುವುದರಿಂದಾಗಿ ಜನತಾ ದಳದಲ್ಲಿ ಬಿಕ್ಕಟ್ಟು ಉಲ್ಬಣಗೊಂಡಿದೆ.

ಆದರೆ, ಹೆಗಡೆ ಅವರ ಸಮಾವೇಶದಲ್ಲಿ ಭಾಗವಹಿಸಿದ್ದ ಪಕ್ಷದ ನಾಯಕರ ಹೆಸರುಗಳನ್ನು ಪಟ್ಟಿ ಮಾಡಲಾಗಿದ್ದು, ದೇವೇಗೌಡರ ಒಪ್ಪಿಗೆ ಪಡೆದ ನಂತರ ಅವರನ್ನು ಉಚ್ಚಾಟಿಸುವ ತೀರ್ಮಾನಕ್ಕೆ ಬರಲಾಗಿದೆ. ಪ್ರಧಾನಿಗಳು ನಗರದ ಕಾರ್ಯಕ್ರಮ ಮುಗಿಸಿಕೊಂಡು ದೆಹಲಿಗೆ ವಾಪಸ್ ತೆರಳಿದ ನಂತರ ಈ ನಿರ್ಧಾರ ಪ್ರಕಟಿಸುವ ನಿರೀಕ್ಷೆಯಿದೆ.

50 ವರ್ಷಗಳ ಹಿಂದೆ — ಭಾನುವಾರ, 27-6-1971

● **ರಾಜ್ಯ ಆಡಳಿತ ಕಾಂಗ್ರೆಸ್ ಹೊಸ ಸಮಿತಿ: ಸರ್ವ ಸಮ್ಮತ ಹೆಸರುಗಳ ಸೂಚನೆಗೆ ಆದೇಶ**

ನವದೆಹಲಿ, ಜೂನ್ 26– ರಾಜ್ಯದ ಪ್ರದೇಶ ಕಾಂಗ್ರೆಸ್ ಕಾರ್ಯ ನಿರ್ವಾಹಕ ಸಮಿತಿ ಮತ್ತು ಪ್ರದೇಶ ಚುನಾವಣೆ ಸಮಿತಿಗೆ ನೇಮಿಸಲು ಸರ್ವಸಮ್ಮತ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸುವಂತೆ ಆಡಳಿತ ಕಾಂಗ್ರೆಸ್ ಹೈಕಮಾಂಡ್ ಮೈಸೂರಿನ ಆಡಳಿತ ಕಾಂಗ್ರೆಸ್ ನಾಯಕರುಗಳಿಗೆ ಸಲಹೆ ಮಾಡಿದೆ.

ಮುಂದಿನ ವಿಧಾನಸಭೆ ಚುನಾವಣೆಯ ದೃಷ್ಟಿಯಿಂದ ಪಕ್ಷವನ್ನು ಬಲಗೊಳಿಸುವ ವಿಚಾರ ಚರ್ಚಿಸಲು ಆಡಳಿತ ಕಾಂಗ್ರೆಸ್ ಹೈಕಮಾಂಡ್ ಮೈಸೂರು ಪ್ರದೇಶ ಆಡಳಿತ ಕಾಂಗ್ರೆಸ್ ಅಡ್‌ಹಾಕ್ ಸಮಿತಿ ಸಂಚಾಲಕ ದೇವರಾಜ ಅರಸು, ಶಾಸಕ ಪಕ್ಷದ ನಾಯಕ ಎಚ್. ಸಿದ್ದವೀರಪ್ಪನವರನ್ನು ದೆಹಲಿಗೆ ಕರೆಸಿಕೊಂಡಿದೆ.

ಬೀದರ್‌ನಲ್ಲಿ ಎನ್‌ಸಿಬಿ ಕಾರ್ಯಾಚರಣೆ; ಆರೋಪಿ ಮನೆಯಲ್ಲಿ ₹ 62 ಲಕ್ಷ ನಗದು ಪತ್ತೆ

ಅಕ್ರಮ ಉತ್ಪಾದನೆ: ₹ 2 ಕೋಟಿ ಮೌಲ್ಯದ ‘ಡ್ರಗ್ಸ್’ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್ ಹೊರವಲಯದ ಕೊಳಾರ ಕೈಗಾರಿಕೆ ಪ್ರದೇಶದಲ್ಲಿರುವ ‘ಇಂದು ಡ್ರಗ್ಸ್’ ಕಂಪನಿಯ ಕಾರ್ಖಾನೆ ಮೇಲೆ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ಅಧಿಕಾರಿಗಳು ದಾಳಿ ಮಾಡಿದ್ದು, ₹ 2 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಬೀದರ್ ವಿಳಾಸ ನೀಡಿ ಕಂಪನಿ ನೋಂದಣಿ ಆಗಿತ್ತು. ಅಲ್ಪ್ರಝೋಲಮ್ ಮಾದಕ ವಸ್ತುವನ್ನು ಅಕ್ರಮವಾಗಿ ಉತ್ಪಾದಿಸಿ ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಮಾರಾಟ ಮಾಡುತ್ತಿತ್ತು. ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿ 91 ಕೆ.ಜಿ 500 ಗ್ರಾಂ ಅಲ್ಪ್ರಝೋಲಮ್ ಹಾಗೂ ₹ 62 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಎನ್‌ಸಿಬಿ ಬೆಂಗಳೂರು ವಲಯದ ನಿರ್ದೇಶಕ ಅಮಿತ್ ಗಾವಟೆ ‘ಪ್ರಜಾವಾಣಿ’ಗೆ ತಿಳಿಸಿದರು.



ಬೀದರ್ ತಾಲ್ಲೂಕಿನ ಕೊಳಾರ(ಕೆ) ಕೈಗಾರಿಕೆ ಪ್ರದೇಶದಲ್ಲಿ ಶನಿವಾರ ಎನ್‌ಸಿಬಿ ಅಧಿಕಾರಿಗಳು ವಶಪಡಿಸಿಕೊಂಡಿರುವ ನಗದು ಮತ್ತು ಮಾದಕ ವಸ್ತುಗಳು

’ತೆಲಂಗಾಣದ ಎಸ್.ಭಾಸ್ಕರ್ ಹಾಗೂ ರಾಸಾಯನಿಕ ತಜ್ಞ ವೈ.ವಿ. ರೆಡ್ಡಿ ಸೇರಿಕೊಂಡು ಕಂಪನಿ ನಡೆಸುತ್ತಿದ್ದರು. ಅವರ ಕೃತ್ಯಕ್ಕೆ ಎಸ್. ಮೆನನ್, ಅಮೃತ್ ಹಾಗೂ ಎನ್.ವಿ. ರೆಡ್ಡಿ ಸಹಕಾರ ನೀಡಿದ್ದರು. ಇದೀಗ ಐವರನ್ನು ಬಂಧಿಸಲಾಗಿದೆ’ ಎಂದೂ ಹೇಳಿದರು.

‘ಹಲವು ವರ್ಷಗಳಿಂದ ಕಾರ್ಖಾನೆ ಕಾರ್ಯನಿರ್ವಹಿಸುತ್ತಿತ್ತು. ಸರ್ಕಾರ ನಿಷೇಧ ಮಾಡಿರುವ ಅಲ್ಪ್ರಝೋಲಮ್ ತಯಾರಿಸಿ, ಮಿನಿ ಟ್ರಕ್‌ನಲ್ಲಿ ತೆಲಂಗಾಣ ಹಾಗೂ ಕರ್ನಾಟಕದ ಹಲವು ಜಿಲ್ಲೆಗಳಿಗೆ ಕಳುಹಿಸಲಾಗುತ್ತಿತ್ತು. ಇದರಿಂದ ಆರೋಪಿಗಳು, ಕೋಟ್ಯಂತರ ರೂಪಾಯಿ ಸಂಪಾದಿಸಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳು, ಬ್ಯಾರಲ್‌ಗಳಲ್ಲಿ ಅಲ್ಪ್ರಝೋಲಮ್ ತುಂಬಿಟ್ಟಿದ್ದರು’ ಎಂದೂ ಗಾವಟೆ ವಿವರಿಸಿದರು.

ಮನೆ ಮೇಲೂ ದಾಳಿ: ‘ಕಂಪನಿ ಪಾಲುದಾರರಲ್ಲಿ ಒಬ್ಬನಾದ ಎನ್.ವಿ. ರೆಡ್ಡಿಯ ಹೈದರಾಬಾದ್‌ನಲ್ಲಿರುವ ಮನೆ ಮೇಲೂ ದಾಳಿ ಮಾಡಲಾಗಿದೆ. ಆತನ ಮನೆಯಲ್ಲೇ ನಗದು ಸಿಕ್ಕಿದೆ. ಡ್ರಗ್ ಜಾಲದಲ್ಲಿ ಹಲವರು ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ’ ಎಂದೂ ಎನ್‌ಸಿಬಿ ಮೂಲಗಳು ಹೇಳಿವೆ.

ಸಚಿವ ಸಿ.ಪಿ. ಯೋಗೇಶ್ವರ್ ಮತ್ತೆ ದೆಹಲಿಯಲ್ಲಿ ಪ್ರತ್ಯಕ್ಷ

ನಾಯಕತ್ವ ಬದಲಿಸುವಂತೆ ವರಿಷ್ಠರಿಗೆ ಒತ್ತಡ?

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದ ಪರೀಕ್ಷೆಯ ಫಲಿತಾಂಶ ಶೀಘ್ರವೇ ಹೊರಬೀಳಲಿದೆ' ಎಂಬ ಹೇಳಿಕೆ ನೀಡಿದ ಬೆನ್ನಲ್ಲೇ ಶುಕ್ರವಾರ ತಡರಾತ್ರಿ ದೆಹಲಿಗೆ ಬಂದಿದ್ದ ಸಚಿವ ಸಿ.ಪಿ. ಯೋಗೇಶ್ವರ್, ಶನಿವಾರ ಪಕ್ಷದ ಕೆಲವು ಮುಖಂಡರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

ಕರ್ನಾಟಕ ಭವನಕ್ಕೆ ಬದಲು ಖಾಸಗಿ ಹೋಟೆಲ್‌ನಲ್ಲಿ ರಾತ್ರಿ ತಂಗಿದ್ದ ಅವರು, ಶನಿವಾರ ಬೆಳಗಿನಜಾವ ಕೆಲವರನ್ನು ಭೇಟಿಯಾಗಿ ನಾಯಕತ್ವ ಬದಲಾವಣೆಗಾಗಿ ಒತ್ತಡ ಹೇರಿದ್ದಾರೆ ಎಂದು ತಿಳಿದುಬಂದಿದೆ.

ಪಕ್ಷದ ರಾಷ್ಟ್ರೀಯ ಕಚೇರಿಯಲ್ಲಿ ನಡೆಯಲಿರುವ ಸಂಸದೀಯ ಮಂಡಳಿ ಸಭೆಯಲ್ಲಿ ರಾಜ್ಯ ರಾಜಕಾರಣದ ಕುರಿತು ಚರ್ಚೆ ನಡೆಸುವಂತೆಯೂ ಅವರು ಕೆಲವರಲ್ಲಿ ಮನವಿ ಮಾಡಿದ್ದಾರೆ ಎಂದೂ ಗೊತ್ತಾಗಿದೆ.


ಯೋಗೇಶ್ವರ್

ಬಿಜೆಪಿ ಸರ್ಕಾರ ರಚನೆಯಲ್ಲಿ ಪ್ರಮುಖ ಸ್ಥಾನ ವಹಿಸಿದ್ದರೂ, ಯಡಿಯೂರಪ್ಪ ಅವರು ಮಾತು ಕೊಟ್ಟಂತೆ ಇಂಧನ ಖಾತೆ ನೀಡದಿರುವುದರ ಬಗ್ಗೆ ಹಾಗೂ ರಾಮನಗರ ಜಿಲ್ಲೆಯ ಉಸ್ತುವಾರಿ ನೀಡದಿರುವ ಬಗ್ಗೆ ತೀವ್ರ ಅಸಮಾಧಾನ ತೋಡಿಕೊಂಡಿರುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ಹೇಳಿವೆ.

ಆದರೆ, 'ನಾನು ವೈಯಕ್ತಿಕ ಕೆಲಸದ ಹಿನ್ನೆಲೆಯಲ್ಲಿ ದೆಹಲಿಗೆ ಬಂದಿದ್ದು, ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ' ಎಂದು ಅವರು ಮಧ್ಯಾಹ್ನ ಕರ್ನಾಟಕ ಭವನದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

'ಪ್ರತಿ ಬಾರಿಯೂ ನನ್ನ ದೆಹಲಿ ಭೇಟಿಗೆ ರಾಜಕೀಯ ಸ್ಪರ್ಶ ನೀಡಲಾಗುತ್ತದೆ. ಈ ಬಾರಿ ವೈಯಕ್ತಿಕ ಕೆಲಸದ ನಿಮಿತ್ತ ಬಂದಿದ್ದು, ರಾಜಕೀಯ ಉದ್ದೇಶ ಇಲ್ಲ' ಎಂದು ಸ್ಪಷ್ಟಪಡಿಸಿದ ಅವರು, ಸಂಜೆ ಬೆಂಗಳೂರಿಗೆ ವಾಪಸ್ ತೆರಳಿದರು.

'ಪರೀಕ್ಷೆ ಬರೆದವರನ್ನೇ ಕೇಳಿ'

ಚಿಕ್ಕಮಗಳೂರು ಶಾಸಕ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರೂ ಯೋಗೇಶ್ವರ್ ಭೇಟಿಯ ಸಂದರ್ಭದಲ್ಲೇ ದೆಹಲಿಗೆ ದಿಢೀರ್ ಬಂದಿರುವುದು ತೀವ್ರ ಕುತೂಹಲ ಕೆರಳಿಸಿದೆ.

ಆದರೆ, ಪಕ್ಷದ ಸಂಘಟನೆ ಹಿನ್ನೆಲೆಯಲ್ಲಿ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದಾಗಿ ತಿಳಿಸಿದ ರವಿ, 'ಯೋಗೇಶ್ವರ್ ಭೇಟಿಯ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಸ್ಪಷ್ಟಪಡಿಸಿದರು.


ಸಿ.ಟಿ.ರವಿ

ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಪರೀಕ್ಷೆಯ ಫಲಿತಾಂಶ ಕುರಿತು ಪರೀಕ್ಷೆ ಬರೆದವರನ್ನೇ ಕೇಳಬೇಕು ಎಂದು ಸಲಹೆ ನೀಡಿದ ಅವರು, ಕೇಂದ್ರದ ಸಚಿವ ಸಂಪುಟ ಪುನರ್‌ರಚನೆ ವೇಳೆ ರಾಜ್ಯದಿಂದ ಯಾರನ್ನು ಆಯ್ಕೆ ಮಾಡಲಾಗುತ್ತದೆ ಎಂಬುದನ್ನು ಪ್ರಧಾನಿ ಮೋದಿ ಅವರೇ ನಿರ್ಧರಿಸಲಿದ್ದಾರೆ ಎಂದರು.

ದೈಹಿಕ ಹಿಂಸೆ: ಬಿಜೆಪಿ ಶಾಸಕನ ವಿರುದ್ಧ ಪತ್ನಿ ಆರೋಪ

ಶಿಮ್ಲಾ (ಪಿಟಿಐ): 'ಧರ್ಮಶಾಲಾ ಬಿಜೆಪಿ ಶಾಸಕ ವಿಶಾಲ್ ನೆಹ್ರಿಯಾ ಅವರು ತನಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡುತ್ತಿದ್ದಾರೆ' ಎಂದು ಶಾಸಕರ ಪತ್ನಿಯೂ ಆಗಿರುವ ಹಿಮಾಚಲ ಪ್ರದೇಶ ಆಡಳಿತ ಸೇವೆಗಳ (ಎಚ್‌ಪಿಎಎಸ್) ಅಧಿಕಾರಿ ಓಶಿನ್ ಶರ್ಮಾ ಅವರು ಆರೋಪಿಸಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

11 ನಿಮಿಷಗಳ ಈ ವಿಡಿಯೊದಲ್ಲಿ 'ವಿಶಾಲ್ ಅವರು ನನಗೆ ಹಲವು ಬಾರಿ ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದ್ದಾರೆ. ಗುರುವಾರ ನನಗೆ ಮೂರು ಬಾರಿ ಕಪಾಳಕ್ಕೆ ಹೊಡೆದಿದ್ದಾರೆ' ಎಂದು ದೂರಿದ್ದಾರೆ.

ಹಿಮಾಚಲ ಪ್ರದೇಶದ ಕಾಂಗ್ರಾ ಜಿಲ್ಲೆಯ ನಗ್ರೋಟಾ ಸುರಿಯಾನ್‌ನಲ್ಲಿರುವ ಗ್ರಾಮೀಣ ಅಭಿವೃದ್ಧಿ ಬ್ಲಾಕ್‌ನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿ ಓಶಿನ್ ಕಾರ್ಯನಿರ್ವಹಿಸುತ್ತಿದ್ದಾರೆ.

ಕಳೆದ ಏಪ್ರಿಲ್ 26ರಂದು ವಿಶಾಲ್ ಹಾಗೂ ಓಶಿನ್ ವಿವಾಹವಾಗಿದ್ದಾರೆ. ಸದ್ಯ ಓಶಿನ್, ತನ್ನ ತವರು ಮನೆಗೆ ತೆರಳಿರುವುದಾಗಿ ಹೇಳಿದ್ದಾರೆ. ಘಟನೆ ಕುರಿತು ಶಾಸಕರ ಪ್ರತಿಕ್ರಿಯೆಗಾಗಿ ಪ್ರಯತ್ನಿಸಿದಾಗ, ಅವರು ಸಂಪರ್ಕಕ್ಕೆ ಲಭ್ಯವಾಗಲಿಲ್ಲ. 2019ರಲ್ಲಿ ನಡೆದ ವಿಧಾನಸಭಾ ಉಪಚುನಾವಣೆಯಲ್ಲಿ ಧರ್ಮಶಾಲಾ ಕ್ಷೇತ್ರದಿಂದ ವಿಶಾಲ್ ನೆಹ್ರಿಯಾ (32) ಶಾಸಕರಾಗಿ ಆಯ್ಕೆಯಾಗಿದ್ದಾರೆ.


ಅಯೋಧ್ಯೆ ಅಭಿವೃದ್ಧಿ: ಪರಾಮರ್ಶೆ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪರಿಶೀಲಿಸಿದರು. 'ಈ ದೇವಾಲಯ ನಗರಿಯು ಭಾರತದ ಶ್ರೇಷ್ಠ ಪರಂಪರೆ ಹಾಗೂ ಅಭಿವೃದ್ಧಿಯನ್ನು ಪ್ರತಿಬಿಂಬಿಸುವಂತಿರಬೇಕು' ಎಂದು ಅವರು ಹೇಳಿದರು.

ವರ್ಚುವಲ್ ಸಭೆಯಲ್ಲಿ ಮಾತನಾಡಿದ ಪ್ರಧಾನಿ, 'ಪ್ರತಿಯೊಬ್ಬ ಭಾರತೀಯನ ಸಾಂಸ್ಕೃತಿಕ ಪ್ರಜ್ಞೆಯಲ್ಲಿ ಅಯೋಧ್ಯೆಯ ಛಾಪು ಇದೆ. ಈ ನಗರದ ಮಾನವೀಯ ನೀತಿಗಳು ಭವಿಷ್ಯದ ಮೂಲಸೌಕರ್ಯಗಳೊಂದಿಗೆ ಹೊಂದಿಕೊಳ್ಳಬೇಕು' ಎಂದರು.

ಆಧ್ಯಾತ್ಮಿಕ ಕೇಂದ್ರ, ಜಾಗತಿಕ ಪ್ರವಾಸೋದ್ಯಮ ಕೇಂದ್ರ ಮತ್ತು ಸುಸ್ಥಿರ ಸ್ಮಾರ್ಟ್ ಸಿಟಿಯಾಗಿ ಅಯೋಧ್ಯೆಯನ್ನು ರೂಪಿಸಲಾಗುತ್ತಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ. ಉತ್ತರ ಪ್ರದೇಶದ ಅಧಿಕಾರಿಗಳು ಅಯೋಧ್ಯೆಯ ಅಭಿವೃದ್ಧಿಯ ವಿವಿಧ ಅಂಶಗಳನ್ನು ಒಳಗೊಂಡ ವಿವರಗಳನ್ನು ಸಭೆಯಲ್ಲಿ ಪ್ರಸ್ತುತಪಡಿಸಿದರು.

ಅಯೋಧ್ಯೆಯ ಜತೆ ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಮುಂದುವರಿದ ಮತ್ತು ಪ್ರಸ್ತಾವಿತ ಮೂಲಸೌಕರ್ಯ ಯೋಜನೆಗಳ ಬಗ್ಗೆ ಪ್ರಧಾನಿಗೆ ವಿವರಿಸಲಾಯಿತು. ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ ವಿಸ್ತರಣೆ, ಬಸ್ ನಿಲ್ದಾಣ, ರಸ್ತೆಗಳು ಮತ್ತು ಹೆದ್ದಾರಿಗಳಂತಹ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.


ಅಯೋಧ್ಯೆ ಅಭಿವೃದ್ಧಿ ಕುರಿತ ವರ್ಚುವಲ್ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಿದ್ದರು —ಪಿಟಿಐ ಚಿತ್ರ

ನಿರ್ಮಾಣವಾಗಲಿರುವ ಗ್ರೀನ್ ಫೀಲ್ಡ್ ಟೌನ್‌ಶಿಪ್‌ನಲ್ಲಿ ಭಕ್ತರಿಗೆ ವಸತಿ ಸೌಕರ್ಯಗಳು, ಆಶ್ರಮಗಳಿಗೆ ಸ್ಥಳ, ಮಠಗಳು, ಹೋಟೆಲ್‌ಗಳು, ವಿವಿಧ ರಾಜ್ಯಗಳ ಭವನಗಳು ಸೇರಿವೆ. ಪ್ರವಾಸಿ ಸೌಲಭ್ಯ ಕೇಂದ್ರ ಮತ್ತು ವಿಶ್ವ ದರ್ಜೆಯ ವಸ್ತುಸಂಗ್ರಹಾಲಯವನ್ನು ನಿರ್ಮಿಸಲಾಗುವುದು ಎಂದು ತಿಳಿಸಿದೆ.

'ಅಭಿವೃದ್ಧಿ ಯೋಜನೆಗಳು ಪ್ರವಾಸಿಗರು, ಯಾತ್ರಿಕರು ಸೇರಿದಂತೆ ಎಲ್ಲರಿಗೂ ಪ್ರಯೋಜನಕಾರಿಯಾಗಬೇಕು. ನಗರದ ಈ ಅಭಿವೃದ್ಧಿಯಲ್ಲಿ ಪ್ರಭಾವಂತ ಯುವಜನ ಕೌಶಲವನ್ನು ಸದುಪಯೋಗಪಡಿಸಿಕೊಳ್ಳಬೇಕು. ಮುಂಬರುವ ಪೀಳಿಗೆಗಳೂ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಅಯೋಧ್ಯೆಗೆ ಭೇಟಿ ನೀಡುವ ಬಯಕೆಯಾಗಬೇಕು' ಎಂದು ಮೋದಿ ಹೇಳಿದರು.

ಅಯೋಧ್ಯೆ ನಗರ ಅಭಿವೃದ್ಧಿಗೆ ಆದ್ಯತೆ

- ಸರಯೂ ನದಿ ಮತ್ತು ಅದರ ಘಟ್ಟಗಳ ಸುತ್ತಲಿನ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಗಮನ
- ಸರಯೂ ನದಿಯಲ್ಲಿ ನೌಕಾವಿಹಾರದ ಆಕರ್ಷಣೆ
- ಸೈಕ್ಲಿಸ್ಟ್‌ಗಳು ಮತ್ತು ಪಾದಚಾರಿಗಳಿಗೆ ಸಾಕಷ್ಟು ಸ್ಥಳಾವಕಾಶ ಕಲ್ಪಿಸುವ ರಸ್ತೆ ಅಭಿವೃದ್ಧಿ
- ಸ್ಮಾರ್ಟ್ ಸಿಟಿ ಮೂಲ ಸೌಕರ್ಯವನ್ನು ಬಳಸಿಕೊಂಡು ಆಧುನಿಕ ರೀತಿಯಲ್ಲಿ ಸಂಚಾರ ನಿರ್ವಹಣೆ

ಸಂಕ್ಷಿಪ್ತ ಸುದ್ದಿ

ಮಾದಕವಸ್ತು ವ್ಯಸನ ವಿನಾಶಕಾರಿ: ಮೋದಿ

ನವದೆಹಲಿ (ಪಿಟಿಐ): 'ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿ ಬಾಳು ಕತ್ತಲಾಗುತ್ತದೆ. ಅದು ವಿನಾಶಕಾರಿಯೂ ಹೌದು' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಅಂತರರಾಷ್ಟ್ರೀಯ ಮಾದಕ ವಸ್ತುವ್ಯಸನ ಹಾಗೂ ಕಳ್ಳಸಾಗಣೆ ವಿರೋಧಿ ದಿನದ ಅಂಗವಾಗಿ ಅವರು ಸರಣಿ ಟ್ವೀಟ್‌ಗಳನ್ನು ಮಾಡಿದ್ದಾರೆ.

'ವಿನಾಶಕ್ಕೆ ಕಾರಣವಾಗುವಂಥ ಮಾದಕ ವಸ್ತುಗಳಿಂದ ಭಾರತವನ್ನು ಮುಕ್ತ ಮಾಡುವುದು ಅಗತ್ಯ. ಮಾದಕ ವಸ್ತುಗಳ ವ್ಯಸನದ ವಿರುದ್ಧ ಬೇರು ಮಟ್ಟದಲ್ಲಿ ಹೋರಾಡುತ್ತಿರುವವರ ಕಾರ್ಯ ಶ್ಲಾಘನೀಯ' ಎಂದು ಹೇಳಿದ್ದಾರೆ.

'ಮಾದಕವಸ್ತುಗಳ ವ್ಯಸನವನ್ನು ಉದಾಸೀನ ಮಾಡುವ ಹಾಗಿಲ್ಲ. ಅದು ಅನುಕರಿಸಬೇಕಾದ ಮಾದರಿಯೂ ಅಲ್ಲ' ಎಂದಿದ್ದಾರೆ.

ಮಾದಕವಸ್ತುಗಳ ವ್ಯಸನದಿಂದ ಮುಕ್ತವಾಗುವ ಕುರಿತು ಈ ಹಿಂದೆ 'ಮನ್ ಕಿ ಬಾತ್'ನಲ್ಲಿ ಪ್ರಸ್ತಾಪಿಸಿದ್ದ ತಮ್ಮ ವಿಚಾರಗಳನ್ನು ಅವರು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

ರೇವಂತರೆಡ್ಡಿ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ

ನವದೆಹಲಿ: ಕಾಂಗ್ರೆಸ್‌ನ ತೆಲಂಗಾಣ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಲೋಕಸಭಾ ಸದಸ್ಯ ಎ.ರೇವಂತ ರೆಡ್ಡಿ ಅವರನ್ನು ಶನಿವಾರ ನೇಮಕ ಮಾಡಲಾಗಿದೆ.

ಈ ಮೊದಲು ಎನ್. ಉತ್ತಮಕುಮಾರ್ ರೆಡ್ಡಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಹೈದರಾಬಾದ್ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪಕ್ಷವು ಕಳಪೆ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು..

ಐದು ರಾಜ್ಯಗಳ ಚುನಾವಣೆಗೆ ಬಿಜೆಪಿ ತಯಾರಿ: ಸಮಾಲೋಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷದ ಆರಂಭದಲ್ಲಿ ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಬಿಜೆಪಿ ತಯಾರಿ ಆರಂಭಿಸಿದೆ. ಪ್ರಮುಖ ಕೇಂದ್ರ ಸಚಿವರು ಸೇರಿದಂತೆ ಹಿರಿಯ ಬಿಜೆಪಿ ನಾಯಕರು ಪಕ್ಷದ ಕೇಂದ್ರ ಕಚೇರಿಯಲ್ಲಿ ಶನಿವಾರ ಸಭೆ ನಡೆಸಿದರು.

ಚುನಾವಣೆ ಬಗ್ಗೆ ಚರ್ಚಿಸುವುದು ಸಭೆಯ ಕಾರ್ಯಸೂಚಿಯಾಗಿತ್ತು. ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಸಂಬಂಧಿಸಿದ ರಾಜಕೀಯ ಮತ್ತು ಆಡಳಿತಾತ್ಮಕ ವಿಷಯಗಳ ಕುರಿತು ಚರ್ಚೆ ನಡೆಯಿತು. ಕೇಂದ್ರ ಸಂಪುಟ ಪುನರ್ ರಚನೆ ಸನ್ನಿಹಿತವಾಗಿದೆ. ಜೊತೆಗೆ ಪಕ್ಷದ ಉನ್ನತ ನಿರ್ಧಾರ ತೆಗೆದುಕೊಳ್ಳುವ ಬಿಜೆಪಿ ಸಂಸದೀಯ ಮಂಡಳಿ ಚುನಾವಣೆಯೂ ಇದ್ದು, ಇವುಗಳ ಬಗ್ಗೆ ಕೂಲಂಕಷ ಚರ್ಚೆ ನಡೆಯಿತು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ನರೇಂದ್ರ ಸಿಂಗ್ ತೋಮರ್, ಸ್ಮೃತಿ ಇರಾನಿ, ಪ್ರಲ್ಹಾದ ಜೋಶಿ, ಕಿರಣ್ ರಿಜಿಜು ಮೊದಲಾದವರು ಸಭೆಯಲ್ಲಿ ಹಾಜರಿದ್ದರು.

ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ ಮತ್ತು ಗೋವಾ ವಿಧಾನಸಭೆಗಳ ಅವಧಿ ಬರುವ ವರ್ಷ ಮುಕ್ತಾಯವಾಗಲಿದೆ. ಪಂಜಾಬ್ ಹೊರತುಪಡಿಸಿದರೆ, ಚುನಾವಣೆ ನಡೆಲಿರುವ ಉಳಿದ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ.

ಅತಿದೊಡ್ಡ ಪ್ರತಿಪಕ್ಷಗಳ ಮೈತ್ರಿಕೂಟ ರಚನೆಯ ಯತ್ನಗಳು ನಡೆಯುತ್ತಿರುವಾಗ, ಬಿಜೆಪಿಯ ಪ್ರಮುಖ ನಾಯಕರು ನಡೆಸಿರುವ ಈ ಸಭೆ ಮಹತ್ವ ಪಡೆದುಕೊಂಡಿದೆ. ವಿವಿಧ ರಾಜ್ಯಗಳಲ್ಲಿ ಸಂಘಟನೆಯ ಜವಾಬ್ದಾರಿ ಹೊತ್ತಿರುವ ಹಲವರು ಸಭೆಯಲ್ಲಿ ಭಾಗಿಯಾಗಿದ್ದರು. ಚುನಾವಣೆ ನಡೆಯುವ ರಾಜ್ಯಗಳಲ್ಲಿ ಭಿನ್ನಮತೀಯರ ಮನವೊಲಿಸುವುದು ಹಾಗೂ ಮೈತ್ರಿಕೂಟಕ್ಕೆ ಸ್ಥಳೀಯ ಪಕ್ಷಗಳನ್ನು ಸೇರಿಸಿಕೊಳ್ಳುವ ಬಗ್ಗೆ ಈ ಸಭೆಗಳಲ್ಲಿ ಚರ್ಚೆ ನಡೆದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರಕ್ಕೆ ಬರುವಲ್ಲಿ ಉತ್ತರ ಪ್ರದೇಶದ ಪಾತ್ರ ದೊಡ್ಡದು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೋವಿಡ್ ನಿರ್ವಹಿಸಿದ ಬಗ್ಗೆ ಪ್ರಶ್ನೆಗಳಿವೆ. ಬಿಜೆಪಿಯ ಹಿಂದಿನ ಮಿತ್ರಪಕ್ಷ ಶಿರೋಮಣಿ ಅಕಾಲಿ ದಳವು ಈ ಬಾರಿ ಪಂಜಾಬ್‌ನಲ್ಲಿ ಬಿಎಸ್‌ಪಿ ಜತೆ ಒಪ್ಪಂದ ಮಾಡಿಕೊಂಡಿದೆ. ಕಾಂಗ್ರೆಸ್ ರಾಜ್ಯ ಘಟಕವು ಆಂತರಿಕ ಭಿನ್ನಾಭಿಪ್ರಾಯದಿಂದ ನಲುಗಿದೆ. ಉತ್ತರ ಪ್ರದೇಶವು ಬಿಜೆಪಿಗೆ ರಾಜಕೀಯ ದೃಷ್ಟಿಯಿಂದ ನಿರ್ಣಾಯಕವಾಗಿದೆ.

ನೂತನ ಅಧ್ಯಕ್ಷರ ನೇಮಕ

ಬಿಜೆಪಿ ಎರಡನೇ ಬಾರಿಗೆ ಗದ್ದುಗೆ ಹಿಡಿದಿರುವ ಅಸ್ಸಾಂ ಹಾಗೂ ಚುನಾವಣೆ ನಡೆಯಲಿರುವ ಮಣಿಪುರ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಘೋಷಿಸಲಾಗಿದೆ. ಭಬೇಶ್ ಕಲಿತಾ ಅವರು ಅಸ್ಸಾಂ ಹಾಗೂ ಶಾರದಾ ದೇವಿ ಅವರು ಮಣಿಪುರ ಬಿಜೆಪಿ ರಾಜ್ಯ ಘಟಕಗಳ ಹೊಸ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

ಒಡಿಶಾ: ದಾನ ಮಜ್ಹಿ ಪುತ್ರಿ ಚಾಂದಿನಿ ಉತ್ತಮ ಶ್ರೇಣಿಯಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ

ಭುವನೇಶ್ವರ: ಅನಾರೋಗ್ಯ ಪೀಡಿತ ಪತ್ನಿಯನ್ನು ಹೆಗಲ ಮೇಲೆ ಹೊತ್ತುಕೊಂಡು 10 ಕಿ.ಮೀ. ದೂರ ನಡೆದು ದೇಶದಾದ್ಯಂತ ಸುದ್ದಿಯಾಗಿದ್ದ ಒಡಿಶಾದ ದಾನ ಮಜ್ಹಿ ಅವರ ಪುತ್ರಿ ಚಾಂದಿನಿ ಮಜ್ಹಿ ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ.

ಬುಡಕಟ್ಟು ಜನಾಂಗದ ದಾನ ಮಜ್ಹಿ, ಪತ್ನಿಯನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ಸ್ ನಿರಾಕರಿಸಿದಾಗ ತಾನೇ ಪತ್ನಿಯನ್ನು ಹೆಗಲ ಮೇಲೆ ಹೊತ್ತುಕೊಂಡು 10 ಕಿ.ಮೀ.ದೂರ ನಡೆದಿದ್ದರು. ಈ ಸುದ್ದಿ ದೇಶದ ಗಮನ ಸೆಳೆದಿತ್ತು. ಬಳಿಕ ದಾನ ಮಜ್ಹಿ ಅವರ ಮೂವರು ಹೆಣ್ಣು ಮಕ್ಕಳಿಗೆ ಶಿಕ್ಷಣ ಒದಗಿಸಲು ಕಳಿಂಗ ಸಮಾಜ ವಿಜ್ಞಾನಗಳ ಸಂಸ್ಥೆ 'ಕೆಐಎಸ್‌ಎಸ್' ಮುಂದೆ ಬಂದಿತ್ತು.

ಮಜ್ಹಿ ಪುತ್ರಿಯರಾದ ಚಾಂದಿನಿ, ಸೋನಿ ಮತ್ತು ಪ್ರಮೀಳಾ ಅವರಿಗೆ ಕಳಿಂಗ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಲು ಪ್ರವೇಶ ಕಲ್ಪಿಸಲಾಗಿತ್ತು. ಇದೀಗ ಚಾಂದಿನಿ ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ ಎಂದು ಕಳಿಂಗ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ.

ದಾನ ಮಜ್ಹಿ ಅವರು ಒಡಿಶಾ ರಾಜ್ಯದ ಕಾಳಹಂಡಿ ಜಿಲ್ಲೆಯ ಮಾಲೇಗಾರ್ ಗ್ರಾಮದ ಬುಡಕಟ್ಟು ಜನಾಂಗದವರು. ಆ ಘಟನೆಯ ಬಳಿಕ ಈ ಗ್ರಾಮದಲ್ಲಿ ಶಾಲೆಯನ್ನು ಆರಂಭಿಸಲಾಗಿದೆ.

'ಆಮ್ಲಜನಕದ ಅಗತ್ಯತೆ ದಿನದಿಂದ ದಿನಕ್ಕೆ ಬದಲಾಗುತ್ತದೆ'

ನವದೆಹಲಿ (ಪಿಟಿಐ): 'ಆಮ್ಲಜನಕಕ್ಕೆ ಬೇಡಿಕೆ ದಿನದಿಂದ ದಿನಕ್ಕೆ ಬದಲಾಗುತ್ತದೆ. ಈ ವಿಷಯವಾಗಿ ಮಧ್ಯಂತರ ವರದಿಯನ್ನು ನೀಡಲಾಗಿದೆಯಷ್ಟೆ' ಎಂದು ಏಐಐಎಂಎಸ್‌ನ ನಿರ್ದೇಶಕ ಡಾ.ರಣದೀಪ್ ಗುಲೇರಿಯಾ ಶನಿವಾರ ಹೇಳಿದ್ದಾರೆ.

'ಸದ್ಯ ಸಲ್ಲಿಕೆಯಾಗಿರುವುದು ದೆಹಲಿಯ ಆಮ್ಲಜನಕ ಲೆಕ್ಕಪರಿಶೋಧನೆಯ ಮಧ್ಯಂತರ ವರದಿಯಾಗಿದೆ, ಅಂತಿಮ ವರದಿಗಾಗಿ ನಾವು ಕಾಯಬೇಕು' ಎಂದೂ ಅವರು ಹೇಳಿದ್ದಾರೆ.

ಡಾ.ಗುಲೇರಿಯಾ ಅವರು ಆಮ್ಲಜನಕ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಿಸಿದ ಪರಿಶೋಧನಾ ಸಮಿತಿಯ ಮುಖ್ಯಸ್ಥರೂ ಆಗಿದ್ದಾರೆ. ಈ ಸಮಿತಿಯಲ್ಲಿ ಐವರು ಸದಸ್ಯರಿದ್ದಾರೆ.

ಸಮಿತಿಯು ಸಲ್ಲಿಸಿದ್ದ ವರದಿಯನ್ನು ಉಲ್ಲೇಖಿಸಿ, 'ದೆಹಲಿ ಸರ್ಕಾರವು ಆಮ್ಲಜನಕದ ಅಗತ್ಯವನ್ನು 'ಉತ್ಪ್ರೇಕ್ಷಿಸಿದೆ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಶುಕ್ರವಾರ ದೂರಿದ್ದರು. ಇದು 'ಕ್ರಿಮಿನಲ್ ನಿರ್ಲಕ್ಷ್ಯ' ಎಂದು ಎಎಪಿ ಸರ್ಕಾರದ ವಿರುದ್ಧ ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ನಾನು ಮಾಡಿದ 'ಏಕೈಕ ಅಪರಾಧ'ಎಂದರೆ 'ಎರಡು ಕೋಟಿ ಜನರ ಉಸಿರಾಟಕ್ಕಾಗಿ ಹೋರಾಡಿದ್ದು' ಎಂದು ತಿರುಗೇಟು ನೀಡಿದ್ದರು.

ಆಮ್ಲಜನಕ ಬಳಕೆ ಮತ್ತು ಬೇಡಿಕೆಗೆ ಸಂಬಂಧಿಸಿ ಸಮಿತಿ ನೀಡಿದ್ದ ವರದಿಯಲ್ಲಿ ಅಂಶಗಳು ವಿವಾದಕ್ಕೆ ಕಾರಣವಾಗಿದ್ದವು. ಹೀಗಾಗಿ, ಡಾ.ಗುಲೇರಿಯಾ ಅವರು ನೀಡಿರುವ ಹೇಳಿಕೆಗೆ ಮಹತ್ವದ ಬಂದಿದೆ.

ದೆಹಲಿ ಸರ್ಕಾರವು 'ತಪ್ಪು ಸೂತ್ರ'ವನ್ನು ಬಳಸಿಕೊಂಡು ಏಪ್ರಿಲ್ 30 ರಂದು 700 ಟನ್ ಆಮ್ಲಜನಕವನ್ನು ಹಂಚಿಕೆ ಮಾಡಲು ಕೇಳಿದೆ ಎಂದು ಗುಲೇರಿಯಾ ನೇತೃತ್ವದ ಸಮಿತಿಯ ವರದಿಯಲ್ಲಿ ಉಲ್ಲೇಖಿಸಿದೆ ಎಂದು ಸಂಬಿತ್ ಪಾತ್ರಾ ಹೇಳಿದ್ದರು.

ಪ್ರತಿಭಟನೆ ವೇಳೆ ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಹೇಳಿಕೆ

'ಮೀಸಲಾತಿ ನೀಡಲು ವಿಫಲವಾದರೆ ರಾಜಕೀಯ ನಿವೃತ್ತಿ'

ನಾಗಪುರ (ಪಿಟಿಐ): 'ಬಿಜೆಪಿ ಅಧಿಕಾರಕ್ಕೆ ಬಂದರೆ, ಇತರೆ ಹಿಂದುಳಿದ ವರ್ಗದವರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತೆ ಮೀಸಲಾತಿಯನ್ನು ನೀಡುವುದು. ಒಂದು ವೇಳೆ ಈ ದಿಸೆಯಲ್ಲಿ ಪಕ್ಷವು ವಿಫಲವಾದರೆ ನಾನು ರಾಜಕೀಯದಿಂದ ನಿವೃತ್ತಿಯಾಗುವೆ' ಎಂದು ಬಿಜೆಪಿಯ ಹಿರಿಯ ಮುಖಂಡ ದೇವೇಂದ್ರ ಫಡಣವೀಸ್ ಶನಿವಾರ ಹೇಳಿದರು.

ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ನೀಡುವಂತೆ ಒತ್ತಾಯಿಸಿ ಇಲ್ಲಿನ ವೆರೈಟಿ ಸ್ಕ್ವೇರ್ ಚೌಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ರಾಜ್ಯದ ಹಲವೆಡೆ ಪಕ್ಷದ ವತಿಯಿಂದ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಪೊಲೀಸರು ಫಡಣವೀಸ್ ಹಾಗೂ ಇತರ ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

'ಮೀಸಲಾತಿ ವಿಷಯವನ್ನು ಸಂಸತ್‌ನಲ್ಲಿ ಪ್ರಸ್ತಾಪಿಸುವುದಾಗಿ ಭರವಸೆ ನೀಡುವ ಮೂಲಕ ಮಹಾ ವಿಕಾಸ್ ಆಘಾಡಿ (ಎಂವಿಎ) ಸರ್ಕಾರ ಜನರ ದಾರಿ ತಪ್ಪಿಸುತ್ತಿದೆ' ಎಂದು ಅವರು ಟೀಕಿಸಿದರು.


ಇತರೆ ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ನಾಗಪುರದಲ್ಲಿ ಶನಿವಾರ ನಡೆದ ಪ್ರತಿಭಟನೆ ವೇಳೆ ಪೊಲೀಸರು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಹಾಗೂ ಇತರರನ್ನು ವಶಕ್ಕೆ ಪಡೆದರು —ಪಿಟಿಐ ಚಿತ್ರ

'ಮೀಸಲಾತಿ ಮರುಸ್ಥಾಪನೆ ವಿಷಯವನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿಯೇ ಬಗೆಹರಿಸಬಹುದು. ಹೊಸ ಕಾಯ್ದೆಯನ್ನು ತರುವ ಮೂಲಕ ಇದು ಸಾಧ್ಯವಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವ ಅಗತ್ಯವೇ ಇಲ್ಲ. ಹೀಗಾಗಿಯೇ ಮಹಾರಾಷ್ಟ್ರ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ಇದೆ' ಎಂದು ಹೇಳಿದರು.

'ಮಹಾ ವಿಕಾಸ್ ಆಘಾಡಿ ಸರ್ಕಾರ ಈ ವಿಷಯವಾಗಿ ನೂತನ ಕಾಯ್ದೆಯನ್ನು ಜಾರಿಗೊಳಿಸಲೇಬೇಕು. ಈ ಸರ್ಕಾರದ ಮುಖವಾಡ ಕಳಚುವವರೆಗೆ ಈ ಹೋರಾಟವನ್ನು ಮುಂದುವರಿಸುತ್ತೇವೆ' ಎಂದು ಹೇಳಿದರು.

ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಹಿಂದಿನ ಸರ್ಕಾರ ಮೀಸಲಾತಿ ನೀಡಿತ್ತು. ಇದನ್ನು ಪ್ರಶ್ನಿಸಿ ಕೆಲವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ಮಾರ್ಚ್ 4ರಂದು ತೀರ್ಪು ನೀಡಿದ ಸುಪ್ರೀಂಕೋರ್ಟ್, 'ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಒಬಿಸಿಗಳಿಗೆ ನೀಡುವ ಮೀಸಲಾತಿ, ಒಟ್ಟು ಸ್ಥಾನಗಳ ಶೇ 50ರಷ್ಟನ್ನು ಮೀರಬಾರದು' ಎಂದು ಆದೇಶಿಸಿತ್ತು.

ಜೂ. 29ರೊಳಗೆ ವಿಚಾರಣೆಗೆ ಹಾಜರಾಗಲು ಇ.ಡಿ ಸಮನ್ಸ್

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಜೂನ್ 29ರೊಳಗೆ ವಿಚಾರಣೆಗೆ ಹಾಜರಾಗುವಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಸೂಚಿಸಿದೆ.

ಇಲ್ಲಿನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ಇ.ಡಿ ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ವಿಚಾರಣೆಗೆ ಹಾಜರಾಗುವಂತೆ ದೇಶಮುಖ್ ಅವರಿಗೆ ಸೂಚಿಸಲಾಗಿತ್ತು. ಅವರು ವಿಚಾರಣೆಗೆ ಹಾಜರಾಗಲಿಲ್ಲ.

ಇ.ಡಿ ಕಚೇರಿಗೆ ಬಂದ ದೇಶಮುಖ್ ಪರ ವಕೀಲರ ತಂಡ, ವಿಚಾರಣೆಗೆ ಹಾಜರಾಗುವ ಸಂಬಂಧ ಹೊಸ ದಿನಾಂಕ ನಿಗದಿ ಮಾಡುವಂತೆ ಅರ್ಜಿ ಸಲ್ಲಿಸಿದ್ದರು.


ಅನಿಲ್ ದೇಶಮುಖ್

'₹ 4ಕೋಟಿಗೂ ಅಧಿಕ ಹಣ ಪಡೆದಿದ್ದರು': 'ಮುಂಬೈನಲ್ಲಿರುವ ಬಾರ್‌ಗಳ ಮಾಲೀಕರಿಂದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರು ₹ 4 ಕೋಟಿಗೂ ಅಧಿಕ ಹಣ ಪಡೆದಿದ್ದರು. ಈ ಹಣವನ್ನು ನಕಲಿ ಕಂಪನಿಗಳ ಮೂಲಕ ತಮ್ಮ ಒಡೆತನದ ಟ್ರಸ್ಟ್‌ಗಳಿಗೆ ದೇಣಿಗೆಯಾಗಿ ಪಡೆದಿದ್ದರು' ಎಂದು ಜಾರಿ ನಿರ್ದೇಶನಾಲಯ ಅಧಿಕಾರಿಗಳು ಇಲ್ಲಿನ ಕೋರ್ಟ್‌ಗೆ ಶನಿವಾರ ಮಾಹಿತಿ ನೀಡಿದರು.

ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ, ದೇಶಮುಖ್ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಪಲಾಂಡೆ ಮತ್ತು ಆಪ್ತ ಸಹಾಯಕ ಕುಂದನ್ ಶಿಂಧೆ ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದ ವೇಳೆ ನಡೆದ ವಿಚಾರಣೆ ಸಂದರ್ಭದಲ್ಲಿ, ಇ.ಡಿ ಅಧಿಕಾರಿಗಳು ಕೋರ್ಟ್‌ಗೆ ಈ ಮಾಹಿತಿ ನೀಡಿದರು.

ಡೆಲ್ಟಾ : ಆರೋಗ್ಯ ಕಾರ್ಯಕರ್ತರಲ್ಲಿ 'ಬ್ರೇಕ್ ಥ್ರೂ' ಸೋಂಕು ಅಪಾಯ ಅಧಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಸಿಕೆ ಹಾಕಿಸಿಕೊಂಡಿರುವ ಆರೋಗ್ಯ ಕಾರ್ಯಕರ್ತರ ಪೈಕಿ, ಕೊರೊನಾ ವೈರಸ್‌ನ ಡೆಲ್ಟಾ ಪ್ಲಸ್ ತಳಿ ಸೋಂಕು ಕಾಣಿಸಿಕೊಂಡವರಲ್ಲಿ (ಬ್ರೇಕ್ ಥ್ರೂ ಇನ್‌ಫೆಕ್ಷನ್) ಉಸಿರಾಟಕ್ಕೆ ಸಂಬಂಧಪಟ್ಟಂತೆ ಹೆಚ್ಚು ತೊಂದರೆಗಳು ಕಾಣಿಸಿಕೊಂಡಿವೆ.

ಭಾರತ ಮತ್ತು ಬ್ರಿಟನ್‌ನ ಸಂಶೋಧಕರನ್ನು ಒಳಗೊಂಡ ತಂಡವು, ದೆಹಲಿಯ ಮೂರು ಆಸ್ಪತ್ರೆಗಳ ಒಟ್ಟು 100 ಜನ ಆರೋಗ್ಯ ಕಾರ್ಯಕರ್ತರನ್ನು ಅಧ್ಯಯನಕ್ಕೆ ಒಳಪಡಿಸಿದಾಗ, ಈ ಅಂಶ ಗೊತ್ತಾಗಿದೆ.

ಕೋವಿಡ್ ಲಸಿಕೆಯ 2ನೇ ಡೋಸ್ ಹಾಕಿಸಿಕೊಂಡ 14 ದಿನಗಳ ನಂತರ ಕಂಡು ಬರುವ ಸೋಂಕನ್ನು 'ಬ್ರೇಕ್ ಥ್ರೂ' ಸೋಂಕು ಎಂದು ಕರೆಯುತ್ತಾರೆ. ಡೆಲ್ಟಾ ತಳಿಯಿಂದಾಗಿ ಬ್ರೇಕ್ ಥ್ರೂ ಸೋಂಕು ಕಾಣಿಸಿಕೊಂಡವರಲ್ಲಿ ಉಸಿರಾಟಕ್ಕೆ ಸಂಬಂಧಿಸಿದ ತೊಂದರೆಗಳು ಅಧಿಕವಾಗಿರಲಿದೆ ಎಂದು ಸಂಶೋಧಕರು ಎಚ್ಚರಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ರಾಷ್ಟ್ರಪತಿ ರಾಮನಾಥ ಕೋವಿಂದ್ ಭೇಟಿ ವೇಳೆ ಸಂಚಾರ ಸ್ಥಗಿತ

ವಾಹನ ದಟ್ಟಣೆಯಲ್ಲಿ ಸಿಲುಕಿ ಮಹಿಳಾ ಉದ್ಯಮಿ ಸಾವು

ಪ್ರಜಾವಾಣಿ ವಾರ್ತೆ

ಲಖನೌ: ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಕಾನ್ಪುರ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ವಾಹನ ಸಂಚಾರ ತಡೆಹಿಡಿಯಲಾಗಿತ್ತು. ಈ ಸಂದರ್ಭದಲ್ಲಿ ವಾಹನ ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದ ವಾಹನದಲ್ಲಿದ್ದ, ಕೋವಿಡ್-19 ಸೋಂಕಿನ ನಂತರದ ಸಮಸ್ಯೆಗಳಿಂದ ಬಳಲುತ್ತಿದ್ದ ಮಹಿಳಾ ಉದ್ಯಮಿಯೊಬ್ಬರು ಮೃತಪಟ್ಟಿದ್ದಾರೆ.

ಭಾರತೀಯ ಕೈಗಾರಿಕಾ ಸಂಘದ (ಐಐಎ) ಮಹಿಳಾ ವಿಭಾಗದ ಪದಾಧಿಕಾರಿಯಾಗಿದ್ದ ವಂದನಾ ಮಿಶ್ರಾ ಎಂಬುವ ಮಹಿಳೆಯೇ ಮೃತಪಟ್ಟವರು. ವಂದನಾ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಅವರು ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದ್ದಾರೆ.

ಕೋವಿಡ್‌ನಿಂದ ಇತ್ತೀಚೆಗೆ ಚೇತರಿಸಿಕೊಂಡಿದ್ದ ವಂದನಾ ಮಿಶ್ರಾ ಅವರು ಶುಕ್ರವಾರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಕುಟುಂಬದವರು ಅವರನ್ನು ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ನಗರದ ಮೇಲುಸೇತುವೆಯಲ್ಲಿ ರಾಷ್ಟ್ರಪತಿಗಳಿದ್ದ ವಿಶೇಷ ರೈಲು ತೆರಳುತ್ತಿತ್ತು. ಆಗ ಗೋವಿಂದ್ ನಗರದ ಸಮೀಪ ವಾಹನ ಸಂಚಾರ ತಡೆಯಲಾಗಿತ್ತು. ಇಲ್ಲಿಯೇ ಮಹಿಳೆಯ ಕಾರು ವಾಹನ ದಟ್ಟಣೆಯಲ್ಲಿ ಸಿಲುಕಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.


ಉತ್ತರ ಪ್ರದೇಶದಲ್ಲಿನ ಹುಟ್ಟೂರಿಗೆ ತೆರಳಲು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ದೆಹಲಿಯ ಸಫ್ದರ್‌ಜಂಗ್ ರೈಲು ನಿಲ್ದಾಣದಲ್ಲಿ ವಿಶೇಷ ರೈಲು ಹತ್ತಿದರು

'ಆಸ್ಪತ್ರೆಗೆ ಹೋಗಬೇಕಾಗಿರುವುದರಿಂದ ವಾಹನ ಸಂಚರಿಸಲು ಅವಕಾಶ ನೀಡಬೇಕು ಎಂದು ಪೊಲೀಸರನ್ನು ಕೋರಿದೆವು. ಆದರೆ, ಭದ್ರತಾ ಕಾರಣ ನೀಡಿ ಅನುಮತಿ ನಿರಾಕರಿಸಲಾಯಿತು' ಎಂದು ವಂದನಾ ಅವರ ಕುಟುಂಬದವರು ತಿಳಿಸಿದ್ದಾರೆ.

ಕ್ಷಮೆ ಕೇಳಿದ ಪೊಲೀಸ್ ಆಯುಕ್ತ: ಕಾನ್ಪುರ ಪೊಲೀಸ್ ಆಯುಕ್ತ ಅಸೀಮ್ ಅರುಣ್ ಅವರು ಶನಿವಾರ ಸಂತ್ರಸ್ತೆಯ ಮನೆಗೆ ಭೇಟಿ ನೀಡಿ ಕುಟುಂಬದವರ ಕ್ಷಮೆಯಾಚಿಸಿದ್ದಾರೆ. 'ಇದೊಂದು ದುರದೃಷ್ಟಕರ ಘಟನೆ. ಇದು ನಡೆಯಬಾರದಿತ್ತು. ಇಂಥ ಘಟನೆ ಮರುಕಳಿಸದಂತೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದ್ದಾರೆ.

ರೈಲಿನಲ್ಲಿ ಪ್ರಯಾಣಿಸಿದ ರಾಷ್ಟ್ರಪತಿ

ನವದೆಹಲಿ (ಪಿಟಿಐ): ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು 15 ವರ್ಷದ ನಂತರ ಇದೇ ಪ್ರಥಮ ಬಾರಿಗೆ ಐಷಾರಾಮಿ ಕಾರು ಬದಿಗೊತ್ತಿ ರೈಲಿನಲ್ಲಿ ತಮ್ಮ ಹುಟ್ಟೂರಿಗೆ ಪ್ರಯಾಣಿಸಿದರು.

ಇದು, ರೈಲಿನ ಚಾಲಕ ಸೇರಿ ಸಂಚಾರಕ್ಕೆ ನೆರವಾದ ಸಿಬ್ಬಂದಿಗೆ ಜೀವಿತಾವಧಿಯ ಅವಿಸ್ಮರಣೀಯ ನೆನಪಾಗಿ ದಾಖಲಾಯಿತು. ಅಲ್ಲದೆ, ಕೋವಿಂದ್ ಅವರು ರಾಷ್ಟ್ರಪತಿಗಳ ನಿಯೋಜಿತ ಕಾರಿಗೆ ಬದಲು ರೈಲಿನಲ್ಲಿ ಪ್ರಯಾಣಿಸಿದ ಮೊದಲ ರಾಷ್ಟ್ರಪತಿ ಎಂಬ ಹಿರಿಮೆಗೂ ಪಾತ್ರರಾದರು.

ಅವರು ದೆಹಲಿಯ ಸಫ್ದರ್‌ಜಂಗ್ ನಿಲ್ದಾಣದಿಂದ ತಮ್ಮ ಹುಟ್ಟೂರು, ಉತ್ತರ ಪ್ರದೇಶದ ಕಾನ್ಪುರ್ ದೆಹತ್ ಜಿಲ್ಲೆಯ ಪಾರುಂಖ್‌ಗೆ ಮಹಾರಾಜ ಎಕ್ಸ್‌ಪ್ರೆಸ್ ರೈಲಿನ ವಿಲಾಸಿ ಬೋಗಿಯಲ್ಲಿ ಪ್ರಯಾಣಿಸಿದರು. ಇದಕ್ಕೆ ರೈಲ್ವೆ ಪ್ರಯಾಗ್‌ರಾಜ್ ವಿಭಾಗದ ಜಿನ್‌ಜಾಕ್, ರೂರಾ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಾಗಿತ್ತು.

'ರಾಷ್ಟ್ರಪತಿ ಪ್ರಯಾಣಿಸಿದ ರೈಲು ಚಾಲನೆ ಮಾಡುವುದು ಜೀವಿತಾವಧಿಯಲ್ಲಿ ನನಗೆ ದೊರೆತ ಅವಕಾಶ' ಎಂದು ಚಾಲಕ ಅಕ್ಷಯ್ ದೀಪ್ ಚೌಹಾಣ್ ಹೇಳಿದರೆ, 'ಈ ಕ್ರಮವು ಹೆಚ್ಚಿನ ಜನರು ರೈಲಿನಲ್ಲಿ ಪ್ರಯಾಣಿಸಲು ಪ್ರೇರೇಪಣೆ ಆಗಲಿದೆ' ಎಂದು ಸಹ ಚಾಲಕ ಸಂಜಯ್ ಕುಮಾರ್ ಸಿಂಗ್ ಹೇಳಿದರು.

ಈ ಹಿಂದೆ ರಾಷ್ಟ್ರಪತಿಯಾಗಿದ್ದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ 2006ರಲ್ಲಿ ವಿಶೇಷ ರೈಲಿನಲ್ಲಿ ದೆಹಲಿಯಿಂದ ಡೆಹ್ರಾಡೂನ್‌ಗೆ ಪ್ರಯಾಣಿಸಿ, ಭಾರತೀಯ ಸೇನಾ ಅಕಾಡೆಮಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಪ್ರಥಮ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ನಿಯಮಿತವಾಗಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.

ರಾಷ್ಟ್ರಪತಿಗಳ ಪ್ರಯಾಣಕ್ಕಾಗಿ ರೈಲ್ವೆ ಇಲಾಖೆ ಸ್ಥಳೀಯ ಜಿಲ್ಲಾಡಳಿತದ ಸಹಯೋಗದಲ್ಲಿ ಸುರಕ್ಷತೆ ದೃಷ್ಟಿಯಿಂದ ಅಗತ್ಯ ಸಿದ್ಧತೆಯನ್ನು ಮಾಡಿಕೊಂಡಿತ್ತು.

ದಾದ್ರಿ ನಿಲ್ದಾಣದಲ್ಲಿ ಟ್ರಾಲಿಮ್ಯಾನ್ ಆಗಿ ಕಾರ್ಯನಿರ್ವಹಿಸಿದ ವಿನೋದ್, ರೈಲು ಸಂಚರಿಸುವ ಮಾರ್ಗದಲ್ಲಿ ಲೆವೆಲ್ ಕ್ರಾಸಿಂಗ್ ಬಳಿ ಕರ್ತವ್ಯದಲ್ಲಿ ಭಾಗಿಯಾಗಿದ್ದ ವಿವೇಕ್ ಕುಮಾರ್ ಅವರೂ, ಇದೊಂದು ಅಪರೂಪದ ಸಂದರ್ಭ ಎಂದು ಪ್ರತಿಕ್ರಿಯಿಸಿದರು.

ಸಫ್ದರ್‌ಜಂಗ್ ನಿಲ್ದಾಣದಲ್ಲಿ ರೈಲ್ವೆ ಸಚಿವ ಪೀಯೂಷ್ ಗೋಯಲ್ ಅವರು ರಾಷ್ಟ್ರಪತಿ ಕೋವಿಂದ್ ಅವರಿಗೆ ಬೀಳ್ಕೊಟ್ಟರು.

ಖಾಸಗಿ ಸಾಲ ಎಂಬ 'ಪ್ರೀತಿಯ ಶೂಲ'

● ಗಣೇಶ ಚಂದನಶಿವ



ಕಲಬುರ್ಗಿ: ಸಾಲಕ್ಕಾಗಿ ಬ್ಯಾಂಕ್‌ಗಳಿಗೆ ಅಲೆಯಲು ಆಗದ ರೈತರು, ಸಿಕ್ಕ ಬೆಳೆಸಾಲ ಕಡಿಮೆ ಎಂಬ ಕಾರಣಕ್ಕೆ ತುರ್ತು ಅಗತ್ಯಗಳಿಗಾಗಿ ಖಾಸಗಿ ಸಾಲಗಾರರ ಮೊರೆಹೋಗುವುದು ತಪ್ಪಿಲ್ಲ. ಬಹುಪಾಲು ರೈತರಿಗೆ ಸಾಲ ಕೊಡುವವರು ಅವರ ಕೃಷಿ ಉತ್ಪನ್ನ ಖರೀದಿಸುವ ದಲ್ಲಾಳಿಗಳೇ.

ಬೀಜ–ಗೊಬ್ಬರ ಖರೀದಿ ಇರಲಿ, ಮನೆಯಲ್ಲಿ ಯಾವುದೇ ಸಮಾರಂಭ ಇರಲಿ ರೈತರು ಸಾಲ ತರುವುದು ಅವರ ಬಳಿಯೇ. ಆದರೆ, ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಅವರ ಬಳಿ ಮಾರಾಟ ಮಾಡಬೇಕು ಎಂಬುದು ಅಲಿಖಿತ ಒಪ್ಪಂದ. ಉತ್ಪನ್ನ ಮಾರಾಟ ಮಾಡಿದ ನಂತರ, ಮುಂಗಡ ಹಣ ಮತ್ತು ಅದರ ಮೇಲಿನ ಬಡ್ಡಿ ಕಡಿತಗೊಳಿಸಿಕೊಂಡು ಉಳಿದ ಹಣವನ್ನು ರೈತರಿಗೆ ನೀಡಲಾಗುತ್ತದೆ.

ಬೀದರ್, ಹಾಸನ, ಬೆಳಗಾವಿ, ಕಲಬುರ್ಗಿ, ರಾಯಚೂರು ಎಲ್ಲೆಡೆಯೂ ಇದೇ ಪದ್ಧತಿ ಇದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮನೆ ಬಳಿ ಬರುವ ಮಧ್ಯವರ್ತಿಗಳಿಗೆ ಕೃಷಿ ಉತ್ಪನ್ನ ಮಾರಾಟ ಮಾಡುವುದೇ ಹೆಚ್ಚು. ರೈತರಿಗೆ ನೀಡುವ 'ಸರವಿಗೆ' ಇಲ್ಲಿ ತಿಂಗಳಿಗೆ ಶೇ 1.5 ಬಡ್ಡಿ ವಿಧಿಸಲಾಗುತ್ತದೆ.

'ಇನ್ನು ಕೆಲವೆಡೆ ಬೆಳೆ ನೋಡಿ ಸಾಲ ನೀಡುವ ಪದ್ಧತಿಯೂ ಜಾರಿಯಲ್ಲಿದೆ. ಇಲ್ಲಿ ಹೇಗೆ ವಂಚನೆ ನಡೆಯುತ್ತದೆ ಎಂಬುದನ್ನು ಹಾಸನ ತಾಲ್ಲೂಕಿನ ಬಿಟ್ಟಗೌಡನಹಳ್ಳಿಯ ರೈತ ದೊಡ್ಡಯ್ಯ ಅವರು ವಿವರಿಸುವುದು ಹೀಗೆ: 'ನಮ್ಮ ಹೊಲಕ್ಕೆ ಬಂದು ಬೆಳೆ ನೋಡಿದ ನಂತರವೇ ವರ್ತಕ ಸಾಲ ಕೊಡುತ್ತಾನೆ. ಉದಾಹರಣೆಗೆ ವರ್ತಕ ₹50 ಸಾವಿರ ಬಡ್ಡಿ ರಹಿತ ಸಾಲ ನೀಡಿ, ಫಸಲು ಬಂದಾಗ ಮಾರುಕಟ್ಟೆ ದರಕ್ಕೆ ಖರೀದಿಸುತ್ತಿರುವುದಾಗಿ ಹೇಳುತ್ತಾನೆ. ಆದರೆ, ಫಸಲನ್ನು ಕ್ವಿಂಟಲ್‌ಗೆ ₹100ರಿಂದ ₹200 ಕಡಿಮೆ ಬೆಲೆಗೆ ಖರೀದಿಸಿ, ಪರೋಕ್ಷವಾಗಿ ಬಡ್ಡಿ ಕಡಿತ ಮಾಡಿಕೊಳ್ಳುತ್ತಾನೆ. ರೈತರು ತಮಗೆ ಅರಿವಿಲ್ಲದಂತೆ ವಂಚನೆಗೆ ಒಳಗಾಗುತ್ತಾರೆ'.

ನಮ್ಮ ಎರಡೂವರೆ ಎಕರೆ ಜಮೀನಿಗೆ ಶೂನ್ಯ ಬಡ್ಡಿದರದಲ್ಲಿ ಸಹಕಾರ ಬ್ಯಾಂಕಿನಲ್ಲಿ ಸಿಕ್ಕ ಸಾಲ ₹34 ಸಾವಿರ ಮಾತ್ರ. ಇದು ಬೀಜ–ಗೊಬ್ಬರ, ಕೀಟನಾಶಕ ಖರೀದಿಗೂ ಸಾಲುವುದಿಲ್ಲ. ಬ್ಯಾಂಕ್‌ನಿಂದ ನೀಡುವ ಸಾಲದ ಪ್ರಮಾಣ ಹೆಚ್ಚಿಸಿದರೆ ರೈತರು ಖಾಸಗಿ ಸಾಲಕ್ಕೆ ಮೊರೆಹೋಗುವುದು ತಪ್ಪುತ್ತದೆ.

ಶಿವರಾಜ್ ಟಿ., ಆರುಂಡಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ

'ಬಡ್ಡಿ ವ್ಯವಹಾರ ಮಾಡುವ, ಕೃಷಿ ಉತ್ಪನ್ನ ತಮ್ಮಲ್ಲಿಯೇ ಮಾರಾಟ ಮಾಡುವಂತೆ ರೈತರನ್ನು ಹಿಡಿದಿಟ್ಟುಕೊಳ್ಳುವ, ಕಡಿಮೆ ದರಕ್ಕೆ ಖರೀದಿಸಿ ಲಾಭ ಮಾಡಿಕೊಳ್ಳುವ ತಂತ್ರಗಾರಿಕೆಯೂ ಇದರಲ್ಲಿದೆ' ಎಂಬುದು ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕು ಹುಲ್ಲೂರು ಗ್ರಾಮದ ರೈತ ವಿರೂಪಾಕ್ಷಪ್ಪ ಮುದಕಣ್ಣವರ ದೂರು. ಧಾರವಾಡದ ರೈತ ಮುಖಂಡ ಗಂಗಾಧರ ಪಾಟೀಲ ಕುಲಕರ್ಣಿ ಅವರೂ ಇದನ್ನೇ ಹೇಳುತ್ತಾರೆ.

'ರಾತ್ರಿ ಹೋಗಿ ಕೇಳಿದರೂ ತಕ್ಷಣ ಹಣ ಕೊಟ್ಟು ನಮ್ಮ ನೆರವಿಗೆ ಬರುತ್ತಾರೆ' ಎಂದು ಬಹುಪಾಲು ರೈತರು ದಲ್ಲಾಳಿಗಳ ಮೇಲೆ ಪ್ರೀತಿ ತೋರಿಸುವುದೂ ಇದೆ.

ಯಾದಗಿರಿ ಜಿಲ್ಲೆಯ ಸುರಪುರದ ಭಾಗದಲ್ಲಿ ಹೆಚ್ಚಿನ ಸಾಲ ಬೇಕಾದರೆ ರೈತರು ಖಾಸಗಿ ಲೇವಾದೇವಿದಾರರಿಗೆ ತಮ್ಮ ಜಮೀನು ಮಾರಾಟ ಕರಾರು ಪತ್ರ ಬರೆದುಕೊಡಬೇಕು. ಮದುವೆಗಾಗಿ ಸಾಲ ಮಾಡುವವರೇ ಹೆಚ್ಚು. ನಾಲ್ಕು ವರ್ಷಗಳಲ್ಲಿ ಅಸಲು–ಬಡ್ಡಿ ಸೇರಿ ದುಪ್ಪಟ್ಟಾಗಿರುತ್ತದೆ. ಬಿಡಿಸಿಕೊಳ್ಳಲು ಹಣ ಇರುವುದಿಲ್ಲ. ಅನಿವಾರ್ಯವಾಗಿ ಮಾರಾಟ ಮಾಡುತ್ತಾರೆ. ಆ ರೈತ ಅದೇ ಜಮೀನಿನಲ್ಲಿ 'ಆಳಾಗಿ' ದುಡಿಯಬೇಕಾಗುತ್ತದೆ.

ಕೃಷಿಕರಿಗೆ ನೀಡುವ ಸಾಲಗಳು

₹3 ಲಕ್ಷದವರೆಗೆ ಅಲ್ಪಾವಧಿ ಸಾಲ; ಶೂನ್ಯ ಬಡ್ಡಿ

₹10 ಲಕ್ಷದವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ; ಶೇ 3 ಬಡ್ಡಿ

ವರ್ಷ	ಅಲ್ಪಾವಧಿ ಸಾಲ		ಮಧ್ಯಮಾವಧಿ ಸಾಲ		ದೀರ್ಘಾವಧಿ ಸಾಲ		ಒಟ್ಟು ಕೃಷಿ ಸಾಲ (ಕೋಟಿಗಳಲ್ಲಿ)	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
2018–19	19,72,694	₹10,585.97	25,522	₹530.78	16,735	₹2,33.77	20,14,951	₹11,350.52
2019–20	22,14,686	₹12,881.03	27,388	₹589.34	18,451	₹264.10	22,60,525	₹13,734.47
2020–21	25,67,000	₹16,641.00	29,135	₹849.21	22,880	₹411	26,19,015	₹17,901.21



ಬೆಳೆ ವಿಮೆ: ಮಳೆಯಷ್ಟೇ ಅನಿಶ್ಚಿತ

● ಸಂಧ್ಯಾ ಹೆಗಡೆ

ಮಂಗಳೂರು: ಪ್ರಕೃತಿ ವಿಕೋಪದಿಂದ ಸಂಭವಿಸುವ ಕೃಷಿ ಬೆಳೆ ಹಾನಿಯಿಂದ ಕೊಂಚ ಸಾವರಿಸಿಕೊಳ್ಳಲು ರೈತರಿಗೆ ಬೆಳೆ ವಿಮೆ ಯೋಜನೆ ಊರುಗೋಲಾಗಿದೆ. ಆದರೆ, ಗೋಜಲಾಗಿರುವ ಪರಿಹಾರ ಮೊತ್ತ ಪಾವತಿ, ಅದಕ್ಕೆ ಆಗುವ ವಿಳಂಬ, ನಷ್ಟ ಲೆಕ್ಕ ಹಾಕುವ ಮಾನದಂಡದ ಪ್ರಕ್ರಿಯೆಗಳು ರೈತರಲ್ಲಿ ವಿಮೆಯ ಬಗ್ಗೆ ವಿಶ್ವಾಸ ಕಡಿಮೆ ಮಾಡಿವೆ.

ಬೆಳೆವಿಮೆ ಮಾಡಿಸುವ ರೈತರ ಸಂಖ್ಯೆ ಹೆಚ್ಚುತ್ತಿದೆ. ಕಂತು ಪಾವತಿಸುವ ರೈತರಿಗೆ ಬೆಳೆ ನಷ್ಟವಾದರೆ, ವಿಮಾ ಕಂಪನಿಯಿಂದ ಪರಿಹಾರ ದೊರೆಯುತ್ತದೆ.

ಸೀತಾ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ದಕ್ಷಿಣ ಕನ್ನಡ

ಇತ್ತೀಚಿನ ವರ್ಷಗಳಲ್ಲಿ ಬೆಳೆ ವಿಮೆಯೆಡೆಗೆ ಆಸಕ್ತರಾಗಿರುವ ರೈತರ ಸಂಖ್ಯೆ ಹೆಚ್ಚುತ್ತಿದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ 14.88 ಲಕ್ಷ ರೈತರು ಕೃಷಿ ಬೆಳೆಗಳಿಗೆ ವಿಮೆ ಕಂತು ಪಾವತಿಸಿದ್ದರು. ಅವರಲ್ಲಿ ಬೆಳೆ ನಷ್ಟ ಅನುಭವಿಸಿದ 61,310 ರೈತರಿಗೆ ಈವರೆಗೆ ₹ 47.35 ಕೋಟಿ ಮೊತ್ತ ಪಾವತಿಯಾಗಿದೆ.

ವಿಮೆ ಕಂತು ಪಾವತಿ ಹೇಗೆ?:

ಮುಂಗಾರು, ಹಿಂಗಾರು, ಬೇಸಿಗೆ ಹೀಗೆ ಮೂರು ಹಂಗಾಮಿನ ಪ್ರಾದೇಶಿಕ ಕೃಷಿ ಬೆಳೆಗಳಿಗೆ ಬೆಳೆ ವಿಮೆ ಯೋಜನೆ ಲಭ್ಯವಾಗುತ್ತದೆ. ರೈತರು ಶೇ 1.5ರಿಂದ ಗರಿಷ್ಠ ಶೇ 2ರಷ್ಟು ವಿಮೆ ಕಂತು ಪಾವತಿಸಿದರೆ, ಉಳಿದ ಮೊತ್ತವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 50:50ರ ಅನುಪಾತದಲ್ಲಿ ಪಾವತಿಸುತ್ತವೆ. ಬೆಳೆ ಆಧರಿಸಿ, ಈ ವರ್ಷ ಆಗಸ್ಟ್‌ವರೆಗೆ ವಿಮೆ ಮಾಡಿಸಲು ಅವಕಾಶವಿದ್ದು, ಈವರೆಗೆ 60,306 ರೈತರು ನೋಂದಾಯಿಸಿದ್ದಾರೆ.

ರಾಜ್ಯದ 10 ಕ್ಲಸ್ಟರ್‌ಗಳಲ್ಲಿ ಐದು ವಿಮಾ ಕಂಪನಿಗಳು ಬೆಳೆವಿಮೆಯ ಹೊಣೆ ನಿರ್ವಹಿಸುತ್ತಿವೆ. ಕಂಪನಿಯ ಬಿಡ್ ಆಧರಿಸಿ, ವಿಮೆ ಕಂತಿನ ಮೊತ್ತ ಪ್ರಾದೇಶಿಕವಾಗಿ ವ್ಯತ್ಯಾಸ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಪ್ರತಿ ಎಕರೆಗೆ ರೈತರು ₹ 440 ಕಂತು ಪಾವತಿಸಬೇಕು. ಸಂಪೂರ್ಣ ಬೆಳೆ ನಷ್ಟವಾದರೆ, ಅವರಿಗೆ ಗರಿಷ್ಠ ₹ 22 ಸಾವಿರ ಪರಿಹಾರ ಮೊತ್ತ ದೊರೆಯುತ್ತದೆ.

'ಬೆಳೆವಿಮೆಯು ಗ್ರಾಮ ಪಂಚಾಯಿತಿ, ಹೋಬಳಿವಾರು ಬೆಳೆಹಾನಿಯ ಮೇಲೆ ನಿಗದಿಯಾಗುತ್ತದೆ. ಇದರಿಂದ ಬೆಳೆ ನಷ್ಟವಾದ ರೈತರು ಪರಿಹಾರದಿಂದ ವಂಚಿತರಾದ ಅನೇಕ ಸಂದರ್ಭಗಳಿವೆ. ನಷ್ಟ ಅನುಭವಿಸಿದ ನಿರ್ದಿಷ್ಟ ರೈತನ ಹೊಲದಲ್ಲಿ ಹಾನಿ ಸಮೀಕ್ಷೆ ನಡೆಸಿದಾಗ ಮಾತ್ರ ನ್ಯಾಯ ಸಿಗುತ್ತದೆ' ಎಂದು ರೈತ ಮುಖಂಡ ಹುಬ್ಬಳ್ಳಿಯ ವಿಕಾಸ್ ಸೊಪ್ಪಿನ ಹೇಳುತ್ತಾರೆ.

ತೊಡಕುಗಳು ಏನು ?

- ಆಲಿಕಲ್ಲು ಮಳೆಯಂತಹ ಅನಿರೀಕ್ಷಿತ ಹಾನಿಗೆ ಮಾತ್ರ ವೈಯಕ್ತಿಕ ಹಾನಿ ಲೆಕ್ಕ ಹಾಕಿ ಪರಿಹಾರ ಪಡೆಯಲು ಅವಕಾಶ
- ಪಂಚಾಯಿತಿ, ಹೋಬಳಿ ಮಟ್ಟದಲ್ಲಿ ನಷ್ಟದ ಲೆಕ್ಕ ಹಾಕಿದಾಗ, ರ‍್ಯಾಂಡಮ್ ಸರ್ವೆಯಲ್ಲಿ ನೈಜ ಫಲಾನುಭವಿಗೆ ಅನ್ಯಾಯವಾಗುವ ಸಾಧ್ಯತೆ ಹೆಚ್ಚು
- ಐದು ವರ್ಷಗಳ ಸರಾಸರಿ ಇಳುವರಿ ಆಧರಿಸಿ ಪರಿಹಾರ ನೀಡುವುದರಿಂದ, ರೈತರಿಗೆ ದೊರೆಯುವ ಪರಿಹಾರ ಮೊತ್ತ ಕಡಿಮೆ
- ಕಂತು ಪಾವತಿಗೆ ದಿನಾಂಕ ನಿಗದಿಪಡಿಸುವಂತೆ, ಪರಿಹಾರ ಮೊತ್ತ ಪಾವತಿಗೆ ನಿರ್ದಿಷ್ಟ ಅವಧಿ ನಿಗದಿ ಇಲ್ಲ
- ವಿಮೆ ಪರಿಹಾರ ಮೊತ್ತ ನಿಗದಿಗೆ ಸರ್ಕಾರ ಮಟ್ಟದಲ್ಲಿ ವಿಳಂಬ

ಅಡವಿಟ್ಟ ಚಿನ್ನ ವಾಪಸ್ ಬರಲೇ ಇಲ್ಲ

ಚಿನ್ನದ ಮೇಲೆ ಸಾಲ ನೀಡುವವರು ಆ ಚಿನ್ನದ ಮೌಲ್ಯದ ಅರ್ಧಕ್ಕಿಂತ ಕಡಿಮೆ ಸಾಲ ನೀಡುತ್ತಾರೆ. ದುಬಾರಿ ಬಡ್ಡಿ ವಿಧಿಸುತ್ತಾರೆ. ವರ್ಷವಾಗುವಷ್ಟರಲ್ಲಿ ಆ ಚಿನ್ನ 'ಮಾರಿಕೊಂಡು ಹೊಂದಾಣಿಕೆ' ಮಾಡಿಕೊಳ್ಳುತ್ತಾರೆ ಎಂಬುದು ಪ್ರಮುಖವಾಗಿ ಕೇಳಿಬರುತ್ತಿರುವ ಆರೋಪ.

'ಮಗನ ಮದುವೆಗೆ ಹಣ ಬೇಕಿತ್ತು. ಆಭರಣಗಳ ಮೇಲೆ ಸಾಲ ನೀಡುವ ವ್ಯಕ್ತಿಯೊಬ್ಬರ ಬಳಿ ಆಭರಣಗಳನ್ನು ಒತ್ತೆ ಇಟ್ಟು ಹಣ ತಂದೆ. 50 ಗ್ರಾಂ ಚಿನ್ನಕ್ಕೆ ಅವರು ನೀಡಿದ್ದು ₹1 ಲಕ್ಷ ಸಾಲ ಮಾತ್ರ. ಇಂತಿಷ್ಟು ದಿನದಲ್ಲಿ ಬಿಡಿಸಿಕೊಂಡು ಹೋಗಬೇಕು ಎಂಬ ಷರತ್ತು. ಒಂದು ವರ್ಷ ಆಗುವಷ್ಟರಲ್ಲಿ ಅಸಲು–ಬಡ್ಡಿ ಸೇರಿ ಎರಡು ಲಕ್ಷವಾಗಿದ್ದು ಬಿಡಿಸಿಕೊಂಡು ಹೋಗಿ ಎಂದರು. ಕೈಯಲ್ಲಿ ಹಣ ಇರಲಿಲ್ಲ. ಸ್ವಲ್ಪ ದಿನದ ನಂತರ ನಿಮ್ಮ ಚಿನ್ನ ಮಾರಿ ಸಾಲ–ಬಡ್ಡಿಗೆ ಜಮೆ ಮಾಡಿಕೊಂಡಿದ್ದೇನೆ ಎಂಬ ಉತ್ತರ ಬಂತು. ಒಂದು ಲಕ್ಷಕ್ಕೆ ಎರಡೂವರೆ ಲಕ್ಷ ಮೌಲ್ಯದ ಚಿನ್ನ ಕಳೆದುಕೊಳ್ಳುವಂತಾಯಿತು' ಎಂದು ಬೀದರ್ ಜಿಲ್ಲೆಯ ಕಮಲನಗರದ ರೈತರೊಬ್ಬರು ಹಳಹಳಿಸಿದರು.

ಸಾಲ ನೀಡುವಾಗಲೇ ಬಡ್ಡಿ ಕಡಿತ!

'ಬಾಣಂತನಕ್ಕೆ ಬಂದಿದ್ದ ಮಗಳನ್ನು ಗಂಡನ ಮನೆಗೆ ಕಳಿಸಬೇಕಿತ್ತು. ಮೊಮ್ಮಗನಿಗೆ ಬೆಳ್ಳಿ ಆಭರಣ, ತೊಟ್ಟಿಲು, ಬಟ್ಟೆ ಕೊಡಿಸಲು ಕಲಬುರ್ಗಿಯ ಖಾಸಗಿ ಫೈನಾನ್ಸ್‌ವೊಂದರಲ್ಲಿ ₹10 ಸಾವಿರ ಸಾಲ ಮಾಡಿದೆ. ಮೂರು ತಿಂಗಳ ಬಡ್ಡಿ ₹1 ಸಾವಿರ ಮುರಿದುಕೊಂಡು ₹9 ಸಾವಿರ ಮಾತ್ರ ಕೊಟ್ಟರು. ಚಕ್ರಬಡ್ಡಿಗೆ ಹೆದರಿ ಮತ್ತೆ ಬೇರೆಯವರಲ್ಲಿ ಸಾಲ ಮಾಡಿ ಈ ಸಾಲ ತೀರಿಸಿದೆ' ಎಂದು ಸೇಡಂನ ಸಣ್ಣ ರೈತ ಶರಣಪ್ಪ ಹೇಳಿಕೊಂಡರು.

ಬ್ಯಾಂಕ್‌ಗಳಿಂದ ಕೃಷಿ ಮತ್ತು ಬೆಳೆ ಸಾಲ ನೀಡುವುದು ಹೆಚ್ಚಿದ್ದರಿಂದ ಖಾಸಗಿ ಲೇವಾದೇವಿದಾರರ ವಹಿವಾಟಿಗೆ ಬಹುತೇಕ ಕಡಿವಾಣ ಬಿದ್ದಿದೆ. ಫೈನಾನ್ಸ್‌ಗಳು ಅಲ್ಪ ಸಾಲ ನೀಡಿ, ಮೂರು ತಿಂಗಳಿಗೆ ಶೇ 10ರಷ್ಟು ದುಬಾರಿ ಬಡ್ಡಿ– ಚಕ್ರಬಡ್ಡಿ ವಿಧಿಸುವುದು ನಡೆದೇ ಇದೆ ಎಂಬುದು ರೈತರು ಹೇಳುವ ಮಾತು.

ಕೃಷಿ ಸಾಲ, ಜಟಿಲ ವರ್ತುಲ

ಒಂದನೇ ಪುಟದಿಂದ...

ರಾಜಕೀಯ ಚಿಂತಕರೂ ರೈತರೂ ಆಗಿರುವ ದಾವಣಗೆರೆ ಜಿಲ್ಲೆಯ ಕಾರಿಗನೂರಿನ ತೇಜಸ್ವಿ ವಿ. ಪಟೇಲ್, ಕೃಷಿ ಸಾಲದ ವರ್ತುಲದ ಒಳಸುಳಿಗಳನ್ನು ಸೂಕ್ಷ್ಮವಾಗಿ ತೆರೆದಿಡುವುದು ಹೀಗೆ: 'ಬೆಳೆ ಬೆಳೆಯಲು ಅಗತ್ಯವಿರುವಷ್ಟು ಪ್ರಮಾಣದಲ್ಲಿ ಸಾಲ ಸಿಗುತ್ತಿಲ್ಲ.

ವಾರ್ಷಿಕ ಉತ್ಪಾದನೆ, ಕೊಟ್ಟ ಸಾಲ, ಬೆಳೆ ಪ್ರಮಾಣ ಇವೆಲ್ಲವೂ ಸಮರ್ಪಕವಾಗಿ ತುಲನೆಯಾಗುತ್ತಿಲ್ಲ. ಇದಲ್ಲದೆ ಶೇ 50ರಷ್ಟು ರೈತರು ಎಲ್ಲ ಬಗೆಯ ಸಾಲ ಪಡೆಯುವುದರಿಂದ ಸದಾ ಹೊರಗೇ ಉಳಿಯುತ್ತಾರೆ'.

ಔಷಧ, ಗೊಬ್ಬರದ ಅಂಗಡಿಯವರು ಕೈಸಾಲ ಕೊಡುತ್ತಾರೆ. ಗೊಬ್ಬರದ ವ್ಯವಹಾರವೂ ಬಡ್ಡಿಯ ಲೆಕ್ಕದಲ್ಲಿಯೇ ನಡೆಯುತ್ತಿದೆ. ಟ್ರ್ಯಾಕ್ಟರ್ ಹೊಡೆಯುವ ಇನ್ನೊಬ್ಬ ರೈತಮಿತ್ರ ಮಾತ್ರ ಯಾವುದೇ ಬಡ್ಡಿ ಇಲ್ಲದೆ ಹೊಲ ಉತ್ತಿಕೊಟ್ಟು, ಫಲ ಬಂದಮೇಲೆ ತನ್ನ ಬಾಡಿಗೆ ಪಡೆಯುತ್ತಾನೆ. ಒಂದು ಕಡೆ ಬಡ್ಡಿ ವ್ಯವಹಾರ, ಇನ್ನೊಂದೆಡೆ ಸಹಬಾಳ್ವೆ. ಹಿಂದೆ ಅವಿಭಕ್ತ ಕುಟುಂಬಗಳ ಸದಸ್ಯರೆಲ್ಲ ಕೃಷಿಯಲ್ಲಿ ತೊಡಗಿಕೊಂಡಿದ್ದರಿಂದ, ಕೂಲಿ ಕಾರ್ಮಿಕರ ಅಗತ್ಯ ಇರಲಿಲ್ಲ. ಈಗ ಎಲ್ಲವೂ ಖರ್ಚಿನ ಬಾಬತ್ತಾಗಿದೆ ಎನ್ನುವುದು ತೇಜಸ್ವಿ ಪಟೇಲ್ ಬಿಚ್ಚಿಡುವ ವಸ್ತುಸ್ಥಿತಿ.



ತೇಜಸ್ವಿ ವಿ. ಪಟೇಲ್

ಶಿವಮೊಗ್ಗದ ರೈತ ಹೋರಾಟಗಾರ ಕೆ.ಟಿ. ಗಂಗಾಧರ್ ಇನ್ನಷ್ಟು ವಿಸ್ತೃತವಾಗಿ ಕೃಷಿ ಸಾಲದ ಒಳಸುಳಿಗಳನ್ನು ಬಿಚ್ಚಿಡುತ್ತಾರೆ. ಹಸಿರು ಕ್ರಾಂತಿಯ ನಂತರ ಸಹಕಾರ ಕ್ಷೇತ್ರದ ಮೂಲಕ ಕೃಷಿ ಸಾಲ ನೀಡುವ ಪರಿಪಾಟ ಶುರುವಾಯಿತು. 1980ರಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣವಾದ ನಂತರ ಕೃಷಿ ಕ್ಷೇತ್ರಕ್ಕೆ ಒಟ್ಟು ಸಾಲದ ಶೇ 17ರಷ್ಟು ಆದ್ಯತೆಯಾಗಿ ನೀಡಲು ಪರಿಗಣಿಸಲಾಯಿತು. ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ (ಪಿಎಲ್‌ಡಿ) ಮೂಲಕವೂ ಸಾಲ ಸಿಗತೊಡಗಿತು. ನಬಾರ್ಡ್ ಮಾರ್ಗಸೂಚಿ ಪ್ರಕಾರ ಎಲ್ಲ ಬಗೆಯ ಸಾಲಗಳನ್ನು ನೀಡಲಾಗುತ್ತಿದೆ. ಸಲಹಾ ಸಮಿತಿಯೊಂದು ಮಾರ್ಗಸೂಚಿಗಳನ್ನು ನಿರ್ಧರಿಸುತ್ತದೆ. ಸಾಲ ನೀಡಿಕೆ ಪ್ರಮಾಣವನ್ನು ಅದು ನಿರ್ಧರಿಸುವ ಪದ್ಧತಿಯೇ ಅವೈಜ್ಞಾನಿಕವಾಗಿದೆ ಎನ್ನುತ್ತಾರೆ ಗಂಗಾಧರ್.

ಇದಲ್ಲದೆ ಸಾಲ ಕೊಡುವ, ವಸೂಲು ಮಾಡುವ ಕ್ರಮಗಳೂ ಬದಲಾಗಬೇಕು. ಹಳ್ಳಿಗಳಲ್ಲಿ ಟಾಂಟಾಂ ಹೊಡೆಸಿ, ಮನೆ ಮುಂದೆ ಸಾಲ ಕೊಟ್ಟಿಲ್ಲ ಎಂದು ಬೋರ್ಡ್ ಬರೆಸಿ ರೈತರ ಮರ್ಯಾದೆ ತೆಗೆಯುತ್ತಾರೆ. ಆತ್ಮಹತ್ಯೆಗೆ ಇದೇ ಕಾರಣ ಎನ್ನುವುದು ಅವರ ಅಭಿಪ್ರಾಯ.

ಕೈಗಾರಿಕೆಗಳಿಗೆ ಸಾಲವನ್ನು ಉದಾರವಾಗಿ ನೀಡುವ ಸರ್ಕಾರ, ರೈತರ ಎಕರೆ ಭೂಮಿ ಮಾರ್ಟ್‌ಗೇಜ್ ಮಾಡಿಯೂ ಯಾಕೆ ಬರೀ ಒಂದೂವರೆ ಲಕ್ಷ ರೂಪಾಯಿ ಕೊಡುತ್ತದೆ ಎನ್ನುವುದು ಅವರೆತ್ತುವ ಪ್ರಶ್ನೆ.



ಶುಂಠಿಯಂತಹ ವಾಣಿಜ್ಯ ಬೆಳೆಗೆ ಕೈಹಾಕಿರುವ ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ರೈತರೊಬ್ಬರು ಈಚೆಗೆ ಆತ್ಮಹತ್ಯೆ ಮಾಡಿಕೊಂಡರು. 14 ತಿಂಗಳ ಬೆಳೆ ಶುಂಠಿ. ಎಕರೆಗೆ ಕನಿಷ್ಠ 5 ಲಕ್ಷ ರೂಪಾಯಿ ಹೂಡಬೇಕು. ಕೋವಿಡ್ ನಂತರ ರಫ್ತು ಮಾರುಕಟ್ಟೆ ಸಂಪೂರ್ಣ ಇಲ್ಲವಾಗಿರುವುದರಿಂದ ಅತಿ ಲಾಭದಾಯಕವಾಗಿದ್ದ ಈ ಬೆಳೆಯೂ ಹೊಡೆತ ಕೊಟ್ಟಿದೆ ಎಂದು ಹೆಸರು ಹೇಳಲು ಇಚ್ಛಿಸದ ಆ ಪ್ರದೇಶದ ರೈತರೊಬ್ಬರು ಹೇಳುತ್ತಾರೆ. ಭೂ ಅಭಿವೃದ್ಧಿಗಾಗಿ ನೀಡುವ ದೊಡ್ಡ ಮೊತ್ತದ ಸಾಲವನ್ನು ಪಡೆದು, ಅದನ್ನು ಶುಂಠಿಯಂತಹ ಬೆಳೆ ಮೇಲೆ ವಿನಿಯೋಗಿಸುವ ರೈತರೂ ಇದ್ದಾರೆ ಎಂಬ ಅವರ ಮಾತು ವಸ್ತುಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

ಕೃಷಿ ಸಾಲ ಪ್ರಮಾಣ ನಿಗದಿ ಅವೈಜ್ಞಾನಿಕವಾಗಿರುವುದು ಒಂದು ಸಮಸ್ಯೆಯಾದರೆ, ರೈತರು ಪಡೆದ ಸಾಲವನ್ನು ಅಶಿಸ್ತಿನಿಂದ ಯಾವ ಯಾವುದಕ್ಕೋ ವಿನಿಯೋಗಿಸುತ್ತಿರುವುದು ಇನ್ನೊಂದು ಚಾಳಿಯಂತಾಗಿದೆ.

ಇತರ ಅಂಶಗಳು

- ಕೇಂದ್ರ ಸರ್ಕಾರದ ಆತ್ಮ ನಿರ್ಭರ್ ಪ್ಯಾಕೇಜ್ ಅಡಿ ನಬಾರ್ಡ್ ಸಾಮಾನ್ಯವಾಗಿ ನೀಡುವ ₹5500 ಕೋಟಿ ಸಾಲದ ಜತೆಯಲ್ಲಿ ₹1700 ಕೋಟಿ ಸಾಲವನ್ನು ಸಹಕಾರ ಸಂಘಗಳ ಬೆಳೆ ಸಾಲ ನೀಡಲು ಒದಗಿಸಿದೆ. ಇದರಿಂದ ಶೇ 100 ರಷ್ಟು ಸಾಲ ವಿತರಣೆ ಮಾಡಲು ಸಾಧ್ಯವಾಗಿದೆ.
- ಈ ಸಾಲಿನಲ್ಲಿ ಕೋವಿಡ್ ಸಂಕಷ್ಟದ ಕಾರಣ ರೈತರಿಗೆ ಹೆಚ್ಚಿನ ಸಾಲ ಒದಗಿಸಲು 30.26 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ₹19,370 ಕೋಟಿ ಅಲ್ಪಾವಧಿ ಬೆಳೆ ಸಾಲ ಮತ್ತು 0.60 ಲಕ್ಷ ರೈತರಿಗೆ ಶೇ 3 ರ ಬಡ್ಡಿ ದರದಲ್ಲಿ ₹1440 ಕೋಟಿ ಮಧ್ಯಮಾವಧಿ/ದೀರ್ಘಾವಧಿ ಸಾಲ ವಿತರಣೆ ಗುರಿ ಹಾಕಿಕೊಳ್ಳಲಾಗಿದೆ. ಈ ಸಾಲಿಗೂ ಕೇಂದ್ರ ಸರ್ಕಾರ ಆತ್ಮ ನಿರ್ಭರ್ ಪ್ಯಾಕೇಜ್ ಅಡಿ ಮೊದಲ ಹಂತದಲ್ಲಿ ₹1450 ಕೋಟಿ ವಿಶೇಷ ಸಾಲ ಒದಗಿಸಿದೆ.
- ಆತ್ಮ ನಿರ್ಭರ್ ಯೋಜನೆಯಡಿ ರೈತರಿಗೆ ಕೊಯ್ಲು ನಂತರದ ಮೂಲಸೌಕರ್ಯ ಒದಗಿಸುವ ಯೋಜನೆಯಲ್ಲಿ 930 ಸಹಕಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಗೋದಾಮು ನಿರ್ಮಿಸಲು ನಬಾರ್ಡ್ ಮೂಲಕ ₹316.72 ಕೋಟಿ ಸಾಲ ಶೇ 4ರ ಬಡ್ಡಿ ದರದಲ್ಲಿ ದೊರೆಯಲಿದ್ದು, ಸಹಕಾರ ಸಂಘಗಳು ಶೇ 1 ಬಡ್ಡಿ ಪಾವತಿಸಿದರೆ ಸಾಕು.
- ರಾಜ್ಯದಲ್ಲಿನ ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಕೃಷಿ ಸಾಲ ಪಡೆದ 5,32,305, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲ ಪಡೆದ 85,500 ಹೀಗೆ ಒಟ್ಟು 61,7,805 ರೈತರು ಮತ್ತು 65,500 ಸ್ವಹಾಯ ಗುಂಪುಗಳ ಅಂದಾಜು 8.51 ಲಕ್ಷ ಜನರಿಗೆ ಅನುಕೂಲವಾಗುತ್ತದೆ.

'ನಷ್ಟದ ಮೊತ್ತ ರೈತರಿಗೇ ನೀಡಲಿ'

'ಕೇಂದ್ರ–ರಾಜ್ಯ ಸರ್ಕಾರಗಳು ನೀಡುವ ವಿಮೆ ಕಂತಿನ ಮೊತ್ತ ಕಂಪನಿಗೆ ಸೇರುತ್ತದೆ. ಬೆಳೆ ನಷ್ಟ ಆಗದಿದ್ದರೆ ವಿಮೆ ಕಂಪನಿಗೆ ಲಾಭ. ಬೆಳೆ ನಷ್ಟವಾದಾಗ ಅರ್ಜಿ ಸಲ್ಲಿಸಬೇಕೆಂದು ಬಹಳಷ್ಟು ರೈತರಿಗೆ ಗೊತ್ತಿಲ್ಲದೆ, ಪರಿಹಾರ ಮೊತ್ತದಿಂದ ವಂಚಿತರಾಗುತ್ತಾರೆ. ಸರ್ಕಾರ ವಿಮಾ ಕಂಪನಿಗೆ ಕೊಡುವ ಈ ಮೊತ್ತವನ್ನು ಬೆಳೆ ನಷ್ಟ ಆದಾಗ ನೇರವಾಗಿ ರೈತರಿಗೆ ನೀಡಿದರೆ, ವಿಮೆಯ ಅಗತ್ಯವೇ ಇಲ್ಲ' ಎಂದು ಗದಗ ತಾಲ್ಲೂಕು ಹೊಂಬಳ ಗ್ರಾಮದ ರೈತ ಚೆನ್ನವೀರಪ್ಪ ಹುಣಸಿಕಟ್ಟಿ ಅಭಿಪ್ರಾಯಪಟ್ಟರು.

ಸಾಲದ ಕೂಪದಲ್ಲಿ ಬೇಸಾಯದ ಬದುಕು: ಪರ್ಯಾಯವಿಲ್ಲದೇ ಕಂಗೆಟ್ಟ ಕೃಷಿಕ

ಆರ್ಥಿಕಾಭಿವೃದ್ಧಿಯ ಕನಸಿಗೆ ತಪ್ಪದ ಹೊಡೆತ

● ಡಿ.ಬಿ.ನಾಗರಾಜ

ಮೈಸೂರು: ರೈತರು ಈಗ ಹಣ್ಣು, ತರಕಾರಿ, ವಾಣಿಜ್ಯ ಬೆಳೆಗಷ್ಟೇ ಅಲ್ಲ; ಆಹಾರ ಧಾನ್ಯ ಬೆಳೆಯಲೂ ಸಾಲ ಮಾಡಬೇಕಿದೆ. ಒಮ್ಮೆ ಮಾಡಿದ ಸಾಲವನ್ನು ತೀರಿಸಲಾಗದೆ, ಮತ್ತೆ ಮತ್ತೆ ಸಾಲ ಮಾಡುವಂತಾಗಿದೆ. ಸಾಲದ ಸುಳಿಯಲ್ಲಿ ಸಿಲುಕಿದಾತ ಜಮೀನು ಮಾರಲು ಮುಂದಾದರೂ; ಕಾಸಿಗೆ ಕಡೆಯಾಗಿ ಕೇಳುವವರೇ ಹೆಚ್ಚು. ಸಾಲ ಕೊಟ್ಟಾತ ಮನೆ ಬಾಗಿಲಿಗೆ ಬಂದು ನಿಂತಾಕ್ಷಣ; ಬ್ಯಾಂಕಿನ ನೋಟಿಸ್ ಮನೆಗೆ ಬರುತ್ತಿದ್ದಂತೆ ಮರ್ಯಾದೆಗೆ ಅಂಜುವ ರೈತರು ಆತ್ಮಹತ್ಯೆಗೆ ಶರಣಾಗುತ್ತಾರೆ.

ಖಾಸಗಿ ಹಣಕಾಸು ಸಂಸ್ಥೆಗಳ ಹಾವಳಿ ಮಂಡ್ಯ ಜಿಲ್ಲೆಯಲ್ಲಿ ವಿಪರೀತವಾಗಿದೆ. ಇವು ವಿಧಿಸುವ ಅತ್ಯಧಿಕ ಬಡ್ಡಿಗೆ ರೈತರು ಜರ್ಜರಿತರಾಗಿದ್ದಾರೆ. 2015ರಿಂದಲೂ ರೈತರ ಆತ್ಮಹತ್ಯೆ ಇಲ್ಲಿ ಹೆಚ್ಚಿದೆ.

ಆದಾಯಕ್ಕಾಗಿ ರೈತರು ವಾಣಿಜ್ಯ ಬೆಳೆ ಬೆಳೆಯುವುದು ಹೆಚ್ಚಿದೆ. ನಿರೀಕ್ಷಿತ ಆದಾಯ ಸಿಗದಿರುವುದರಿಂದ; ಮನೆ ಕಟ್ಟುವ, ಹೊಸ ವಾಹನ–ಚಿನ್ನಾಭರಣ ಖರೀದಿಸುವ, ಮಕ್ಕಳ ಮದುವೆ ಮಾಡುವ ಕನಸು ಕಮರಿವೆ. ಬೆಳೆಗಾಗಿ ಮಾಡಿದ ಸಾಲ ತೀರಿಸಿದರೆ ಸಾಕು ಎನ್ನುವಂತಹ ದಯನೀಯ ಪರಿಸ್ಥಿತಿ ಬೆಳೆಗಾರರದ್ದಾಗಿದೆ.

ವೆಚ್ಚವೇ ಹೆಚ್ಚು: '5 ವರ್ಷಗಳ ಹಿಂದೆ ಒಂದು ಎಕರೆಯಲ್ಲಿ ದ್ರಾಕ್ಷಿ ಬೆಳೆಯಲು ₹ 25 ಸಾವಿರ ಖರ್ಚಾಗುತ್ತಿತ್ತು. ಈಗ ಕನಿಷ್ಠ ₹ 75 ಸಾವಿರ ಬೇಕು. ಇದಕ್ಕೆ ತಕ್ಕಂತೆ ಒಣದ್ರಾಕ್ಷಿಯ ಬೆಲೆಯಲ್ಲಿ ಹೆಚ್ಚಳವಾಗಿಲ್ಲ. ಸಾಲದ ಹೊರೆ ತಾಳಲಾರದೇ ನೇಣಿಗೆ ಕೊರಳೊಡ್ಡುವುದು ಮುಂದುವರೆದಿದೆ' ಎನ್ನುತ್ತಾರೆ ವಿಜಯಪುರದ ದ್ರಾಕ್ಷಿ ಬೆಳೆಗಾರ ರವಿ ಖಾನಾಪುರ.

ಆದಾಯ ದ್ವಿಗುಣಗೊಳ್ಳಲಿಲ್ಲ. ಉತ್ಪಾದನಾ ವೆಚ್ಚ ಹೆಚ್ಚಿತಷ್ಟೇ. ಸ್ವಾಮಿನಾಥನ್ ವರದಿ ಜಾರಿಗೊಳಿಸಿ. ಕೃಷಿ ಪೂರಕ ಚಟುವಟಿಕೆಗೆ ಉತ್ತೇಜನ, ಸಹಾಯಧನ, ತರಬೇತಿ ಕೊಡಿ.

ಬಡಗಲಪುರ ನಾಗೇಂದ್ರ, ರೈತ ಮುಖಂಡ

ರೈತರಿಗೆ ನಿಶ್ಚಿತ ಆದಾಯವೇ ಇಲ್ಲ. ಬೆಳೆ ನಷ್ಟವಾದರೆ ಬದುಕಿಗಾಗಿ ಸಾಲ ಮಾಡಲೇಬೇಕಾದ ಅನಿವಾರ್ಯ. ಹಳ್ಳಿಗಳಲ್ಲಿ ಕೃಷಿ ಕೇಂದ್ರಿತ ಕೈಗಾರಿಕೆ ಆರಂಭಿಸಿ ಕುರುಬೂರು

ಶಾಂತಕುಮಾರ್, ರೈತ ಮುಖಂಡ

ನೆರೆ ರಾಜ್ಯದ ರೈತರಿಂದ ಗುತ್ತಿಗೆ ಕೃಷಿ

ಕೇರಳ, ತಮಿಳುನಾಡಿನ ಕೆಲವರು ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಯ ರೈತರ ಜಮೀನು ಗುತ್ತಿಗೆ ಪಡೆದು, ಲಕ್ಷ ಲಕ್ಷ ಸಂಪಾದಿಸಿ ಗುತ್ತಿಗೆ ಪಡೆದ ಜಮೀನನ್ನೇ ಖರೀದಿಸಿದ್ದು ಇದೆ. ಇದೀಗ ಪರಿಸ್ಥಿತಿ ಬದಲಾಗಿದೆ. ಕೃಷಿ ಅವರ ಕೈಯನ್ನೂ ಸುಡುತ್ತಿದೆ.

ಗುತ್ತಿಗೆ ಪಡೆದವರು ಕುಟುಂಬ ಸಮೇತರಾಗಿ ಜಮೀನಿನಲ್ಲೇ ವಾಸಿಸುತ್ತಾರೆ. ಮುಂಜಾನೆಯಿಂದ ಮುಸ್ಸಂಜೆಯವರೆಗೆ ದುಡಿಯೋದು ಇವರ ಯಶಸ್ಸಿನ ಗುಟ್ಟಿನಲ್ಲೊಂದು. ಇಲ್ಲಿನ ರೈತರೊಟ್ಟಿಗೆ ಮಾಡಿಕೊಂಡ ಕರಾರು ಪತ್ರಕ್ಕೆ ಅಲ್ಲಿನ ಬ್ಯಾಂಕ್‌ಗಳಲ್ಲಿ ಸಾಲ ಸಿಗಲಿದೆ.

'ಬ್ಯಾಂಕ್‌ನಲ್ಲಿ ಮೊದಲು ಪಡೆದಿದ್ದ ₹ 15 ಲಕ್ಷ ಸಾಲ ತೀರಿಸಿದ್ದೆ. 2020ರಲ್ಲಿ ಪಡೆದ ಸಾಲ ತೀರಿಸಲಾಗಿಲ್ಲ. ರೈತರಿಗೆ ಗುತ್ತಿಗೆಯ ಹಣವನ್ನು ಕೊಟ್ಟಿಲ್ಲ. ಬೆಲೆ ಸಿಕ್ಕರೆ ಮಾತ್ರ ನಮ್ಮ ಬದುಕು ಹಳಿಗೆ ಬರಲಿದೆ' ಎನ್ನುತ್ತಾರೆ ಕೇರಳದ ಕಣ್ಣೂರಿನ ರೈತ ಜನಾರ್ದನ್.

'ಲಕ್ಷ ಲಕ್ಷ ಬಂಡವಾಳ ಹಾಕಿ ದಾಳಿಂಬೆ ಬೆಳೆದೆ. ಹಣ್ಣು ಕೀಳಬೇಕು ಎನ್ನುವಷ್ಟರಲ್ಲೇ ರೋಗ. ಬೆಲೆಯೂ ಸಿಗಲಿಲ್ಲ. ನಮ್ಮ ಭಾಗದ ಬಹುತೇಕರ ಸಂಕಟವಿದು. ವಿಧಿಯಿಲ್ಲದೇ ಕಿತ್ತು ಬೆಂಕಿಯಿಟ್ಟರು. ಬೆಳೆಗಾಗಿ ಮಾಡಿದ ಸಾಲ ಬೆಟ್ಟವಾಗಿದೆ. ದಿಕ್ಕೇ ತೋಚದ ಸ್ಥಿತಿ ನಮ್ಮದಾಗಿದೆ' ಎಂದು ಹಾಸನ ಜಿಲ್ಲೆ ಡಿ.ಎಂ.ಕುರ್ಕೆಯ ಬಸವರಾಜು ತಿಳಿಸಿದರು.

'ನಷ್ಟವಾದರೂ ಹೊಲ ಪಾಳು ಬಿಡಬಾರದು ಎಂದು ಆಲೂಗೆಡ್ಡೆ ಬೆಳೆಯೋರೇ ಹೆಚ್ಚು. ಈಗಾಗಲೇ ಬ್ಯಾಂಕ್‌ಗಳಲ್ಲಿ ಸಾಲ ಮಾಡಿದ್ದೇವೆ. ಹೊಸದಾಗಿ ಸಾಲ ಸಿಗಲ್ಲ. ವಿಧಿಯಿಲ್ಲದೇ ಸ್ವಸಹಾಯ ಸಂಘಗಳಲ್ಲಿ ಬೆಳೆಗಾಗಿಯೇ ಸಾಲ ಪಡೆಯುತ್ತೇವೆ. ಬೆಲೆ ಸಿಕ್ಕರಷ್ಟೇ ನಮಗೂ ಬೆಲೆ. ಮರ್ಯಾದೆಗಂಜಿದವರಿಗೆ ಸಾವೇ ಗತಿ' ಎನ್ನುತ್ತಾರೆ ಹಾಸನದ ಪ್ರವೀಣ್.

'ಟೊಮೆಟೊ 'ಲಾಟರಿ' ಬೆಳೆಯಿದ್ದಂತೆ. ಬೆಲೆ ಸಿಕ್ಕರೆ ಬಂಪರ್ ಲಾಭ. ಕುಸಿತಗೊಂಡರೆ ರಸ್ತೆ ಬದಿಗೆ ಸುರಿಯಬೇಕಷ್ಟೆ' ಎನ್ನುತ್ತಾರೆ ಮೈಸೂರಿನ ರೈತ ಮಹೇಶ್.

ಬೇರೆ ಆದಾಯವೇ ಇಲ್ಲ: ಬಹುತೇಕ ರೈತರಿಗೆ ಕೃಷಿಯಿಂದ ಬರುವ ಆದಾಯ ಹಾಗೂ ಕೂಲಿಯೇ ಬದುಕಿಗೆ ಆಧಾರ. ವರ್ಷದ ಎಲ್ಲ ತಿಂಗಳಲ್ಲಿ ಕೂಲಿಯೂ ಸಿಗದು. ಆದಾಯವೂ ದೊರಕದು.

ದಿನ ಭವಿಷ್ಯ

ಭಾನುವಾರ ಜೂನ್ 27, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರ ತೃತೀಯ. ಗಂ. 31-44 (ಸಾ. 6-46) ಭಾನುವಾರ ನಿತ್ಯ ನಕ್ಷತ್ರ ಶ್ರವಣ ಗಂ. 56-59 (ರಾ. 4-51) ವೈಧೃತಿ ನಾಮ ಯೋಗ ಗಂ. 35-0 ವಣಿಜ ಕರಣ ಗಂ. 3-41 ವಿಷ ಗಂ. 7-32 ಅಮೃತ ಗಂ. 31-1 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-00 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 1, 7

ಮೇಷ: ಅಡೆತಡೆಯಿಲ್ಲದೆ ನಡೆಯುವ ಕಾರ್ಯಕಲಾಪಗಳಿಂದಾಗಿ ಮಾನಸಿಕ ಶಾಂತಿ. ವ್ಯಾಪಾರ ವೃತ್ತಿ, ವಹಿವಾಟುಗಳಲ್ಲಿ ಅಧಿಕ ಲಾಭ. ಬಂಧು ಮಿತ್ರರಿಂದ ಪ್ರಶಂಸೆಯ ಮಾತು ಕೇಳಿಬರಲಿವೆ. ಆರೋಗ್ಯದಲ್ಲಿ ವ್ಯತ್ಯಯ.

ವೃಷಭ: ಒತ್ತಡ ರಹಿತ ಕೆಲಸ ಕಾರ್ಯ, ಕಲಾಪಗಳು ಶಾಂತಿ ಸಮಾಧಾನ ತರಲಿವೆ. ಕುಟುಂಬ ಸದಸ್ಯರಲ್ಲಿ ಒಮ್ಮತದ ಅಭಿಪ್ರಾಯ ಮೂಡಿ ಸಂಭ್ರಮ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ.

ಮಿಥುನ: ಕೆಲಸದ ಒತ್ತಡದಿಂದ ನಿವಾರಣೆ ದೊರೆತು ಮಾನಸಿಕ ಶಾಂತಿ. ಸಕಾಲದಲ್ಲಿ ಸಂದೇಶಗಳ ಆಗಮನ, ಅನಾವಶ್ಯಕ ಖರ್ಚುಗಳು ತಹಬಂದಿಗೆ ಬಂದು ಉಳಿತಾಯ. ಕುಟುಂಬದಲ್ಲಿ ಒಮ್ಮತದಿಂದಾಗಿ ಹಿತಕರ ವಾತಾವರಣ.

ಕರ್ಕಾಟಕ: ನಿರೀಕ್ಷೆಯಂತೆ ಕೆಲಸ ಕಾರ್ಯಗಳು ನಡೆದು ಕ್ರಯ ವಿಕ್ರಯಗಳಿಂದ ಲಾಭ. ಹಿತೈಷಿಗಳೊಂದಿಗಿನ ಸಮಾಲೋಚನೆಯಿಂದ ಮುಂದಿನ ಕಾರ್ಯಯೋಜನೆ ಸುಗಮಗೊಳ್ಳುವುದು. ಹಿತ ಭೋಜನ ಪ್ರಾಪ್ತಿ.

ಸಿಂಹ: ಉದ್ಯೋಗದಲ್ಲಿ ಪ್ರಗತಿ. ಗಣ್ಯರಿಂದ ಸಹಾಯ ಒದಗಿ ಬರುವುದು. ಸಂಘ ಸಂಸ್ಥೆಗಳಿಂದ ಕಾರ್ಯಸಾಧನೆ. ಮಕ್ಕಳ ಅಭಿವೃದ್ಧಿ ಸಂತಸ ತರುವುದು. ವಸ್ತ್ರಾಭರಣ, ವಾಹನ ಖರೀದಿ ಸಾಧ್ಯತೆ.

ಕನ್ಯಾ: ಲೇವಾದೇವಿ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭದ ನಿರೀಕ್ಷೆ. ಶ್ರಮವಿಲ್ಲದೇ ಬರಬೇಕಾದ ಹಣ ವಸೂಲಾಗುವ ಸಾಧ್ಯತೆ. ಗೆಳೆಯರೊಂದಿಗೆ ಹಿತವಾದ ಭೋಜನ. ಲೆಕ್ಕ ಪತ್ರಗಳ ವಿಷಯದಲ್ಲಿ ಹೆಚ್ಚಿನ ಎಚ್ಚರಿಕೆ ಅಗತ್ಯ.

ತುಲಾ: ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯದೆ ಮಾನಸಿಕ ಅಶಾಂತಿ. ಸಣ್ಣಪುಟ್ಟ ಪೆಟ್ಟಾಗುವ ಸಾಧ್ಯತೆ. ಅಕಾಲ ಭೋಜನದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ. ಲಾಭದಲ್ಲಿ ಕಡಿತವುಂಟಾಗಬಹುದು.

ವೃಶ್ಚಿಕ: ದೇವತಾ ದರ್ಶನ ಭಾಗ್ಯ. ಉದ್ಯೋಗದಲ್ಲಿ ಸಾಫಲ್ಯವನ್ನು ಕಂಡು ಲಾಭ. ವಾಹನಗಳಿಂದ ಅನುಕೂಲ. ಆರೋಗ್ಯದಲ್ಲಿ ಸುಧಾರಣೆ. ಉತ್ತಮರ ಸಹವಾಸ ಭಾಗ್ಯ ದೊರಕಲಿದೆ.

ಧನು: ವ್ಯಾಪಾರ, ವ್ಯವಹಾರಗಳು ನಿರ್ವಿಘ್ನದಾಯಕವಾಗಿ ನಡೆದು ಲಾಭದ ಪ್ರಮಾಣದಲ್ಲಿ ಹೆಚ್ಚಳ. ವಾಹನದಿಂದ ಲಾಭ. ಆತ್ಮೀಯರ ಆಗಮನದಿಂದ ಮನೆಯಲ್ಲಿ ಸಂತೋಷದ ವಾತಾವರಣ.

ಮಕರ: ಉದ್ಯೋಗದಲ್ಲಿ ಸಮಸ್ಯೆಗಳಿಂದಾಗಿ ಅಶಾಂತಿ. ಲೇವಾದೇವಿ ವ್ಯವಹಾರಗಳನ್ನು ಮಾಡದಿರುವುದೇ ಉತ್ತಮ. ತಕರಾರುಗಳು ಪರಿಹಾರವಾಗಿ ಆತ್ಮಬಲ ವೃದ್ಧಿಸುವುದು. ಮನೆಯವರ ಸಹಕಾರದಿಂದಾಗಿ ನೆಮ್ಮದಿ.

ಕುಂಭ: ಕೆಲಸ ಕಾರ್ಯಗಳು ಸಮಯಕ್ಕೆ ಸರಿಯಾಗಿ ನಡೆಯದೇ ಒತ್ತಡದಿಂದಾಗಿ ಮಾನಸಿಕ ದುಗುಡ. ಸಮಾಧಾನಕರ ನಡವಳಿಕೆ ಅಗತ್ಯ. ವ್ಯವಹಾರದಲ್ಲಿ ಮೋಸ ಹೋಗುವ ಸಾಧ್ಯತೆ ಇದ್ದು ಎಚ್ಚರಿಕೆಯಿಂದ ವ್ಯವಹರಿಸಿ.

ಮೀನ: ಶ್ರಮವಿಲ್ಲದೇ ಕಲಸ–ಕಾರ್ಯಗಳು ನೆರವೇರಿ ಅಭಿವೃದ್ಧಿ ಕಂಡುಬರುವುದು. ವ್ಯವಹಾರದಲ್ಲಿ ಲಾಭ. ಅಧ್ಯಯನದಲ್ಲಿ ಉನ್ನತಿಯನ್ನು ಕಾಣುವಿರಿ. ಮಕ್ಕಳಿಂದ ಸಹಾಯ ಹಿತಕರ ಸಂದೇಶ. ಸಂತೃಪ್ತಿಯ ದಿನ.

ನಿಮ್ಮ ಜನ್ಮದಿನ 27-ಜೂನ್ ಈ ದಿನ ಅತ್ಯಂತ ಶುಭಕರ. ಉದ್ಯಮಿಗಳಿಗೆ ಹರ್ಷದಾಯಕ ವರ್ಷ. ಹತ್ತಿ, ಬಟ್ಟೆ ಮುಂತಾದ ಉದ್ಯಮಗಳಲ್ಲಿ ತೊಡಗಿಕೊಂಡವರಿಗೆ ವಿಶೇಷ ಲಾಭ. ಹಿರಿಯರ ಮಾತುಗಳ ಬಗ್ಗೆ ಅಸಡ್ಡೆ ತೋರಬೇಡಿ. ವಿದ್ಯಾಭ್ಯಾಸದಲ್ಲಿ ಸಾಧನೆ ನಿಮ್ಮದಾಗಲಿದೆ. ನೌಕರಿಯು ಅಷ್ಟೊಂದು ಹಿಡಿಸದಿದ್ದರೂ ಜೀವನಕ್ಕೆ ದಾರಿಯಾಗುವುದರಲ್ಲಿ ಸಂದೇಹವಿಲ್ಲ.


ಪದಬಂಧ 4640 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇಹಲೋಕಕ್ಕೆ ಸಂಬಂಧಿಸಿದ್ದು (3)
3.ಸೊಳ್ಳೆ ಇಲ್ಲದೆ (3)
5.ಇದು ಸೂರ್ಯನ ರಶ್ಮಿ (5)
6.ತಡಸಲನ್ನು ಸೇರುವಾಗಲೇ ನಿಧಾನ! (2)
8.ಸ್ಥಿರವಾದುದು ಇದು (2)
9.ನಾರಿಕೇಳ ಹಿಡಿದಿರುವ ಸ್ತ್ರೀ (2)
10.ಕಲಾವಿದನು ತೆರೆದ ಬಾಗಿಲು (2)
14.ಮನುಷ್ಯನನ್ನು ತಿನ್ನುವ ಪ್ರಾಣಿ (5)
15.ಕಮಂಡಲು ಹಿಡಿದಾಗ ಕಾಣಿಸಿದ ಸಮುದ್ರ (3)
16.ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ

1.ಇಂದ್ರನ ಆನೆಯಿದು (4)
2.ಕಡಿಯಲು ಬಂದಿರುವ ಭಲ್ಲೂಕ (3)
3.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4.ಇನ್ನೂ ಬಲಿಯದ ಕಾಯಿ (4)
7.ಅಗಲ ಬಾಯುಳ್ಳ ಲೋಹದ ಪಾತ್ರೆ (3)
8.ಈತ ನೆಲೆಗೊಳಿಸಿದವನು (3)
9.ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
11.ಹತ್ತನೆಯ ಒಂದು ಭಾಗ (4)
12.ಪ್ರವಾಹವನ್ನು ಹೀಗೂ ಹೇಳುವರು (3)
13.ಈತ ಕೆಟ್ಟ ಕವಿ (3)



4639ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಅನುರಾಗ 5.ರಾವಣ 6.ವಾತಾಯನ 8.ತಡಸಲು 12.ಜನಹಿತ 14.ಪರಧನ 15.ಬರ್ಬರ 16.ರಸಾಯನ

ಮೇಲಿಂದ ಕೆಳಕ್ಕೆ: 1.ಪರಾವಲಂಬಿ 2.ಗುಣವಂತ 3.ಅಹವಾಲು 4.ಗಹನ 7.ಯತಿ 9.ಸದನ 10.ಉದಾಹರಣೆ 11.ಪರ 12.ಜನಮನ 13.ತಪೋಬಲ 14.ಪಗಾರ

ಸುಡೊಕು 5026

						8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5025 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣೆ: ಕೇಂದ್ರಕ್ಕೆ ಕಾಶ್ಮೀರದ ಮುಖಂಡರ ಷರತ್ತು

ವಿಶೇಷ ಸ್ಥಾನಮಾನ ಮರುಸ್ಥಾಪಿಸಿದರೆ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಿದರೆ ಮಾತ್ರ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಾಗಿ ರಾಜ್ಯದ ಇಬ್ಬರು ನಾಯಕರಾದ ಮೆಹಬೂಬಾ ಮುಫ್ತಿ ಹಾಗೂ ಒಮರ್ ಅಬ್ದುಲ್ಲಾ ಅವರು ಷರತ್ತು ವಿಧಿಸಿದ್ದಾರೆ.

ಜಮ್ಮು ಕಾಶ್ಮೀರದಲ್ಲಿ ರಾಜಕೀಯ ಚಟುವಟಿಕೆಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆ, ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮಾತುಕತೆ ನಡೆಸಿದ ಎರಡೇ ದಿನಗಳಲ್ಲಿ ಮುಖಂಡರು ನೀಡಿರುವ ಈ ಹೇಳಿಕೆಯು ಇಲ್ಲಿ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಮತ್ತಷ್ಟು ತಡವಾಗಬಹುದು ಎಂಬ ಸಂದೇಹವನ್ನು ಮೂಡಿಸಿದೆ.

‘ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಿದರೆ ಮಾತ್ರ ವಿಧಾನಸಭೆ ಚುನಾವಣೆಯಲ್ಲಿ ಭಾಗವಹಿಸುತ್ತೇವೆ’ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಹೇಳಿದ್ದಾರೆ.

‘ನನ್ನ ಮಾತುಗಳು ಬರಿಯ ರಾಜಕೀಯ ಘೋಷಣೆ ಅಲ್ಲ. ಸಂವಿಧಾನದ 370ನೇ ವಿಧಿ ಹಾಗೂ ಕಲಮು 35ಎ ಅನ್ನು ಮರುಸ್ಥಾಪಿಸುವವರೆಗೆ ನಾನು ಯಾವ ಚುನಾವಣೆಯಲ್ಲೂ ಸ್ಪರ್ಧಿಸುವುದಿಲ್ಲ. ಇದಕ್ಕೆ ತಿಂಗಳುಗಳು ಅಥವಾ ವರ್ಷಗಳೇ ಹಿಡಿಯಲಿ, ನಾವು ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಿಯೇ ತೀರುತ್ತೇವೆ’ ಎಂದು ಮೆಹಬೂಬಾ ಹೇಳಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್‌ನ ಉಪಾಧ್ಯಕ್ಷ ಒಮರ್ ಅಬ್ದುಲ್ಲ ಅವರೂ, ‘ನಾವು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆಂದರೆ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸುವುದು ಅಗತ್ಯ’ ಎಂದಿದ್ದಾರೆ.

ಕಳೆದ ವರ್ಷ ನವೆಂಬರ್–ಡಿಸೆಂಬರ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿದ್ದ ಜಿಲ್ಲಾಭಿವೃದ್ಧಿ ಮಂಡಳಿ (ಡಿಡಿಸಿ) ಚುನಾವಣೆಯಲ್ಲಿ ಪಿಡಿಪಿ ಮತ್ತು ಎನ್‌ಸಿ ಸ್ಪರ್ಧಿಸಿದ್ದವು.

ಪಕ್ಷದ ಸದಸ್ಯರಿಂದ ಆಕ್ಷೇಪ: ಎರಡೂ ಪಕ್ಷಗಳ ಮುಖಂಡರ ಹೇಳಿಕೆಗಳನ್ನು ಆಯಾ ಪಕ್ಷಗಳ ಇತರ ಕೆಲವು ನಾಯಕರು ಆಕ್ಷೇಪಿಸಿದ್ದಾರೆ. ಚುನಾವಣೆಯಲ್ಲಿ ಪಾಲ್ಗೊಳ್ಳದಿರುವುದರಿಂದ ಪಕ್ಷದ ಅಸ್ತಿತ್ವಕ್ಕೇ ಧಕ್ಕೆ ಆಗಬಹುದು ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕೆಲವು ನಾಯಕರು ಹೇಳಿದ್ದಾರೆ.

‘ಮೆಹಬೂಬಾ ಅವರು ಸರ್ಕಾರದ ಮುಂದಿಟ್ಟಿರುವ ಷರತ್ತುಗಳಿಂದ ಪಿಡಿಪಿಯೇ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. 2018ರಲ್ಲಿ ಅವರು ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಬಹಿಷ್ಕರಿಸಿದ್ದರು. ಅದರಿಂದ ಜಮ್ಮು ಮತ್ತು ಕಾಶ್ಮೀರದ ಹಿತಾಸಕ್ತಿಗೆ ಧಕ್ಕೆಯಾಯಿತು ಮತ್ತು ಪಿಡಿಪಿಗೆ ನಷ್ಟವಾಯಿತು. ಈಗಲೂ ಮೆಹಬೂಬಾ ಅವರ ತೀರ್ಮಾನವು ಅಪ್ರಬುದ್ಧವಾಗಿದೆ ಎಂದು ನನ್ನ ಅನಿಸಿಕೆ. ವಿಶೇಷ ಸ್ಥಾನಮಾನ ಮರುಸ್ಥಾಪಿಸುವುದು ಅಸಾಧ್ಯ ಎಂದು ನಮಗೆಲ್ಲರಿಗೂ ತಿಳಿದಿದೆ. ಇಂಥ ನಡೆಯಿಂದ ಪಕ್ಷಕ್ಕೆ ಇನ್ನಷ್ಟು ಹಾನಿ ಖಂಡಿತ’ ಎಂದು ಪಿಡಿಪಿಯ ನಾಯಕರೊಬ್ಬರು ಹೇಳಿದ್ದಾರೆ.

ವಿಶೇಷ ಸ್ಥಾನಮಾನ ಮರುಸ್ಥಾಪನೆ ಕುರಿತು ಬಿಜೆಪಿ ಹೊರತುಪಡಿಸಿ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಏಕಾಭಿಪ್ರಾಯ ಹೊಂದಿವೆ. ಆದರೂ, ಒಮರ್ ಮತ್ತು ಮೆಹಬೂಬಾ ಅವರ ಷರತ್ತು ಈಡೇರಿಸುವುದು ಅಸಾಧ್ಯ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ. ‘ಈ ನಿರ್ಧಾರವು ಜಮ್ಮು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಮತ್ತಷ್ಟು ನಿಧಾನವಾಗಿಸಲಿದೆ. ಈ ಇಬ್ಬರೂ ನಾಯಕರ ಮೇಲೆ ಮತದಾರರ ಒತ್ತಡ ಇದೆ. ನಾವು ಕೇಂದ್ರ ಸರ್ಕಾರದ ಆಣತಿಯಂತೆ ನಡೆವ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ ಎಂದು ತಮ್ಮ ಮತದಾರರಿಗೆ ಅವರು ತೋರಿಸಿಕೊಡುತ್ತಿದ್ದಾರೆ’ ಎಂದು ವಿಶ್ಲೇಷಕರು ಹೇಳಿದ್ದಾರೆ.


ನ್ಯಾಷನಲ್ ಕಾನ್ಫರೆನ್ಸ್ ಮುಖಂಡರಾದ ಒಮರ್ ಅಬ್ದುಲ್ಲಾ ಹಾಗೂ ಫಾರೂಕ್ ಅಬ್ದುಲ್ಲಾ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು —ಪಿಟಿಐ ಚಿತ್ರ

ಕಾಂಗ್ರೆಸ್ ಬಗ್ಗೆ ನಿರಾಸೆ

ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ಮರುಸ್ಥಾಪಿಸುವ ವಿಚಾರದಲ್ಲಿ ಕಾಂಗ್ರೆಸ್ ತಾಳಿರುವ ಮೌನವು ಅಲ್ಲಿನ ನಾಯಕರಲ್ಲಿ ನಿರಾಸೆ ಮೂಡಿಸಿದೆ. ‘ಈ ವಿಷಯವಾಗಿ ರಾಷ್ಟ್ರೀಯ ಪಕ್ಷಗಳು ಗೊಂದಲದಲ್ಲಿ ಇರುವಂತೆ ಕಾಣುತ್ತಿದೆ’ ಎಂದು ಸಿಪಿಎಂ ನಾಯಕ ಮತ್ತು ಗುಪ್ಕಾರ್ ಕೂಟದ ವಕ್ತಾರ ಯೂಸುಫ್ ತಾರಿಗಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

‘ರಾಜ್ಯದ ವಿಶೇಷ ಸ್ಥಾನಮಾನ ಮತ್ತು ಜನರ ಸಾಂವಿಧಾನಿಕ ಹಕ್ಕಿನ ಮರುಸ್ಥಾಪನೆ ಆಗಲೇಬೇಕು. ರಾಜ್ಯಪಾಲರು ಯಾವತ್ತೂ ಸಾಂವಿಧಾನಿಕ ಸ್ಥಾನ ಅಥವಾ ಜನರ ಸಾಂವಿಧಾನಿಕ ಹಕ್ಕುಗಳನ್ನು ಪ್ರತಿನಿಧಿಸುವುದಿಲ್ಲ. ನಮ್ಮ ಬೇಡಿಕೆಗಳನ್ನು ಪ್ರಧಾನಿ ಪರಿಗಣಿಸಲೇಬೇಕು. ನೀವು ನಾಗಾಲೆಂಡ್ ಜತೆಗೂ ಮಾತುಕತೆ ನಡೆಸುತ್ತಿರುವಿರಿ. ಅವರನ್ನು ಸದೆಬಡಿಯುವ ಕೆಲಸ ಮಾಡುತ್ತಿಲ್ಲವಲ್ಲಾ, ಕಾಶ್ಮೀರದಲ್ಲೂ ಅದೇ ನಿಲುವನ್ನು ಯಾಕೆ ತೋರಿಸಬಾರದು? ರಾಷ್ಟ್ರೀಯ ಪಕ್ಷಗಳ ಮೌನವು ನಮ್ಮ ಚಿಂತೆಗೆ ಈಡುಮಾಡಿದೆ’ ಎಂದು ಮಾಧ್ಯಮ ಪ್ರತಿನಿಧಿಗಳ ಮುಂದೆ ತಾರಿಗಾಮಿ ಹೇಳಿದ್ದಾರೆ.

ಅಧಿಕಾರಿಗಳಿಂದ ಶ್ಲಾಘನೆ

ಜಮ್ಮು ಕಾಶ್ಮೀರದ ಸಂಕೀರ್ಣವಾದ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರವು ಕೈಗೊಂಡ ಕ್ರಮ ಧೈರ್ಯಶಾಲಿ ಮತ್ತು ಅನುಕರಣೀಯವಾದ್ದು ಎಂದು 15ಮಂದಿ ನಿವೃತ್ತ ಐಪಿಎಸ್ ಅಧಿಕಾರಿಗಳು ಶ್ಲಾಘಿಸಿದ್ದಾರೆ.

ಈ ಬಗ್ಗೆ ಪ್ರಧಾನಿ ಮೋದಿಗೆ ಬಹಿರಂಗ ಪತ್ರ ಬರೆದಿರುವ ಅಧಿಕಾರಿಗಳು, ‘1950ರಲ್ಲಿ ಸಂವಿಧಾನವನ್ನು ಅಂಗೀಕರಿಸಿದ ದಿನದಿಂದಲೇ, ಕಾಶ್ಮೀರವನ್ನು ಸಂಪೂರ್ಣವಾಗಿ ಭಾರತದಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ಅಪೂರ್ಣವಾಗಿ ಉಳಿದಿತ್ತು. ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಈ ನಿಟ್ಟಿನಲ್ಲಿ ನಡೆಸಿದ ಪ್ರಯತ್ನವು ಸ್ಪಷ್ಟವಾಗಿ ಗೋಚರಿಸುವಂಥದ್ದು. ಯಾವುದೇ ಪ್ರಾಣಹಾನಿ ಆಗದಂತೆ ವಿಶೇಷ ಸ್ಥಾನಮಾನ ರದ್ದುಗೊಳಿಸಿರುವ ಕ್ರಮ ಶ್ಲಾಘನೀಯ’ ಎಂದಿದ್ದಾರೆ.

ಪತ್ರಕ್ಕೆ ಸಹಿಮಾಡಿದವರಲ್ಲಿ 10 ಮಂದಿ, ಈ ರಾಜ್ಯದಲ್ಲಿ ಡಿಜಿಪಿ ಹುದ್ದೆಯಲ್ಲಿ ಸೇವೆ ಸಲ್ಲಿಸಿದವರಾಗಿದ್ದಾರೆ.

ಹಳ್ಳಿಗಾಡಿನ ಡಿಜಿಟಲ್ ಸಂಪರ್ಕ ಸಮಸ್ಯೆ ನಿವಾರಿಸಿ: ಸಿಜೆಐ

ನವದೆಹಲಿ (ಪಿಟಿಐ): ಗ್ರಾಮೀಣ, ಬುಡಕಟ್ಟು, ದೂರದ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಡಿಜಿಟಲ್ ಸಂಪರ್ಕ ವ್ಯವಸ್ಥೆಯು ಕಳಪೆಯಾಗಿದ್ದು, ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವಂತೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರಿಗೆ ಪತ್ರ ಬರೆದಿದ್ದಾರೆ.


ಎನ್‌.ವಿ.ರಮಣ

ಡಿಜಿಟಲ್ ವಿಭಜನೆಯನ್ನು ಉಲ್ಲೇಖಿಸಿದ ಮುಖ್ಯ ನ್ಯಾಯಮೂರ್ತಿಗಳು, ಹಳ್ಳಿಗಾಡಿನಲ್ಲಿರುವ ಡಿಜಿಟಲ್ ಸಂಪರ್ಕವು ಕಳಪೆ ಗುಣಮಟ್ಟದ್ದಾಗಿದ್ದು, ನ್ಯಾಯ ವಿತರಣೆಯ ವೇಗದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ತಂತ್ರಜ್ಞಾನದ ಅಸಮಾನತೆಯಿಂದಾಗಿ ಇಡೀ ಪೀಳಿಗೆಯ ವಕೀಲರನ್ನು ವ್ಯವಸ್ಥೆಯಿಂದ ಹೊರಗಿಡಲಾಗುತ್ತಿದೆ. ದೇಶದಾದ್ಯಂತದ ಸಾವಿರಾರು ಯುವ ವಕೀಲರನ್ನು ಅವರ ಜೀವನೋಪಾಯದಿಂದ ವಂಚಿತಗೊಳಿಸುತ್ತಿದೆ’ ಎಂದು ಅವರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ಅವರು ಬರೆದಿರುವ ‘ಕಾನೂನು ಮತ್ತು ನ್ಯಾಯದಲ್ಲಿನ ವೈಪರೀತ್ಯಗಳು’ ಪುಸ್ತಕ ಬಿಡುಗಡೆಯ ವರ್ಚುವಲ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪುಸ್ತಕದ ಬಿಡುಗಡೆಯ ನಂತರ ನಡೆದ ಚರ್ಚೆಯ ಸಂದರ್ಭದಲ್ಲಿ ಅವರು, ಇತ್ತೀಚೆಗೆ ನಡೆಸಿದ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಎರಡು ದಿನಗಳ ಸಮ್ಮೇಳನದಲ್ಲೂ ಡಿಜಿಟಲ್ ಸಂಪರ್ಕದ ವಿಷಯವು ಪ್ರಮುಖವಾಗಿ ಚರ್ಚೆಯಾಯಿತು ಎಂದು ತಿಳಿಸಿದ್ದಾರೆ.

ಸ್ಫೋಟ ಪ್ರಕರಣ: ಪ್ರಮುಖ ರೂವಾರಿ ಪತ್ತೆ

ಲಾಹೋರ್ (ಪಿಟಿಐ): ನಿಷೇಧಿತ ಜಮಾತ್ ಉದ್ ದಾವಾ (ಜೆಯುಡಿ) ಸಂಘಟನೆಯ ಮುಖ್ಯಸ್ಥ, 2008ರ ಮುಂಬೈನ ಉಗ್ರರ ದಾಳಿ ಪ್ರಕರಣದ ಸೂತ್ರಧಾರಿ ಹಫೀಜ್ ಸಯೀದ್ ನಿವಾಸದ ಬಳಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ರೂವಾರಿಯನ್ನು ಪಾಕ್‌ನ ಭದ್ರತಾ ಸಂಸ್ಥೆ ಪತ್ತೆ ಮಾಡಿದ್ದು, ಮತ್ತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಶಂಕಿತ ಆರೋಪಿ ಪೀಟರ್ ಪಾಲ್ ಡೇವಿಡ್ ನೀಡಿದ ಮಾಹಿತಿ ಆಧರಿಸಿ ಲಾಹೋರ್, ಶೇಖುಪುರ, ಪೇಶಾವರದಿಂದ ಮೂವರು ಶಂಕಿತರನ್ನುಬಂಧಿಸಲಾಗಿದೆಎಂದುಭಯೋತ್ಪಾದನಾ ನಿಗ್ರಹ ಇಲಾಖೆ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಲಸಿಕೆ ಕಾರ್ಯಕ್ರಮದ ವೇಗ ಕುಂಠಿತ ಆಗಬಾರದು’


ಮೋದಿ

ನವದೆಹಲಿ (ಪಿಟಿಐ): ದೇಶದಲ್ಲಿ ನಡೆಯುತ್ತಿರುವ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ವೇಗ ನೀಡಲು ಈ ಅಭಿಯಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳನ್ನು ತೊಡಗಿಸಿಕೊಳ್ಳುವುದು ಅಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಕೋವಿಡ್ ಲಸಿಕೆ ಕಾರ್ಯಕ್ರಮದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದರು.

‘ಈಗ ನಡೆಯುತ್ತಿರುವ ಲಸಿಕೆ ಕಾರ್ಯಕ್ರಮದ ವೇಗ ಕುಂಠಿತಗೊಳ್ಳದಂತೆ ನೋಡಿಕೊಳ್ಳುವುದು ಮುಖ್ಯ. ಅದೇ ರೀತಿ ಕೋವಿಡ್–19 ಪರೀಕ್ಷೆಗಳು ಕಡಿಮೆಯಾಗಬಾರದು. ಈ ನಿಟ್ಟಿನಲ್ಲಿ ಅಧಿಕಾರಿಗಳು ರಾಜ್ಯಗಳೊಂದಿಗೆ ಸಮನ್ವಯ ಸಾಧಿಸಿ, ಖಾತ್ರಿಪಡಿಸಿಕೊಳ್ಳಬೇಕು’ ಎಂದು ಸೂಚಿಸಿದರು.

‘ಲಸಿಕೆ ಕಾರ್ಯಕ್ರಮಕ್ಕೆ ಇನ್ನಷ್ಟು ವೇಗ ನೀಡುವ ಸಲುವಾಗಿ ನವೀನ ವಿಧಾನಗಳನ್ನು ಅನುಸರಿಸಲಾಗುತ್ತಿದೆ ಎಂಬುದಾಗಿ ಅಧಿಕಾರಿಗಳು ಪ್ರಧಾನಿಯವರಿಗೆ ವಿವರಿಸಿದರು’ ಎಂದು ಪ್ರಧಾನ ಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ವೇಗವಾಗಿ ಹರಡುತ್ತಿದೆ ಡೆಲ್ಟಾ ರೂಪಾಂತರ ತಳಿ

85 ದೇಶಗಳಲ್ಲಿ ಪತ್ತೆ: ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ

ಲಂಡನ್ (ಎಪಿ): ಕೊರೊನಾ ವೈರಸ್‌ನ ಡೆಲ್ಟಾ ರೂಪಾಂತರವು ಈವರೆಗೆ ಪತ್ತೆಯಾಗಿರುವ ರೂಪಾಂತರಿತ ವೈರಸ್‌ಗಳಲ್ಲೇ ಅತಿ ಹೆಚ್ಚು ಹರಡುವಂಥದ್ದಾಗಿದ್ದು, 85 ರಾಷ್ಟ್ರಗಳಲ್ಲಿ ಪತ್ತೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮುಖ್ಯಸ್ಥ ಟೆಡ್ರೋಸ್ ಅಧನಾಮ್ ಗೆಬ್ರೆಯೆಸಸ್ ಹೇಳಿದ್ದಾರೆ.

ಬಡ ದೇಶಗಳಲ್ಲಿ ಲಸಿಕೆಗಳ ಕೊರತೆಯು ಡೆಲ್ಟಾ ರೂಪಾಂತರದ ಪ್ರಸರಣ ಉಲ್ಬಣಗೊಳ್ಳುತ್ತಿರುವುದಕ್ಕೆ ಕಾರಣ ಎಂದು ಹೇಳಿದ್ದಾರೆ. ಲಸಿಕೆಗಳ ಹಂಚಿಕೆಗಾಗಿ ಸ್ಥಾಪಿಸಲಾದ ಸಲಹಾ ಗುಂಪಿನ ಸಭೆಯಲ್ಲಿ ಭಾಗವಹಿಸಿದ ಬಳಿಕ ಮಾಹಿತಿ ನೀಡಿದ್ದಾರೆ.

‘ಹಂಚಿಕೆ ಮಾಡಲು ಲಸಿಕೆ ಇಲ್ಲದಿರುವುದು ಗುಂಪಿನ ಸದಸ್ಯರನ್ನು ಹತಾಶರನ್ನಾಗಿಸಿದೆ’ ಎಂದಿರುವ ಅವರು, ಲಸಿಕೆಯೇ ಇಲ್ಲದಿದ್ದರೆ ಏನನ್ನು ಹಂಚಿಕೆ ಮಾಡುವುದು ಎಂದು ಪ್ರಶ್ನಿಸಿದ್ದಾರೆ. ಜತೆಗೆ, ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ತಕ್ಷಣ ಲಸಿಕೆ ನೀಡಲು ನಿರಾಕರಿಸುತ್ತಿರುವುದನ್ನು ಟೀಕಿಸಿದ್ದಾರೆ.

ದಶಕಗಳ ಹಿಂದೆ ಏಡ್ಸ್ ಮತ್ತು 2009ರಲ್ಲಿ ಹಂದಿ ಜ್ವರ ಬಿಕ್ಕಟ್ಟಿನ ಸಂದರ್ಭದಲ್ಲಿ ಮಾಡಿದ ತಪ್ಪುಗಳನ್ನೇ ಜಾಗತಿಕ ಸಮುದಾಯವು ಮತ್ತೆ ಮಾಡುತ್ತಿದ್ದು, ಬಿಕ್ಕಟ್ಟನ್ನು ಎದುರಿಸುವಲ್ಲಿ ವಿಫಲವಾಗಿದೆ ಎಂದು ಅವರು ಹೇಳಿದ್ದಾರೆ.

ಲಸಿಕೆ ಹಂಚಿಕೆಗೆ ವಿಶ್ವಸಂಸ್ಥೆ ಬೆಂಬಲದಲ್ಲಿ ಸ್ಥಾಪನೆಯಾಗಿರುವ ‘ಕೊವ್ಯಾಕ್ಸ್’ಗೆ ಇನ್ನೂ ಅನೇಕ ಡೋಸ್ ಲಸಿಕೆಗಳು ದೊರೆತಿಲ್ಲ. ಈ ವರ್ಷದ ಅಂತ್ಯದ ವರೆಗೂ ನಿರೀಕ್ಷಿತ ಪ್ರಮಾಣದಲ್ಲಿ ಲಸಿಕೆ ದೊರೆಯುವ ಭರವಸೆಯಿಲ್ಲ ಎನ್ನಲಾಗಿದೆ.

ಅಮೆರಿಕ, ಬ್ರಿಟನ್ ಸೇರಿದಂತೆ ಹಲವು ರಾಷ್ಟ್ರಗಳು ನೀಡಿರುವ ಭರವಸೆಯಂತೆ ಲಭ್ಯವಾಗಬೇಕಿರುವ ಲಸಿಕೆಗಳು ಸದ್ಯಕ್ಕೆ ದೊರೆಯುವ ಲಕ್ಷಣಗಳಿಲ್ಲ ಎನ್ನಲಾಗಿದೆ.

ತಮಿಳುನಾಡಿನಲ್ಲಿ ಮೊದಲ ಸಾವು

ಚೆನ್ನೈ (ಪಿಟಿಐ): ಕೊರೊನಾ ವೈರಸ್‌ನ ಡೆಲ್ಟಾ ಪ್ಲಸ್ ತಳಿ ಸೋಂಕಿನಿಂದಾಗಿ ತಮಿಳುನಾಡಿನಲ್ಲಿ ಮೊದಲ ಸಾವು ಸಂಭವಿಸಿದೆ.

ಮದುರೈ ಮೂಲದ ವ್ಯಕ್ತಿ ಡೆಲ್ಟಾ ಪ್ಲಸ್ ತಳಿಯ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಶನಿವಾರ ತಿಳಿಸಿದೆ.

‘ರಾಜ್ಯದ ಮೂವರಲ್ಲಿ ಡೆಲ್ಟಾ ಪ್ಲಸ್ ತಳಿಯ ಸೋಂಕು ಕಂಡುಬಂದಿತ್ತು. ಈ ಪೈಕಿ ಇಬ್ಬರು ಗುಣಮುಖರಾಗಿದ್ದಾರೆ. ಮೃತ ವ್ಯಕ್ತಿಯ ಸಂಪರ್ಕಿತರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಎಲ್ಲರ ವರದಿ ನೆಗೆಟಿವ್ ಬಂದಿದೆ’ ಎಂದು ಆರೋಗ್ಯ ಸಚಿವ ಎಂ.ಎ.ಸುಬ್ರಮಣಿಯನ್ ತಿಳಿಸಿದ್ದಾರೆ.

ಎಕ್ಸ್‌ಗ್ರೇಷಿಯಾ: ಹಣಕಾಸು ಆಯೋಗ ಶಿಫಾರಸು ಮಾಡಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದಾಗಿ ಸಾವನ್ನಪ್ಪಿದವರ ಕುಟುಂಬಗಳಿಗೆ ಎಕ್ಸ್‌ಗ್ರೇಷಿಯಾ ನೀಡುವಂತೆ ಹಣಕಾಸು ಆಯೋಗ ಶಿಫಾರಸು ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಕೋವಿಡ್‌ನಿಂದ ಸಾವನ್ನಪ್ಪಿದವರ ಕುಟುಂಬಗಳಿಗೆ ಕೆಲವು ರಾಜ್ಯಗಳು ಎಕ್ಸ್‌ಗ್ರೇಷಿಯಾ ನೀಡುತ್ತಿವೆ. ಆದರೆ, ಇದನ್ನು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಪಾವತಿಸುತ್ತಿಲ್ಲ ಎಂದೂ ತಿಳಿಸಿದೆ.

ಕೋವಿಡ್–19 ಅನ್ನು ವಿಪತ್ತು ಎಂಬುದಾಗಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಹೀಗಾಗಿ ಅದರಿಂದ ಮೃತಪಟ್ಟವರ ಕುಟುಂಬಗಳಿಗೆ ₹ 4 ಲಕ್ಷ ಎಕ್ಸ್‌ಗ್ರೇಷಿಯಾ ನೀಡಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಿ ಕೆಲವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರವು ಸುಪ್ರೀಂಕೋರ್ಟ್‌ಗೆ ತನ್ನ ಸ್ಪಷ್ಟನೆ ಸಲ್ಲಿಸಿದೆ.

ಸಕ್ರಿಯ ಪ್ರಕರಣ 1.05 ಲಕ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 4,272 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.05 ಲಕ್ಷಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಈ ವೇಳೆ 4.09 ಲಕ್ಷ ಸಕ್ರಿಯ ಪ್ರಕರಣಗಳಿದ್ದವು. ಒಂದು ದಿನದಲ್ಲಿ 1.65 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.58 ರಷ್ಟು ವರದಿಯಾಗಿದೆ.

ರಾಜ್ಯದ 28 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. ಬೆಂಗಳೂರಿನಲ್ಲಿ 955 ಮಂದಿ ಹಾಗೂ ಮೈಸೂರಿನಲ್ಲಿ 647 ಮಂದಿಗೆ ಸೋಂಕು ತಗುಲಿದೆ. ಈ ಸಂಖ್ಯೆ 16 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.31 ಲಕ್ಷ ದಾಟಿದೆ.

ಸೋಂಕಿತರಲ್ಲಿ 115 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.69ರಷ್ಟು ವರದಿಯಾಗಿದೆ. ರಾಜ್ಯದ 24 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 22 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ 16, ದಕ್ಷಿಣ ಕನ್ನಡದಲ್ಲಿ 14 ಮಂದಿ ಹಾಗೂ ಬೆಳಗಾವಿಯಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 34,654ಕ್ಕೆ ತಲುಪಿದೆ. ಸೋಂಕಿತರಲ್ಲಿ 6,126 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.91 ಲಕ್ಷ ದಾಟಿದೆ.

ಜಾರ್ಜ್‌ಫ್ಲಾಯ್ಡ್ ಹತ್ಯೆ: ಮಾಜಿ ಪೊಲೀಸ್ ಅಧಿಕಾರಿ ಚೌವಿನ್‌ಗೆ 22 ವರ್ಷ ಜೈಲು

ಮಿನ್ನೆಪೊಲಿಸ್ (ಎಪಿ): ಕಪ್ಪುವರ್ಣೀಯ ಅಮೆರಿಕನ್ ಜಾರ್ಜ್ ಫ್ಲಾಯ್ಡ್ ಹತ್ಯೆಯ ಆರೋಪಿಯಾದ ಮಿನ್ನೆಪೊಲಿಸ್‌ನ ಮಾಜಿ ಪೊಲೀಸ್ ಅಧಿಕಾರಿ ಡೆರೆಕ್ ಚೌವಿನ್‌ಗೆ 22 ವರ್ಷ, 6 ತಿಂಗಳ ಜೈಲು ಶಿಕ್ಷೆಯನ್ನು ಇಲ್ಲಿನ ನ್ಯಾಯಾಲಯ ವಿಧಿಸಿದೆ.

ಮಿನ್ನೆಪೊಲಿಸ್‌ನ ಪೊಲೀಸ್ ಅಧಿಕಾರಿಯಾಗಿದ್ದ ಡೆರೆಕ್ ಚೌವಿನ್, ಕಳೆದ ವರ್ಷದ ಮೇ 25ರಂದು ಜಾರ್ಜ್ ಫ್ಲಾಯ್ಡ್ ಕುತ್ತಿಗೆ ಮೇಲೆ ಮೊಣಕಾಲಿನಿಂದ ಒತ್ತಿ ಹತ್ಯೆ ಮಾಡಿದ್ದರು. ಇದು ಅಮೆರಿಕದಲ್ಲಿ ಜನಾಂಗೀಯ ದೌರ್ಜನ್ಯ ವಿರುದ್ಧದ ಹೋರಾಟ ತೀವ್ರವಾಗಲು ಕಾರಣವಾಗಿತ್ತು.


ಈ ಹತ್ಯೆ ನಡೆದ ವರ್ಷದ ನಂತರ ಚೌವಿನ್‌ಗೆ ಶಿಕ್ಷೆ ವಿಧಿಸಲಾಗಿದೆ. ಇದು, ಕಪ್ಪು ವರ್ಣೀಯರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಅಮೆರಿಕದ ಪೊಲೀಸ್ ಅಧಿಕಾರಿಯೊಬ್ಬರಿಗೆ ವಿಧಿಸಲಾದ ದೀರ್ಘ ಜೈಲು ಶಿಕ್ಷೆಯಾಗಿದೆ.

ಚೌವಿನ್‌ಗೆ ನೀಡಿರುವ ಶಿಕ್ಷೆಯ ಪ್ರಮಾಣದ ಬಗ್ಗೆ ಫ್ಲಾಯ್ಡ್ ಕುಟುಂಬದ ಸದಸ್ಯರು ಮತ್ತು ಇತರರು ನಿರಾಶೆಗೊಂಡಿದ್ದಾರೆ. ಸರ್ಕಾರದ ಪರ ವಕೀಲರು ಕೋರಿದ 30 ವರ್ಷಗಳ ಶಿಕ್ಷೆಯೂ ಕಡಿಮೆಯಾಗಿದೆ. ಏಕೆಂದರೆ, 45ರ ಹರೆಯದ ಚೌವಿನ್, ತನಗೆ ವಿಧಿಸಿರುವ ಶಿಕ್ಷೆಯ ಮೂರನೇ ಎರಡರಷ್ಟು ಅವಧಿ ಅಥವಾ 15 ವರ್ಷ ಪೂರ್ಣಗೊಂಡ ನಂತರ, ಉತ್ತಮ ನಡವಳಿಕೆ ಆಧಾರದ ಮೇಲೆ ಪರೋಲ್ ಮೇಲೆ ಹೊರಬರುತ್ತಾನೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 27 ಜೂನ್ 2021


ಹಂಪಿಯನ್ನು ಹೀಗೆ ನೋಡಿ 9


ನಾವೆಲ್ಲರೂ ಕ್ಷಮೆಯ ಸಾಲಗಾರರು... 10


ಕ್ಲಬ್‌ಹೌಸ್‌ಗೆ ಬಂದ್ರು 'ಅಮ್ಮಾವ್ರ ಗಂಡ' 11



ಪಿವಿಎನ್ ಸಹಮತದ ಸಾಧಕ

ಸಂಜಯ್ ಬಾರು

'ಪಿವಿ' ಎಂದೇ ತವರು ರಾಜ್ಯ ತೆಲಂಗಾಣದಲ್ಲಿ (ಆಗಿನ ಆಂಧ್ರ ಪ್ರದೇಶ) ಜನಪ್ರಿಯರಾಗಿದ್ದ ಪಾಮುಲಪರ್ತಿ ವೆಂಕಟ ನರಸಿಂಹ ರಾವ್ ಅವರು 1991ರ ಆ ಬೇಸಗೆಯ ಹೊತ್ತಿಗೆ ರಾಜಕೀಯ ನಿವೃತ್ತಿಯ ಅಂಚಿನಲ್ಲಿದ್ದರು. ಚಿಂತಕರ ಚಾವಡಿಯೊಂದನ್ನು ಆರಂಭಿಸುವುದು ಮತ್ತು ಉಳಿದ ಸಮಯವನ್ನು ಪ್ರಾರ್ಥನೆಗೆ ಮೀಸಲಿಡುವುದರ ಬಗ್ಗೆ ಯೋಚಿಸುತ್ತಿದ್ದರು. ಆ ಸಂದರ್ಭದಲ್ಲಿ ಭಾರತದ ಪ್ರಧಾನಿ ಹುದ್ದೆಗೆ ಬನ್ನಿ ಎಂಬ ಕರೆ ಬಂದಿತ್ತು. ಆಗ ಅವರಿಗೆ 70 ವರ್ಷ ವಯಸ್ಸು. ಇದೇ 28ರಂದು ನರಸಿಂಹ ರಾವ್ ಅವರ ಜನ್ಮಶತಮಾನೋತ್ಸವ. ಭಾರತದ ಆಚರಣೆ ಕೇಂದ್ರಿತ ಪರಂಪರೆಯಿಂದಾಗಿ ಈ ವಾರ ಪೂರ್ತಿ ರಾವ್ ಅವರು ಸುದ್ದಿಯಲ್ಲಿರಬಹುದು. ಭಾರತದ ಅತ್ಯುನ್ನತ ಪುರಸ್ಕಾರವಾದ 'ಭಾರತ ರತ್ನ' ನೀಡಿ ರಾವ್ ಅವರನ್ನು ಗೌರವಿಸಿ ಎಂದು ತೆಲಂಗಾಣ ಸರ್ಕಾರವು ರಾಷ್ಟ್ರಪತಿ ಮತ್ತು ಪ್ರಧಾನಿಗೆ ಈಗಾಗಲೇ ಮನವಿ ಮಾಡಿದೆ.

ನರಸಿಂಹ ರಾವ್ ಅವರ ಅವಧಿಯ ಮಹತ್ವದ ಬಗ್ಗೆ ರಾಜಕೀಯ ವಿಶ್ಲೇಷಕರು, ಅರ್ಥಶಾಸ್ತ್ರಜ್ಞರು ಮತ್ತು ರಾಜತಾಂತ್ರಿಕರು ಚರ್ಚೆ ಮುಂದುವರಿಸಿದ್ದಾರೆ. 1947ರ ಬಳಿಕ 1991 ಭಾರತದ ಸಮಕಾಲೀನ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾದುದು ಎಂಬ ಬಗ್ಗೆ ವ್ಯಾಪಕವಾದ ಸಮ್ಮತಿ ಇದೆ. '1991: ಹೌ ನರಸಿಂಹ ರಾವ್ ಮೇಡ್ ಹಿಸ್ಟರಿ' ಕೃತಿಯಲ್ಲಿ ನಾನು ಪ್ರತಿಪಾದಿಸಿದಂತೆ, ಆ ವರ್ಷವು ವ್ಯಕ್ತಿಯ ಹೆಸರನ್ನು ಚಿರಸ್ಥಾಯಿಯಾಗಿಸಿದರೆ ವ್ಯಕ್ತಿಯು ವರ್ಷವನ್ನು ಸ್ಮರಣೀಯವಾಗಿಸಿದರು. 'ಸಮಾಜಗಳು ಸಮಯದ ನಿರ್ದಿಷ್ಟ ಕ್ಷಣವನ್ನು 'ಮೈಲುಗಲ್ಲು' ಎಂದು ಗುರುತಿಸುವುದು ಆ ಕ್ಷಣವನ್ನು ಎಲ್ಲರೂ ಅನುಭವಿಸಿದ್ದಾರೆ ಅಥವಾ ಅದು ಎಲ್ಲರ ಅನುಭವಕ್ಕೆ ಬಂದಿದೆ ಎಂಬ ಕಾರಣಕ್ಕೆ ಅಲ್ಲ. ಬದಲಿಗೆ, ನಿರ್ದಿಷ್ಟ ಘಟನೆ ಅಥವಾ ವರ್ಷವು ಚಾರಿತ್ರಿಕ ಮೈಲುಗಲ್ಲು ಎಂಬ ಬಗ್ಗೆ ತರುವಾಯದಲ್ಲಿ ಮೂಡುವ ಸಾಮಾಜಿಕ ಸಹಮತದಿಂದಾಗಿ' ಎಂಬುದು ಇತಿಹಾಸಕಾರ ಎರಿಕ್ ಹಾಬ್ಸ್‌ಬಾಮ್‌ನ ಪ್ರಸಿದ್ಧ ಹೇಳಿಕೆ. 1991 ಪಲ್ಲಟವೊಂದು ಸಾಧ್ಯವಾದ ವರ್ಷ ಎಂಬ ವಿಚಾರದಲ್ಲಿ ಸಹಮತ ಇದೆ.

ಭಾರತವು ತನ್ನ ಆರ್ಥಿಕ ನೀತಿಯ ದಿಕ್ಕನ್ನು ಬದಲಿಸಿತು ಎಂಬುದಷ್ಟೇ ಇದಕ್ಕೆ ಕಾರಣವಲ್ಲ; ಶೀತಲ ಸಮರವು ಕೊನೆಗೊಂಡು, ಸೋವಿಯತ್ ಒಕ್ಕೂಟದ ಅಂತಃಸ್ಫೋಟದ ನಂತರದ ಜಗತ್ತನ್ನು ನೋಡುವ ಬಗೆಯನ್ನೇ ಭಾರತವು ಮರುರೂಪಿಸಿಕೊಂಡಿತು. ದೇಶೀಯವಾಗಿ ಆರ್ಥಿಕ ನೀತಿ ಮತ್ತು ಜಾಗತಿಕವಾಗಿ ವಿದೇಶಾಂಗ ನೀತಿಯಲ್ಲಿನ ಪಲ್ಲಟವು 'ನೆಹರೂ ಯುಗ' ಎಂಬ ಒಂದು ಯುಗವನ್ನು ಕೊನೆಗೊಳಿಸಿ ನೆಹರೂ ಉತ್ತರ ಯುಗಕ್ಕೆ ನಾಂದಿ ಹಾಡಿತು. ನಾನು ಹಾಗೆ ಏಕೆ ಹೇಳುತ್ತೇನೆ ಎಂಬುದನ್ನು ನನ್ನ ಪುಸ್ತಕದಲ್ಲಿ ವಿವರಿಸಿದ್ದೇನೆ. ಈ ಎರಡೂ ಪಲ್ಲಟಗಳಿಗೆ ನರಸಿಂಹ ರಾವ್ ಅವರು ರಾಜಕೀಯ ನಾಯಕತ್ವ ಕೊಟ್ಟರು. ಅರ್ಥಶಾಸ್ತ್ರಜ್ಞ ಮನಮೋಹನ್ ಸಿಂಗ್ ಅವರು ಮೊದಲನೆಯದರ ರೂವಾರಿಯಾದರೆ, ವಿದೇಶಾಂಗ ಕಾರ್ಯದರ್ಶಿ ಜೆ.ಎನ್. ದೀಕ್ಷಿತ್ ಅವರ ನೇತೃತ್ವದ ರಾಜತಾಂತ್ರಿಕರ ತಂಡವು ಎರಡನೆಯದನ್ನು ಜಾರಿಗೆ ತಂದು ಇತಿಹಾಸದಲ್ಲಿ ಸ್ಥಾನ ಪಡೆದುಕೊಂಡಿತು.

ತೆಲಂಗಾಣ ಸರ್ಕಾರವು ರಾವ್ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರಿಗೆ ನಮನ ಸಲ್ಲಿಸುವುದಕ್ಕಾಗಿ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲಿದೆ. ಅದನ್ನು ಸಂಪಾದಿಸುವ ಸೌಭಾಗ್ಯ ನನ್ನದಾಗಿದೆ. ಭಾರತದ ಆರ್ಥಿಕ, ವಿದೇಶಾಂಗ ಮತ್ತು ರಕ್ಷಣಾ ನೀತಿಯಲ್ಲಿನ ಪಲ್ಲಟಕ್ಕೆ ರಾವ್ ಅವರ ಕೊಡುಗೆಯ ಬಗ್ಗೆ ಅವರ ಸಮಕಾಲೀನರಾಗಿದ್ದ ಹಲವರು ನೆನಪು ಮಾಡಿಕೊಂಡಿದ್ದಾರೆ. ಅತ್ಯಂತ ಅನಿರೀಕ್ಷಿತವಾದ ಹೊಣೆಗಾರಿಕೆಯನ್ನು ರಾವ್ ಅವರು ನಿರ್ವಹಿಸಿದರು ಎಂಬುದೇ ರಾವ್ ಅವರ ಕೊಡುಗೆಯ ಪ್ರಮುಖ ಅಂಶ; ಅಯಾಚಿತವಾಗಿ ಬಂದ ಐತಿಹಾಸಿಕ ಅವಕಾಶವನ್ನು ರಾವ್ ಅವರು ಅತ್ಯುತ್ತಮವಾಗಿ ಬಳಕೆ ಮಾಡಿದರು ಮತ್ತು ಐತಿಹಾಸಿಕ ಛಾಪು ಮೂಡಿಸುವುದಕ್ಕೆ ಇದು ಅವರಿಗೆ ಅವಕಾಶವನ್ನು ಒದಗಿಸಿತು.

> ದೇಶದ ಆರ್ಥಿಕ ದಿಕ್ಕನ್ನೇ ತಿರುಗಿಸಿದ ಪ್ರಧಾನಿಯಾಗಿ ಚರಿತ್ರೆಯಲ್ಲಿ ದಾಖಲಾಗಿರುವ ಪಿ.ವಿ. ನರಸಿಂಹರಾವ್ ಅವರ ಜನ್ಮಶತಾಬ್ದಿ ಸಂದರ್ಭದಲ್ಲಿ ಅವರ ವ್ಯಕ್ತಿತ್ವದ ಮೇಲೊಂದು ಇಣುಕು ನೋಟ

'ಪ್ರಾಮಾಣಿಕತೆ ಮತ್ತು ಸ್ಪಷ್ಟ ಗುರಿಯ ನಿದರ್ಶನದಂತೆ ರಾವ್ ಇದ್ದರು. ಅವರು ನೇರ ಮತ್ತು ಸ್ಪಷ್ಟವಾಗಿದ್ದರು. ಸಮೃದ್ಧ ಮತ್ತು ಚಲನಶೀಲ ಭಾರತದ ಬಗ್ಗೆ ಸಮಗ್ರ ದೃಷ್ಟಿಕೋನ ಹೊಂದಿದ್ದರು' ಎಂದು ಆಗ ಸಿಂಗಪುರದ ಪ್ರಧಾನಿಯಾಗಿದ್ದ ಗೊಹ್ ಚೊಕ್ ಟಾಂಗ್ ಅವರು ರಾವ್ ಅವರನ್ನು ನೆನಪಿಸಿಕೊಂಡಿದ್ದಾರೆ. 'ಅವರೊಬ್ಬ ಬುದ್ಧಿವಂತ ನಾಯಕ. ರಾಜಕೀಯವಾಗಿ ದೂರಗಾಮಿ ನೋಟ ಹೊಂದಿದ್ದರು ಮತ್ತು ವಾಸ್ತವವಾದಿಯಾಗಿದ್ದ ಅವರದ್ದು ಎಲ್ಲರೂ ಇಷ್ಟಪಡುವ ವ್ಯಕ್ತಿತ್ವ' ಎಂದು ನೆನಪಿಸಿಕೊಂಡವರು ಬ್ರಿಟನ್‌ನ ಮಾಜಿ ಪ್ರಧಾನಿ ಜಾನ್ ಮೇಜರ್.

ಸ್ಪಷ್ಟ ಗುರಿ ಮತ್ತು ದೃಷ್ಟಿಕೋನದೊಂದಿಗೆ ವಾಸ್ತವಿಕ ಹಾಗೂ ಮೃದು ಧೋರಣೆ, ಎಲ್ಲರೂ ಮೆಚ್ಚುವ ವ್ಯಕ್ತಿತ್ವ, ಸಹಮತದ ರಾಜಕೀಯ ಶೈಲಿಯಿಂದಾಗಿ ನರಸಿಂಹ ರಾವ್ ಅವರ ಮೇಲೆ ಎಷ್ಟು ನಿರೀಕ್ಷೆ ಇರಿಸಲಾಗಿತ್ತೋ ಅದಕ್ಕಿಂತ ಬಹಳ ಹೆಚ್ಚಿನದನ್ನು ಸಾಧಿಸಲು ಅವರಿಗೆ ಸಾಧ್ಯವಾಯಿತು. ತಮ್ಮ ಕಾಲದ ರಾಜಕೀಯದಲ್ಲಿ ರಾವ್ ಅವರು ಎರಡು ಬಹುದೊಡ್ಡ ತೊಡಕುಗಳನ್ನು ಎದುರಿಸಬೇಕಿತ್ತು– ಮೊದಲನೆಯದಾಗಿ, ಕಾಂಗ್ರೆಸ್ ಸಂಸದೀಯ ಪಕ್ಷದ ಮೇಲೆ ಅವರಿಗೆ ಸ್ವತಂತ್ರವಾದ ನಿಯಂತ್ರಣ ಇರಲಿಲ್ಲ; ಎರಡು, ಅವರು ದಕ್ಷಿಣ ಭಾರತದಿಂದ ಬಂದ ಮೊದಲನೆಯ ಪ್ರಧಾನಿ ಆಗಿದ್ದರು. ದೆಹಲಿ ದರ್ಬಾರ್ ನಿಯಂತ್ರಣವು ಅಲ್ಲಿಯವರೆಗೆ ನೆಹರೂ–ಗಾಂಧಿ ಕುಟುಂಬದ ಅಧೀನದಲ್ಲಿತ್ತು ಮತ್ತು ರಾಜಕೀಯ ಅಧಿಕಾರವು ಉತ್ತರ ಭಾರತದ ರಾಜಕಾರಣಿಗಳಲ್ಲಿ ಕೇಂದ್ರೀಕೃತವಾಗಿತ್ತು. ಈ ಎಲ್ಲ ತೊಡಕುಗಳನ್ನು ದಾಟಿದ ರಾವ್ ಅವರು ನೆಹರೂ ಕುಟುಂಬದ ಹೊರಗಿನ ಮತ್ತು ಪ್ರಧಾನಿಯಾಗಿ ಐದು ವರ್ಷದ ಅವಧಿ ಪೂರ್ಣಗೊಳಿಸಿದ ದಕ್ಷಿಣ ಭಾರತದ ಮೊದಲ ವ್ಯಕ್ತಿ ಎನಿಸಿಕೊಂಡರು. ಲೋಕಸಭೆಗೆ 1996ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷದ ಸೋಲಿನ ಬಳಿಕ ಪ್ರಧಾನಿ ಹುದ್ದೆಗೆ ರಾವ್ ಅವರು ದಕ್ಷಿಣ ಭಾರತದ ವ್ಯಕ್ತಿಗೆ ಬೆಂಬಲ ನೀಡಿದ್ದರು ಎಂಬುದೂ ಗಮನಾರ್ಹ. ಕರ್ನಾಟಕದ ಎಚ್.ಡಿ.ದೇವೇಗೌಡ ಅವರು ರಾವ್ ಅವರ ಉತ್ತರಾಧಿಕಾರಿಯಾದರು.

1991ರ ನಂತರದ ಮೂರು ದಶಕಗಳಲ್ಲಿ ಕೇಂದ್ರದಲ್ಲಿ ವಿವಿಧ ರಾಜಕೀಯ ಪಕ್ಷಗಳು ಮತ್ತು ವಿವಿಧ ರೀತಿಯ ಮೈತ್ರಿಕೂಟಗಳು ಅಧಿಕಾರಕ್ಕೆ ಬಂದರೂ ನರಸಿಂಹ ರಾವ್ ಅವರ ಅವಧಿಯಲ್ಲಿ ಪರಿವರ್ತನೆಗೊಂಡ ನೀತಿಯ ವಿಚಾರದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ ಎಂಬದು ಆಗಿನ ಪಲ್ಲಟದ ಮಹತ್ವ ಏನು ಎಂಬುದನ್ನು ಸೂಚಿಸುತ್ತದೆ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಶತಮಾನೋತ್ಸವ ಸಂಚಿಕೆಗೆ ಬರೆದ ಲೇಖನದಲ್ಲಿ ನರಸಿಂಹ ರಾವ್ ಅವರ ತಾಳ್ಮೆ ಸ್ವಭಾವ ಮತ್ತು ಗಾಢವಾದ ರಾಜಕೀಯ ಪರಿಣತಿಯನ್ನು ನೆನಪಿಸಿಕೊಂಡಿದ್ದಾರೆ. ಚರ್ಚೆ ಮತ್ತು ಸಂವಾದಕ್ಕೆ ಸದಾ ಮುಕ್ತವಾಗಿದ್ದ ಅವರ ಮನೋಭಾವವು ಅವರ ಕಾರ್ಯಕ್ರಮಗಳಿಗೆ ರಾಷ್ಟ್ರೀಯ ಸಹಮತ ರೂಪಿಸುವುದಕ್ಕಾಗಿ ವಿರೋಧ ಪಕ್ಷಗಳ ಜತೆಗೆ ಸುಲಲಿತವಾಗಿ ಕೆಲಸ ಮಾಡುವುದಕ್ಕೆ ಹೇಗೆ ನೆರವಾಯಿತು ಎಂಬುದನ್ನೂ ಸಿಂಗ್ ಸ್ಮರಿಸಿದ್ದಾರೆ.


ಸಮಕಾಲೀನ ರಾಜಕೀಯ ಸಂದರ್ಭದಲ್ಲಿ ಹಲವು ರಾಜಕೀಯ ನಾಯಕರು ಅಧಿಕಾರಕ್ಕೆ ಹಾತೊರೆಯುತ್ತಿರುವುದು, ಅದಕ್ಕಾಗಿ ಗುದ್ದಾಡುವುದು ಮತ್ತು ಅದನ್ನು ಪಡೆದುಕೊಳ್ಳುವುದನ್ನು ಕಾಣಬಹುದು. ಆದರೆ, ಆ ಅಧಿಕಾರವನ್ನು ಸಮಾಜ ಮತ್ತು ದೇಶದ ಒಳಿತಿಗೆ ಹೇಗೆ ಬಳಸಿಕೊಳ್ಳಬೇಕು ಎಂಬ ತಿಳಿವಳಿಕೆ ಅವರಲ್ಲಿ ಇಲ್ಲ. ನರಸಿಂಹ ರಾವ್ ಅವರು ಜನಪ್ರಿಯ ಅಥವಾ ಜನಾಕರ್ಷಕ ರಾಜಕೀಯ ನಾಯಕ ಆಗಿರಲಿಲ್ಲ. ಅವರಿಗೆ ಅಧಿಕಾರ ಅಯಾಚಿತವಾಗಿ ಬಂತು ಮತ್ತು ಅದನ್ನು ಅವರು ಪಕ್ಷದೊಳಗಿನ ಹಲವು ಗುಂಪುಗಳ ಜತೆಗೆ ಹಂಚಿಕೊಳ್ಳಬೇಕಿತ್ತು. ಹಾಗಿದ್ದರೂ, ಪ್ರಧಾನಿಯಾಗಿ ದತ್ತವಾದ ಸಾಂಸ್ಥಿಕ ಅಧಿಕಾರವನ್ನು ದೇಶವನ್ನು ಹೊಸ ದಿಕ್ಕಿನತ್ತ ಹೊರಳಿಸುವುದಕ್ಕಾಗಿ ಅವರು ಅತ್ಯುತ್ತಮವಾಗಿ ಮತ್ತು ಅತ್ಯಂತ ದಕ್ಷವಾಗಿ ಬಳಸಿಕೊಂಡರು. ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆ, ದೊಡ್ಡ ಶಕ್ತಿಯಾಗಿ ಬೆಳೆಯುವತ್ತ ಭಾರತ ಎಂಬುದಕ್ಕೆ ರಾವ್ ಅವಧಿಯಲ್ಲಿ ದೊಡ್ಡ ಒತ್ತು ಸಿಕ್ಕಿತು.

ನಂತರದ ಎರಡು ದಶಕಗಳಲ್ಲಿ ಮತ್ತಿಬ್ಬರು ಸಮರ್ಥ ಉತ್ತರಾಧಿಕಾರಿಗಳಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಮನಮೋಹನ್ ಸಿಂಗ್ ನಾಯಕತ್ವದಲ್ಲಿ ಹೆಚ್ಚಿನ ದರದ ಆರ್ಥಿಕ ಪ್ರಗತಿ ದಾಖಲಾಯಿತು; ಬಡತನ ಇಳಿಕೆಯಾಯಿತು ಮತ್ತು ಅಭಿವೃದ್ಧಿಶೀಲ ಪ್ರಜಾತಂತ್ರವಾಗಿ ಜಾಗತಿಕ ಭರವಸೆಯ ಸಂಕೇತವೂ ಆಯಿತು. ಆದರೆ, ಈ ಭರವಸೆಯ ಪರಂಪರೆಗೆ ಬೆದರಿಕೆ ಎದುರಾಗಿದೆ– ಅರ್ಥ ವ್ಯವಸ್ಥೆಯು ಮುಗ್ಗರಿಸಿ, ರಾಜಕೀಯ ಮತ್ತು ಸಾಮಾಜಿಕ ವಿಭಜನೆಯು ವ್ಯವಸ್ಥೆಯನ್ನು ದುರ್ಬಲಗೊಳಿಸಿದೆ, ಬಡತನ ಮತ್ತು ನಿರುದ್ಯೋಗ ಮತ್ತೆ ಏರಿಕೆಯಾಗಿದೆ. ಮತ್ತೆ ಬದಲಾವಣೆಯು ಸಾಧ್ಯವಿದೆ; ಅದನ್ನು ಸಾಧಿಸಬೇಕಿದ್ದರೆ, ನರಸಿಂಹ ರಾವ್ ಅವರೊಂದಿಗೆ ತಳಕು ಹಾಕಿಕೊಂಡಿರುವ ಸಹಮತ ಮತ್ತು ಎಲ್ಲರನ್ನೂ ಒಳಗೊಳ್ಳುವ ರಾಜಕಾರಣಕ್ಕೆ ಮರಳುವ ಅಗತ್ಯ ಇದೆ.

ಲೇಖಕ: ರಾಜಕೀಯ ವಿಶ್ಲೇಷಕ, '1991: ಹೌ ಪಿ.ವಿ. ನರಸಿಂಹರಾವ್ ಮೇಡ್ ಹಿಸ್ಟರಿ' ಕೃತಿಯ ಕರ್ತೃ

ಕನ್ನಡಕ್ಕೆ: ಹಮೀದ್ ಕೆ.

ಕಾಮನಬಿಲ್ಲು ಕಮಾನು ಕಟ್ಟಿದೆ


ಲೈಂಗಿಕ ಅಲ್ಪಸಂಖ್ಯಾತರಿಗೆ ನೆರಳಾಗಿ ಸಿಕ್ಕ ಕಾಮನಬಿಲ್ಲಿನ ಕೊಡೆ...

ಭಿನ್ನ ಲೈಂಗಿಕ ಅಭಿವ್ಯಕ್ತಿಯ ಕುರಿತು ಎಲ್ಲಿಯೂ ಹೇಳಿಕೊಳ್ಳಲಾಗದವರ ಚಡಪಡಿಕೆಗೆ ಅಂತ್ಯ ಹಾಡಿದ್ದು ಈ ಪ್ರೈಡ್ ಡೇ. ಐವತ್ತು ವರ್ಷಗಳ ಹಿಂದೆ ಒಂದು ಬಾರ್‌ನಲ್ಲಿ ರೂಪುಗೊಂಡ ಈ ಆಂದೋಲನ ಈಗ ಜಗತ್ತಿನ ತುಂಬಾ ವ್ಯಾಪಿಸಿದೆ. ಲೈಂಗಿಕ ಅಲ್ಪಸಂಖ್ಯಾತರಿಗೆ ಅವರ ಹಕ್ಕುಗಳನ್ನು ಕೊಡಿಸುವಲ್ಲೂ ಯಶಸ್ವಿಯಾಗಿದೆ...

ಸುಧಾ ಆಡುಕಳ

ಜೂನ್ ತಿಂಗಳಿನಲ್ಲಿ ಪ್ರಪಂಚದಾದ್ಯಂತ ಜಾತಿ, ಮತ, ಧರ್ಮಗಳ ಭೇದವಿಲ್ಲದೇ ಹಬ್ಬವೊಂದನ್ನು ಆಚರಿಸಲಾಗುತ್ತದೆ. ಲೈಂಗಿಕ ಅಲ್ಪಸಂಖ್ಯಾತರೆಂದು ಗುರುತಿಸಿಕೊಳ್ಳುವ ಎಲ್ಲ ಸಮುದಾಯಗಳು ಇದರಲ್ಲಿ ಭಾಗವಹಿಸುತ್ತವೆ. ತಮ್ಮ ಭಿನ್ನ ಲೈಂಗಿಕ ಅಭಿವ್ಯಕ್ತಿಯನ್ನು ಜಗತ್ತಿಗೆ ತೋರ್ಪಡಿಸಲಾಗದೇ ಚಡಪಡಿಸುತ್ತಿರುವ ಅನೇಕರಿಗೆ ಅವರ ದ್ವಂದ್ವದಿಂದ ಹೊರಬರಲು ಬೆಂಬಲ ನೀಡುವುದೂ ಈ ಹಬ್ಬದ ಉದ್ದೇಶವಾಗಿದೆ. ಜೂನ್ 28ರಂದು ಜಗತ್ತಿನಾದ್ಯಂತ ಪ್ರೈಡ್ ಡೇ ಆಚರಿಸಲಾಗುತ್ತದೆ. ತಿಂಗಳ ಪೂರ್ತಿ ಒಂದಿಲ್ಲೊಂದು ಕಡೆ ಕಾಮನಬಿಲ್ಲಿನ ಬಾವುಟ ಹಿಡಿದು 'ಪ್ರೈಡ್ ಡೇ ಮಾರ್ಚ್'ಗಳು ನಡೆಯುತ್ತಲೇ ಇರುತ್ತವೆ.

ಪ್ರೈಡ್ ಹಬ್ಬದ ಆಚರಣೆಯ ಹಿಂದೆ ಒಂದು ಇತಿಹಾಸವೇ ಇದೆ. ಮಾನವ ಬೇರೆ ಪ್ರಾಣಿವರ್ಗಗಳಿಂದ ಪ್ರತ್ಯೇಕಗೊಂಡು ಸಮಾಜಜೀವಿಯಾಗಿ ಬದುಕು ಕಟ್ಟಿಕೊಂಡ ನಂತರ ತನ್ನ ಅಭಿವ್ಯಕ್ತಿಗೆ ಸಾಮಾಜಿಕ ಕಟ್ಟಳೆಗಳನ್ನು ರೂಪಿಸಿಕೊಳ್ಳುತ್ತಲೇ ಬಂದಿದ್ದಾನೆ. ಲೈಂಗಿಕತೆಯ ಬಗೆಗಂತೂ ತೀರಾ ಮಡಿವಂತಿಕೆಯನ್ನು ರೂಢಿಸಿಕೊಂಡಿರುವುದಲ್ಲದೇ ಅದನ್ನು ಸಂತಾನಾಭಿವೃದ್ಧಿಗಾಗಿ ಗಂಡುಹೆಣ್ಣುಗಳು ಮಾತ್ರವೇ ನಡೆಸಬೇಕಾದ ಕ್ರಿಯೆಯೆಂದು ನಿಯಮ ವಿಧಿಸಲಾಗಿದೆ. ಇದರಾಚೆಗಿನ ಅಭಿವ್ಯಕ್ತಿಗಳೆಲ್ಲವನ್ನೂ ಅಸಹಜವೆಂದು ಗುರುತಿಸಲಾಗುತ್ತದೆ. ಹಾಗಾಗಿ ಗಂಡಿನೊಳಗೆ ಹೆಣ್ಣಿನ ಭಾವಗಳು ಸೆರೆಯಾಗಿರುವುದು, ಹೆಣ್ಣಿನೊಳಗೆ ಗಂಡೊಬ್ಬ ಅಡಗಿರುವುದು, ಸಲಿಂಗ ಕಾಮ, ದ್ವಿಲಿಂಗ ಕಾಮ ಇವೆಲ್ಲವನ್ನೂ ಲಾಗಾಯ್ತಿನಿಂದ ಮನೋವ್ಯಾಧಿಗಳೆಂದೇ ಪ್ರತಿಪಾದಿಸುತ್ತಾ ಬರಲಾಗಿದೆ.

ಸಸ್ಯ ಮತ್ತು ಪ್ರಾಣಿವರ್ಗದಲ್ಲಿರುವಂತೆ ಮನುಷ್ಯನಲ್ಲಿಯೂ ಸಹಜವಾಗಿ ಹುಟ್ಟಿನಿಂದಲೇ ಬೆಳೆದುಬಂದಿರುವ ಸ್ವಭಾವಗಳಾಗಿದ್ದರೂ ಲೈಂಗಿಕ ಅಲ್ಪಸಂಖ್ಯಾತ ಜನ ತಮ್ಮ ಅಭಿವ್ಯಕ್ತಿಯನ್ನು ಬಲವಂತವಾಗಿ ಹತ್ತಿಕ್ಕಿಕೊಂಡು ಅಥವಾ ಅವುಗಳ ಈಡೇರಿಕೆಗಾಗಿ ಗೋಪ್ಯ ಮಾರ್ಗಗಳನ್ನು ಹುಡುಕಿಕೊಂಡು ಇಲ್ಲವೇ ಸಮಾಜದ ದೂಷಣೆಗೆ ಹೆದರಿ ಖಿನ್ನತೆಗೊಳಗಾಗಿ ಜೀವನವನ್ನೇ ಬಲಿಕೊಟ್ಟಿದ್ದಾರೆ. ಸಲಿಂಗಿಗಳೂ ಕುಟುಂಬದ ಒತ್ತಾಯಕ್ಕಾಗಿ ಮದುವೆಯಾಗಿ ತಮ್ಮ ಸಂಗಾತಿಯನ್ನು ಜೀವನಪೂರ್ತಿ ನರಳಿಸಿದ ಉದಾಹರಣೆಗಳು ಸಾಕಷ್ಟಿವೆ. ಸಮಾಜದ ಹರಿವಿನೊಂದಿಗೆ ಗುಪ್ತಗಾಮಿನಿಯಾಗಿ ಹರಿದುಬಂದ ಈ ಕಿರುತೊರೆ ತನ್ನತನದ ಸಾಬೀತಿಗೆ ಸಮಯಕ್ಕಾಗಿ ಕಾಯುತ್ತಿತ್ತು ಅನಿಸುತ್ತದೆ. ಅದರ ಒಳಗುದಿ ಹೋರಾಟದ ಜ್ವಾಲಾಮುಖಿಯಾಗಿ ಸಿಡಿಯುವ ಘಟನೆಯೊಂದು 1969ರಲ್ಲಿ ನ್ಯೂಯಾರ್ಕ್ ನಗರದಲ್ಲಿ ನಡೆಯಿತು.

1969ರ ಜೂನ್ 28ರಂದು, ನ್ಯೂಯಾರ್ಕ್ ನಗರದ ಹೊರವಲಯದಲ್ಲಿರುವ ಸ್ಟೋನ್‌ವಾಲ್ ಇನ್ ಬಾರ್‌ನ ಮೇಲೆ ಪೊಲೀಸರು ದಾಳಿ ನಡೆಸಿದರು. ಸಲಿಂಗಕಾಮಿಗಳಿಗೆ ಅಲ್ಲಿ ಅಕ್ರಮವಾಗಿ ಮದ್ಯ ಸರಬರಾಜು ನಡೆಯುತ್ತಿದೆ ಮತ್ತು ಅವರಿಗೆ ನರ್ತಿಸಲು ಅವಕಾಶ ನೀಡಲಾಗಿದೆ ಎಂಬುದೇ ಈ ದಾಳಿಯ ಹಿಂದಿನ ಕಾರಣ. ಸಲಿಂಗಕಾಮವು ಅಪರಾಧವೆಂದು ಪರಿಗಣಿಸಲ್ಪಟ್ಟ ಆ ಕಾಲದಲ್ಲಿ ಇಂತಹ ದಾಳಿಗಳು ಪದೇ ಪದೇ ನಡೆಯುತ್ತಿದ್ದವು ಮತ್ತು ಸ್ಟೋನ್‌ವಾಲ್ ಇನ್ ಬಾರ್‌ಗಳಂಥ ಕೆಲವು ಸ್ಥಳಗಳಲ್ಲಿ ಮಾತ್ರವೇ ಅವರಿಗೆ ಪ್ರವೇಶವಿತ್ತು. ಆದರೆ ಈ ಸಲ ದಾಳಿ ನಡೆದಾಗ ಅಲ್ಲಿ ಸೇರಿದ್ದ ಗೇ ಜನರು ಪೊಲೀಸರ ವಿರುದ್ಧ ದಂಗೆ ಎದ್ದರು. ವಿಶೇಷವೆಂದರೆ ಅವರಿಗೆ ಕೆಲವು ಸಾಮಾಜಿಕ ಹೋರಾಟಗಾರರ ಬೆಂಬಲವೂ ದೊರೆಯಿತು. ಹಾಗಾಗಿ ಈ ಹೋರಾಟ ಒಂದು ವಾರ ಕಾಲ ಮುಂದುವರೆಯಿತು ಮತ್ತು ಅವರು ಸರ್ಕಾರದ ಗಮನವನ್ನು ಸೆಳೆಯಲು ಯಶಸ್ವಿಯಾದರು. ಇದು ಜಗತ್ತಿನ ಮೊತ್ತಮೊದಲ ಗೇ ಸಮುದಾಯದ ಹೋರಾಟವಾಗಿದೆ.

ಮೊದಲ ಯಶಸ್ವಿ ಹೋರಾಟದ ನೆನಪಿಗಾಗಿ 1970ರ ಜೂನ್ 28ರಂದು ನ್ಯೂಯಾರ್ಕ್‌ನಲ್ಲಿ ಸುಮಾರು 5000 ಜನರ ಮೆರವಣಿಗೆಯೊಂದನ್ನು ಆಯೋಜಿಸಿದ್ದರು. ಈ ಆಚರಣೆ ಸ್ಯಾನ್‌ಫ್ರಾನ್ಸಿಸ್ಕೊ ಮತ್ತು ಷಿಕಾಗೊ ನಗರಗಳಿಗೂ ಹಬ್ಬಿತು. ವರ್ಷ ಕಳೆದಂತೆ ನಿಧಾನವಾಗಿ ಜಗತ್ತಿನ ಎಲ್ಲ ಪ್ರಮುಖ ನಗರಗಳನ್ನೂ ಇದು ಒಳಗೊಳ್ಳುತ್ತ ಲೈಂಗಿಕ ಅಲ್ಪಸಂಖ್ಯಾತರು ಮತ್ತು ತೃತೀಯ ಲಿಂಗಿಗಳನ್ನು ಒಳಗೊಂಡು ದೊಡ್ಡ ಆಂದೋಲನವಾಗಿ ಬೆಳೆಯಿತು. ಇಂಥದೊಂದು ಚಾರಿತ್ರಿಕ ಹೋರಾಟಕ್ಕೆ ಕಾರಣವಾದ ಸ್ಟೋನ್‌ವಾಲ್ ಇನ್ ಬಾರ್‌ಅನ್ನು ಅಮೆರಿಕದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಅವರು 2016ರಲ್ಲಿ ರಾಷ್ಟ್ರೀಯ ಸ್ಮಾರಕವಾಗಿ ಘೋಷಣೆ ಮಾಡಿದರು. ಪ್ರೈಡ್ ಹಬ್ಬ ಅಮೆರಿಕನ್ನರ ಪಾಲಿಗೆ ಈಗ ರಾಷ್ಟ್ರೀಯ ಕಾರ್ಯಕ್ರಮ.


ಭಾರತದಲ್ಲಿ ಮೊದಲ ಬಾರಿಗೆ ಪ್ರೈಡ್ ಹಬ್ಬ ನಡೆದದ್ದು ಕೋಲ್ಕತ್ತದಲ್ಲಿ, 1999ರ ಜುಲೈ ತಿಂಗಳಿನಲ್ಲಿ. 'ಕೋಲ್ಕತ್ತ ರೇನ್‌ಬೋ ವಾಕ್' ಎಂಬ ಈ ಮೆರವಣಿಗೆಯಲ್ಲಿ ದೇಶದ ಬೇರೆ ಬೇರೆ ನಗರಗಳಿಂದ ಬಂದಿದ್ದ 15 ಜನ ಭಾಗವಹಿಸಿದ್ದರು. ಅವರಲ್ಲಿ ಒಬ್ಬ ಮಹಿಳೆಯೂ ಇರಲಿಲ್ಲ. ನಿಧಾನವಾಗಿ ಈ ಹಬ್ಬವು ದೇಶದ ಪ್ರಮುಖ ನಗರಗಳಲ್ಲಿ ನಡೆಯತೊಡಗಿತು. 2008ರಲ್ಲಿ ಬೆಂಗಳೂರಿನಲ್ಲಿ ಮೊದಲ ಪ್ರೈಡ್ ಹಬ್ಬ ಆಯೋಜನೆಗೊಂಡಿತು. ಸುಮಾರು 700 ಜನರು ತಮ್ಮ ರೇನ್ ಬೋ ಬಾವುಟದೊಂದಿಗೆ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಿಂದ ಟೌನ್ ಹಾಲ್‌ನವರೆಗೆ ಮೆರವಣಿಗೆ ನಡೆಸಿ ಸಂವಿಧಾನದ 377 ಕಲಂ ಅನ್ನು ರದ್ದುಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. 'ಪ್ರೀತಿಗೆ ಕಾನೂನಿನ ಬೇಲಿ ಸಲ್ಲದು' ಎಂಬುದು ಅವರ ಘೋಷವಾಕ್ಯವಾಗಿತ್ತು.

2014ರಿಂದ ಅಕ್ಕಯ್ ಪದ್ಮಶಾಲಿ ಅವರ 'ಒಂದೆಡೆ' ಎಂಬ ಸಂಸ್ಥೆ ಲೈಂಗಿಕ ಅಲ್ಪಸಂಖ್ಯಾತರು, ತೃತೀಯ ಲಿಂಗಿಗಳು ಮತ್ತು ಲೈಂಗಿಕ ಕಾರ್ಯಕರ್ತೆಯರು ಎಲ್ಲರನ್ನೂ ಒಗ್ಗೂಡಿಸುವುದರ ಮೂಲಕ ಹೋರಾಟಕ್ಕೆ ಸಾಂಘಿಕ ಬೆಂಬಲವನ್ನು ನೀಡಲು ಮುಂದಾಯಿತು. 2015ರಿಂದ ಬೆಂಗಳೂರಿನಲ್ಲಿ ಲೈಂಗಿಕ ಅಲ್ಪಸಂಖ್ಯಾತರು ಮತ್ತು ಲೈಂಗಿಕ ಕಾರ್ಮಿಕರ ಹಕ್ಕುಗಳ ಒಕ್ಕೂಟ (ಸಿಎಸ್‌ಎಂಆರ್) ಮತ್ತು ವಿವಿಧ ಸಂಸ್ಥೆಗಳ ಒಗ್ಗೂಡುವಿಕೆಯೊಂದಿಗೆ 'ಬೆಂಗಳೂರು ಪ್ರೈಡ್ ಮತ್ತು ಕ್ವೀರ್ ಹಬ್ಬ' ಪ್ರತಿವರ್ಷ ನಡೆಯುತ್ತಿದೆ. 2018ರಲ್ಲಿ ನ್ಯಾಯಾಲಯವು ಸಲಿಂಗಕಾಮವನ್ನು ಅಪರಾಧವಲ್ಲವೆಂದು ಘೋಷಿಸಿದ ಸಂತೋಷಕ್ಕಾಗಿ 'ಹೆಮ್ಮೆಯ ಸಂಜೆ' ಎಂಬ ವಿನೂತನ ಕಾರ್ಯಕ್ರಮ ನಡೆಸಿ ಸಂಭ್ರಮಿಸಲಾಯಿತು.

ಮುಂದಿನ ಪುಟಕ್ಕೆ...

ಕೇಳ್ರಿ... ಸಂಗೀತ ಪುಸ್ತಕ!

ಎಂ.ಎನ್.ಯೋಗೇಶ್



ತಾಳ್ಮೆ ಕುಗ್ಗುತ್ತಿರುವ ಈ ಹೊತ್ತಿನಲ್ಲಿ ಕೇಳ್ಮೆ ಮುನ್ನೆಲೆಗೆ ಬರುತ್ತಿದೆ. ಹಾಗೆಂದೇ ರೂಪುಗೊಂಡಿದ್ದು ಆಡಿಯೊ ಪುಸ್ತಕ. ಸಂಗೀತದ ಈ ಆಡಿಯೊ ಪುಸ್ತಕ ಸಂಗೀತಗಾರರ ಹಿರಿಮೆಯ ಜತೆಗೆ ಅವರ ಕೀರ್ತನೆ, ವಚನ, ಗೀತೆಗಳನ್ನೂ ಕೇಳಿಸುತ್ತದೆ

ಓದಲೇಬೇಕೆಂದು ಖರೀದಿಸಿ ತಂದ ಅದೆಷ್ಟೋ ಪುಸ್ತಕಗಳು ಬೀರುವಿನೊಳಗೆ ಬಂದಿಯಾಗಿವೆ. ಧಾವಂತದ ನಡುವೆ ಒತ್ತಡ, ಓಟವೇ ಬದುಕಾಗಿದ್ದು ಶಾಂತಿ, ವಿಶ್ರಾಂತಿ ವಾರಾಂತ್ಯಕ್ಕೆ ಮಾತ್ರ ಎಂಬಂತಾಗಿದೆ. ಹೀಗಿರುವಾಗ ಓದಿನ ವಾತಾವರಣ ಸೃಷ್ಟಿ ಇನ್ನೆಲ್ಲಿ? ತಾಳ್ಮೆ ಕುಗ್ಗುತ್ತಿರುವ ಹೊತ್ತಿನಲ್ಲಿ 'ಕೇಳ್ಮೆ' ಮುನ್ನೆಲೆಗೆ ಬರುತ್ತಿದೆ. ಓದುವುದಕ್ಕೆ ಸಮಯವಿಲ್ಲದಿದ್ದರೂ ಕೇಳಿಸಿಕೊಳ್ಳುವುದಕ್ಕೆ ಅಲ್ಲಲ್ಲಿ ಬಿಡುವು ಸಿಗುತ್ತದೆ. ಟ್ರಾಫಿಕ್ ಜಾಮಿನಲ್ಲಿ, ಸಾರಿಗೆ ಬಸ್ಸಿನಲ್ಲಿ, ಪಯಣದ ಹಾದಿಯಲ್ಲಿ ಸಿಕ್ಕ ಸಣ್ಣ ಹೊತ್ತು ಓದಿನಷ್ಟೇ ಆಪ್ಯಾಯಮಾನವಾದ 'ಕೇಳುವ ಸುಖ' ನೀಡುತ್ತಿದೆ. ಕೇಳುವ ಸುಖಕ್ಕಾಗಿ ಹಾತೊರೆಯುವ ಮನಸ್ಸುಗಳಿಗೆ 'ಆಡಿಯೊ ಪುಸ್ತಕ'ಗಳು ಕಿವಿಗಡಚುತ್ತಿವೆ.

ಹಲವು ಸಾಹಿತ್ಯ ಕೃತಿಗಳು ಆಡಿಯೊ ಪುಸ್ತಕ ರೂಪದಲ್ಲಿ ಸಾಹಿತ್ಯಾಸಕ್ತರ ಕಿವಿಗಿಳಿಯುತ್ತಿದ್ದು ಕನ್ನಡ ಡಿಜಿಟಲ್ ಗ್ರಂಥಾಲಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇಂಗ್ಲಿಷ್ ಸಾಹಿತ್ಯಕ್ಕೆ ಆಡಿಯೊ ಬುಕ್ ಹಳೆಯದಾದರೂ ಕನ್ನಡಕ್ಕಿದು ಹೊಚ್ಚಹೊಸತು.

ಆಡಿಯೊ ಬುಕ್ ಆ್ಯಪ್‌ಗಳಲ್ಲಿ ಹಲವು ಪ್ರಕಾರದ ಸಾಹಿತ್ಯ ದೊರೆಯುತ್ತಿದ್ದರೂ ಇಲ್ಲಿಯವರೆಗೆ ಸಂಗೀತ ಕುರಿತಾದ ಧ್ವನಿ ಪುಸ್ತಕ ಬಂದಿರಲಿಲ್ಲ. ಇತ್ತೀಚೆಗಷ್ಟೇ 'ಮೈಲ್ಯಾಂಗ್' (MyLang) ಆ್ಯಪ್‌ನಲ್ಲಿ ಮೊತ್ತಮೊದಲ ಸಂಗೀತ ಆಡಿಯೊ ಪುಸ್ತಕವೊಂದು ಬಿಡುಗಡೆಯಾಗಿದ್ದು ಸಂಗೀತಾಸಕ್ತರ ಮನತಣಿಸುತ್ತಿದೆ. 2015ರಲ್ಲಿ ಪ್ರೊ.ಗೀತಾ ಶ್ರೀನಿವಾಸನ್, ವಿದುಷಿ ಕೃತಿಕಾ ಶ್ರೀನಿವಾಸನ್ ಅವರು ಬರೆದಿರುವ 'ಅಲ್ಪಾಯುಷಿ ಮಹಾನ್ ಸಾಧಕರು–ಸಂಗೀತಗಾರರು' ಕೃತಿಗೆ ಆಡಿಯೊ ಪುಸ್ತಕರೂಪ ನೀಡಲಾಗಿದೆ. ಇದು ಜೂನ್ 19ರಿಂದ ಮೈಲ್ಯಾಂಗ್ ಆ್ಯಪ್‌ನಲ್ಲಿ ದೊರೆಯುತ್ತಿದೆ.


ಗೀತಾ ಶ್ರೀನಿವಾಸನ್


ಕೃತಿಕಾ ಶ್ರೀನಿವಾಸನ್

4 ಗಂಟೆ 22 ನಿಮಿಷದ ಆಡಿಯೊ ಪುಸ್ತಕಕ್ಕೆ ಬೆಂಗಳೂರು ಆಕಾಶವಾಣಿಯ ನಿವೃತ್ತ ಕಾರ್ಯನಿರ್ವಾಹಕರಾದ ರಮಾ ಹಿರೇಮಠ ಧ್ವನಿ ನೀಡಿದ್ದಾರೆ. ಕಿರು ಆಯುಷ್ಯದಲ್ಲಿ ಹಿರಿದಾದ ಸಾಧನೆ ಮಾಡಿ ಅಮರರಾಗಿರುವ ಸಂಗೀತ ಸಾಧಕರ ರಚನೆಗಳಿಗೆ ಧ್ವನಿ ಪುಸ್ತಕದಲ್ಲಿ ರೂಪ ನೀಡಲಾಗಿದೆ. ವಾಗ್ಗೇಯಕಾರರು, ವಚನಕಾರರ ಬದುಕಿನ ಯಾತ್ರೆ, ಅವರು ಬೆಳೆದುಬಂದ ಹಾದಿಯ ವರ್ಣನೆ ಕೇಳುಗರಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಅವರು ಬದುಕಿದ್ದ ಕಾಲಘಟ್ಟ, ಅವರು ಸಂಗೀತಕ್ಕೆ ನೀಡಿರುವ ಕೊಡುಗೆಗಳನ್ನು ಸಂಕ್ಷಿಪ್ತ ರೂಪದಲ್ಲಿ ಕಟ್ಟಿಕೊಡಲಾಗಿದೆ.

ಧ್ವನಿ ಪುಸ್ತಕದಲ್ಲಿ 17 ಅಧ್ಯಾಯಗಳಿದ್ದು ವರ್ಣ, ಕೃತಿ, ಕೀರ್ತನೆ, ವಚನ, ಕವಿತೆ, ಉಗಾಭೋಗಗಳ ರಾಗ ರಂಜನೆ ಕೇಳುಗರು ತಲೆದೂಗುವಂತೆ ಮಾಡುತ್ತವೆ. ಲೇಖಕಿಯೂ ಆಗಿರುವ ವಿದುಷಿ ಕೃತಿಕಾ ಶ್ರೀನಿವಾಸನ್ ಅವರ ಸೊಗಸಾದ ಗಾಯನ ವಾಗ್ಗೇಯಕಾರರ ಜೀವನದ ಜೊತೆ ಮಿಳಿತಗೊಂಡಿದ್ದು ಕೇಳುಗರಲ್ಲಿ ಹೊಸ ಅನುಭವ ಸೃಷ್ಟಿಸುತ್ತದೆ.

ಪ್ರತಿಯೊಂದು ರಚನೆಯ ಅರ್ಥವಿವರಣೆ ನೀಡಲಾಗಿದ್ದು ಅದರ ಭಾವಾರ್ಥ ಸರಳವಾಗಿ ಮನಸ್ಸಿಗಿಳಿಯುತ್ತದೆ. ಮಾಹಿತಿಯ ಆಧಾರ ಪ್ರಸ್ತುತಿ, ಆಕರ ಗ್ರಂಥಗಳ ಮಾಹಿತಿಯನ್ನೂ ನೀಡಲಾಗಿದೆ. ಪ್ರತೀ ಅಧ್ಯಾಯದ ಕೊನೆಯಲ್ಲಿ ಆಯಾ ಸಂಗೀತಗಾರರ ರಚನೆಗಳ ಗಾಯನ ಪ್ರಸ್ತುತಿ ಇದ್ದು ಧ್ವನಿ ಪುಸ್ತಕಕ್ಕೆ ರಾಗ, ತಾಳ, ಮೇಳದ ಬಣ್ಣ ತುಂಬಲಾಗಿದೆ.

ಅಕ್ಕಮಹಾದೇವಿ ಉಡುತಡಿಯಲ್ಲಿ ಹುಟ್ಟಿ ಶ್ರೀಶೈಲದ ಕದಳಿವನದಲ್ಲಿ ಲಿಂಗೈಕ್ಯಳಾದವರೆಗಿನ ಹಾದಿಯನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಚನ್ನಮಲ್ಲಿಕಾರ್ಜುನನ ಮೇಲಿನ ಭಕ್ತಿಯಲ್ಲಿ ಮೂಡಿದ ವಚನಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಅಕ್ಕನನ್ನೇ ಹೋಲುವ ಮೀರಾಬಾಯಿ ಕತೆಯನ್ನೂ ಹೋಲಿಕೆ ಮಾಡಿರುವುದು ವಿಶೇಷ ಎನಿಸುತ್ತದೆ. ಕೊನೆಗೆ ಮಾಯೆಯನ್ನು ವಿವರಿಸುವ, ಮಿಶ್ರ ಮಾಲ್‌ಕೌಂಸ್ ರಾಗಕ್ಕೆ ನಿಬದ್ಧಿತವಾದ ಅಕ್ಕನ ವಚನ ಕೇಳುಗರ ಮನಸೂರೆಗೊಳ್ಳುತ್ತದೆ.

ಮೈಸೂರು ಅರಸರು ಸಂಗೀತ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಇನ್ನೊಂದು ಅಧ್ಯಾಯದಲ್ಲಿದೆ.

11ನೇ ಪುಟಕ್ಕೆ...


ಕಲ್ಲಿನ ರಥದ ಮುಂದೆ ಹಸಿರಿನ ಹೊನಲು. ಮೊಗ್ಗು ಅರಳಿದಾಗ ಇನ್ನೂ ಚೆಂದ ನೋಡಲು...

ಹಂಪಿಯನ್ನು ಹೀಗೆ ನೋಡಿ!

ಪ್ರವಾಸ

ಚಿತ್ರ-ಮಾಹಿತಿ: ತಾಜುದ್ದೀನ್ ಆಜಾದ್

ಚರಿತ್ರೆಯ ಜೀವಂತ ಪುಟ ಎನಿಸಿದ ಹಂಪಿಯನ್ನು ನೀವು ಹೀಗೆ ನೋಡಿರುವುದು ಸಾಧ್ಯವೇ ಇಲ್ಲಬಿಡಿ. ಮುಂಗಾರಿನ ಮೊದಲ ಮಳೆ ಸುರಿದ ಕೆಲವು ದಿನಗಳ ಬಳಿಕ ಸೆರೆಸಿಕ್ಕ ಚಿತ್ರಗಳಿವು. ಆಗತಾನೆ ತಲೆಸ್ನಾನ ಮಾಡಿ, ಎಳೆ ಬಿಸಿಲಿಗೆ ಮೈಯೊಡ್ಡಿದ ಯುವತಿಯಂತೆ ಸ್ಮಾರಕಗಳೆಲ್ಲ ಫಳ ಫಳ ಹೊಳೆಯುತ್ತಿದ್ದವು. ಅವುಗಳ ಆವರಣದಲ್ಲಿ ಬೆಳೆಸಲಾದ ಗಿಡ-ಬಳ್ಳಿಗಳು ಗಾಢ ಹಸಿರುಬಣ್ಣದ ಎಲೆಗಳನ್ನು ತೊಟ್ಟು, ಮೊಗ್ಗುಗಳನ್ನು ಮೈತುಂಬಾ ಧರಿಸಿಕೊಂಡು ನಿಂತಿದ್ದವು. ಸ್ಮಾರಕಗಳ ಲ್ಯಾಂಡ್‌ಸ್ಕೇಪ್ ಚಿತ್ರಗಳನ್ನು, ಆ ಸ್ಮಾರಕಗಳ ಜತೆಯಲ್ಲೇ ಬಾಳಿ ಬದುಕುವ ಗಿಡ-ಮರಗಳನ್ನೂ ಸೇರಿಸಿಕೊಂಡು ತೆಗೆದರೆ ಹೇಗಿರುತ್ತದೆ? ಈ ಯೋಚನೆಯಲ್ಲೇ ಹಂಪಿಯಲ್ಲಿ ಸುತ್ತಾಡಿದಾಗ ಕ್ಯಾಮೆರಾ ಎಡೆಬಿಡದೆ ಆ ಸ್ಮಾರಕಗಳತ್ತ ಕಣ್ಣು ಹೊಡೆಯತೊಡಗಿತು; ಹಾಗೆ ಕಣ್ಣು ಹೊಡೆದಿದ್ದು ಕೆಲವೊಮ್ಮೆ ಮಲಗಿ, ಕೆಲವೊಮ್ಮೆ ಮಂಡಿಯೂರಿ ಕುಳಿತು, ಇನ್ನು ಕೆಲವೊಮ್ಮೆ ಬಾಗಿ! ನೇರವಾಗಿ ನಿಂತು ಕ್ಲಿಕ್ಕಿಸಿದ್ದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

ವಿಜಯವಿಠಲ ದೇವಸ್ಥಾನದ ಆವರಣದಲ್ಲಿ ಕಲ್ಲಿನ ರಥದ ಅನತಿ ದೂರದಲ್ಲಿ ಗಿಡಗಳು ಮೊಗ್ಗು ತೊಟ್ಟುಕೊಂಡು ನಿಂತಿದ್ದವು. ರಥದ ಹಾದಿಯಲ್ಲಿ ಹಸಿರು ಹಾಸಿದಂತೆ ಚಿತ್ರ ತೆಗೆಯುವ ಮನಸ್ಸಾಯಿತು. ಸಪ್ತಸ್ವರ ಹೊರಡಿಸುವ ವಿಜಯವಿಠಲ ದೇವಸ್ಥಾನವೂ ಫ್ರೇಮ್‌ನಲ್ಲಿ ಇರಬೇಕು ಎನ್ನುವ ಉಮೇದಿಯೂ ಇತ್ತು. ಅದೇ ಕೋನದಲ್ಲಿ ನಿಂತುಕೊಂಡು ಬೆನ್ನುಬಾಗಿಸಿ, ಕ್ಲಿಕ್ಕಿಸಿ ಸೆರೆಹಿಡಿದ ಚಿತ್ರಗಳನ್ನು ನೋಡಿದಾಗ ಖುಷಿಗೆ ಪಾರವೇ ಇರಲಿಲ್ಲ. ಹಾಗೆಯೇ ಸವಾರಿ ಉಳಿದ ಸ್ಮಾರಕಗಳ ಕಡೆಗೂ ಹೊರಟಿತು.

ಕಮಲ ಮಹಲ್ ಸುತ್ತಲೂ ಹಸಿರು ಹಾಸಿ ಮಲಗಿದೆ. ಹತ್ತಿರದಲ್ಲಿಯೇ ನೂರಾರು ವರ್ಷಗಳಷ್ಟು ಹಳೆಯದಾದ ಮರಗಳೂ ಇವೆ. ಮರವೊಂದು ಜೀರ್ಣವಾಗಿದ್ದರೂ ಈಗ ಹಸಿರು ಮುಕ್ಕಳಿಸುತ್ತಿದೆ. ಕಮಲ ಮಹಲ್ ಜತೆ ಆ ಮರ ನೂರಾರು ವರ್ಷಗಳ ನೆನಪುಗಳನ್ನು ಮೆಲುಕು ಹಾಕುತ್ತಿರುವಂತೆ ಭಾಸವಾಗುತ್ತದೆ. ಆನೆಸಾಲಿಗೆ (ಗಜಶಾಲೆ) ಹೋದಾಗಲೂ ಹಸಿರೇ ಹಸಿರು. ಅದೇ ಮಹಾನವಮಿ ದಿಬ್ಬವನ್ನು ಸುತ್ತಲೂ ಬೆಳೆದ ಗರಿಕೆ, ಹೂವಿನ ಗಿಡಗಳೇ ಎತ್ತಿ ಹಿಡಿದಿವೆಯೇನೋ ಎನ್ನುವಂತೆ ಕಾಣುತ್ತದೆ. ಕೆಲವೆಡೆ ಸ್ಮಾರಕಗಳಿಗೆ ಕೆಂಪು ಹೂವುಗಳ ಫ್ರೇಮ್ ಬೇರೆ.

ಶತಮಾನಗಳಿಂದ ಮಳೆ, ಬಿಸಿಲಿನ ಹೊಡೆತಕ್ಕೆ ಸಿಕ್ಕ ಸ್ಮಾರಕಗಳ ಕಪ್ಪುಬಣ್ಣಕ್ಕೂ ನೆಲದ ಮೇಲೆ ಹರಡಿರುವ ಹಸಿರಿಗೂ ಅದೆಂತಹ ಅದ್ಭುತ ಕಾಂಬಿನೇಷನ್! ಅವೇ ಅವೇ ಸ್ಮಾರಕಗಳಾದರೂ ಕಲಾವಿದನ ಕೈಚಳಕದಲ್ಲಿ ಅರಳುವ ಕಲಾಕೃತಿಗಳಂತೆ ಹಂಪಿಯ ಬಯಲು ಕ್ಯಾನ್ವಾಸ್‌ನಲ್ಲಿ ನಡೆಯುವ ಬದಲಾವಣೆಗಳು ನಯನಮನೋಹರ. ಮೊನ್ನೆಯಷ್ಟೇ ಹಂಪಿ, ಪ್ರವಾಸಿಗರಿಗೆ ಮತ್ತೆ ಬಾಗಿಲು ತೆರೆದಿದೆ. ಈ ಮಳೆಗಾಲದಲ್ಲಿ ನೀವೂ ಒಮ್ಮೆ ಹಂಪಿಗೆ ಬನ್ನಿ. ಬಂದಾಗ ಸ್ಮಾರಕಗಳನ್ನು ಈ ರೀತಿಯೇ ನೋಡಿ! ಇಂತಹ ಫ್ರೇಮ್‌ಗಳಲ್ಲಿ ದೃಶ್ಯ ಕಣ್ತುಂಬಿಕೊಳ್ಳಲು ನೀವು ಒಂದಿಷ್ಟು ಕಸರತ್ತನ್ನು ಮಾಡಬೇಕಾದುದಂತೂ ದಿಟ.

ನಿರೂಪಣೆ: ಪಿನಾಕ


ಕಲ್ಲಿನ ಮಂಟಪದ ಸುತ್ತ ಕೆಂಪು ಹೂವುಗಳ ಫ್ರೇಮ್


ಆನೆ ಸಾಲಿನಲ್ಲಿ ಆನೆಗಳಿಲ್ಲದೆ ಭಣಭಣ... ನಾವು ಕಟ್ಟೇವಿ ಹೂವಿನ ತೋರಣ


ನನಗೂ ವಯಸ್ಸಾಯ್ತು ಕಣೊ... ಹಸಿರುಟ್ಟ ಈ ಮರ, ಕಮಲ ಮಹಲ್‌ಗೆ ಹಾಗೆ ಹೇಳುತ್ತಿರಬಹುದೇ?


ಅರಸರ ತುಲಾಭಾರದ ಸುತ್ತಲೂ ಹಸಿರಿನ ರಾಜ್ಯಭಾರ... ನೋಡುಗರಲ್ಲಿ ಉಕ್ಕುವುದು ಸಡಗರ

ಕಾಮನ ಬಿಲ್ಲು

ಹಿಂದಿನ ಪುಟದಿಂದ...

ಅನೇಕ ದೇಶಗಳು ಲೈಂಗಿಕ ಅಲ್ಪಸಂಖ್ಯಾತರಿಗೆ ನೀಡಬೇಕಾದ ಹಕ್ಕುಗಳು ಮತ್ತು ಸಮಾನ ಅವಕಾಶಗಳಿಗಾಗಿ ಕಾನೂನು ತಿದ್ದುಪಡಿ ಮಾಡಲು ಈಗ ಮುಂದಾಗಿವೆಯಾದರೂ ಸಲಿಂಗಿಗಳ ದಾಂಪತ್ಯವನ್ನು ಸಹಜವಾಗಿ ಸ್ವೀಕರಿಸುವ ಮನೋಭೂಮಿಕೆ ಇನ್ನೂ ರೂಪುಗೊಂಡಿಲ್ಲ. ಎಲ್ಲರಂತೆಯೇ ತಮ್ಮ ಲೈಂಗಿಕತೆ, ದಾಂಪತ್ಯ ಮತ್ತು ಮಗುವನ್ನು ಹೊಂದುವ ಹಕ್ಕನ್ನು ಗೌರವಿಸಬೇಕೆಂಬುದು ಅವರ ಬಹುಮುಖ್ಯ ಬೇಡಿಕೆಯಾಗಿದೆ. ಅದಕ್ಕೆಂದೇ ಭೂಮಿ, ಭಾನು ಮತ್ತು ನೀರಿನ ಸಹಜ ಸಮಾಗಮದಿಂದ ಆಗಸದಲ್ಲಿ ಮೂಡುವ ಕಾಮನಬಿಲ್ಲಿನ ಬಣ್ಣಗಳನ್ನು ಅವರು ತಮ್ಮ ಬಾವುಟದಲ್ಲಿ ಪ್ರದರ್ಶಿಸುವುದರ ಮೂಲಕ ಕನಸುಗಳಿಗೆ ಬಣ್ಣ ತುಂಬಿಕೊಂಡಿದ್ದಾರೆ. ಈ ಬಾವುಟವನ್ನು ಮೊದಲಿಗೆ 1978ರಲ್ಲಿ ಗಿಲ್ಬರ್ಟ್ ಬೇಕರ್ ಅವರು ವಿನ್ಯಾಸಗೊಳಿಸಿದ್ದರು. ಆಗ ಅದು ಎಂಟು ಬಣ್ಣಗಳಿಂದ ಕೂಡಿತ್ತು. ಮುಂದೆ ತನ್ನ ಸ್ವರೂಪವನ್ನು ಬದಲಾಯಿಸುತ್ತಾ ಈಗಿರುವ ಆರು ಬಣ್ಣಗಳ ಮಾದರಿಯನ್ನು ಪಡೆದುಕೊಂಡಿದೆ.

ಬಾವುಟದಲ್ಲಿ ಇರುವ ಗಾಢ ನೇರಳೆ ಲಿಂಗತ್ವವನ್ನು, ಕೆಂಪು ಜೀವನವನ್ನು, ಕೇಸರಿ ಸೂರ್ಯನ ಬೆಳಕನ್ನು, ಹಸಿರು ಪ್ರಕೃತಿಯನ್ನು ಮತ್ತು ಗಾಢ ನೀಲಿ ಕಲೆ, ಸಾಮರಸ್ಯ, ಚೈತನ್ಯವನ್ನು ಪ್ರತಿನಿಧಿಸುತ್ತವೆ. ವಿಶ್ವದಾದ್ಯಂತ ಅನೇಕ ಅಂತರರಾಷ್ಟ್ರೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಗಳು ನಡೆಸಿದ ಅಧ್ಯಯನದ ಪ್ರಕಾರ ಸಲಿಂಗೀಯ ಲೈಂಗಿಕ ಆಸಕ್ತಿಗಳು ಸಹಜ ಅಭಿವ್ಯಕ್ತಿಗಳೆಂದು ದಾಖಲಾಗಿವೆ. ಇತ್ತೀಚೆಗೆ ಅಂತರರಾಷ್ಟ್ರೀಯ ಸಂಸ್ಥೆಯೊಂದು ನಡೆಸಿದ ಸಂಶೋಧನೆಯ ಪ್ರಕಾರ ಭಾರತದಲ್ಲಿ ಶೇ 9ರಷ್ಟು ದ್ವಿಲಿಂಗಿಗಳು, ಶೇ 3ರಷ್ಟು ಸಲಿಂಗಿಗಳು, ಶೇ 2ರಷ್ಟು ಲಿಂಗರಹಿತರು ಮತ್ತು ಶೇ 1ರಷ್ಟು ಅಸಂಗತ ಲಿಂಗಿಗಳು (ಲೈಂಗಿಕ ಭಾವನೆಗಳಿಲ್ಲದವರು) ಜನರಿದ್ದಾರೆ. ಇವರೆಲ್ಲರನ್ನೂ ಒಳಗೊಳ್ಳುವ ಮತ್ತು ಅವರ ಸಹಜತೆಯನ್ನು ಗೌರವಿಸುವ ಜವಾಬ್ದಾರಿ ಸಮಾಜದ ಮೇಲಿದೆ.


ನಮ್ಮ ಅಭಿವ್ಯಕ್ತಿ ನಮ್ಮ ಹಕ್ಕು

ಮಗನ ಸಲಿಂಗಕಾಮವನ್ನು ಕಾಯಿಲೆಯೆಂದು ತಿಳಿದು ವಾಸಿಮಾಡಲು ಹೊರಟ ಪ್ರಸಿದ್ಧ ವೈದ್ಯರೊಬ್ಬರು ಅಧ್ಯಯನದ ಮೂಲಕ ಸತ್ಯವನ್ನು ಅರಿತುಕೊಂಡು ಅವನ ಮದುವೆಯನ್ನು ಇನ್ನೊಬ್ಬ ಹುಡುಗನೊಂದಿಗೆ ನೆರವೇರಿಸಿ, ಮದುವೆಯ ದಿನ ಮಾಡಿದ ಭಾಷಣದ ಪುಟ್ಟ ತುಣುಕೊಂದು ನಮ್ಮೆಲ್ಲರ ಅನೇಕ ಪ್ರಶ್ನೆಗಳಿಗೆ ಉತ್ತರವಾಗಬಲ್ಲುದು.

ಇದೊಂದು ಕಾಯಿಲೆಯಲ್ಲ, ಹಾಗಾಗಿ ಇದನ್ನು ಗುಣಪಡಿಸಲಾಗದು

ಇದು ನಾನು ನೋಡುತ್ತಿರುವ ಮೊದಲ ಸಲಿಂಗಕಾಮಿಗಳ (ಗೇ) ವಿವಾಹವಾಗಿದೆ ಮತ್ತು ಇಲ್ಲಿರುವ ಅನೇಕರು ನೋಡುವ ಮೊದಲ ಸಲಿಂಗಕಾಮಿಗಳ ವಿವಾಹವೂ ಇರಬಹುದು. ನಿಮ್ಮೆಲ್ಲರಿಗಾಗಿ ನಾನು ಕೆಲವು ವಿಷಯಗಳನ್ನು ಹಂಚಿಕೊಳ್ಳಬಯಸುತ್ತೇನೆ. 1997ರಲ್ಲಿ ನಾನೊಬ್ಬ ಅದೃಷ್ಟಶಾಲಿ ತಂದೆಯಾಗಿದ್ದೆ. ನನ್ನ ಒಬ್ಬನೇ ಮಗ ಒಳ್ಳೆಯ ಮಕ್ಕಳಲ್ಲಿರಬೇಕಾದ ಎಲ್ಲ ಗುಣಗಳನ್ನೂ ಮೈಗೂಡಿಸಿಕೊಂಡಿದ್ದ. ಅವನು ಉತ್ತಮ ಭಾಷಣಕಾರ, 'ಸ್ಪೆಲ್ ಬಿ'ಯ ಚಾಂಪಿಯನ್, ಶಾಲೆಯ ನಾಟಕದಲ್ಲಿ ರೋಮಿಯೊ ಪಾತ್ರ ಮಾಡಿಯೂ ಒಂದೇ ಒಂದು ಹುಡುಗಿಯ ಸ್ನೇಹವೂ ಇಲ್ಲದ 'ಶುದ್ಧ' ಹುಡುಗನಾಗಿದ್ದ. ಸಮಾಜದ ಬಗ್ಗೆ ಕಾಳಜಿಯುಳ್ಳವನಾಗಿದ್ದ ಮತ್ತು ನಾನು ಇಷ್ಟು ಒಳ್ಳೆಯ ಮಗನನ್ನು ಕೊಟ್ಟಿದ್ದಕ್ಕಾಗಿ ದೇವರಿಗೆ ಕೃತಜ್ಞನಾಗಿದ್ದೆ. ಅವನು ಭರತನಾಟ್ಯವನ್ನು ಕಲಿತಿದ್ದ, ಕಾರ್ಯಕ್ರಮಗಳ ನಿರ್ವಾಹಕನಾಗಿ ಹೆಸರು ಗಳಿಸಿದ್ದ. ಭಾಗವಹಿಸುವ ಎಲ್ಲ ಸ್ಪರ್ಧೆಗಳಲ್ಲೂ ಗೆಲ್ಲುತ್ತಿದ್ದ. ಅದು ನಮ್ಮ ಜೀವನದ ಅತ್ಯುತ್ತಮವಾದ ಸಮಯವಾಗಿತ್ತು; ಮತ್ತದು ಒಂದೇ ಸಲ ಅತಿಕೆಟ್ಟ ಸಮಯವಾಗಿ ಬದಲಾಗಿಹೋಯ್ತು.

ಒಂದು ದಿನ ಸಂಜೆ ನನ್ನ ಮಗ ನಮ್ಮಿಬ್ಬರನ್ನೂ ಕೂರಿಸಿ ಮೂರು ನಿಮಿಷಗಳ ಒಂದು ಸಣ್ಣ ಮಾತುಕತೆಯನ್ನು ನಡೆಸಿದ. 'ಅಪ್ಪಾ ಹಾಗೂ ಅಮ್ಮಾ, ನಾನೊಬ್ಬ ಸಲಿಂಗಕಾಮಿ. ನನಗಿದು ನನ್ನ ಹತ್ತನೇ ವರ್ಷದಿಂದಲೂ ಗೊತ್ತು. ಮೊದಲಿಗೆ ಅದರ ಬಗ್ಗೆ ನನಗೇ ಸಂಶಯವಿತ್ತು. ಆದರೆ ಬರುಬರುತ್ತ ಅದು ದೃಢವಾಯಿತು. ನಾನಿದನ್ನು ನೀವಿಬ್ಬರೂ ಜೀವಂತ ಇರುವವರೆಗೂ ಹೇಳಬಾರದು ಅಂದುಕೊಂಡಿದ್ದೆ. ಏಕೆಂದರೆ ಅದರಿಂದ ನಿಮಗಾಗುವ ದುಃಖವನ್ನು ನಾನು ಊಹಿಸಬಲ್ಲವನಾಗಿದ್ದೆ. ನಾನು ಹೈಸ್ಕೂಲಿನಲ್ಲಿರುವಾಗ ಒಮ್ಮೆ ಜೀವನವನ್ನೇ ಮುಗಿಸಿಬಿಡುವ ಅಂತಲೂ ಯೋಚಿಸಿದೆ. ನನ್ನಿಂದ ಸಾಧ್ಯವಾಗಲಿಲ್ಲ.'

ಹಾಗಾಗದಿರುವುದಕ್ಕೆ ದೇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನನ್ನ ಮಗ ಬಹಳ ಪುಕ್ಕಲು. ಹಾಗೆಲ್ಲ ಮಾಡುವ ಧೈರ್ಯ ಖಂಡಿತ ಅವನಿಗಿರಲಿಲ್ಲ. ಇರಲಿ. ಅವನು ಮುಂದೆ ಹೇಳಿದ: 'ಕಳೆದ ವಾರವಷ್ಟೇ ಭಾರತದಿಂದ ಬಂದ ಹುಡುಗಿಯೊಬ್ಬಳೊಂದಿಗೆ ನಾನು ಮಾತನಾಡುವಾಗ ಈ ವಿಷಯವನ್ನು ಹೇಳಿಬಿಟ್ಟೆ. ಮತ್ತೆ ತಿಳಿಯಿತು, ವಿಷಯ ಇಂದಲ್ಲ ನಾಳೆಯಾದರೂ ನಿಮ್ಮವರೆಗೂ ತಲುಪುತ್ತದೆಯೆಂದು. ಹಾಗಾಗಿ ಬೇರೆಯವರು ನಿಮಗಿದನ್ನು ತಿಳಿಸುವುದಕ್ಕೆ ಮುಂಚಿತವಾಗಿ ನಾನೇ ಇದನ್ನು ನಿಮಗೆ ತಿಳಿಸುತ್ತಿರುವೆ. ಹೌದು, ನಾನೊಬ್ಬ ಸಲಿಂಗಕಾಮಿ.' ಸಂತೋಷದ ತುತ್ತತುದಿಯಿಂದ ಮೂರೇ ನಿಮಿಷಗಳಲ್ಲಿ ನಾವು ದುಃಖದ ಪ್ರಪಾತಕ್ಕೆ ಬಿದ್ದೆವು. ಆಗಲೇ ನಾನು ಅವನ ಈ ಕಾಯಿಲೆಯನ್ನು ಗುಣಪಡಿಸುವ ಜಿದ್ದಿನಲ್ಲಿ ಬಿದ್ದೆ. ದೇಶದಲ್ಲಿ ಲಭ್ಯವಿರುವ ಅತ್ಯುತ್ತಮ ಚಿಕಿತ್ಸಾ ಕೇಂದ್ರದಲ್ಲಿ ಅವನಿಗೆ ಚಿಕಿತ್ಸೆಯನ್ನು ಕೊಡಿಸಲು ಬಯಸಿದ್ದೆ ಮತ್ತು ಈ ಸಮಸ್ಯೆಯಿಂದ ಸುಲಭವಾಗಿ ಹೊರಬರಬಹುದು ಎಂದುಕೊಂಡೆ. ಏಕೆಂದರೆ ನಾನೊಬ್ಬ ಆಶಾವಾದಿಯಾಗಿದ್ದೆ.

ಮರುದಿನವೇ ನಾನು ವೈದ್ಯಶಾಸ್ತ್ರದ ಕುರಿತಾದ ಪುಸ್ತಕಗಳಿರುವ ಗ್ರಂಥಾಲಯದ ಒಳಗಿದ್ದೆ ಮತ್ತು ಅತ್ಯುತ್ತಮವಾದ ಪುಸ್ತಕಗಳನ್ನು ನನ್ನೆದುರು ಹರಡಿಕೊಂಡು ಕುಳಿತೆ. ಅರ್ಧಗಂಟೆಯೊಳಗೆ ನನಗೆ ಸತ್ಯದ ಅರಿವಾಯಿತು. ಅಮೆರಿಕದ ಮನಃಶಾಸ್ತ್ರ ಅಧ್ಯಯನ ಸಂಸ್ಥೆಯ 1973ರ ವರದಿಯು ಸಲಿಂಗಕಾಮಿ ವ್ಯಕ್ತಿಗಳ ಬಗ್ಗೆ ಬರೆಯುತ್ತಾ ಹೀಗೆ ಹೇಳಿತ್ತು, 'ಸಲಿಂಗಕಾಮ ಎನ್ನುವುದು ಒಂದು ಕಾಯಿಲೆಯಲ್ಲ, ಇದೊಂದು ವೈಕಲ್ಯವೂ ಅಲ್ಲ. ಹಾಗಾಗಿ ಇದನ್ನು ಗುಣಪಡಿಸಲಾಗದು, ಇದು ಸಾಂಕ್ರಾಮಿಕ ಕೂಡ ಅಲ್ಲ. ಅವರನ್ನು ಸಲಿಂಗಕಾಮಿ ಎಂದು ಒಪ್ಪಿಕೊಳ್ಳುವುದೇ ಅವರಿಗೆ ಕೊಡಬೇಕಾದ ಗೌರವವಾಗಿದೆ.' ನಾನು ಆ ಕ್ಷಣದಲ್ಲಿ ಯೋಚಿಸಿದೆ, ಅವನು ಈ ವಿಷಯವನ್ನು ನಮಗೆ ತಿಳಿಸುವ ಮೊದಲು ಮತ್ತು ನಂತರದ ಕ್ಷಣಗಳಲ್ಲಿ ನನಗೆ ಅವನ ಮೇಲಿದ್ದ ಪ್ರೀತಿಯಲ್ಲಿ ವ್ಯತ್ಯಾಸವಾಗಲು ಸಾಧ್ಯವೆ? ಅವನು ಸಲಿಂಗಕಾಮಿ ಎಂದು ಹೇಳಿದ ನಂತರ ಅವನನ್ನು ಮೊದಲಿಗಿಂತ ಕಡಿಮೆ ಪ್ರೀತಿಸಬಹುದೆ? ಕ್ಷಣಹೊತ್ತು ಯೋಚಿಸಿದ ನಂತರ ನನಗನಿಸಿತು ಇಲ್ಲ, ಹಾಗಾಗಲು ಸಾಧ್ಯವಿಲ್ಲ. ಈಗಲೂ ನಾನವನನ್ನು ಮೊದಲಿನಷ್ಟೇ ಪ್ರೀತಿಸುತ್ತೇನೆ.

ಆನಂತರ ನಾನು ಮಾಡಿದ ಮೊದಲ ಕೆಲಸವೆಂದರೆ ನನ್ನ ಮಗ ಸಲಿಂಗಕಾಮಿ ಎಂದು ನಮ್ಮ ಕುಟುಂಬದ ಅತಿ ಹತ್ತಿರದ 50 ಆತ್ಮೀಯರಿಗೆ ಪತ್ರವನ್ನು ಬರೆದದ್ದು. ಆಗಲೂ ನನಗನಿಸಿದ್ದು ಹೀಗೆ, ಇದರಲ್ಲಿ ಸಾಂಪ್ರದಾಯಿಕವಾಗಿ ಯೋಚಿಸುವ ಅರ್ಧದಷ್ಟು ಜನರು ನಮ್ಮಿಂದ ದೂರವಾಗುತ್ತಾರೆ. ಇದರಿಂದ ಅನೇಕ ಸ್ನೇಹಿತರನ್ನು ನಾವು ಕಳೆದುಕೊಂಡಂತಾಗುವುದಿಲ್ಲವೆ? ಆಗಲೂ ನನ್ನ ಗೊಂದಲಕ್ಕೆ ಉತ್ತರ ಸಿಕ್ಕಿತು. 'ದೂರವಾಗುವ ಶೇ 50ರಷ್ಟು ಜನರ ಬಗ್ಗೆ ನಾವ್ಯಾಕೆ ತಲೆಕೆಡಿಸಿಕೊಳ್ಳಬೇಕು? ಅವರು ನಿಜವಾಗಲೂ ನಮ್ಮವರಲ್ಲವೆಂದು ಸಾಬೀತಾದಂತಾಯಿತು. ಆದರೆ, ಉಳಿದ ಶೇ 50ರಷ್ಟು ಜನರೊಂದಿಗೆ ನಾವ್ಯಾಕೆ ಖುಷಿಯಿಂದ ನಮ್ಮ ಬದುಕನ್ನು ಕಟ್ಟಿಕೊಳ್ಳಬಾರದು?' ಹಾಗಾಗಿ ನನ್ನ ಮಗ ಇಂದು ಅವನ ಸಂಗಾತಿಯೊಂದಿಗೆ ನಿಮ್ಮೆಲ್ಲರೆದುರಿಗೆ ಮದುವೆಯಾಗುತ್ತಿದ್ದಾನೆ. ❖

ಕಥೆ

ಎಸ್.ಗಂಗಾಧರಯ್ಯ
ಬರೆದ ಕಥೆ
ಅಲ್ಲಿ ಆ ಅಳುವು ಈ ಚಣವೂ...


ಕಲೆ: ಸುಜಾತಾ ಶೆಟ್ಟಿ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಮಂಜುಳಾ ಸಿ.ಎಸ್.
ಬರೆದ ಕವಿತೆ
ನೆನಪುಗಳ ಅಗೆತ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಮುನ್ನೋಟ 27-06-2021 ರಿಂದ 03-07-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ವ್ಯವಹಾರಗಳ ಗುಟ್ಟನ್ನು ಯಾರಿಗೂ ತಿಳಿಸದೆ ಇರುವುದು ಬಹಳ ಉತ್ತಮ. ಹೊಸ ವ್ಯಾಪಾರದ ಯೋಜನೆಯನ್ನು ಬಹಳ ಎಚ್ಚರಿಕೆಯಿಂದ ಗೋಪ್ಯವಾಗಿ ತಯಾರಿಸಿರಿ. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬಂದರೂ ನಿಮ್ಮ ಅನಿರೀಕ್ಷಿತ ದುಂದು ವೆಚ್ಚಗಳಿಂದ ಹಣಕಾಸಿನ ಸ್ಥಿತಿ ಏರುಪೇರಾಗಬಹುದು, ಆದ್ದರಿಂದ ಖರ್ಚು ಮಾಡುವ ಮುನ್ನ ಅದರ ಅಗತ್ಯತೆಯನ್ನು ಸರಿಯಾಗಿ ಪರಿಶೀಲಿಸಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆಪ್ತ ಗೆಳೆಯರ ನಡುವೆ ಸಣ್ಣ ವಿಚಾರಕ್ಕಾಗಿ ನಿಷ್ಠುರ ಬರುವ ಸಾಧ್ಯತೆಗಳಿವೆ. ವೈದ್ಯವೃತ್ತಿಯವರಿಗೆ ಕೆಲಸದ ಒತ್ತಡ ಹೆಚ್ಚು ಇರುತ್ತದೆ. ರಾಜಕಾರಣಿಗಳಿಗೆ ಅನುಕೂಲಕರ ರಾಜಕೀಯ ಪರಿಸ್ಥಿತಿ ಏರ್ಪಟ್ಟು ಅವರ ದಾಳವನ್ನು ಉರುಳಿಸಲು ಸುಸಂದರ್ಭ ಸಿಗುತ್ತದೆ. ವ್ಯವಹಾರಗಳಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ದೂರ ಪ್ರಯಾಣ ಬೇಡ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ಮೇಲೆ ಬಂದಿದ್ದ ಹೆಚ್ಚಿನ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಯಶಸ್ಸನ್ನು ಕಾಣುವಿರಿ. ಒಳಾಂಗಣ ವಿನ್ಯಾಸಕಾರರಿಗೆ ಹೆಚ್ಚಿನ ಕೆಲಸ ದೊರೆತು ಹೆಚ್ಚಿನ ಲಾಭವಾಗುತ್ತದೆ. ಆತ್ಮಗೌರವ ಅತಿಯಾಗಿ ಇರುತ್ತದೆ. ಇದು ಗೌರವವನ್ನು ಜೊತೆಗೆ ಹಿನ್ನಡೆಯನ್ನು ಸಹ ತರಬಹುದು. ಚಿನ್ನಾಭರಣ ತಯಾರು ಮಾಡುವವರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ದೂರ ಪ್ರಯಾಣದಿಂದ ಉಂಟಾದ ಆಯಾಸದಿಂದ ಚೇತರಿಸಿಕೊಳ್ಳುವಿರಿ. ರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಕೆಲವು ಕಠಿಣ ಪರಿಸ್ಥಿತಿಗಳು ಎದುರಾಗಬಹುದು. ತಾಂತ್ರಿಕ ತರಬೇತಿಯನ್ನು ಪಡೆಯುತ್ತಿರುವವರು ಹೆಚ್ಚಿನ ಶ್ರಮ ವಹಿಸಬೇಕು, ಆಗ ಮುಂದಿನ ದಾರಿಗಳು ಅವರಿಗೆ ಸುಲಭವಾಗುತ್ತವೆ. ಕಚೇರಿ ಕೆಲಸಗಳಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆಯಲು ತರಬೇತಿಗೆ ಹೋಗುವ ಅವಕಾಶ ದೊರೆಯುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿರುದ್ಯೋಗಿಗಳಿಗೆ ಕೆಲಸ ಸಿಗುವ ಸಾಧ್ಯತೆಗಳು ಹೆಚ್ಚಾಗಿವೆ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಕಿರುಕುಳ ಹೆಚ್ಚಾಗಬಹುದು. ಮಕ್ಕಳ ಪ್ರಗತಿಯು ನಿರೀಕ್ಷೆಯ ಮಟ್ಟಕ್ಕಿಂತ ಹೆಚ್ಚಿಗೆ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಪ್ರಗತಿ ಇರುತ್ತದೆ. ಯಾವುದೇ ಕೆಲಸಗಳಲ್ಲಿ ಅತಿ ಅವಸರ ಬೇಡ. ತಲೆನೋವು ಅಥವಾ ಬೆನ್ನುನೋವು ಕಾಡಬಹುದು. ಮಕ್ಕಳ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆಯನ್ನು ಕಾಣಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ರಾಜಕಾರಣಿಗಳಿಗೆ ತಮ್ಮ ಹೇಳಿಕೆಯಿಂದ ಮುಜುಗರವುಂಟಾಗುವ ಸಂದರ್ಭವಿದೆ. ಸಾಮಾಜಿಕ ಕಾರ್ಯಕರ್ತರುಗಳಿಗೆ ಅನಿರೀಕ್ಷಿತ ಗೌರವ ದೊರೆಯುವ ಸಂದರ್ಭವಿದೆ. ನಿಮ್ಮ ಸಂಪನ್ಮೂಲಕ್ಕೆ ಅನುಗುಣವಾಗಿ ಕಾರ್ಯಗಳನ್ನು ಜಾರಿಗೊಳಿಸುವುದು ಉತ್ತಮ. ವ್ಯಾಪಾರಿಗಳಿಗೆ ವ್ಯಾಪಾರದ ಬಗ್ಗೆ ಪ್ರೋತ್ಸಾಹ ದೊರೆಯುತ್ತದೆ. ಕೆಲವು ವ್ಯಾಪಾರಿಗಳಿಗೆ ಪ್ರೋತ್ಸಾಹ ಧನ ಸಿಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ನಿಮ್ಮ ಸಂತೋಷದ ವಿಚಾರಗಳಲ್ಲಿ ಕುಟುಂಬದ ಸಹಕಾರ ಖಂಡಿತ ದೊರೆಯುತ್ತದೆ. ಸಮಾಜ ಸೇವೆಯನ್ನು ಮಾಡುವವರಿಗೆ ಸಾಫಲ್ಯತೆಯ ನೆಮ್ಮದಿ ದೊರೆಯುತ್ತದೆ. ಆರ್ಥಿಕ ರಂಗದಲ್ಲಿ ಯಥಾಸ್ಥಿತಿ ಮುಂದುವರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಮನೆಗೆ ಸತ್ಪುರುಷರ ಆಗಮನವಾಗಲಿದೆ. ಮನೆಯಲ್ಲಿ ದೈವತಾ ಕಾರ್ಯಗಳು ನಡೆಯುವ ಎಲ್ಲಾ ಸಾಧ್ಯತೆಗಳಿವೆ. ವ್ಯವಹಾರದಲ್ಲಿ ಉನ್ನತಿಯಾಗಿ ಧನಲಾಭ ಬರುತ್ತದೆ. ಆಭರಣ ಖರೀದಿಯ ಆಸಕ್ತಿಯನ್ನು ಹೊಂದುವಿರಿ. ಭಾಷಣಕಾರರಿಗೆ ಉತ್ತಮ ವಸ್ತು ದೊರೆತು ತಮ್ಮ ವಾಕ್ ಚಾತುರ್ಯದಿಂದ ಜನರನ್ನು ರಂಜಿಸುವರು.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಕಾರ್ಯಯೋಜನೆಗಳಲ್ಲಿ ನೀವು ಮಾಡುವ ಬದಲಾವಣೆಗಳು ಸಕಾರಾತ್ಮಕ ಫಲಿತಾಂಶವನ್ನು ಕೊಡುತ್ತವೆ. ಸಮಾಧಾನಚಿತ್ತದಿಂದ ಚಿಂತಿಸಿ ಆರ್ಥಿಕ ಸುಧಾರಣೆಯನ್ನು ಸರಿದಾರಿಗೆ ತರಬಹುದು. ಹಿರಿಯರು ಮಾತನಾಡುವಾಗ ತಮ್ಮ ಮಾತಿನ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದು ಬಹಳ ಒಳಿತು. ವಿದ್ಯಾರ್ಥಿಗಳಿಗೆ ಸ್ವಲ್ಪ ಅನುಕೂಲಗಳು ಒದಗಿ ಬರುತ್ತವೆ. ದೈವ ಕಾರ್ಯದಲ್ಲಿ ಪಾಲ್ಗೊಳ್ಳುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕಠಿಣ ಪರಿಶ್ರಮದಿಂದ ಕಾರ್ಯದಲ್ಲಿ ಯಶಸ್ಸನ್ನು ಪಡೆಯುವಿರಿ, ಎದುರಾಳಿಗಳ ತೊಂದರೆ ಇದ್ದರೂ ಅದನ್ನು ಎದುರಿಸಿ ಮುನ್ನಡೆಯುವಿರಿ. ವ್ಯವಹಾರದಲ್ಲಿ ನಿಮ್ಮ ವಿರೋಧಿ ಬಣದ ತಂತ್ರಗಳು ನಿಮಗೆ ತಿಳಿದು ಅವರನ್ನು ಸುಮ್ಮನಾಗಿಸುವಿರಿ. ಅಗತ್ಯಕ್ಕೆ ತಕ್ಕಷ್ಟು ಧನಾಗಮವಿರುತ್ತದೆ. ನಿವೃತ್ತರಿಗೆ ಹೊಸ ರೀತಿಯ ಕೆಲಸಗಳು ದೊರೆಯಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ದೀನದಲಿತರಿಗೆ ಸಹಾಯಮಾಡಿ ಸಂತೋಷಪಡುವರು. ಆರ್ಥಿಕ ಸ್ಥಿತಿಯನ್ನು ಸರಿಯಾಗಿ ಅವಲೋಕನ ಮಾಡಿ ಮುನ್ನಡೆಯಿರಿ. ಯುವಕರಿಗೆ ಉದ್ಯೋಗ ನಷ್ಟದ ಪರಿಸ್ಥಿತಿ ಬರಬಹುದು. ಶಸ್ತ್ರಚಿಕಿತ್ಸೆ ಆಗಿರುವವರು ಶೀಘ್ರವಾಗಿ ಗುಣಮುಖರಾಗುವ ಯೋಗವಿದೆ. ಸ್ನೇಹಿತರೊಡನೆ ಕೂಡಿ ಮಾಡಿದ ಆರ್ಥಿಕ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ಮನಸ್ಸಿನ ದುಗುಡವನ್ನು ಆಪ್ತರ ಬಳಿ ಹೇಳಿಕೊಂಡು ಮನಸ್ಸು ಹಗುರ ಮಾಡಿಕೊಳ್ಳುವಿರಿ. ನವೀನ ರೀತಿಯ ವಸ್ತ್ರ ವಿನ್ಯಾಸಕಾರರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ವಸ್ತ್ರಗಳ ಮೇಲೆ ಕುಸುರಿ ಕೆಲಸವನ್ನು ಮಾಡುವವರಿಗೆ ಆದಾಯ ಬರುತ್ತದೆ. ಕೆಲವು ಸಣ್ಣ ಉದ್ದಿಮೆಗಳನ್ನು ಕಂಡುಕೊಳ್ಳಬೇಕೆನ್ನುವವರಿಗೆ ಈಗ ಸಕಾಲ. ಹಿರಿಯರ ಆರೋಗ್ಯದಲ್ಲಿ ಅಲ್ಪ ವ್ಯತ್ಯಾಸವನ್ನು ಕಾಣಬಹುದು.

ಪದಬಂಧ 2693



ಮೇಲಿನಿಂದ ಕೆಳಕ್ಕೆ

2. ಚಿಟಿಕೆ ಹೊಡೆಯುವುದರಲ್ಲಿ ಮಾಯವಾಗುವ ಸಮಯ 4
3. ಕುರುವಂಶದ ಮಹಾ ಕಥನ 5
4. ಹಾರಲು ಸಿದ್ಧವಾಗಿ ರೆಕ್ಕೆ ಬಿಚ್ಚು 5
5. ಹೆಚ್ಚು ಕಡಿಮೆ ಸಮವಾದದ್ದು ಅಂತ್ಯದಲ್ಲಿ ಜರುಗಿದೆ 4
7. ಭೂವಿಯನ್ನು ಬೆಳಗಲು ಬಾನಲ್ಲಿ ಇಳಿಬಿಟ್ಟ ಹಣತೆ 5
8. ಹತ್ತು ರೂಪಗಳಲ್ಲಿ ಧರೆಗಿಳಿದ ಪರಮಾತ್ಮ 5
10. ಸದಾ ಇನ್ನೊಬ್ಬರ ಚಾಕರಿಯಲ್ಲಿ ತೊಡಗಿರುವವ 5
11. ಸುಲಭವಾಗಿ ಹರಿದು ಬರುವ ಸಂಗೀತಾಲಾಪ 5
13. ಮಳೆಯ ಅಧಿದೇವತೆ 3
16. ಮುಖದ ಮೇಲ್ಭಾಗದಲ್ಲಿ ಅಡಕವಾಗಿರುವ ಭವಿಷ್ಯ 5
17. ಕೃಷ್ಣದೇವರಾಯನ ಆಸ್ಥಾನದಲ್ಲಿ ಊರಹೆಸರಿಂದ ಪ್ರಸಿದ್ಧನಾದ ಹಾಸ್ಯಗಾರ 5
19. ನಿಧಾನವಾಗಿ ನಶಿಸುವಂತೆ ಮಾಡುವ ವ್ಯಾಧಿ 4
21. ಮನೆಯಂಗಳವನ್ನು ಅಲಂಕರಿಸುವ ಕಲಾತ್ಮಕ ಬಣ್ಣದ ಚಿತ್ತಾರ 4

ಎಡದಿಂದ ಬಲಕ್ಕೆ

1. ಅಕಾರಾದಿಯಿಂದ ಕ್ಷಕಾರಾಂತ್ಯದವರೆಗೆ ನಾಶವಾಗದ ನೆಲೆ 5
4. ಆನೆ ಸಿಂಹದ ಸಮಾಗಮ 5
6. ಮನೆಯ ವಾಸಕ್ಕೆ ಕೊಡಬೇಕಾದ್ದ ಭಾರೀ ಮೊತ್ತದ ಕಿರಾಯಿ ಹೀಗಾಗಬಹುದು 3
7. ಈ ಬೃಹತ್ ವೃಕ್ಷದ ನೆರಳಲ್ಲಿ ಗಿಡ ಹುಟ್ಟುವುದು ಅಪರೂಪ 5
9. ಸ್ವರಗೂಡಿಸಿ ಬೆಂಬಲಿಸು 5
12. ಹೆಣ್ಣು ಮಕ್ಕಳ ತಾಯ್ಮನೆ 3
14. ಅಲ್ಪಪ್ರಾಣದ ವರ್ಷ ವಿರಳವಾಗಿ ಹಿಂದು ಮುಂದಾಗಿದೆ 3
15. ಆಗಮದ ಜೊತೆಗೂಡುವ ಆಡಳಿತ ವ್ಯವಸ್ಥೆ 3
16. ಸಣ್ಣಗೆ ಮಂದ ಬೆಳಕು ನೀಡುವ ಪ್ರಣತಿ 3
18. ರಾಜಕೀಯ ಗುಂಪುಗಳನ್ನು ಕಾಪಾಡುವಿಕೆ 5
20. ಸ್ವರ ಸಂಗಮ ಅಲೆ ಅಲೆಯಾಗಿ ಹರಿದಿದೆ 5
22. ಬಲಿಯಲ್ಲಿ ಬರುವ ನ್ಯಾಯ 3
23. ಪಕ್ಷಿಯ ಗುಂಪು 5
24. ಸಂಸಾರದ ಸುವಾಸಿತ ಹೂವು 5

ಪದಬಂಧ ಉತ್ತರ -2692

ಮೇಲಿಂದ ಕೆಳಕ್ಕೆ

1. ಹಡಗು 2.ಮಹೇಶ 3.ಗಣಕ 5.ತಿಮಿರ 9.ರಿಪುಸಂವಾದ 10.ಶಿಖಾರಿಪುರ 11.ಚಾಮರ 12.ಕಪಿನಿ 16.ಜವಾನಿ 17.ಆಯಾಸ 19.ಶಕುನಿ 20.ಯತೀಶ 21.ಮನನ

ಎಡದಿಂದ ಬಲಕ್ಕೆ

1.ಹವನಹೋಮ 3.ಗಡಗಡ 4.ಹೇಮಾವತಿ 6.ಗುಪ್ತಸಂದೇಶ 8.ಕಸ್ತೂರಿ 10.ಶಿಖರ 11.ಚಾಲಕ 13.ಸಂಗಮ 14.ಪಿತೂರಿ 15.ರಜನಿ 17.ಆನಂದ 18.ರರ್ಕಶ 20.ಯಮನಿಯಮ 22.ಸರಸ್ವತೀ 23.ನವಧ್ವನಿ 24.ಶತವಂದನ

ನಾವೆಲ್ಲರೂ ಕ್ಷಮೆಯ ಸಾಲಗಾರರು...

'ಡಾಲಿ' ಧನಂಜಯ್

ನನ್ನ 'ರತ್ನನ್ ಪ್ರಪಂಚ' ಸಿನಿಮಾದ ಶೂಟಿಂಗ್‌ನಲ್ಲಿ ನನಗೆ ಅಕ್ಕಯ್ ಪದ್ಮಶಾಲಿ ಅವರು ಭೇಟಿಯಾದುದು. ಯಾವಾಗಲೂ ನಗುನಗುತ್ತ ಎಲ್ಲರೊಡನೆ ಒಡನಾಡಿಕೊಂಡಿದ್ದ ಅವರು, ನಿರ್ದೇಶಕರು ಕೆಲವೊಂದು ದೃಶ್ಯಗಳನ್ನು ವಿವರಿಸಿದಾಗ ಕಣ್ಣೀರಾಗಿ ಬಿಡುತ್ತಿದ್ದರು. ಒಂದು ಸಿನಿಮಾ ನೋಡುವಾಗ ಅಥವಾ ಯಾವುದೇ ಕಥೆ, ಕಾದಂಬರಿ ಓದುವಾಗ, ನಮ್ಮ ಬದುಕಿಗೆ ಹತ್ತಿರವಾಗಿರುವ, ನಂಟಿರುವ ಸನ್ನಿವೇಶಗಳು ಬಂದಾಗ ಭಾವುಕರಾಗುವುದು ಸಹಜ.

ಅಕ್ಕಯ್ ಪದ್ಮಶಾಲಿ - ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಅವರ ಹಕ್ಕುಗಳಿಗಾಗಿ ರಾಷ್ಟ್ರ ಮಟ್ಟದಲ್ಲಿ ಹೋರಾಟದ ಮುಂಚೂಣಿಯಲ್ಲಿರುವವರು. ಜಗದೀಶ ಎನ್ನುವ ಹುಡುಗ ಅಕ್ಕಯ್ ಆಗಿ ಬದಲಾದ. ಆತನ ತಲ್ಲಣಗಳ ಕಥೆಯನ್ನು ವಿವರಿಸುವ ಆತ್ಮಕಥನ 'ಅಕ್ಕಯ್' ಅನ್ನು ಬಹುರೂಪಿ ಪ್ರಕಾಶನ ಪ್ರಕಟಿಸುತ್ತಿದೆ. ಈ ಕೃತಿ ನಾಳೆ, 'ಪ್ರೈಡ್ ಡೇ' ದಿನ ಬಿಡುಗಡೆಯಾಗುತ್ತಿದೆ.

ಆದರೆ, ಅಕ್ಕಯ್ ಕಣ್ಣೀರಾಗುತ್ತಿರುವುದೆಂದರೆ ಮಾತಲ್ಲಿ ಹೇಳಲಾಗದ ಸಾವಿರ ಅರ್ಥಗಳಿದ್ದವು. ಅದರಲ್ಲಿ ಖುಷಿಯಿತ್ತು, ನೋವಿತ್ತು, ಹೋರಾಟದ ಕಿಚ್ಚಿತ್ತು ಮತ್ತು ಸಾರ್ಥಕತೆಯಿತ್ತು. ಅಲ್ಲದೆ, ಇನ್ನೂ ಈ ಸಮಾಜಕ್ಕೆ ಕೇಳಬೇಕಾದ ಅಸಂಖ್ಯಾತ ಪ್ರಶ್ನೆಗಳಿದ್ದವು. ಹೇಳಬೇಕಾದ ಉತ್ತರಗಳಿದ್ದವು. ಅಂದುಕೊಂಡದ್ದನ್ನು ಪಡೆಯುವ, ಸಮುದಾಯಕ್ಕೆ ಹೆಗಲಾಗಿ ನಿಲ್ಲುವ ಮನೋಸ್ಥೈರ್ಯವಿತ್ತು. ಇದೆಲ್ಲವೂ ನಿಮಗೆ ಅರ್ಥವಾಗಬೇಕೆಂದರೆ, ಅಕ್ಕಯ್ ಪದ್ಮಶಾಲಿ ಅವರ ನಿರಂತರ ಹೋರಾಟದ ಆತ್ಮಕಥನದ ಆಳಕ್ಕೆ ಇಳಿಯಬೇಕು.

'ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಒಂದು ದೀರ್ಘ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವಂತಹದ್ದಲ್ಲ' – ಪೂರ್ಣಚಂದ್ರ ತೇಜಸ್ವಿಯವರ ಈ ಮಾತುಗಳು ಅಕ್ಕಯ್ ಅವರ ಬದುಕಿನಲ್ಲಿ ನೂರರಷ್ಟು ಸತ್ಯವಾದುದು.

ಮನೆಯಲ್ಲಿನ ಭಯ, ಸಮಾಜದ ಭಯ, ಕಟ್ಟುಪಾಡುಗಳ ಸರಪಳಿ, ಎಲ್ಲ ಸಿದ್ಧಸೂತ್ರಗಳನ್ನು ಮುರಿದು, ಎಲ್ಲರನ್ನೂ ಎಲ್ಲವನ್ನೂ ಪ್ರಶ್ನಿಸಿ, ಎಲ್ಲರೂ ತನ್ನನ್ನು ತನ್ನ ಸಮುದಾಯವನ್ನು ತಮ್ಮಲೊಬ್ಬರಾಗಿ ಒಪ್ಪಿಕೊಳ್ಳಬೇಕು, ಒಪ್ಪಿಕೊಳ್ಳುವಂತಾಗಬೇಕು; ಅದಕ್ಕೆ ಸಮಾಜ ಮತ್ತು ತನ್ನ ಸಮುದಾಯ ಎರಡೂ ಕಡೆಯಿಂದ ಪ್ರಯತ್ನಗಳಾಗಬೇಕು–ಹೀಗೆಂದುಕೊಂಡು ಅದರೆಡೆಗೆ ಜೀವನವನ್ನೇ ಮುಡಿಪಾಗಿಟ್ಟು ಕೆಲಸ ಮಾಡಿರುವ ಜೀವ ಅಕ್ಕಯ್ ಪದ್ಮಶಾಲಿ.

ಹಾಗೆಯೇ ಸಂಸ್ಕೃತಿಯ ಹೆಸರಿನಲ್ಲಿ ತನ್ನ ಸಮುದಾಯದ ಒಳಗಿರುವ ಮೌಢ್ಯ, ಅನ್ಯಾಯಗಳನ್ನು ಪ್ರಶ್ನಿಸುತ್ತ, ತನ್ನೊಡನೆ ತನ್ನವರನ್ನು ಬೆಳಕಿನತ್ತ ಕೊಂಡೊಯ್ಯುತ್ತಿರುವ ಜೀವವಾಗಿದೆ. ಅಕ್ಕಯ್ ಪದ್ಮಶಾಲಿಯವರ ಬದುಕು ಮತ್ತು ಹೋರಾಟ ಇನ್ನೂ ಸಾವಿರಾರು ಜೀವಗಳಿಗೆ ಸ್ಫೂರ್ತಿ ಹಾಗೂ ಮಾದರಿ.

ಒಬ್ಬರು ನಮಗೆ 'ಕರುಣೆ' ತೋರಿಸುತ್ತಿದ್ದಾರೆ ಎಂದರೆ ಅದಕ್ಕಿಂತ ದುರಂತ ಸ್ಥಿತಿ ಮತ್ತೊಂದಿಲ್ಲ. ಈ ವಿಷಯದಲ್ಲಿ ಅಕ್ಕಯ್ ಮೊದಲ ಅಧ್ಯಾಯದಲ್ಲೇ 'ನಿಮ್ಮ ಕರುಣೆಗೆ ಹೀಗೊಂದು ಸವಾಲು' ಎಂದು ಸ್ವಾಭಿಮಾನ ಮೆರೆಯುತ್ತ, ತಮ್ಮ ಚಿಂತನೆಗಳನ್ನು ಪ್ರಸ್ತುತಪಡಿಸುತ್ತ, ನನಗೆ ನಿಮ್ಮ ಸಹಾನುಭೂತಿ ಬೇಡ ಪರಾನುಭೂತಿ (ಎಂಪಥಿ) ಬೇಕು ಎನ್ನುತ್ತಾರೆ.


ತಮ್ಮ ಬಾಲ್ಯದಿಂದಾದ ಎಲ್ಲ ಅನುಭವಗಳನ್ನು, ಅವಮಾನಗಳನ್ನು ತುಂಬಾ ನೇರವಾಗಿ ಹೇಳುತ್ತ, ತಾನು ಸತ್ತ ನಂತರ ತನ್ನ ದೇಹವನ್ನು ಆಸ್ಪತ್ರೆಗೆ ಅಧ್ಯಯನಕ್ಕೆ ನೀಡುತ್ತೇನೆ ಎಂದು ಹೇಳುವಲ್ಲಿ, ಅವರ ವೈಜ್ಞಾನಿಕ ಮನೋಭಾವ ಹಾಗೂ ದಾನ ಮಾಡುವ ಮನೋಭಾವದ ಜೊತೆಗೆ, ತಮ್ಮಂತಹವರ ದೇಹಗಳ ಬಗ್ಗೆ ಸಮಾಜಕ್ಕೆ ತುಂಬಾ ಕುತೂಹಲ ಇದೆ; ಅಧ್ಯಯನ ಮಾಡಿಕೊಳ್ಳಲಿ ಎಂಬ ನಮ್ಮ ಈ ಅಸ್ವಸ್ಥ ಸಮಾಜದ ಬಗೆಗಿನ ನೋವು ಹಾಗೂ ಕೋಪ ಎದ್ದು ಕಾಣುತ್ತದೆ.

ಹೀಗೆ ಬದುಕಿನುದ್ದಕ್ಕೂ ನಡೆದ ಎಲ್ಲ ಸಂಗತಿಗಳನ್ನೂ ಒಂಚೂರೂ ಪರಿಷ್ಕರಿಸದೆ ನೇರವಾಗಿ ಹೇಳುತ್ತಾ, ತಮ್ಮ ಆ್ಯಕ್ಟಿವಿಸಂ ಜೊತೆಗೆ, ತಾವು ಹೆಣ್ಣಾಗಿ ತಮ್ಮ ಪ್ರೇಮ, ಕಾಮ, ಸಂಸಾರ, ಅದರಾಚೆಗಿನ ಸಂಬಂಧಗಳು ಎಲ್ಲದರ ಬಗ್ಗೆಯೂ ಪ್ರಾಮಾಣಿಕವಾಗಿ ಮಾತನಾಡಿದ್ದಾರೆ. ಜಗದೀಶ್ ಎಂಬ ಹುಡುಗ ಅಕ್ಕಯ್ ಪದ್ಮಶಾಲಿ ಎಂಬ ಹೆಣ್ಣಾಗಿ, ಪ್ರಪಂಚದ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಸಮುದಾಯವನ್ನು ಪ್ರತಿನಿಧಿಸಿ, ಜಾಗೃತಿ ಮೂಡಿಸಿ, ತನ್ನೆಲ್ಲ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಂಡು, ಗುಣದಲ್ಲಿ ಅಷ್ಟೈಶ್ವರ್ಯ ಸಂಪನ್ನೆ ದೊಡ್ಡಮನೆ ಅಕ್ಕಯಮ್ಮರಾಗಿ, ಸಮಾಜಕ್ಕೆ ಕೊಡುಗೆಯಾಗುವಂತಹ ಮನುಷ್ಯಳಾಗಿ ವಿಕಾಸವಾದದ್ದನ್ನು ಓದುತ್ತ, ನಾನು ಮತ್ತೂ ಮನುಷ್ಯನಾದೆ.

ಜೀವ ಜೀವಗಳ ಬಂಧವನ್ನು ಅರಿತುಕೊಳ್ಳದೆ, ಎಲ್ಲ ಜೀವಗಳೂ ಒಂದೇ ಎನ್ನುವುದನ್ನು ಒಪ್ಪಿಕೊಳ್ಳದೆ, ಇದು ನೈಸರ್ಗಿಕ, ಇದು ಅನೈಸರ್ಗಿಕ ಎಂದು ನಮಗೆ ನಾವೇ ತೀರ್ಮಾನಿಸಿಕೊಂಡು, ಅಕ್ಕಯ್‌ನಂತಹ ಎಷ್ಟೋ ಜೀವಗಳಿಗೆ ನೋವನಿತ್ತ ನಾವೆಲ್ಲರೂ 'ಕ್ಷಮೆಯ ಸಾಲಗಾರರು'. ಇನ್ನಾದರೂ ಅರಿತುಕೊಳ್ಳದಿದ್ದರೆ, ನಮ್ಮ ಮುಂದಿನಪೀಳಿಗೆ ಕೂಡ ಕ್ಷಮೆಯ ಸಾಲಗಾರನಾಗಿಯೇ ಉಳಿಯುತ್ತದೆ.

ಪ್ರತಿಯೊಂದು ಸಾಧನೆಯ ಹಂತದಲ್ಲೂ, ತನ್ನ ಹೆಗಲನ್ನು ಮತ್ತಷ್ಟು ಗಟ್ಟಿ ಮಾಡಿಕೊಂಡು, ನಿಷ್ಠುರವಾಗಿ ಮುನ್ನುಗ್ಗುತ್ತಿರುವ ಅಕ್ಕಯ್ ಪದ್ಮಶಾಲಿಯವರಿಗೆ ಪ್ರಕೃತಿ ತನ್ನ ಶಕ್ತಿಯನ್ನೆಲ್ಲ ನೀಡಲಿ ಎಂದು ಹಾರೈಸುತ್ತೇನೆ.

ಲೇಖಕ: ನಟ



ಪು: 270 ₹300

ಅಕ್ಕಯ್
(ಅಕ್ಕಯ್ ಪದ್ಮಶಾಲಿ ಅವರ ಆತ್ಮಕಥನ)
ನಿರೂಪಣೆ: ಡಾ. ಡೊಮಿನಿಕ್ ಡಿ
ಪ್ರ: ಬಹುರೂಪಿ
ಸಂ: 70191 82729

ಅಕ್ಕಯ್ ಅಂತರಂಗ

'ಡಬಲ್ ರೋಲ್ ಮಾಡ್ತಿದ್ದೆ'

ಇಲ್ಲಿಯವರೆಗಿನ ಬದುಕಿನ ಪಯಣದ ಕುರಿತು ಹೇಳುವುದಾದರೆ, ಅದು ಸಾಮಾಜಿಕ ಆ್ಯಕ್ಟಿವಿಸಂನ ಸಣ್ಣಸಣ್ಣ ತುಣುಕುಗಳನ್ನು ಹೆಕ್ಕಿ ಹೆಣೆದಿರುವುದೇ ಆಗಿದೆ. ಅಕ್ಕಯ್ಯ ಅಂದರೆ ಯಾರು? ಆಕೆ ಈ ಆ್ಯಕ್ಟಿವಿಸಂಗೆ ಬಂದದ್ದಾದರೂ ಹೇಗೆ? ಹೀಗೆ ಕಥೆಯನ್ನು ಶುರು ಮಾಡಬಹುದು. ಅಂದರೆ ಈ ಪಯಣವನ್ನು ಬಾಲ್ಯದಿಂದಲೇ ಶುರು ಮಾಡಬಹುದಲ್ಲವೇ..?

ನನ್ನ ಹೆಸರು ಜಗದೀಶ್. ಮಧ್ಯಮ ವರ್ಗದ ಸಣ್ಣ ಕುಟುಂಬದಲ್ಲಿ ಗಂಡಾಗಿಯೇ ಹುಟ್ಟಿದ್ದು. ತಂದೆ ಭಾರತೀಯ ರಕ್ಷಣಾ ಸಚಿವಾಲಯದ ಏರೋನಾಟಿಕಲ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಕಾರ್ಮಿಕರಾಗಿದ್ದರು. ಅಮ್ಮ ಗೃಹಿಣಿ. ಅಂತಹ ಕುಟುಂಬದ ಸಾಮಾನ್ಯ ನಿರೀಕ್ಷೆಯೆಂದರೆ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು ಮಗುವಿದ್ದರೆ ಸಾಕು ಎನ್ನುವುದು. ಹಾಗೆಯೇ ಆಗಿತ್ತು. ಅಂದರೆ, ನನ್ನೊಡನೆ ಮತ್ತಿಬ್ಬರು ಒಡಹುಟ್ಟಿದವರು ಇದ್ದರು. ಹಿರಿಯಳಾದ ಅಕ್ಕನಿಗೆ ದಲಿತ ವ್ಯಕ್ತಿಯೊಡನೆ ಮದುವೆಯಾಗಿದೆ. ಆಕೆಗೆ ಇಬ್ಬರು ಗಂಡುಮಕ್ಕಳು. ತಮ್ಮನಿಗೆ ರೋಮನ್ ಕ್ಯಾಥೊಲಿಕ್ ಕ್ರೈಸ್ತ ಮಹಿಳೆಯೊಂದಿಗೆ ಮದುವೆಯಾಗಿದ್ದು, ಒಂದು ಮಗು ಇದೆ. ನಾನು ಈ ಇಬ್ಬರ ನಡುವಿನ ಮಗುವಾಗಿದ್ದೆ!

ಅಪ್ಪ-ಅಮ್ಮ ಇಬ್ಬರ ಕಡೆಯಿಂದಲೂ ಸಂಬಂಧಿಕರು ಹೆಚ್ಚು. ಇಂತಹ ಕುಟುಂಬದೊಳಗೆ ನಾನು ಹೆಣ್ಣುತನದತ್ತ ವಾಲಿದ್ದೆ, ಹುಡುಗಿಯಾಗಬೇಕೆಂದೇ ಇಚ್ಛಿಸಿದ್ದೆ. ಆ ಕುರಿತಂತೆ ಮಾತನಾಡಿದ್ದೂ ಇದೆ! ಗೆಜ್ಜೆ ತೊಟ್ಟು, ಅಮ್ಮನ ಸೀರೆಯುಟ್ಟು ಸಿಂಗಾರ ಮಾಡಿಕೊಳ್ಳುತ್ತಿದ್ದೆ. ಹಾಗೆಯೇ ಟವಲ್ ತೊಟ್ಟು, ಉದ್ದ ಕೂದಲಿನವಳೆಂದು ನಟಿಸುತ್ತಿದ್ದೆ.

ಅಕ್ಕನ ಚಪ್ಪಲಿಗಳನ್ನು ಕದ್ದು, ಅವುಗಳಲ್ಲಿ ಹೆಜ್ಜೆಯಿಟ್ಟು ನಡೆಯಲು ಪ್ರಯತ್ನಿಸುತ್ತಿದ್ದೆ. ಸ್ನೇಹಿತರ ನಡುವೆ ಹುಡುಗಿಯಂತೆಯೇ ವರ್ತಿಸುತ್ತಿದ್ದೆ. ತೊಟ್ಟಿದ್ದ ಪ್ಯಾಂಟ್ ಶರ್ಟ್ ನನಗೆ ಚೂಡಿದಾರವೇ ಆಗಿತ್ತು. ನಾನು ಹೆಣ್ಣಿನ ಲಕ್ಷಣಗಳನ್ನು ತೋರುತ್ತಿರುವುದನ್ನು ಪೋಷಕರು ಗಮನಿಸಿದ್ದರು.

ಅದಕ್ಕವರು, 'ನೀನು ಹುಡುಗನಾಗಿ ಹುಟ್ಟಿದ್ದೀಯ. ಹುಡುಗನಂತೆಯೇ ಮಾತನಾಡಬೇಕು. ಗಂಡಸಿನಂತೆಯೇ ನಡೀಬೇಕು' ಎಂದು ಪ್ರತಿಕ್ರಿಯಿಸುತ್ತಿದ್ದರು.

ಆ ಸಮಯದಲ್ಲಿ ಪೋಷಕರು ಏನು ಹೇಳಿದರೂ, ಅದರಂತೆ ಮಾಡುತ್ತಿದ್ದೆ. ಹುಡುಗನಂತೆ ದಿಟ್ಟವಾಗಿ ನಡೆಯಲು ಪ್ರಯತ್ನಿಸಿದ್ದೂ ಹೌದು. ಹುಡುಗನಂತೆ ವರ್ತಿಸಲು, ಮಾತನಾಡಲು ಪ್ರಯತ್ನಿಸಿದಷ್ಟೂ ಕಷ್ಟವೇ ಆಗುತ್ತಿತ್ತು. ಹೀಗಿರುವಾಗ, ಎಂಟನೇ ವಯಸ್ಸಿನಲ್ಲಿಯೇ ಹುಡುಗನಲ್ಲ, ಹುಡುಗಿ ಎಂದು ಸಂಪೂರ್ಣವಾಗಿ ಅರಿತುಕೊಂಡೆ.

ಮರೆಯಲಾಗದ ಘಟನೆಯೊಂದು ನೆನಪಿಗೆ ಬರುತ್ತಿದೆ – ಅದೊಂದು ದಿನ ಹುಡುಗಿಯರೊಂದಿಗೆ 'ಕುಂಟೆಬಿಲ್ಲೆ' ಆಟವಾಡುತ್ತಿದ್ದೆ. ತಂದೆ ಉದ್ದ ವಿದ್ಯುತ್ ತಂತಿ ಹಿಡಿದು ಬಂದರು. ಎಲ್ಲರೆದುರು ಹೊಡೆಯಲು ಶುರು ಮಾಡಿದರು.

ಹೊಡೆಯುತ್ತಲೇ ಬಾಬ್ ಕಟ್ ಕೂದಲನ್ನು ಹಿಡಿದೆಳೆಯುತ್ತಾ ಮನೆಯತ್ತ ಎಳೆದೊಯ್ದರು. ಮನೆಯೊಳಗೆ ಪಾತ್ರೆಯಲ್ಲಿ ಕುದಿಯುತ್ತಿದ್ದ ಬಿಸಿನೀರನ್ನು ಕಾಲುಗಳ ಮೇಲೆ ಸುರಿದರು. ಹಾಗೆ ಮಾಡುವ ಮೂಲಕ ನಾನು ಮತ್ತೆಂದೂ ಹುಡುಗಿಯಂತೆ ವರ್ತಿಸುವುದಿಲ್ಲ ಎಂದು ಭಾವಿಸಿದ್ದರು.

ಆಗ ನನಗೆ ಎಂಟು ಅಥವಾ ಒಂಬತ್ತು ವರುಷವಾಗಿತ್ತೆಂದು ಕಾಣುತ್ತೆ. ಜೋರಾಗಿ ಚೀರಿಕೊಂಡೆ. ಕೂಗು ಕೇಳಿದ ಅಕ್ಕಪಕ್ಕದವರೆಲ್ಲ ಅಲ್ಲಿಗೆ ಬಂದು ಏನಾಯಿತೆಂದು ಕೇಳಿದರು. ಆಗ ತಂದೆ, 'ಈತ ನನ್ನ ಮಗ. ಈ ರೀತಿ ವರ್ತಿಸುತ್ತಿದ್ದಾನೆ... ನಾನಿಲ್ಲಿ ಕೆಲಸ ಮಾಡುತ್ತಿದ್ದೇನೆ. ಜನ ಅವನನ್ನು ಚಕ್ಕಾ, ಸಂಗ, ಒಂಬತ್ತು ಎಂದು ಕರೆಯುತ್ತಿದ್ದಾರೆ. ನಾ ಇದನ್ನು ಒಪ್ಪಿ ಸುಮ್ಮನಿರಬೇಕಾ...?' ಎಂದರು.

ಕಾಲುಗಳು ಬೆಂದು ಹೋದವು. ಮಾತನಾಡಲು ಸಾಧ್ಯವಾಗುತ್ತಿಲ್ಲ. ತಾಯಿ ನಮ್ಮಿಬ್ಬರ ನಡುವೆ ಬಂದರು. ಒಡಹುಟ್ಟಿದವರು ಬಂದರು. ಆದರೂ ತಂದೆ ಕೋಪ ಕಡಿಮೆಯಾಗಲಿಲ್ಲ. ಈ ಎಲ್ಲದರ ನಂತರ, ಮೂರು ತಿಂಗಳು ನನ್ನನ್ನವರು ಮನೆಯಲ್ಲಿ ಕೂಡಿ ಹಾಕಿದ್ದರು. ಎಲ್ಲಿಯೂ ಹೋಗಲಾಗಲಿಲ್ಲ. ಸೂರ್ಯನನ್ನು ನೋಡಲಾಗಲಿಲ್ಲ. ಸ್ನೇಹಿತರನ್ನು ನೋಡಲು ಬಿಡಲಿಲ್ಲ. ಶಾಲೆಗೂ ಹೋಗಲು ಬಿಡಲಿಲ್ಲ.

ಮನೆಯಲ್ಲಿ ಬಂದಿಯಾದ ಆ ಸಮಯದಲ್ಲಿ ಪಾತ್ರೆ ತೊಳೆಯುತ್ತಿದ್ದೆ; ಅಮ್ಮನೊಡನೆ ಅಡುಗೆ ಮಾಡುವುದು; ಬಟ್ಟೆ ತೊಳೆದು ಮನೆಯನ್ನು ಒರೆಸಿ ಸ್ವಚ್ಛ ಮಾಡುವುದು... ಮುಂತಾದ ಕೆಲಸ ಮಾಡುತ್ತಿದ್ದೆ. ಹೀಗೆ, ಮಹಿಳೆಯರು ಮನೆಯಲ್ಲಿ ಏನು ಮಾಡುತ್ತಾರೋ, ಅದಕ್ಕೆ ಹೊಂದಿಕೊಂಡು ನಡೆದೆ. ರಂಗೋಲಿ ಹಾಕುವುದನ್ನು ಇಷ್ಟಪಟ್ಟು ಕಲಿತುಕೊಂಡೆ.

ಹೆತ್ತವರು ಹತ್ತಿರ ಬಂದಾಗ ಗಂಡಸಿನಂತೆ ವರ್ತಿಸಿ, ಗಂಡಸಿನಂತೆ ಹೆಜ್ಜೆ ಹಾಕುತ್ತಿದ್ದೆ. ಇದು ಸುಲಭವಿರಲಿಲ್ಲ. ದನಿ ಅಡಗಿ ಹೋಗಿತ್ತು. ನಾನು ಡಬಲ್ ರೋಲ್ ಮಾಡುತ್ತಿದ್ದೆ. ಹೊರಗೆ ಗಂಡಸು. ಆದರೆ ನನ್ನೊಳಗೆ ಹೆಣ್ಣಾಗಿದ್ದೆ. ಲಿಂಗ ಸಂಬಂಧವಾದ ಈ ದ್ವಿಪಾತ್ರ ಮನೋರಂಗದಲ್ಲಿ ದೊಡ್ಡ ಗದ್ದಲವನ್ನೇ ಎಬ್ಬಿಸಿತ್ತು.

ತಂದೆಯ ಪ್ರತಿಷ್ಠೆಯ ಕಾರಣ, ನನ್ನನ್ನು ಒಂದು ಪುರುಷ ವೈದ್ಯರ ಬಳಿ ಕರೆದೊಯ್ದರು. ವೈದ್ಯರು ತಂದೆಗೆ 'ಮಗ ಪಕ್ಕಾ' ಎಂದರು. ಸ್ವಲ್ಪ ಔಷಧಿ ನೀಡಿದರು; ನಂತರ ತಲೆ, ಎದೆ, ಬೆನ್ನು, ಶಿಶ್ನದ ಮೇಲೆ ಒಂದು ರೀತಿಯ ತಂತಿಯನ್ನು ಅಂಟಿಸಲಾರಂಭಿಸಿದರು. ಹೆದರಿಕೆಯಿಂದ ನಡುಗುತ್ತಿದ್ದೆ, ಅಲ್ಲಿ ಏನಾಗುತ್ತಿದೆ ಎಂದೂ ತಿಳಿಯಲಿಲ್ಲ. ಈ ಜನಕ್ಕೆ ಹೇಗೆ ಮುಖಾಮುಖಿಯಾಗೋದು? ವೈದ್ಯರ ಮುಂದೆ ನನ್ನ ಬಟ್ಟೆಗಳನ್ನು ಬಿಚ್ಚಿದರು. ಹೆತ್ತವರಿಗೂ ಅವಮಾನವಾಗಿತ್ತು.

ಇದೆಲ್ಲ ಆದ ಮೇಲೂ... ನಾನೊಬ್ಬಳು ಹೆಣ್ಣು ಎಂದೇ ಮನೆಗೆ ವಾಪಸ್ಸಾಗುತ್ತಿದ್ದೆ. ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ಮೇಕಪ್ ಮಾಡಿಕೊಳ್ಳುತ್ತಿದ್ದೆ. 'ನಾನೇಕೆ ಹೀಗೆ ಮಾಡಿಕೊಳ್ಳುತ್ತಿರುವೆ? ಜನರೇಕೆ ಒಪ್ಪಿಕೊಳ್ಳುತ್ತಿಲ್ಲ?' ನನ್ನಷ್ಟಕ್ಕೇ ಕೇಳಿಕೊಳ್ಳುತ್ತಿದ್ದೆ.

(ಅಕ್ಕಯ್ ಆತ್ಮಕಥನದ ಕೆಲವು ತುಣುಕುಗಳು)



ಅಕ್ಕಯ್ ಪದ್ಮಶಾಲಿ




3 ಗಪದ್ಯಗಳು

ಗೋಧೂಳಿ

ಗಿರಿಧರ್ ಖಾಸನೀಸ್

ನಿಶ್ಶಬ್ದವಾಗಿ ಕತ್ತಲೆ ಕೋಣೆ ಬಿಟ್ಟು ಮಸುಕಾದ ಮಂಜಿನಲ್ಲಿ ಒಬ್ಬರ ಹಿಂದೆ ಒಬ್ಬರು ಮೆಟ್ಟಿಲಿಳಿದು ತಿರುಗುವ ಭೂಮಿಯ ತುತ್ತತುದಿ ನಿಲ್ದಾಣ ತಲುಪಿದಾಗ ಗೋಧೂಳಿ ಸಮಯ.

ಮಂಗನ ಬಾಲದ ಕೊನೆ ಕೂದಲೆಳೆಯಂಥ ಮೆತ್ತನೆ ಮಣ್ಣಲ್ಲಿ ಮೈಚಾಚಿ ಮೇಲೆ ನೋಡಿದರೆ ಬಾನು ತಿಳಿಗೆಂಪು. ಮೋಡದ ಹಿಂದೆ ಬೆಳ್ಳಿ ಚಂದಿರ, ಹಕ್ಕಿಗಳಂತೆ ಹಾರಾಡುವ ತಾರೆಗಳ ಕಲರವ. ಕಣ್ಮುಚ್ಚಿದರೆ ಇಬ್ಬನಿಯ ತಂಪು ಕಾಡುಮಲ್ಲಿಗೆ ಕಂಪು.



ರಾತ್ರಿ ಎರಡಾಯಿತು

ಪರದೆ ಸರಿದಾಗ ಮತ್ತದೇ ಆಟ – ಏಳುವುದು ಬೀಳುವುದು ಹಾರುವುದು ಹತ್ತಿಳಿಯುವುದು, ಅಂತ್ಯಕ್ಕೆ ಕಾಯುತ್ತ ಕೂಡುವುದು.

ಗೋಡೋ ಬರಲಿಲ್ಲ. ಸರಯೂ ಸೇರಿದರೂ ರಾಮನ ಸಂಕಟಕ್ಕೆ ಕೊನೆಯಿಲ್ಲ. ಯಾರಿಗೆ ಬೇಕಿತ್ತು ಈ ರಾಮಾಯಣ ಎಂದು ಕೊರಗಿದ ವಾಲ್ಮೀಕಿಗೆ ತಲೆನೋವು ತಪ್ಪಲಿಲ್ಲ. ಯುದ್ಧ ಮುಗಿಯುವ ಸೂಚನೆ ಇಲ್ಲ. ಬಿರುಗಾಳಿಯಂತೆ ಗಿರಗಿರ ಸುತ್ತಿದರೂ ಪಾತಕಿಯ ಮುಖವಾಡ ಮಗುಚಿ ಬೀಳಲೇ ಇಲ್ಲ.

ರಾತ್ರಿ ಎರಡಾಯಿತು. ಬರಡಾದ ಕಥೆಗೆ ನಾಂದಿ ಹಾಡುವರೆಂದು? ನೀನಾದರೂ ಬಲಕ್ಕೆ ತಿರುಗಿ ಎರಡು ಘಳಿಗೆ ಮಲಗು, ಮಗು. ಕನಸು ಬಿದ್ದರೆ ಬೆಚ್ಚಬೇಡ. ಹಾಗಂತ ಕನಸು ಕಾಣುವುದ ಬಿಡಬೇಡ.

ಫ್ರಾಯ್ಡನ ಮನೆ



ದಯವಿಟ್ಟು ಒಳಗೆ ಬನ್ನಿ, ಆಸೀನರಾಗಿ. ಸುಕ್ಕಾದ ಪರದೆ, ಸೀಳುಬಿಟ್ಟ ಕನ್ನಡಿ, ಹರಿದ ಬೆದರುಗೊಂಬೆಗಳ ಸಾಲುಗಳನ್ನು ನೋಡಿ ಹೆದರಬೇಡಿ, ನನ್ನ ಮನೆ ಇರುವುದೇ ಹೀಗೆ. ಕ್ಷುದ್ರರು ಇಲ್ಲಿ ಬಂದು ಕರುಬಿದ್ದಾರೆ. ಸಂತರು ಬೆತ್ತಲಾಗಿ ನರ್ತಿಸಿದ್ದಾರೆ. ದೇವದೂತರು ದಲ್ಲಾಳಿಗಳಂತೆ ವರ್ತಿಸಿದ್ದಾರೆ. ಆದರೆ ನೀವು ಹೆದರಬೇಕಿಲ್ಲ.

ಸಾವಕಾಶವಾಗಿ ನಿಮ್ಮ ಕನಸುಗಳ ಬಿಚ್ಚಿಡಿ. ಬಚ್ಚಿಟ್ಟ ಪಾಪ, ಮುಚ್ಚಿಟ್ಟ ಅಪರಾಧ, ಅರ್ಥಹೀನ ತಂತ್ರ, ಕುತಂತ್ರ, ಆತಂಕಗಳನ್ನು ನಿರ್ಭೀತರಾಗಿ ಹರಡಿ. ಹಾಗೆ ನೋಡಿದರೆ, ನಿಮ್ಮ ಮತ್ತು ನನ್ನ ಕಥೆ ಒಂದೇಯ. ಈ ಪಾಪದ ಕೋಣೆಯಲ್ಲಿ ಸಂಧಿಸಲು ಬಂದಿವೆ ಅಷ್ಟೇ. ವಿಧಿಯ ಬರಹವೆನ್ನಿ, ಅದೃಷ್ಟವೆನ್ನಿ, ಅನಿರೀಕ್ಷಿತ ಅವಕಾಶವೆನ್ನಿ. ಮುಂದೊಂದು ದಿನ ನಾವಿಬ್ಬರು ಇಲ್ಲಿ, ಈ ಕತ್ತಲೆ ಕೋಣೆಯಲ್ಲಿ ಭೇಟಿಯಾದ ನೆನಪು ಹೊರನಾಡ ಹಸಿರು ದಿಬ್ಬಣದಡಿ ಮತ್ತೊಬ್ಬನಾರೋ ಕಂಡ ಕನಸು ಆಗಬಹುದಲ್ಲವೇ?

ರಾಜ್‌ಕುಮಾರ್: ಭಿನ್ನ-ಆಪ್ತ ನೋಟ

ರಘುನಾಥ ಚ.ಹ.

'ತಿಮ್ಮಜ್ಜಿಯ ಮ್ಯಾಗ್ಲುಂಡಿ' ಕಾದಂಬರಿಯ ಮೂಲಕ ಸಹೃದಯರಿಗೆ ಪರಿಚಿತರಾದ ಪ್ರಕಾಶರಾಜ್ ಮೇಹು, ಬರವಣಿಗೆ ಹಾಗೂ ನಿರ್ದೇಶನ ವಿಭಾಗದಲ್ಲಿ ಸಿನಿಮಾರಂಗದಲ್ಲೂ ಗುರ್ತಿಸಿಕೊಂಡವರು. ಪ್ರಕಾಶರಾಜ್ ಅವರ 'ಅಂತರಂಗದ ಅಣ್ಣ' ಕೃತಿಯನ್ನು ಲೇಖಕರ ಸಾಹಿತ್ಯ ಮತ್ತು ಸಿನಿಮಾಪ್ರೀತಿಯ ಸಮೀಕರಣದಂತೆ ನೋಡಬಹುದು. ಈ ಕೃತಿ ಲೇಖಕರನ್ನು ಇನ್ನಿಲ್ಲದಂತೆ ಪ್ರಭಾವಿಸಿದ ಅನನ್ಯ ವ್ಯಕ್ತಿತ್ವವೊಂದರ ಕುರಿತ ಸಾಂಸ್ಕೃತಿಕ ಕಥನವೂ ಹೌದು. ಈ ಬರವಣಿಗೆ ವೈಯಕ್ತಿಕ ಪರಿಧಿಯನ್ನು ಮೀರಿ ಸಾಂಸ್ಕೃತಿಕ ಕಥನದ ರೂಪ ಪಡೆದುಕೊಂಡಿರುವುದಕ್ಕೆ ಕಾರಣ, ಪ್ರಕಾಶರಾಜ್ ಅಂತರಂಗದಲ್ಲಿನ ಅಣ್ಣ ಈಗಾಗಲೇ ಕನ್ನಡಸಮೂಹದ ಅಂತರಂಗದಲ್ಲೂ ಸ್ಥಾನ ಪಡೆದಿರುವುದು.

ಕಳೆದ ಒಂದೂವರೆ ದಶಕದ ಅವಧಿಯಲ್ಲಿ ರಾಜ್‌ಕುಮಾರ್ ಅವರ ವ್ಯಕ್ತಿತ್ವ ಮತ್ತು ಸಾಧನೆಯ ಬಗ್ಗೆ ಪ್ರಕಟವಾದಷ್ಟು ಪುಸ್ತಕಗಳು ಕರ್ನಾಟಕದ ಬೇರೆ ಯಾವ ವ್ಯಕ್ತಿಯ ಬಗ್ಗೆಯೂ ಪ್ರಕಟಗೊಂಡಂತಿಲ್ಲ. ದೊಡ್ಡಹುಲ್ಲೂರು ರುಕ್ಕೋಜಿ ಅವರು ಎರಡು ಸಂಪುಟಗಳಲ್ಲಿ ಪ್ರಕಟಿಸಿದ, ರಾಷ್ಟ್ರಪ್ರಶಸ್ತಿ ಪಡೆದ 'ಡಾ. ರಾಜ್‌ಕುಮಾರ್ ಸಮಗ್ರ ಜೀವನಚರಿತ್ರೆ' ಕೃತಿಗಳಂತೂ ಕನ್ನಡ ಮಾತ್ರವಲ್ಲದೆ, ಇಡೀ ವಿಶ್ವದಲ್ಲೇ ಯಾವ ವ್ಯಕ್ತಿಗೂ ಸಲ್ಲದ ವಿಶೇಷ ಗೌರವವಾಗಿದೆ. ಈ ರಾಜಸಾಹಿತ್ಯ ಶ್ರೇಣಿಯಲ್ಲಿ ಪ್ರಕಾಶರಾಜ್ ಅವರ 'ಅಂತರಂಗದ ಅಣ್ಣ' ಕೃತಿ ಹತ್ತರಲ್ಲಿ ಹನ್ನೊಂದು ಎನ್ನಿಸಿಕೊಳ್ಳದೆ ಸಹೃದಯರ ಗಮನಸೆಳೆಯುವುದಕ್ಕೆ ಕಾರಣ, ಪುಸ್ತಕದ ಶೀರ್ಷಿಕೆಯಲ್ಲಿನ ಅಂತರಂಗ ಕೃತಿಯುದ್ದಕ್ಕೂ ಭಾವತರಂಗವಾಗಿ ಪ್ರವಹಿಸಿರುವುದು.

'ಅಂತರಂಗದ ಅಣ್ಣ' ಕೃತಿ ಎರಡು ಕಾರಣಗಳಿಗಾಗಿ ಮುಖ್ಯವೆನ್ನಿಸುತ್ತದೆ. ಒಂದು, ಕಲಾವಿದನಾಗಿ ರಾಜ್‌ಕುಮಾರ್ ಶ್ರೇಷ್ಠತೆಯ ಕುರಿತು ಹೇಳುತ್ತಲೇ ನಟನೊಬ್ಬ ಸಿನಿಮಾ ಪ್ರಭಾವಳಿ ಮೀರಿ ಸಾಂಸ್ಕೃತಿಕ ವ್ಯಕ್ತಿತ್ವವಾಗಿ ರೂಪುಗೊಂಡ ವಿಸ್ಮಯವನ್ನು ಲೇಖಕರು ಕೊಂಚ ಬೆರಗಿನಿಂದಲೇ ದಾಖಲಿಸಿರುವುದು. ಈ ಬರವಣಿಗೆಯಲ್ಲಿ ಭಾವುಕತೆ, ಅಭಿಮಾನಕ್ಕಿಂತಲೂ ವೈಚಾರಿಕತೆ ಮತ್ತು ವಿಮರ್ಶಾಪ್ರಜ್ಞೆಯ ಪಾತ್ರವೇ ಹೆಚ್ಚಾಗಿದೆ. ಪುಸ್ತಕ ಮುಖ್ಯವೆನ್ನಿಸಲಿಕ್ಕೆ ಮತ್ತೊಂದು ಕಾರಣ, ಚಿತ್ರರಸಿಕರ ಗಮನಕ್ಕೆ ಅಷ್ಟಾಗಿ ಬಾರದ ರಾಜ್‌ಕುಮಾರ್ ಅವರ ಸಿನಿಮಾ ಜ್ಞಾನ ಹಾಗೂ ಸಂವೇದನಾಶೀಲತೆಯ ವಿವರಗಳನ್ನು ಪ್ರಕಾಶರಾಜ್ ಪ್ರಜ್ಞಾಪೂರ್ವಕವಾಗಿ ಕಟ್ಟಿಕೊಟ್ಟಿರುವುದು.

ನಿರ್ವಹಿಸಿದ ಪಾತ್ರಗಳ ಕಾರಣದಿಂದಾಗಿ ವಿಶಿಷ್ಟ ವರ್ಚಸ್ಸು ಹೊಂದಿದ್ದರೂ, ಮಗುವಿನ ನಿಷ್ಕಲ್ಮಶ ನಗುವಿನ ಮೂಲಕವೇ ರಾಜ್‌ಕುಮಾರ್ ಅವರ ಬಿಂಬ ಜನಮಾನಸದಲ್ಲಿ ಅಚ್ಚಾಗಿದೆ. ಹೆಚ್ಚು ಓದದ, ಲೋಕಜ್ಞಾನವಿಲ್ಲದ, ಆಡಿಸುವವರ ಕೈಯ ಮಗುವಿನಂತೆ ಮೇಲ್ನೋಟಕ್ಕೆ ಕಾಣಿಸುವ ರಾಜ್‌ಕುಮಾರ್ ಅವರೊಳಗೊಬ್ಬ ವಿಶೇಷ ಒಳನೋಟಗಳ ಸಿನಿಮಾತಜ್ಞನಿದ್ದ ಎನ್ನುವುದಕ್ಕೆ ಹಲವು ನಿದರ್ಶನಗಳು ಕೃತಿಯಲ್ಲಿವೆ. 'ಭಕ್ತ ಕುಂಬಾರ' ಹಾಗೂ 'ಕವಿರತ್ನ ಕಾಳಿದಾಸ' ಸಿನಿಮಾಗಳು ಅವರು ಆಸೆಪಟ್ಟ ಕಾರಣದಿಂದಾಗಿ ನಿರ್ಮಾಣವಾಗಿ ದೊಡ್ಡ ಗೆಲುವು ಸಾಧಿಸಿದವು. ಹಲವು ಸಿನಿಮಾಗಳಲ್ಲಿನ ಬಿಡಿ ದೃಶ್ಯಗಳು ಉತ್ತಮಗೊಳ್ಳುವಲ್ಲಿ ರಾಜ್ ನೀಡಿದ ಸಲಹೆಗಳು ಹಾಗೂ ತಮ್ಮ ಪಾತ್ರಕ್ಕಿಂತಲೂ ಸಿನಿಮಾದ ಕಥೆ ಮುಖ್ಯ ಎನ್ನುವ ಅವರ ನಿಲುವನ್ನು ಲೇಖಕರು ಉದಾಹರಣೆಗಳೊಂದಿಗೆ ದಾಖಲಿಸಿರುವುದು ರಾಜ್‌ರನ್ನು ಮತ್ತೊಂದು ರೂಪದಲ್ಲಿ ನೋಡಲಿಕ್ಕೆ ಒತ್ತಾಯಿಸುವಂತಿದೆ.

ಅನೇಕ ವರ್ಷಗಳ ಕಾಲ ರಾಜ್ ಕುಟುಂಬದೊಂದಿಗೆ ಆಪ್ತ ಒಡನಾಟ ಹೊಂದಿದ್ದುದು ಪ್ರಕಾಶ್ ಅವರ ಬರಹಕ್ಕೆ ಅಭಿಮಾನದ ಗುಣ ತಂದುಕೊಟ್ಟಿದ್ದರೂ, ತಮ್ಮ ಅಭಿಪ್ರಾಯಗಳಿಗೆ ಅವರು ಒದಗಿಸುವ ನಿದರ್ಶನಗಳು ಕೃತಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿವೆ. ರಾಜ್‌ಕುಮಾರ್ ವ್ಯಕ್ತಿತ್ವ ಮತ್ತು ಸಾಧನೆಯನ್ನು ವಿವಿಧ ಕಲಾವಿದರ ಅಭಿಪ್ರಾಯಗಳ ಮೂಲಕ ಚಿತ್ರಿಸುವ ಪ್ರಯತ್ನ ಕೃತಿಯಲ್ಲಿದೆ. ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್, ಲೋಕೇಶ್, ಶಿವಾಜಿ ಗಣೇಶನ್, ಅಮಿತಾಭ್ ಬಚ್ಚನ್, ರಜನಿಕಾಂತ್, ಕಮಲಹಾಸನ್ ಮುಂತಾದವರು ರಾಜ್‌ರೊಂದಿಗೆ ಹೊಂದಿದ್ದ ಒಡನಾಟ ಹಾಗೂ ರಾಜ್ ಬಗ್ಗೆ ಅವರು ವ್ಯಕ್ತಪಡಿಸಿರುವ ಅಭಿಮಾನ-ಗೌರವವನ್ನು ಲೇಖಕರು ವಿವರವಾಗಿ ದಾಖಲಿಸಿದ್ದಾರೆ. ರಾಜ್ ವ್ಯಕ್ತಿತ್ವದ ಹೊಳಪು ಹೆಚ್ಚಿಸಿದ ಪಾರ್ವತಮ್ಮ ರಾಜ್‌ಕುಮಾರ್ ಮತ್ತು ವರದರಾಜ್ ಅವರ ಕುರಿತು ಕುತೂಹಲಕರ ಸಂಗತಿಗಳೂ ಕೃತಿಯಲ್ಲಿವೆ.

ರಸ್ತೆ ಅಪಘಾತದಲ್ಲಿ ಇತ್ತೀಚೆಗೆ ನಿಧನರಾದ ನಟ ಸಂಚಾರಿ ವಿಜಯ್ ಅವರು ಜಾತಿಯ ಕಾರಣದಿಂದಾಗಿ ಅವಮಾನಗಳನ್ನು ಎದುರಿಸಿದರೇ ಇಲ್ಲವೇ ಎನ್ನುವ ಚರ್ಚೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವುದನ್ನು ಈ ಕೃತಿಯ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ವಿಜಯ್ ಅವರಿಗೆ ಸಂಬಂಧಿಸಿದ ಮಾತುಕತೆಯಲ್ಲಿ ಮೂಲಪ್ರಶ್ನೆಯೇ ಹಿಂದೆ ಸರಿದು, 'ಜಾತಿಯ ಬಗ್ಗೆ ಚರ್ಚಿಸುವುದು ಕಲಾವಿದನಿಗೆ ಮಾಡುವ ಅವಮಾನ' ಎನ್ನುವ ಅರ್ಥದ ಮಾತುಗಳು ಗಟ್ಟಿಯಾಗಿ ಕೇಳಿಸುತ್ತಿವೆ. ಸಮಾಜದ ಮಾತಿರಲಿ, 'ಕಲಾವಿದರಾದ ನಾವೆಲ್ಲಾ ಒಂದೇ' ಎಂದು ಸಿನಿಮಾಮಂದಿ ಆಡುವ ಮಾತು ಎಷ್ಟು ಠೊಳ್ಳೆನ್ನುವುದಕ್ಕೆ, 'ಅಂತರಂಗದ ಅಣ್ಣ' ಕೃತಿ ದಾಖಲಿಸಿರುವ, ಜಾತಿಯ ಕಾರಣದಿಂದಾಗಿ ರಾಜ್ ಅನುಭವಿಸಿದ ಅವಮಾನ, ತೊಡಕುಗಳ ವಿವರಗಳನ್ನು ಗಮನಿಸಬಹುದು. ಎಲ್ಲ ತೊಡಕುಗಳನ್ನು ದಾಟಿ, ಕನ್ನಡಿಗರ ಮನಸ್ಸಿನಲ್ಲಿ ಜಾತ್ಯತೀತ ವ್ಯಕ್ತಿಯಾಗಿ ರಾಜ್‌ಕುಮಾರ್ ಸ್ಥಾನ ಕಂಡುಕೊಂಡಿರುವುದು ಕನ್ನಡ ಸಾಂಸ್ಕೃತಿಕ ಸಂದರ್ಭದ ಒಂದು ಅಪೂರ್ವ ವಿದ್ಯಮಾನ. ಈ ಪವಾಡ ಎಲ್ಲ ಸಂದರ್ಭದಲ್ಲೂ ಎಲ್ಲರ ವಿಷಯದಲ್ಲೂ ಸಾಧ್ಯವಾಗುವುದಿಲ್ಲ ಎನ್ನುವ ವಾಸ್ತವವನ್ನು 'ಜಾತಿ ಎಲ್ಲಿದೆ' ಎಂದು ಪ್ರಶ್ನಿಸುವವರು ಮರೆಯಬಾರದು.

ರಾಜ್‌ಕುಮಾರ್ ಅವರ ಹೆಚ್ಚು ಜನಪ್ರಿಯವಲ್ಲದ ಮುಖವೊಂದನ್ನು ಪರಿಚಯಿಸುವ ಮೂಲಕ 'ಅಂತರಂಗದ ಅಣ್ಣ' ಕೃತಿ ಆಪ್ತವೆನ್ನಿಸುತ್ತದೆ. ಅಪರೂಪದ ಛಾಯಾಚಿತ್ರಗಳನ್ನು ಬಳಸಿಕೊಂಡಿರುವುದು ಕೃತಿಗೆ ಮೆರುಗು ನೀಡಿದ್ದರೂ, ಫೋಟೊಗಳಿಗೆ ಅಡಿ ಟಿಪ್ಪಣಿಗಳು ಇಲ್ಲದಿರುವುದು ಕೊರತೆಯಾಗಿ ಕಾಣಿಸುತ್ತದೆ. 'ಪರಿವಿಡಿ'ಯೂ ಕೃತಿಗೆ ಅಗತ್ಯವಿತ್ತು.

ಒಳನೋಟ



ಪು: 216 ₹200

ಅಂತರಂಗದ ಅಣ್ಣ
ಲೇ: ಪ್ರಕಾಶರಾಜ್ ಮೇಹು
ಪ್ರ: ಸಿರಿಗಂಧ ಪ್ರಕಾಶನ, #33, 11ನೇ ಕ್ರಾಸ್, ಕಬ್ಬನ್ ಪೇಟೆ, ಬೆಂಗಳೂರು- 560002

ಹರಿವ ನದಿಗೆ ಗತದ ವ್ಯಾಮೋಹ

ಎಚ್.ದಂಡಪ್ಪ

ಗೂಗಿ ವಾ ಥಿಯಾಂಗೊ ಜಾಗತಿಕ ಸಾಹಿತ್ಯದ ಸಂದರ್ಭದಲ್ಲಿ ತಮ್ಮ ಅಸಾಧಾರಣ ವ್ಯಕ್ತಿತ್ವ ಮತ್ತು ಪ್ರತಿಭೆಗೆ ಹೆಸರಾದವರು. ಚಿನುವಾ ಅಚಿಬೆ ಅವರ ಸಾಹಿತ್ಯದಂತೆ ಇವರ ಕೃತಿಗಳನ್ನೂ ವಿವಿಧ ಲೇಖಕರು ಕನ್ನಡಕ್ಕೆ ಅನುವಾದಿಸಿದ್ದಾರೆ ಮತ್ತು ಕೆಲವು ಚಿಂತಕರು ಇವರ ಬಗೆಗೆ ಬರೆದಿದ್ದಾರೆ. ಇವರ ಮುಖ್ಯವಾದ ಕಾದಂಬರಿಗಳೆಂದರೆ, ವೀಪ್ ನಾಟ್- ಚೈಲ್ಡ್, ದಿ ರಿವರ್ ಬಿಟ್ವೀನ್, ಎ ಗ್ರೈನ್ ಆಫ್ ವೀಟ್, ಡೆವಿಲ್ ಆನ್ ದಿ ಕ್ರಾಸ್, ವಿಜಾರ್ಡ್ ಆಫ್ ದಿ ಕ್ರೊ. ಜೊತೆಗೆ ನಾಟಕ, ಸಾಹಿತ್ಯ, ಸಂಸ್ಕೃತಿ, ರಾಜಕೀಯ ಸ್ವರೂಪದ ಬಗ್ಗೆ ಹಲವಾರು ಪ್ರಬಂಧಗಳನ್ನೂ ಬರೆದಿದ್ದಾರೆ. ಇವರ ಬಹುಚರ್ಚಿತ ಲೇಖನಗಳು ಕನ್ನಡಕ್ಕೆ ಅನುವಾದಗೊಂಡಿವೆ.

ಗೂಗಿಯವರ ಕೃತಿಗಳಲ್ಲಿ ಆಫ್ರಿಕಾದ ಸಂಸ್ಕೃತಿಯ ಮೇಲೆ ವಸಾಹತುಶಾಹಿಯ, ಅಂದರೆ ಯುರೋಪಿನ ಸಾಂಸ್ಕೃತಿಕ ಪ್ರಭಾವ ಮತ್ತು ಪರಿಣಾಮ ಯಾವ ರೀತಿಯಲ್ಲಾಗಿದೆ, ಅದರಿಂದ ಬಿಡಿಸಿಕೊಳ್ಳುವುದು ಹೇಗೆ, ಸ್ವಂತಿಕೆಯನ್ನು ತಂದುಕೊಳ್ಳುವುದು ಹೇಗೆ ಎಂಬಂಥ ವಿಚಾರಗಳು ಒಂದು ಒಳಧಾರೆಯಾಗಿ ಹರಿಯುತ್ತವೆ. ಪ್ರಸ್ತುತ 'ದಿ ರಿವರ್ ಬಿಟ್ವೀನ್' ಎಂಬ ಕಾದಂಬರಿಯನ್ನು 'ಹರಿವ ನದಿ ಸಾಕ್ಷಿ' ಎಂಬ ಹೆಸರಿನಲ್ಲಿ ಪ್ರೊ. ಸಿ.ನಾಗಣ್ಣ ಅನುವಾದಿಸಿದ್ದಾರೆ.

ಈ ಕೃತಿಯನ್ನು ಗೂಗಿಯವರು ಮೊದಲೇ ಬರೆದಿದ್ದರೂ ಪ್ರಕಟಿಸಿದ್ದು ಎರಡನೆಯ ಕಾದಂಬರಿಯಾಗಿ. ಹೊನಿಯಾ ನದಿಯ ಎರಡೂ ದಡಗಳಲ್ಲಿ ವಾಸಿಸುವ ಎರಡು ಊರುಗಳ ಸಮುದಾಯಗಳ ನಡುವೆ ಹಿಂದಿನಿಂದಲೂ ಒಂದಲ್ಲ ಒಂದು ಕಾರಣಕ್ಕೆ ದ್ವೇಷ ಬೆಳೆಯುತ್ತಿರುತ್ತದೆ. ಕ್ರೈಸ್ತಧರ್ಮ ಹರಡಲು ಪ್ರಾರಂಭವಾದ ಮೇಲಂತೂ ಈ ದ್ವೇಷ ಹೆಚ್ಚಾಗುತ್ತದೆ. ಜೋಶುವಾ ಮತ್ತು ಕಬೋನಿ ಈ ಧರ್ಮವನ್ನು ಸ್ವೀಕರಿಸಿರುತ್ತಾರೆ. ಆದರೆ ಕಬೋನಿ ಆ ಧರ್ಮದಿಂದ ವಾಪಸಾಗುತ್ತಾನೆ. ಜೋಶುವಾ ಪಕ್ಕಾ ಕ್ರೈಸ್ತ ಧರ್ಮೀಯನಾಗುತ್ತಾನೆ. ಕ್ರೈಸ್ತ ಧರ್ಮ ಮತ್ತು ಸಾಂಪ್ರದಾಯಿಕ ನಂಬಿಕೆಗಳ ನಡುವಿನ ಸಂಘರ್ಷ ಈ ಕಾದಂಬರಿಯಲ್ಲಿದೆ. ಜೊತೆಗೆ ಈ ಸಂಘರ್ಷದಲ್ಲಿ ಸಿಲುಕಿ ನಲುಗುವ ವೈಯಾಕಿ ಮತ್ತು ನಿಯುಂಬರ ಅವರ ಪ್ರೇಮದ ತೊಳಲಾಟಗಳೂ ಇವೆ.

ಹೊನಿಯಾ ನದಿ ಈ ಕಾದಂಬರಿಯಲ್ಲಿ ಸಾಂಕೇತಿಕವಾಗಿ ಬಂದಿದೆ. ಇದು ಎರಡೂ ಊರಿಗೆ ಒಂದು ಗಡಿ ಪ್ರದೇಶವೂ ಹೌದು. ಈ ನದಿಯು ದಡದಲ್ಲಿರುವ ಎರಡೂ ಹಳ್ಳಿಗಳ ಸಮುದಾಯಗಳನ್ನು ಬೇರ್ಪಡಿಸಿದೆ ಮತ್ತು ಇನ್ನೊಂದು ನೆಲೆಯಲ್ಲಿ ಎರಡನ್ನೂ ಬೆಸೆದಿದೆ. ಆದರೆ, ಎರಡೂ ಊರಿನವರು ಒಂದು ಗಡಿ ಎಂದು ನೋಡುತ್ತಾರೋ ಅದೊಂದು ಸಂಪರ್ಕ ಸೇತುವೆ ಎಂದು ನೋಡುತ್ತಾರೋ ಎಂಬುದು ಮುಖ್ಯವಾಗುತ್ತದೆ. ಸಂಪರ್ಕ ಎಂಬುದನ್ನು, ಅದೊಂದು ಜೀವಸೆಲೆ ಎಂದು ಜನರು ತಿಳಿಯಬೇಕು. ಈ ರೀತಿಯಾದ ತಿಳಿವಳಿಕೆ ಬರಬೇಕಾದರೆ ಶಿಕ್ಷಣ ಬೇಕು. ಶಿಕ್ಷಕರು ಬೇಕು. ವೈಯಾಕಿಯು ಶಿಕ್ಷಣ, ಐಕ್ಯತೆ ಮತ್ತು ರಾಜಕೀಯ ಸ್ವಾತಂತ್ರ್ಯದ ಹಂಬಲವುಳ್ಳವನು.

ಹೊರಗಿನವರು ಅನ್ಯಾಯವಾಗಿ ತಮ್ಮ ನೆಲ, ಸಂಪತ್ತನ್ನು ಆಕ್ರಮಿಸಿಕೊಂಡಿದ್ದಾರೆ, ಅವರ ಶಿಕ್ಷಣವನ್ನು ಕಲಿತು ಅವರ ಬುದ್ಧಿಮತ್ತೆ, ಚಾಕಚಕ್ಯತೆಯನ್ನೇ ಬಳಸಿ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಯೋಚಿಸುತ್ತಾನೆ. ಆದರೆ, ಅವನ ಈ ಯೋಚನೆ ನೆರವೇರುವುದಿಲ್ಲ.

'ವೈಯಾಕಿಯು ಕ್ರೈಸ್ತ ಮತಕ್ಕೆ ಸೇರಿದ ಜೋಶುವಾನ ಮಗಳನ್ನು ಆಸ್ಪತ್ರೆಗೆ ಸೇರಿಸಿ ಇಂಗ್ಲಿಷ್ ಔಷಧಿ ಕೊಡಿಸಿದ್ದಾನೆ, ಇನ್ನೊಬ್ಬ ಮಗಳು ನಿಯುಂಬರಳನ್ನು ಪ್ರೇಮಿಸಿ ಮದುವೆಯಾಗುತ್ತಿದ್ದಾನೆ. ಯುರೋಪಿನ ಶಾಲೆಗಳಿಗೆ ಭೇಟಿ ನೀಡುತ್ತಾ ಸಮುದಾಯಗಳ ಗುಟ್ಟನ್ನು ಅವರಿಗೆ ತಿಳಿಸುತ್ತಿದ್ದಾನೆ, ಅವನಿಗೆ ಬುಡಕಟ್ಟು ಸಮುದಾಯಗಳ ಆಚರಣೆಗಳು, ಪದ್ಧತಿಗಳು, ನೀತಿ ನಿಯಮಗಳ ಬಗ್ಗೆ ಗೌರವವಿಲ್ಲ' ಎಂದೆಲ್ಲ ಕಬೋನಿಯು ಎಲ್ಲಾ ಸಮುದಾಯದವರನ್ನು ವೈಯಾಕಿಯ ವಿರುದ್ಧ ಎತ್ತಿಕಟ್ಟುತ್ತಾನೆ. ಅವನ ವಿರುದ್ಧ ಅಪಪ್ರಚಾರ ಮಾಡುತ್ತಾನೆ. ವೈಯಾಕಿಯು ಏಕಾಂಗಿಯಾಗುತ್ತಾನೆ. ಅಸಹಾಯಕನಾಗುತ್ತಾನೆ.

ವೈಯಾಕಿಯು ಶಿಕ್ಷಣ, ಬುಡಕಟ್ಟು ಸಂಸ್ಕೃತಿ, ಆಧುನಿಕತೆ, ರಾಜಕೀಯ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ವಿಚಾರಗಳಲ್ಲಿ ನಂಬಿಕೆಯುಳ್ಳವ. ಆದರೆ ಗತದ ಬಗ್ಗೆ ನಂಬಿಕೆಯಿದ್ದ ಸಮುದಾಯ ಅದನ್ನು ಒಪ್ಪುವುದಿಲ್ಲ. ಅವರದೇ ಆದ ವಿಧಾನಗಳಿಂದ ಅಭಿವೃದ್ಧಿಯಾಗಬೇಕೆಂಬ ನಿಲುವು ಕಬೋನಿ ಮತ್ತು ಅವನ ಹಿಂಬಾಲಕರದು. ಕಾದಂಬರಿಯ ಧ್ವನಿಯೂ ಗತಕಾಲದ ಬಗೆಗಿನ ವ್ಯಾಮೋಹವೇ ಆಗಿದೆ. ಜೊತೆಗೆ ಕಾದಂಬರಿಕಾರರ ನಿಲುವೂ ಕೂಡ.

ಚಿನುವಾ ಅಚಿಬೆ 'ಗತದ ಘಟನೆಯನ್ನು ಪ್ರತಿಪಾದಿಸಲು ಕಂಡುಕೊಂಡ ಮಾಧ್ಯಮವೇ ಕಾದಂಬರಿ' ಎನ್ನುತ್ತಾರೆ. ರಾಬರ್ಟ್ ಜುಲೈ, ಇಮ್ಯಾನ್ಯುಯಲ್ ಒಬೆಚಿನಾ 'ಆಫ್ರಿಕನ್ ವ್ಯಕ್ತಿತ್ವದ ಹುಡುಕಾಟವೇ ಕಾದಂಬರಿ' ಎಂದರೆ, ಗೂಗಿಯು 'ನಮ್ಮ ಸಮುದಾಯಗಳ ದೇವರುಗಳ ಜೊತೆ ಕಳೆದುಕೊಂಡಿರುವ ಸಂಬಂಧವನ್ನು ಮರಳಿ ಸ್ಥಾಪಿಸುವ ಮಾಧ್ಯಮವೇ ಕಾದಂಬರಿ' ಎನ್ನುತ್ತಾರೆ. ಕಾದಂಬರಿಯನ್ನು ವ್ಯಾಖ್ಯಾನಿಸಿಕೊಳ್ಳುವಾಗ ಈ ನಾಲ್ಕು ಜನರಲ್ಲಿ ಕಾಣಬರುವ ಸಾಮಾನ್ಯ ಅಂಶವೆಂದರೆ ಗತಕಾಲದ ಬಗೆಗಿನ ಕಾಳಜಿ.

ವಸಾಹತು ಕಾಲಘಟ್ಟದ ಬಹುತೇಕ ಆಫ್ರಿಕನ್ ಕಾದಂಬರಿಗಳು ಗತಕಾಲದ ಆಚರಣೆಗಳು, ವಿಧಿವಿಧಾನಗಳು, ರೀತಿ ನೀತಿಗಳ ಬಗ್ಗೆಯೇ ಕಾಳಜಿ ವಹಿಸುತ್ತವೆ. ಆಗಿನ ಮುಖ್ಯ ತಾತ್ವಿಕ ನಿಲುವುಗಳೂ ಅವೇ ಆಗಿದ್ದವು. ಅದರಲ್ಲೂ ಗಿಕುಯೂ ಸಮುದಾಯದಲ್ಲಿ ತಮಗಿಂತ ಭಿನ್ನವಾಗಿ ಬದುಕುವವರನ್ನು ತಿರಸ್ಕಾರದಿಂದ ನೋಡಲಾಗುತ್ತಿತ್ತು. ಅವರಿಗೆ ಸಮೂಹ ಮುಖ್ಯ. ಆದ್ದರಿಂದಲೇ ಆಫ್ರಿಕನ್ ಕಾದಂಬರಿಗಳ ಬಹುತೇಕ ನಾಯಕರು ಗತ ಪರಂಪರೆಯ ಆಚರಣೆ, ಮೌಲ್ಯಗಳ ವಿರುದ್ಧ ಬಂಡೆದ್ದವರಲ್ಲ. ಗತದ ಬಗೆಗಿನ ಸಂಬಂಧ ಅವರಿಗೆ ಮುಖ್ಯವಾಗುತ್ತದೆ.

ಕಾದಂಬರಿಯ ನಿರೂಪಣೆ ಬಹಳ ಸರಳವಾಗಿದೆ. ಕಥನದ ಓಟ ಓದುಗನಿಗೆ ಕುತೂಹಲವನ್ನುಂಟು ಮಾಡುತ್ತದೆ. ಈ ನಿರೂಪಣಾ ಕ್ರಮವನ್ನು ಗೂಗಿಯು ಜನಪದ ಕಥನಗಳಿಂದ ರೂಪಿಸಿಕೊಂಡಿದ್ದಾರೆ. ಕಥಾನಾಯಕನ ಎಲ್ಲಾ ಚಟುವಟಿಕೆಗಳನ್ನು ನಿರೂಪಕನೇ ಹೇಳುತ್ತಾ ಹೋಗುತ್ತಾನೆ. ನಿರೂಪಕನ ದೃಷ್ಟಿಯಲ್ಲಿಯೇ ಕಾದಂಬರಿ ಬೆಳೆಯುತ್ತದೆ. ಇವನು ಕಣ್ಣಿಗೆ ಕಾಣದ ನಿರೂಪಕ.

ಸಿ. ನಾಗಣ್ಣ ಅವರು ಆಫ್ರಿಕಾ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಗೂಗಿ ಅವರ ಬರವಣಿಗೆಯ ಸೂಕ್ಷ್ಮಗಳನ್ನು ಹಿಡಿದು ಅದಕ್ಕೆ ಪೂರಕವಾದ ಕನ್ನಡದ ಶೈಲಿಯೊಂದನ್ನು ರೂಪಿಸಿಕೊಂಡು ಅನುವಾದಿಸಿದ್ದಾರೆ. ಕನ್ನಡದ ಓದುಗರಿಗೆ ಇದರ ಲಾಭ ಸಿಗುತ್ತದೆ. ಅನುವಾದವು ಒಂದು ರೀತಿಯ ಕನ್ನಡಿ. ಅದು ಒಂದನ್ನು ಪ್ರತಿಫಲಿಸುವುದಷ್ಟೇ ಅಲ್ಲ ಬೆಳಕನ್ನೂ ನೀಡುತ್ತದೆ. ನಾಗಣ್ಣನವರು ಇನ್ನುಮುಂದೆಯೂ ಬೆಳಕನ್ನು ನೀಡುವಂತಹ ಕೃತಿಗಳನ್ನು ಅನುವಾದ ಮಾಡಲಿ ಎಂಬುದಷ್ಟೇ ಆಶಯ.

ವಿಮರ್ಶೆ



ಪು: 208 ₹210

ಹರಿವ ನದಿ ಸಾಕ್ಷಿ
ಮೂಲ: ಗೂಗಿ ವಾ ಥಿಯಾಂಗೊ
ಕನ್ನಡಕ್ಕೆ: ಪ್ರೊ. ಸಿ.ನಾಗಣ್ಣ
ಪ್ರ: ಯುಕ್ತ ಪ್ರಕಾಶನ
ಸಂ: 9480107298

ಕ್ಲಬ್‌ಹೌಸ್‌ಗೆ ಬಂದ್ರು

‘ಅಮ್ಮಾವ್ರ ಗಂಡ’

ಸಾಮಾಜಿಕ ಮಾಧ್ಯಮಗಳ ಜಮಾನದಲ್ಲಿ ಹೊಸ ಆ್ಯಪ್‌ಗಳಿಗೆ ತನ್ನನ್ನು ಒಗ್ಗಿಸಿಕೊಳ್ಳದ ಕ್ಷೇತ್ರವಿಲ್ಲ. ಈಚೆಗಷ್ಟೇ ಜನಪ್ರಿಯವಾಗುತ್ತಿರುವ ಕ್ಲಬ್‌ಹೌಸ್‌ಗೆ ಪ್ರವೇಶ ಪಡೆದಿರುವ ರಂಗಭೂಮಿ, ರೇಡಿಯೊ ನಾಟಕಗಳ ನೆನಪು ಮೂಡಿಸುತ್ತಲೇ ರಂಗಪ್ರಿಯರನ್ನು ಸೆಳೆಯುತ್ತಿದೆ. ಕ್ಲಬ್‌ಹೌಸ್‌ಗೆ ಬಂದಿದ್ದ ‘ಅಮ್ಮಾವ್ರ ಗಂಡ’ ತಮ್ಮ ಅನುಭವವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.



ಅಮ್ಮಾವ್ರ ಗಂಡ ನಾಟಕದಲ್ಲಿ ಎಸ್.ವಿ. ಚಂದನ್ ಮತ್ತು ಸಂತೋಷ್

ನಾಟಕದ ಲೈವ್ ಅನ್ನು ಕೇಳುವ ಸುಖವೇ ಬೇರೆ



ಯಾವುದೇ ಪ್ರದರ್ಶನ ಕಲೆ ಲೈವ್ ಆಗಿ ಪ್ರದರ್ಶನಗೊಂಡರೆ ಮಾತ್ರ ಪ್ರೇಕ್ಷಕರಿಂದ ಒಲವು ವ್ಯಕ್ತವಾಗುತ್ತದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯುಟ್ಯೂಬ್‌ನಲ್ಲಿ ನೀವು ಒಮ್ಮೆ ಲೈವ್ ಬಂದು, ರೆಕಾರ್ಡ್ ಮಾಡಿ ಅದನ್ನು ಉಳಿಸಬಹುದು. ಅದನ್ನೇ ಮತ್ತೆ ಮತ್ತೆ ನೋಡಿದಾಗ ಏಕತಾನತೆಯ ಭಾವ ಉಂಟಾಗಬಹುದು. ಆದರೆ, ಕ್ಲಬ್‌ಹೌಸ್ ಹಾಗಲ್ಲ. ಇಲ್ಲಿ ನಾಟಕವೊಂದನ್ನು ಲೈವ್ ಆಗಿ ಕೇಳುವ ಸುಖ ಕೇಳುಗನದ್ದಾಗಿರುತ್ತದೆ. ಪ್ರತೀ ಬಾರಿ ನಾಟಕ ಕೇಳಿದಾಗಲೂ ಹೊಸ ಅನುಭೂತಿಗೆ ತೆರೆದುಕೊಳ್ಳಬಹುದು. ನೀವಿಲ್ಲಿ ನಾಟಕದ ಕುರಿತು ಅನುಭವ ಹಂಚಿಕೊಳ್ಳಲು ಮಾಡರೇಟರ್ಸ್‌ಗಳನ್ನು ಕೋರಬಹುದು. ಅಭಿಪ್ರಾಯ ಹೇಳಲು ಕೈಯೆತ್ತಬಹುದು (ಹ್ಯಾಂಡ್‌ರೈಸ್). ಇದುವೇ ಕ್ಲಬ್‌ಹೌಸ್‌ನ ವಿಶೇಷ ಸಂಗತಿ. ಫೇಸ್‌ಬುಕ್‌ನಲ್ಲಿ ನಿಮಗೆ ಸಮಯ ವ್ಯರ್ಥವಾಗಬಹುದು. ಆದರೆ, ಕ್ಲಬ್‌ಹೌಸ್ ಪಕ್ಕಾ ವಿಷಯಾಧಾರಿತ ಎಂಬುದೇ ವಿಶೇಷ ಎನ್ನುತ್ತಾರೆ ‘ಅಮ್ಮಾವ್ರ ಗಂಡ’ ನಾಟಕದ ಶ್ರೋತೃ ಗೋವಿಂದ್ ಆರ್. ಆಶ್ರಿತ್.



ಡಾ. ಸುಷ್ಮಾ ಎಸ್.ವಿ.

ಮಂಜುಶ್ರೀ ಎಂ.ಕಡಕೋಳ

ಸೋಶಿಯಲ್ ಆಡಿಯೊ ಆಗಿ ಜನಪ್ರಿಯವಾಗಿರುವ ಕ್ಲಬ್‌ಹೌಸ್ ಈಗ ಬರೀ ಹರಟೆಕಟ್ಟೆಯಾಗಷ್ಟೇ ಅಲ್ಲ, ಸೃಜನಶೀಲ ಮಾಧ್ಯಮವಾಗಿಯೂ ಮುಂಚೂಣಿಗೆ ಬರುತ್ತಿದೆ. ಪುಸ್ತಕ ಓದುವಿಕೆ, ಚರ್ಚೆಗಳ ತಾಣವಾಗಿದ್ದ ಈ ಮನೆಗೆ ರಂಗಭೂಮಿಯ ಪ್ರವೇಶವೂ ಆಗಿದೆ.

ಕೋವಿಡ್ ಕಾಲದಲ್ಲಿ ಫೇಸ್‌ಬುಕ್, ಯುಟ್ಯೂಬ್‌ನಂಥ ಆಧುನಿಕ ಸಾಮಾಜಿಕ ಪರಿಭಾಷೆಗಳಿಗೆ ತೆರೆದುಕೊಂಡಿದ್ದ ರಂಗಭೂಮಿ ಕ್ಲಬ್‌ಹೌಸ್ ಮೂಲಕವೂ ರಂಗಪ್ರಿಯರನ್ನು ತಲುಪುವಲ್ಲಿ ಯಶಸ್ವಿಯಾಗಿದೆ.

ಈಚೆಗಷ್ಟೇ ಬೆಂಗಳೂರಿನ ಪ್ರದರ್ಶನ ಕಲಾ ಸಂಸ್ಥೆ (ಪ್ರಕಸಂ) ಟಿ.ಪಿ. ಕೈಲಾಸಂ ಅವರ ‘ಅಮ್ಮಾವ್ರ ಗಂಡ’ ನಾಟಕವನ್ನು ಪ್ರದರ್ಶಿಸಿದೆ (ಕೇಳಿಸಿದೆ). ಕ್ಲಬ್‌ಹೌಸ್‌ನ ಮುಚ್ಚಿದ ಕೋಣೆಯಲ್ಲಿ (ಕ್ಲೋಸ್ಡ್ ರೂಂ) ತಾಲೀಮು ನಡೆಸಿ, ತೆರೆದ ಮನೆಯಲ್ಲಿ (ಓಪನ್ ಹೌಸ್) ಆಯೋಜಿಸಿದ್ದ ಈ ಮುಕ್ತ ರಂಗ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ಮೆಚ್ಚುಗೆಯೂ ವ್ಯಕ್ತವಾಗಿದೆ. ರಂಗಪರಿಭಾಷೆಗೆ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಪ್ರಯೋಗಶೀಲರಾಗಿರುವ ರಂಗಕರ್ಮಿ ಪಿ.ಡಿ. ಸತೀಶ್‌ಚಂದ್ರ ಅವರ ನಿರ್ದೇಶನದಲ್ಲಿ ಮೂಡಿಬಂದ ‘ಅಮ್ಮಾವ್ರ ಗಂಡ’ ಕೊನೆಯವರೆಗೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವೂ ಆಗಿದೆ.

‘ಇದೇ ಮೊದಲ ಬಾರಿಗೆ ಕನ್ನಡದ ನಾಟಕ ವೊಂದು ಕ್ಲಬ್‌ಹೌಸ್‌ನಲ್ಲಿ ಪ್ರದರ್ಶನಗೊಂಡಿದ್ದರ ಹಿಂದಿದ್ದ ಸಮಸ್ಯೆಗಳು ಸಣ್ಣವಾಗಿದ್ದರೂ ಅದನ್ನು ಕ್ಲಬ್‌ಹೌಸ್‌ನಲ್ಲಿ ಲೈವ್ ಆಗಿ ಪ್ರದರ್ಶಿಸಿದ್ದು ತುಸು ಸವಾಲಿನದೇ ಆಗಿತ್ತು’ ಎನ್ನುತ್ತಾರೆ ಸತೀಶ್‌ಚಂದ್ರ.

ಎಕ್ಸ್‌ಟ್ರಾ ಪ್ಲೇಯರ್ ಇರಲಿ!

ನನಗೆ ರೇಡಿಯೊ ಅನುಭವದ ಹಿನ್ನೆಲೆ ಇದ್ದದ್ದರಿಂದ ಕ್ಲಬ್‌ಹೌಸ್ ನೀಡುತ್ತಿರುವ ಅನುಭವ ಆಪ್ಯಾಯಮಾನವಾದದ್ದು. ಅಲ್ಲಿ ಸಾಹಿತ್ಯದಂಥ ಸೃಜನಶೀಲ ಚಟುವಟಿಕೆಗಳು ನಡೆಯುತ್ತಿದ್ದಾಗ ಇದನ್ನು ರಂಗಕ್ಕೆ ಒಗ್ಗಿಸಿಕೊಳ್ಳುವ ಯೋಚನೆ ಬಂತು. ಸ್ನೇಹಿತರ ಜತೆಗೂಡಿ ಟ್ರಯಲ್ಸ್ ಮಾಡಿದೆವು. ವಾಯ್ಸ್ ಎಕೋ ಆಗುವುದು, ಹೆಡ್‌ಫೋನ್ ಹಾಕಿಕೊಂಡು ಸಂಭಾಷಣೆ ಹೇಳಿದಾಗ ಸ್ಪಷ್ಟವಾಗಿ ಕೇಳಿಸದಿರುವುದು ಇತ್ಯಾದಿ ತಾಂತ್ರಿಕ ಸಂಗತಿಗಳ ಅರಿವಾಯಿತು. ಕ್ಲಬ್‌ಹೌಸ್ ಇಂಟರ್‌ನೆಟ್ ಮೇಲೆ ಅವಲಂಬಿತವಾದ್ದರಿಂದ ಯಾವಾಗ ಯಾವ ಪಾತ್ರಧಾರಿಗಳ ನೆಟ್‌ವರ್ಕ್ ಕೈಕೊಡುತ್ತೋ ಗೊತ್ತಿಲ್ಲ. ಹಾಗಾಗಿ, ಯಾವು ದಕ್ಕೂ ಎಕ್ಸ್‌ಟ್ರಾ ಪ್ಲೇಯರ್ ಇಟ್ಟುಕೊಳ್ಳುವುದು ಅಗತ್ಯ. ಮುಖ್ಯವಾಗಿ ಇಡೀ ನಾಟಕವನ್ನು ನಿರಂತರವಾಗಿ ಫಾಲೋ ಮಾಡುತ್ತಿರುವಂಥ ಇಬ್ಬರು ಹೆಚ್ಚುವರಿ ನಟರ ಅಗತ್ಯವೂ ಇದೆ ಅನ್ನುವುದು ಸತೀಶ್‌ಚಂದ್ರ ಅನುಭವದ ನುಡಿ.



ಪಿ.ಡಿ. ಸತೀಶ್‌ಚಂದ್ರ

‘ನನ್ನ ಅರಿವಿಗೆ ಬಂದಂತೆ ಭಾರತದಲ್ಲಿ ಕ್ಲಬ್‌ಹೌಸ್‌ನಲ್ಲಿ ಇದುವರೆಗೆ ಯಾವುದೇ ರಂಗಪ್ರಯೋಗಗಳಾಗಿಲ್ಲ. ಕನ್ನಡದಲ್ಲೂ ಇದೇ ಪ್ರಥಮಬಾರಿಗೆ ಇಂಥದ್ದೊಂದು ಪ್ರಯೋಗವಾಗಿದೆ. ಕೇಳುಗ ಕೇಂದ್ರಿತವಾಗಿರುವ ಕ್ಲಬ್‌ಹೌಸ್‌ಗೆ ರೇಡಿಯೊ ನಾಟಕಗಳ ಮಾದರಿ ಹೆಚ್ಚು ಸೂಕ್ತ. ಹಾಗಾಗಿ, ‘ಅಮ್ಮಾವ್ರ ಗಂಡ’ ನಾಟಕ ಆಯ್ದುಕೊಂಡೆ. ಡಾ.ಸುಷ್ಮಾ ಎಸ್.ವಿ., ಚಂದನ್, ರಶ್ಮಿ ಮತ್ತು ಸಂತೋಷ್ ಈ ನಾಲ್ವರು ಪಾತ್ರಧಾರಿಗಳಾಗಿ ಅಭಿನಯಿಸಿದ್ದರು’ ಎಂದು ವಿವರಿಸುತ್ತಾರೆ.

‘ಈ ನಾಟಕ ಶುರುವಾದಾಗ 167 ಶ್ರೋತೃಗಳು ಇದ್ದರು. 1 ಗಂಟೆ 20 ನಿಮಿಷ ಅವಧಿಯ ನಾಟಕಕ್ಕೆ ಕೊನೆಯವರೆಗೆ 108 ಶ್ರೋತೃಗಳು ಉಳಿದಿದ್ದರು. ಕೆಲ ನಾಟಕಗಳಿಗೆ ಸಂಗೀತದ ಅವಶ್ಯಕತೆ ಇರುತ್ತದೆ. ಆದರೆ, ಕ್ಲಬ್‌ಹೌಸ್‌ನ ನಾಟಕಗಳಲ್ಲಿ ಅದನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಇನ್ನಷ್ಟೇ ಕಂಡುಕೊಳ್ಳಬೇಕಿದೆ. ನಾಟಕವನ್ನು ರಂಗಭೂಮಿಯ ಮೇಲೇ ಪ್ರದರ್ಶಿಸಬೇಕು ಅಂತ ಹೃದಯ ಹೇಳಿದರೂ, ತಂತ್ರಜ್ಞಾನಕ್ಕೂ ತೆರೆದುಕೊಳ್ಳಬೇಕು ಎಂದು ಮಿದುಳು ಹೇಳುತ್ತದೆ’ ಎನ್ನುತ್ತಾರೆ ಅವರು.

ರೇಡಿಯೊ ನಾಟಕವೂ, ಕ್ಲಬ್‌ಹೌಸ್ ಪ್ರಯೋಗವೂ

‘ಕ್ಲಬ್‌ಹೌಸ್‌ನಲ್ಲಿ ನಾಟಕ ಆಡುವುದು ಮೇಲ್ನೋಟಕ್ಕೆ ರೇಡಿಯೊ ನಾಟಕದಂತೆ ಅನಿಸಿದರೂ ಎರಡರಲ್ಲೂ ಭಿನ್ನತೆ ಇದೆ. ರೇಡಿಯೊ ನಾಟಕ ಮಾಡುವಾಗ ನಿಮಗೆ ಉತ್ತಮ ಗುಣಮಟ್ಟದ ಮೈಕ್ ಸಿಸ್ಟಂ, ಫ್ರೀಕ್ವೆನ್ಸಿ, ಶಬ್ದನಿರೋಧಕ ಗೋಡೆ, ಸ್ಯಾಟಲೈಟ್ ಎಲ್ಲವೂ ಇರುತ್ತೆ. ಆದರೆ, ಕ್ಲಬ್‌ಹೌಸ್‌ನಲ್ಲಿ ಪ್ರತ್ಯೇಕ ಮೈಕ್ ಸಿಸ್ಟಂ, ಸ್ಟುಡಿಯೊ ಸೌಲಭ್ಯ ಇಲ್ಲ. ಇಲ್ಲಿ ನಟವರ್ಗಕ್ಕೆ ತಾಂತ್ರಿಕವಾಗಿ ತರಬೇತಿ ಬೇಕಾಗುತ್ತದೆ. ರೇಡಿಯೊ ನಾಟಕಗಳನ್ನು ಮೊದಲೇ ರೆಕಾರ್ಡಿಂಗ್ ಮಾಡಿಟ್ಟುಕೊಂಡು ನಿರ್ದಿಷ್ಟ ದಿನ, ಸಮಯಕ್ಕೆ ಪ್ರದರ್ಶಿಸಬಹುದು. ಆದರೆ, ಇಲ್ಲಿ ನೀವು ಲೈವ್ ಆಗಿಯೇ ನಾಟಕವನ್ನು ಪ್ರದರ್ಶಿಸಬೇಕಾಗುತ್ತದೆ. ಥೇಟ್ ರಂಗದ ಮೇಲೆ ನಾಟಕ ಪ್ರದರ್ಶನದ ರೀತಿಯಂತೆ’ ಎಂದು ಅನುಭವ ಬಿಚ್ಚಿಟ್ಟರು ಪಾತ್ರಧಾರಿ ಡಾ.ಸುಷ್ಮಾ ಎಸ್.ವಿ.

ಅಂದೇ ಹುಟ್ಟು, ಅಂದೇ ಸಾವು!

‘ಒಬ್ಬ ನಟ ಹುಟ್ಟುವುದೂ ಅಂದೇ, ಸಾಯುವುದೂ ಅಂದೇ’ ಅನ್ನುವ ಮಾತು ರಂಗಭೂಮಿಯಲ್ಲಿ ಚಾಲ್ತಿಯಲ್ಲಿದೆ. ಇದು ಕ್ಲಬ್‌ಹೌಸ್‌ಗೂ ಅನ್ವಯಿಸುತ್ತದೆ. ರಂಗಮಂದಿರದಲ್ಲಿ ನಾಟಕವೊಂದನ್ನು ಹೇಗೆ ಲೈವ್ ಆಗಿ ಪ್ರದರ್ಶಿಸುತ್ತೇವೋ ಇಲ್ಲಿಯೂ ಅದೇ ರೀತಿ ಪ್ರದರ್ಶಿಸಬಹುದು. ನೆಟ್‌ವರ್ಕ್ ಸಮಸ್ಯೆ, ಡಿಜಿಟಲ್ ಡಿಲೆದಂಥ ಸಮಸ್ಯೆಗಳನ್ನು ಮೀರಿಯೂ ಕ್ಲಬ್‌ಹೌಸ್ ಅನ್ನು ರಂಗಭೂಮಿ ಸಮರ್ಥವಾಗಿ ದುಡಿಸಿಕೊಳ್ಳಲು ಅವಕಾಶವಿದೆ. ರಂಗದ ಮೇಲೆ ನಮ್ಮ ಮೇಲಷ್ಟೇ ಬೆಳಕಿರುತ್ತದೆ. ಹಾಗಾಗಿ, ಪ್ರೇಕ್ಷಕರ ಸಾಲಿನಲ್ಲಿ ಯಾರಿದ್ದಾರೆಂದು ತಿಳಿಯದು. ಆದರೆ, ಕ್ಲಬ್‌ಹೌಸ್‌ನಲ್ಲಿ ಯಾರ್‍ಯಾರು ನಾಟಕ ಕೇಳುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇದು ರಂಗಕರ್ಮಿಗಳ ಉತ್ಸಾಹ ಇಮ್ಮಡಿಗೊಳಿಸುತ್ತದೆ. ನಾಟಕದ ಮೂಲ ಗುಣವನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಕ್ಲಬ್‌ಹೌಸ್‌ಗಿದೆ’ ಎಂದು ಅಭಿಪ್ರಾಯಪಡುತ್ತಾರೆ ಅವರು.

ಕ್ಲಬ್‌ಹೌಸ್ ಅಲ್ಪಾಯುಷಿಯೇ?

ಕೇಳುಗ ಕೇಂದ್ರಿತವಾಗಿರುವುದೇ ಕ್ಲಬ್‌ಹೌಸ್‌ನ ಮಿತಿ ಆಗಿರುವುದರಿಂದ ಇದು ಅಲ್ಪಾಯುಷಿಯೇ ಎನ್ನುವ ಪ್ರಶ್ನೆಯೂ ಎದುರಾಗುತ್ತದೆ. ಇದು ಕೋವಿಡ್ ಕಾಲದಲ್ಲಷ್ಟೇ ಜನಪ್ರಿಯತೆ ಉಳಿಸಿಕೊಂಡು ನೇಪಥ್ಯಕ್ಕೆ ಸರಿದೀತೇ ಅನ್ನುವ ಅನುಮಾನವೂ ಇದೆ. ಆದರೆ, ಕೋವಿಡ್ ನಂತರದ ಕಾಲದಲ್ಲೂ ನಾಟಕಗಳನ್ನು ಕೇಳುವ ವರ್ಗ ಇದ್ದೇ ಇರುತ್ತದೆ. ಹಾಗಾಗಿ, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಂತೆ ಕ್ಲಬ್‌ಹೌಸ್ ಕೂಡಾ ಸೀಮಿತ ಮಿತಿಯಲ್ಲೇ ಜನಪ್ರಿಯತೆ ಉಳಿಸಿಕೊಳ್ಳಲಿದೆ ಅನ್ನುವುದು ರಂಗತಜ್ಞರ ಅಭಿಮತ.

ಸಂಗೀತ ಪುಸ್ತಕ!

8ನೇ ಪುಟದಿಂದ...

ರಣಧೀರ ಕಂಠೀರವ ನರಸರಾಜ ಒಡೆಯರ್, ನವಕೋಟಿ ನಾರಾಯಣ ಎಂದೇ ಪ್ರಸಿದ್ಧರಾಗಿದ್ದ ವೀಣಾ ವಾದಕ, ಲೇಖಕರೂ ಆಗಿದ್ದ ಚಿಕ್ಕದೇವರಾಜ ಒಡೆಯರ್, ಮೂಕರಾಗಿದ್ದ ಬಹುಭಾಷಾ ಪಂಡಿತ ಇಮ್ಮಡಿ ಕಂಠೀರವ ನರಸರಾಜ ಒಡೆಯರ್ ಸಂಗೀತ ಕ್ಷೇತ್ರಕ್ಕೆ ನೀಡಿರುವ ಮಾಹಿತಿ ಧ್ವನಿಯಲ್ಲಿದೆ. ಕೊನೆಯಲ್ಲಿ ಚಿಕ್ಕದೇವರಾಜ ಒಡೆಯರ್ ರಚನೆ, ವಿದ್ವಾನ್ ಚಿತ್ರವೀಣಾ ಎನ್. ರವಿಕಿರಣ್ ಅವರ ಸಂಯೋಜನೆ, ಕಾಂಭೋಜಿ ರಾಗದಲ್ಲಿರುವ ಕೃತಿ ಕೇಳುಗರಲ್ಲಿ ರಸಾನುಭವ ಮೂಡಿಸುತ್ತದೆ. 15 ನಿಮಿಷದ ಮಾಹಿತಿ ಹಾಗೂ ಗಾಯನ ಪ್ರಸ್ತುತಿ ವಿಶೇಷವಾಗಿದೆ.

ಹರಿದಾಸ ಮಾರ್ಗದರ್ಶಿ ಗೋಪಾಲದಾಸರ ಪದಂ ಚಿತ್ರಣ ಧ್ವನಿ ಪುಸ್ತಕಕ್ಕೆ ಹರಿಭಕ್ತಿಯ ಸ್ಪರ್ಶ ನೀಡಿದೆ. ಚಾರುಕೇಶಿ ನಿಬದ್ಧಿತ ‘ಜಯತು ಜಗದಾಧಾರ’ ರಚನೆಯಲ್ಲಿ ವಿದುಷಿ ಕೃತಿಕಾ ಅವರ ಮಂದ್ರಸ್ಥಾಯಿಯ ಆಲಾಪ ರಾಗದ ಛಾಯೆಯನ್ನು ಅನಾವರಣಗೊಳಿಸುತ್ತದೆ. ಹರಿದಾಸೋತ್ತಮ ಮೋಹನದಾಸರ ಉಗಾಭೋಗ ‘ಉಡುಪಿಯ ಕೃಷ್ಣನೇ ಸಡಗರ ನಿನಗ್ಯಾಕೆ’ ರಾಗ ಮಾಲಿಕೆ ಮುಸ್ಸಂಜೆಯ ಕೇಳ್ಮೆಗೆ ಬಣ್ಣ ತುಂಬುತ್ತದೆ.

ಖಗೋಳ ವಿಜ್ಞಾನ ಕ್ಷೇತ್ರದಲ್ಲೂ ಸಾಧನೆಗೈದಿರುವ ತಿರುವಾಂಕೂರು ರಾಜಮನೆತನದ ಮಹಾರಾಜ ಸ್ವಾತಿ ತಿರುನಾಳ್ ಅವರು ಸಂಗೀತಲೋಕಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದ್ದಾರೆ. ತಾನ ವರ್ಣ, ಪದಂ, ಜಾವಳಿ ತಿಲ್ಲಾನಗಳ ಕೊಡುಗೆಯನ್ನು 22 ನಿಮಿಷದ ಧ್ವನಿಯ ಮೂಲಕ ಕಟ್ಟಿಕೊಡಲಾಗಿದೆ. ಬಿಲಹರಿ ರಾಗದ ‘ಸಂತತಂ ಭಜಾಮಿಹಂ’ ಕೃತಿ ಮಹಾವಿಷ್ಣುವಿನ ಭಕ್ತಿಯ ಮಹಿಮೆಯನ್ನು ಸಾರುತ್ತದೆ.

ಪಲ್ಲವಿ ದೊರೈಸ್ವಾಮಿ ಅಯ್ಯರ್, ಸರ್ಪಭೂಷಣ ಶಿವಯೋಗಿ ಸ್ವಾಮಿ, ವಡಿವೇಲು, ಕರೂರ್ ಚಿನ್ನ ದೇವುಡು, ಅಣ್ಣಾಮಲೈ ರೆಡ್ಡಿಯಾರ್, ಶರಭಾ ಶಾಸ್ತ್ರಿ, ತಿರುಪತಿ ನಾರಾಯಣಸ್ವಾಮಿ ನಾಯ್ಡು, ಅಂಬಾಬಾಯಿ, ಬೆಳಗೆರೆ ಜಾನಕಮ್ಮ, ಜಿ.ಹರಿಶಂಕರ್ ಅವರ ಮಾಹಿತಿ ಹಾಗೂ ರಚನೆಗಳ ಮೇಲೆ ಬೆಳಕು ಚೆಲ್ಲಲಾಗಿದೆ.



ಕೊನೆಯ ಅಧ್ಯಾಯ 88 ನಿಮಿಷವಿದ್ದು ಹೊಸ ತಲೆಮಾರಿನ ಸಾಧಕರ ಚಿತ್ರಣವಿದೆ. ಕೊ ನೇ ರಿ ರಾ ಜ ಪು ರ ಂ ವೈದ್ಯನಾಥ ಅಯ್ಯರ್, ಮಧುರೈ ಪುಷ್ಪವನಂ, ಎನ್.ಸಿ.ವಸಂತ ಕೋಕಿಲಂ, ಜಾನ್ ಬಿ ಹಿಗ್ಗಿನ್ಸ್ ಭಾಗವತರ್, ಮ್ಯಾಂಡೊಲಿನ್ ಯು. ಶ್ರೀನಿವಾಸ್, ಕೃಷ್ಣಪ್ರಿಯೆ ರಂಜನಿ ಹೆಬ್ಬಾರ್ ಅವರ ಸಾಧನೆಯ ಸ್ಫೂರ್ತಿ ಇದೆ. ಕಡೆಯಲ್ಲಿ ಮಧುರೈ ಪುಷ್ಪವನಂ ಪ್ರಸಿದ್ಧಿಗೊಳಿಸಿದ ತ್ಯಾಗರಾಜರ ಕೃತಿ, ಆಭೇರಿ ರಾಗ ನಿಬದ್ಧಿತ ‘ನಗುಮೋಮು ಗನಲೇನಿ’ ಕೃತಿಯೊಂದಿಗೆ ಆಡಿಯೊ ಪುಸ್ತಕ ಸಂಪನ್ನಗೊಳ್ಳುತ್ತದೆ.

ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾಂಸರಾದ ಆನೂರು ಅನಂತಕೃಷ್ಣ ಶರ್ಮಾ, ವಿಶ್ವಜಿತ್ ಮತ್ತೂರ್, ದೀಪಿಕಾ ಶ್ರೀನಿವಾಸನ್, ಕಾರ್ತಿಕ್ ಭಟ್, ತೇಜಸ್ವಿ ರಘುನಾಥ್, ಪ್ರಣವ್ ದತ್, ಸುನಾದ್ ಆನೂರು ಇದ್ದಾರೆ.

‘ಧ್ವನಿಯೊಂದು, ಮಾಹಿತಿ-ಪ್ರಸ್ತುತಿ ಹಲವು’ ಎಂಬಂತಿರುವ ಆಡಿಯೊ ಪುಸ್ತಕ ಹೊಸ ತಲೆಮಾರಿನ ಯುವಜರಿಗೆ ಜ್ಞಾನದ ಧಾರೆಯಾಗಬಲ್ಲದು. ಮೈಲ್ಯಾಂಗ್ ಆ್ಯಪ್‌ನ ಬಲಕೊಂಡಿಯಲ್ಲಿರುವ ‘ನನ್ನ ಪುಸ್ತಕಗಳು’ ವಿಭಾಗದಲ್ಲಿ ಈ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಂಡು ಆಲಿಸಬಹುದು. ಈ ಧ್ವನಿ ಪುಸ್ತಕದ ಬೆಲೆ ₹ 149.

ಆಡಿಯೊ ಬುಕ್ ಲಿಂಕ್ (ಭಾರತ):
https://mylang.in/products/alpayushi-mahan-sadhakaru-audiobook-inr

ಆಡಿಯೊ ಬುಕ್ ಲಿಂಕ್ (ವಿದೇಶ):
https://mylangbooks.com/products/alpayushi-mahan-sadhakaru-audiobook-usd

---

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಶಬ್ದಗಳಲ್ಲಿ ಸರಸ...

ಬಳ್ಳಿಗಳಲ್ಲಿ ಹುಡುಕಾಟ

ಇಲ್ಲಿ ಕೊಟ್ಟಿರುವ ಬಳ್ಳಿಗಳಲ್ಲಿ ಕ್ರಮವಾದ ಎರಡು ಅಕ್ಷರ ಆಯ್ಕೆ ಮಾಡಿಕೊಂಡು ಸುಳಿವಿಗೆ ತಕ್ಕಂತೆ ಪದ ರಚಿಸಿ

1 ಕ ಕಾ ಕಿ ಕೀ ಕು ಕೂ ಕೆ ಕೇ ಕೈ ಕೊ ಕೋ ಕೌ ಕಂ ಕಃ
(ಒಂದು ಹಣ್ಣಿನ ಹೆಸರು)

2 ಖ ಖಾ ಖಿ ಖೀ ಖು ಖೂ ಖೆ ಖೇ ಖೈ ಖೊ ಖೋ ಖೌ ಖಂ ಖಃ
(ಒಂದು ಆಟದ ಹೆಸರು)

3 ಗ ಗಾ ಗಿ ಗೀ ಗು ಗೂ ಗೆ ಗೇ ಗೈ ಗೊ ಗೋ ಗೌ ಗಂ ಗಃ
(ಒಂದು ಪಕ್ಷಿಯ ಹೆಸರು)

4 ಜ ಜಾ ಜಿ ಜೀ ಜು ಜೂ ಜೆ ಜೇ ಜೈ ಜೊ ಜೋ ಜೌ ಜಂ ಜಃ
(ಒಂದು ಹೂವಿನ ಹೆಸರು)

5 ಲ ಲಾ ಲಿ ಲೀ ಲು ಲೂ ಲೆ ಲೇ ಲೈ ಲೊ ಲೋ ಲೌ ಲಂ ಲಃ
(ಒಂದು ಸಿನಿಮಾ ಹೆಸರು)

ನಗುನಗುತಾ ಕಲಿ

ಒಂದು ಪರಮಾಣುವಿನಲ್ಲಿ ಪ್ರೋಟಾನ್ ನ್ಯೂಟ್ರಾನ್ ಎಲೆಕ್ಟ್ರಾನ್ ಕಣಗಳಿವೆ ಎಂಬುದನ್ನು PEN ಪದದಿಂದ ನೆನಪಿಡಬಹುದು.

P = ಪ್ರೋಟಾನ್
E = ಎಲೆಕ್ಟ್ರಾನ್
N = ನ್ಯೂಟ್ರಾನ್

ಪದ ಬದಲಾಟ

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಅಷ್ಟೇ ಅಕ್ಷರಗಳ

ಪದ ರಚಿಸಬಲ್ಲಿರಾ?

1. ನಾತಮಾಡು = ________
2. ಗಡಿಕನ್ನ = ________
3. ರವಿದೂರು = ________
4. ಮಗುಹಾರು = ________

ಗಣಿತದಲ್ಲಿ ಗರ್ದಿ ಗಮ್ಮತ್ತು

1) ಕ್ರಮ -ಶ್ರಮ

ಮಾದರಿ : | 2 | 3 | 1 | 2 | 1 | 3 |

ಇಲ್ಲಿ ಕೊಟ್ಟಿರುವ ಅಂಕಿಗಳನ್ನು ಒಮ್ಮೆ ಗಮನಿಸಿ 1 ಅಂಕಿ - ಒಂದು ಚೌಕ ಬಿಟ್ಟು ಮತ್ತೆ ಬರೆಯಲಾಗಿದೆ. 2ನ್ನು ಎರಡು ಚೌಕಬಿಟ್ಟು ಮತ್ತೆ ಬರೆಯಲಾಗಿದೆ. 3ನ್ನು ಮೂರು ಚೌಕಬಿಟ್ಟು ಮತ್ತೆ ಬರೆಯಲಾಗಿದೆ.

ಹೀಗೆ, ನೀವು 11 22 33 44 -ಅಂಕಿಗಳನ್ನು ಮೇಲಿನ ನಿಯಮಗಳಂತೆ 8 ಚೌಕಗಳಲ್ಲಿ ಹೊಂದಿಸಬಲ್ಲಿರಾ?

2) ಲೆಕ್ಕಮಾಡು- ಮೋಜುನೋಡು

150879 x 9	33673 x7
1,3,5,7,9,11	2,3,5,7,11
(ಕ್ರಮವಾಗಿ ಬೆಸ ಸಂಖ್ಯೆಗಳು ಬಂದಿವೆ)	(ಕ್ರಮವಾಗಿ ಅವಿಭಾಜ್ಯ ಸಂಖ್ಯೆಗಳು ಬಂದಿವೆ)

ಟ್ವೆಂಟಿ – 20 ಮ್ಯಾಚ್

ಶಬ್ದಗಳಿಗೂ ಅವುಗಳ ಅರ್ಥಗಳಿಗೂ ಹೊಂದಿಸಿ

1)	ಅರ	A	ಸಾಹಸಿ
2)	ಉರ	B	ತಿರುಳು
3)	ಕರ	C	ಊರು
4)	ಖಾರ	D	ಮೈ ಬಿಸಿಯಾಗುವುದು
5)	ಗರ	E	ಭಯಂಕರವಾದುದು
6)	ಘೋರ	F	ತೀಕ್ಷ್ಣವಾದ ರುಚಿ
7)	ಚೋರ	G	ಎದೆ
8)	ಜರ	H	ನಯಗೊಳಿಸುವ ಸಾಧನ
9)	ತೀರ	I	ದೆವ್ವ
10)	ದರ	J	ಕಳ್ಳ
11)	ಧೀರ	K	ದಡ
12)	ನರ	L	ಮನುಷ್ಯ
13)	ಪುರ	M	ಬೆಲೆ
14)	ಬರ	N	ಹೊರೆ
15)	ಭಾರ	O	ಕ್ಷಾಮ
16)	ಮೊರ	P	ಬಾಣ
17)	ವರ	Q	ವೀರಪದದ ಅಪಭ್ರಂಶ
18)	ಶರ	R	ಹಸ್ತ
19)	ಸಾರ	S	ಮದುವೆ ಗಂಡು
20)	ಈರ	T	ಕಾಲುಕಡಿ ಕೇರುವ ಸಾಧನ

ಡಣ್ಣ ಚಿಕ್ಕು ಶೇಕ್ರಪ್ಪು ಕಥೆಯ ಫ್ಲೈಯಿಂಗ್ ಸಿಖ್

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಅಥ್ಲೆಟಿಕ್ಸ್‌ನಲ್ಲಿ ಭಾರತದ ಗೌರವವನ್ನು ಆಕಾಶದೆತ್ತರಕ್ಕೆ ಏರಿಸಿದ ಸ್ಪ್ರಿಂಟರ್ ಮಿಲ್ಖಾ ಸಿಂಗ್ ಜನಿಸಿದ್ದು ಪಾಕಿಸ್ತಾನದ ಮುಜಾಫರ್‌ಗಡದಲ್ಲಿ (20-11-1929). ದೇಶ ವಿಭಜನೆಯ ಸಂದರ್ಭ ಅವರ ತಂದೆ, ತಾಯಿಯ ಕೊಲೆಯಾಯಿತು. ಆ ದುರಂತವನ್ನು ಕಣ್ಣಾರೆ ಕಂಡಿದ್ದ ಮಿಲ್ಖಾ ಸಿಂಗ್ ತಪ್ಪಿಸಿಕೊಂಡು ಭಾರತಕ್ಕೆ ಬಂದರು



ಭಾರತೀಯ ಸೇನೆ ಸೇರಿದ ಮಿಲ್ಖಾ ಸಿಂಗ್ ಅಲ್ಲಿ ಅಥ್ಲೆಟಿಕ್ಸ್ ಅಭ್ಯಾಸ ಮಾಡಿದರು. 1958ರಲ್ಲಿ ಇಂಗ್ಲೆಂಡ್‌ನ ಕಾರ್ಡಿಫ್‌ನಲ್ಲಿ ನಡೆದ ಕಾಮನ್ವೆಲ್ತ್ ಗೇಮ್ಸ್‌ನ 400 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದು ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಸ್ವತಂತ್ರ ಭಾರತದ ಮೊದಲ ಕ್ರೀಡಾಪಟು ಎಂದೆನಿಸಿಕೊಂಡರು



1958ರಲ್ಲಿ ಟೋಕಿಯೊದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಮಿಲ್ಖಾ ಸಿಂಗ್ ಎರಡು ಚಿನ್ನದ ಪದಕ (200 ಮೀಟರ್ಸ್ ಮತ್ತು 400 ಮೀಟರ್ಸ್ ಓಟ) ಗೆದ್ದುಕೊಂಡರು. 1962ರಲ್ಲಿ ಜಕಾರ್ತದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲೂ ಎರಡು ಚಿನ್ನ (400 ಮೀಟರ್ಸ್ ಮತ್ತು 4x 400 ಮೀಟರ್ಸ್ ರಿಲೆ) ಗಳಿಸಿದರು



1960ರಲ್ಲಿ ಪಾಕಿಸ್ತಾನವು ಭಾರತದ ಅಥ್ಲೀಟ್‌ಗಳನ್ನು ದ್ವಿಪಕ್ಷೀಯ ಸ್ಪರ್ಧೆಗೆ ಆಹ್ವಾನಿಸಿತ್ತು. ಆದರೆ ವಿಭಜನೆ ಸಂದರ್ಭದಲ್ಲಿ ಅನುಭವಿಸಿದ ಕಹಿ ನೆನಪುಗಳ ಕಾರಣ ಮಿಲ್ಖಾ ಸಿಂಗ್ ಪಾಕಿಸ್ತಾನಕ್ಕೆ ಹೋಗಲು ಒಪ್ಪಲಿಲ್ಲ. ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಒತ್ತಾಯಿಸಿದ ನಂತರ ಅವರು ಹೋಗಲು ಒಪ್ಪಿದರು



ಪಾಕಿಸ್ತಾನದಲ್ಲಿ ಅಥ್ಲೆಟಿಕ್ಸ್ ಕೂಟ ತುಂಬಾ ತುರುಸಿನಿಂದ ನಡೆಯಿತು. ಮಿಲ್ಖಾ ಸಿಂಗ್ ಅವರು ಭಾಗವಹಿಸಿದ್ದರಿಂದ ಭಾರತ ತಂಡದ ಉತ್ಸಾಹವೂ ಹೆಚ್ಚಿತ್ತು. ಚಾಂಪಿಯನ್ ಅಬ್ದುಲ್ ಖಾಲಿಕ್ ಅವರನ್ನು 200 ಮೀಟರ್ಸ್ ಓಟದಲ್ಲಿ ಹಿಂದಿಕ್ಕಿದ ಮಿಲ್ಖಾ ಸಿಂಗ್ ‘ಫ್ಲೈಯಿಂಗ್ ಸಿಖ್’ ಬಿರುದು ಗಳಿಸಿದರು



ಸತತ ಮೂರು ಒಲಿಂಪಿಕ್ಸ್‌ಗಳಲ್ಲಿ ಪಾಲ್ಗೊಂಡ ಗರಿಮೆ ಮಿಲ್ಖಾ ಸಿಂಗ್ ಅವರದು. 1956, 1960 ಮತ್ತು 1964 ಒಲಿಂಪಿಕ್ಸ್ ಕೂಟಗಳ 400 ಮೀಟರ್ಸ್ ಓಟದಲ್ಲಿ ಅವರು ಸ್ಪರ್ಧಿಸಿದ್ದರು. 1960ರ ರೋಮ್ ಒಲಿಂಪಿಕ್ಸ್‌ನಲ್ಲಿ 4ನೇ ಸ್ಥಾನ ಗಳಿಸಿದ್ದರು. ಈ ಮೇರು ಸಾಧಕ 2021ರ ಜೂನ್ 18ರಂದು ನಿಧನಹೊಂದಿದರು

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಕಾ ಗೆ ಗೋ ಗ ತ
ಗ ತ ಅ ದು ತ್ರ

◯	ಂ	◯	ಒಂದು ಪ್ರಸಿದ್ಧ ನದಿ
◯	ಂ	◯	ಸೂಜಿಗಲ್ಲು
◯	ಂ	◯	ದೇಹ
◯	ಂ	◯	ಅಂಟು
◯	ಂ	◯	ಉಪಾಯ

ಮಜ ಮಜ ಮಜಕೂರದ ಜೂನ್ 20ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ತಂಗು, 2. ತಂಗಿ, 3. ದಿಂಬು, 4. ನಿಂದೆ, 5. ಬಂಧ

ಪದ-ಬದಲಾಟ
1. ಕಳೆದಬಾರಿ, 2. ವಿಚಾರಮಾಡು, 3. ತಮ್ಮನಭಾರ, 4. ಆನೆಯ ಶ್ರಮ

ಶಬ್ದಗಳಲ್ಲಿ ಸರಸ
1- ಕರಡಿ, 2- ಕರಲು, 3- ಕರಗ, 4- ಕರಣ, 5- ಕರಡ, 6- ಕರಡು, 7- ಕರಗು, 8- ಕರಕ, 9- ಕರಟ (ಆನೆ), 10- ಕರಣಿ

ಟ್ವೆಂಟಿ- 20 ಉತ್ತರಗಳು
1-G, 2- K, 3- H, 4-T, 5-J, 6-F, 7-S, 8- I, 9-E, 10-R, 11-D, 12-Q, 13-C, 14-O, 15-B, 16-L, 17-M, 18-A, 19-P, 20-N.

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಫಾತಿಮಾ ಜೊಹರಾ, ಬೆಂಗಳೂರು



ಅಭಿಷೇಕ್ ಕೆ. ಅಥಣಿ



ಸಿರಿ ಕೆ.ಆರ್. ಕೋಣನೂರು (ಹಾಸನ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in



ಬೆಳ್ಳಿ ಪದಕಗಳೊಂದಿಗೆ ಸೌರಭ್ ಚೌಧರಿ ಮತ್ತು ಮನು ಭಾಕರ್– ಪಿಟಿಐ ಚಿತ್ರ

ಶೂಟಿಂಗ್ ವಿಶ್ವಕಪ್: ಬೆಳ್ಳಿ ಗೆದ್ದ ಸೌರಭ್– ಮನು

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಅತ್ಯುತ್ತಮ ಸಾಮರ್ಥ್ಯ ಮುಂದುವರಿಸಿದ ಯುವ ಶೂಟಿಂಗ್ ಪಟುಗಳಾದ ಭಾರತದ ಸೌರಭ್ ಚೌಧರಿ ಹಾಗೂ ಮನು ಭಾಕರ್ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಮುಡಿಗೇರಿಸಿಕೊಂಡಿದ್ದಾರೆ.

10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ 12–16ರಿಂದ ರಷ್ಯಾದ ವಿಟಾಲಿನಾ ಬ್ಯಾಟ್‌ಸರಾಶ್ಕಿನಾ ಮತ್ತು ಆರ್ಟೆಮ್ ಚೆರ್ನೊಸೊವ್ ಎದುರು ಸೋಲನುಭವಿಸಿದರು.

ತೀವ್ರ ಪೈಪೋಟಿ ನಡೆದ ಪಂದ್ಯದಲ್ಲಿ ಭಾರತದ ಜೋಡಿಯು ಒಂದು ಹಂತದಲ್ಲಿ 12–12ರಿಂದ ಸಮಬಲ ಸಾಧಿಸಿತ್ತು. ಆದರೆ ಅದೇ ಲಯ ಮುಂದುವರಿಸಲಾಗಲಿಲ್ಲ. ಇದೇ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅಭಿಷೇಕ್ ವರ್ಮಾ ಮತ್ತು ಯಶಸ್ವಿನಿ ಸಿಂಗ್ ದೇಸ್ವಾಲ್ ಅವರು ಕಂಚಿನ ಪದಕವನ್ನು ತಪ್ಪಿಸಿಕೊಂಡರು. ಈ ಪದಕದ ಸುತ್ತಿನ ಹಣಾಹಣಿಯಲ್ಲಿ ಅವರು 7-17ರಿಂದ ಇರಾನ್‌ನ ಗೋಲ್‌ನೌಶ್ ಸೆಬ್ಘಾತೊಲ್ಲಾಯ್ ಮತ್ತು ಜಾವೇದ್ ಫಾರೂಕಿ ಜೋಡಿಗೆ ಮಣಿದರು.

ಒಲಿಂಪಿಕ್ಸ್‌ಗೆ 'ಎ' ದರ್ಜೆ ಅರ್ಹತೆ ಗಳಿಸಿದ ಭಾರತದ ಮೊದಲ ಈಜುಪಟು

ಸಾಜನ್ ಐತಿಹಾಸಿಕ ಸಾಧನೆ

ನವದೆಹಲಿ (ಪಿಟಿಐ): ಕೇರಳದ ಸಾಜನ್ ಪ್ರಕಾಶ್ ಒಲಿಂಪಿಕ್ಸ್‌ಗೆ 'ಎ' ದರ್ಜೆಯ ಅರ್ಹತೆ ಗಳಿಸಿದ ಭಾರತದ ಮೊದಲ ಈಜುಪಟು ಎನಿಸಿಕೊಂಡರು. ಇಟಲಿಯ ರೋಮ್‌ನಲ್ಲಿ ನಡೆಯುತ್ತಿರುವ ಸೆಟ್ ಕೊಲ್ಲಿ ಟ್ರೋಫಿ ಸ್ಪರ್ಧೆಯ 200 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ 1 ನಿಮಿಷ, 56:38 ಸೆಕೆಂಡುಗಳ ಸಾಧನೆಯೊಂದಿಗೆ ಅವರು ಟೋಕಿಯೊ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ.



ಸಾಜನ್ ಪ್ರಕಾಶ್ –ಎಎಫ್‌ಪಿ ಚಿತ್ರ

27 ವರ್ಷದ ಸಾಜನ್ 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು. ಶನಿವಾರ ನಡೆದ ಸ್ಪರ್ಧೆಯಲ್ಲಿ 'ಎ' ದರ್ಜೆಗೆ 1 ನಿಮಿಷ, 56.48 ಸೆಕೆಂಡುಗಳ ಗುರಿ ನಿಗದಿ ಮಾಡಲಾಗಿತ್ತು. ಸಾಜನ್ 0.10 ಸೆಕೆಂಡು ಅಂತರದಲ್ಲಿ ಗುರಿ ಮುಟ್ಟಿದರು.

ಕಳೆದ ವಾರ ನಡೆದಿದ್ದ ಬೆಲ್‌ಗ್ರೇಡ್ ಟ್ರೋಫಿ ಸ್ಪರ್ಧೆಯಲ್ಲಿ 1 ನಿಮಿಷ, 56.96 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು. ಹೀಗಾಗಿ ಅಲ್ಲಿ ಅವರಿಗೆ 'ಎ' ದರ್ಜೆಯ ಅರ್ಹತೆ ಕೈತಪ್ಪಿತ್ತು.

ಈ ಸಾಧನೆಯೊಂದಿಗೆ ಸಾಜನ್ ಅವರು ಬೆಲ್‌ಗ್ರೇಡ್ ಟ್ರೋಫಿ ಸ್ಪರ್ಧೆಯಲ್ಲಿ ನಿರ್ಮಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಎಸ್‌ಎಫ್‌ಐನಿಂದ ನಾಮನಿರ್ದೇಶನಗೊಂಡಿರುವ ಮಹಿಳಾ ಈಜುಪಟು ಮಾನಾ ಪಟೇಲ್ ಹಾಗೂ ಸಾಜನ್, ಟೋಕಿಯೊ ಕ್ರೀಡಾಕೂಟಕ್ಕೆ ತೆರಳಲಿದ್ದಾರೆ. ಸಾಜನ್ ನೇರ ಅರ್ಹತೆ ಗಿಟ್ಟಿಸಿರುವುದರಿಂದ 'ಸಾರ್ವತ್ರಿಕ ಅರ್ಹತಾ ಪದ್ಧತಿ' ಯಡಿ ನಾಮನಿರ್ದೇಶನಗೊಂಡಿದ್ದ ಕನ್ನಡಿಗ ಶ್ರೀಹರಿ ನಟರಾಜ್ ಒಲಿಂಪಿಕ್ಸ್ ಪ್ರವೇಶದ ಅವಕಾಶ ಕಳೆದುಕೊಂಡಿದ್ದಾರೆ.

'ಇದೇ ಟೂರ್ನಿಯಲ್ಲಿ ಭಾರತದ ಕೆನಿಶಾ ಗುಪ್ತಾ ಕೂಡ ಶನಿವಾರ ರಾಷ್ಟ್ರೀಯ ದಾಖಲೆ ಬರೆದರು. ಮಹಿಳೆಯರ 100 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಅವರು 57.35 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಹಿಮಾಗೆ ಗಾಯ; ದ್ಯುತಿಗೆ ನಿರಾಸೆ

ಪಟಿಯಾಲ (ಪಿಟಿಐ): ಹೀಟ್ಸ್ ಸಂದರ್ಭದಲ್ಲಿ ಗಾಯಗೊಂಡ ಸ್ಪ್ರಿಂಟರ್ ಹಿಮಾ ದಾಸ್ ಇಲ್ಲಿ ನಡೆಯುತ್ತಿರುವ ಅಂತರರಾಜ್ಯ ಅಥ್ಲೆಟಿಕ್ ಕೂಟದ 100 ಮೀಟರ್ಸ್ ಓಟದ ಫೈನಲ್‌ನಿಂದ ಹೊರಗುಳಿದರು. ದ್ಯುತಿ ಚಾಂದ್ ನಾಲ್ಕನೇ ಸ್ಥಾನಕ್ಕೆ ಕುಸಿದು ನಿರಾಸೆಗೊಳಗಾದರು. ತಮಿಳುನಾಡಿನ ಎಸ್. ಧನಲಕ್ಷ್ಮಿ ವೇಗದ ಓಟಗಾರ್ತಿಯಾದರು.

ಸಂಜೆ ನಡೆದ ಫೈನಲ್ ಸ್ಪರ್ಧೆಯಲ್ಲಿ ಧನಲಕ್ಷ್ಮಿ 11.52 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಶ್ರೀಲಂಕಾದ ಅಮಾಶ ಡಿ ಸಿಲ್ವ (11.59 ಸೆಕೆಂಡು) ದ್ವಿತೀಯ ಸ್ಥಾನ ಗಳಿಸಿದರೆ ತಮಿಳುನಾಡಿನ ಅರ್ಚನಾ ಸುಶೀಂದ್ರನ್ (11.60 ಸೆಕೆಂಡು) ಮೂರನೆಯವರಾದರು. ರಾಷ್ಟ್ರೀಯ ದಾಖಲೆ ಹೊಂದಿರುವ ದ್ಯುತಿ ಚಾಂದ್ ಗುರಿ ತಲುಪಲು 11.62 ಸೆಕೆಂಡು ತೆಗೆದುಕೊಂಡರು. ಕೆಲವೇ ದಿನಗಳ ಹಿಂದೆ ನಡೆದ ಇಂಡಿಯನ್ ಗ್ರ್ಯಾನ್ ಪ್ರಿ-4ರಲ್ಲಿ ಅವರು 11.17 ಸೆಕೆಂಡುಗಳ ಸಾಧನೆ ಮಾಡಿದ್ದರು.

ದ್ಯುತಿ ಅವರ ಒಲಿಂಪಿಕ್ಸ್ ಅರ್ಹತೆಗೆ ಯಾವ ಧಕ್ಕೆಯೂ ಆಗಲಿಲ್ಲ. ವಿಶ್ವ ರ‍್ಯಾಂಕಿಂಗ್‌ನಲ್ಲಿ 41ನೇ ಸ್ಥಾನದಲ್ಲಿರುವ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವವರ ಪಟ್ಟಿಯಲ್ಲಿ ಈಗಾಗಲೇ ಸೇರಿದ್ದಾರೆ.

ದೀರ್ಘಕಾಲದಿಂದ ಬೆನ್ನುನೋವಿನ ಸಮಸ್ಯೆ ಅನುಭವಿಸುತ್ತಿರುವ ಹಿಮಾ ದಾಸ್ ಶನಿವಾರ ಬೆಳಿಗ್ಗೆ ನಡೆದ ಹೀಟ್ಸ್ ವೇಳೆ ಕಾಲಿನ ಮಾಂಸಖಂಡದ ಸೆಳೆತಕ್ಕೆ ಒಳಗಾಗಿದ್ದರು. ಹೀಗಾಗಿ ಫೈನಲ್‌ನಲ್ಲಿ ಪಾಲ್ಗೊಳ್ಳಲು ಆಗಲಿಲ್ಲ. ಅವರ ಒಲಿಂಪಿಕ್ಸ್ ಕನಸಿಗೆ ಇದು ಅಡ್ಡಿಯಾಗಿದೆ. ಭಾನುವಾರ ನಡೆಯಲಿರುವ 200 ಮೀಟರ್ಸ್ ಓಟದಲ್ಲೂ ಕೊನೆಯ ದಿನವಾದ 29ರಂದು ನಡೆಯಲಿರುವ 4x100 ರಿಲೇಯಲ್ಲೂ ಅವರು ಪಾಲ್ಗೊಳ್ಳುವುದು ಅನುಮಾನ.

ಗುರುವಿಂದರ್ ದಾಖಲೆ: ಪುರುಷರ 100 ಮೀಟರ್ಸ್ ಓಟದಲ್ಲಿ ಪಂಜಾಬ್‌ನ ಗುರುವಿಂದರ್ ಸಿಂಗ್ ಮೊದಲ ಸ್ಥಾನ ಗಳಿಸಿದರು. 10.27 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ಕೂಟ ದಾಖಲೆ ಬರೆದರು.



ಅಭಿಷೇಕ್ ವರ್ಮಾ

ಆರ್ಚರಿ: ಅಭಿಷೇಕ್ ವರ್ಮಾಗೆ ಚಿನ್ನ

ಪ್ಯಾರಿಸ್ (ಪಿಟಿಐ): ಭಾರತದ ಅಭಿಷೇಕ್ ವರ್ಮಾ ಅವರು ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಟೂರ್ನಿಯಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ. ಕಾಂಪೌಂಡ್ ವಿಭಾಗದ ಸ್ಪರ್ಧೆಯ ಫೈನಲ್‌ನಲ್ಲಿ ಶನಿವಾರ ಅವರು ಅಮೆರಿಕದ ಕ್ರಿಸ್ ಶಾಫ್ ಅವರನ್ನು ಮಣಿಸಿದರು.

ವಿಶ್ವಕಪ್ ಟೂರ್ನಿಗಳಲ್ಲಿ ವರ್ಮಾ ಅವರಿಗೆ ಒಲಿದ ಎರಡನೇ ಚಿನ್ನ ಇದು. 32 ವರ್ಷದ ಬಿಲ್ಗಾರ, 2015ರಲ್ಲಿ ಪೋಲೆಂಡ್‌ನ ರೋಕ್ಲೊದಲ್ಲಿ ನಡೆದ ವಿಶ್ವಕಪ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದರು.

ಅರ್ಜುನ ಪ್ರಶಸ್ತಿಗೆ ಹರ್ಮನ್‌ಪ್ರೀತ್ ಸಿಂಗ್

ಧ್ಯಾನ್‌ಚಂದ್ ಪ್ರಶಸ್ತಿಗೆ ಆರ್.ಪಿ.ಸಿಂಗ್ ಹಾಗೂ ಚಿಂಗ್‌ಸುಬಮ್ ಸಂಗಾಯ್ ಇಬೆಮಲ್ ಅವರನ್ನು ಹಾಕಿ ಇಂಡಿಯಾ ಶಿಫಾರಸು ಮಾಡಿದೆ.

ಖೇಲ್‌ರತ್ನ: ಶ್ರೀಜೇಶ್, ದೀಪಿಕಾ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಭಾರತ ತಂಡದ ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಹಾಗೂ ಮಹಿಳಾ ತಂಡದ ಮಾಜಿ ಆಟಗಾರ್ತಿ ದೀಪಿಕಾ ಕುಮಾರಿ ಅವರನ್ನು ಹಾಕಿ ಇಂಡಿಯಾ ಈ ವರ್ಷದ ಪ್ರತಿಷ್ಠಿತ ರಾಜೀವ್ ಗಾಂಧಿ ಖೇಲ್‌ರತ್ನ ಪುರಸ್ಕಾರಕ್ಕೆ ಶಿಫಾರಸು ಮಾಡಿದೆ.



ಟೋಕಿಯೊ ಒಲಿಂಪಿಕ್ಸ್‌ಗೆ ಭಾರತ ಪುರುಷರ ತಂಡದ ಉಪನಾಯಕ ಆಗಿರುವ ಹರ್ಮನ್‌ಪ್ರೀತ್ ಸಿಂಗ್ ಮತ್ತು ಮಹಿಳಾ ತಂಡದ ವಂದನಾ ಕಟಾರಿಯಾ ಮತ್ತು ನವಜೋತ್ ಕೌರ್ ಅವರನ್ನು ಅರ್ಜುನ ಪ್ರಶಸ್ತಿಗಳಿಗೆ ಹೆಸರಿಸಲಾಗಿದೆ.

ಕೋಚ್‌ಗಳಾದ ಬಿ.ಜೆ.ಕಾರ್ಯಪ್ಪ ಹಾಗೂ ಸಿ.ಆರ್.ಕುಮಾರ್ ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ ಶಿಫಾರಸು ಮಾಡಲಾಗಿದೆ.

ಖೇಲ್‌ರತ್ನ ಪ್ರಶಸ್ತಿಗೆ 2017ರ ಜನವರಿ 1ರಿಂದ 2020ರ ಡಿಸೆಂಬರ್ 31ರ ಅವಧಿಯನ್ನು ಪರಿಗಣಿಸಲಾಗುತ್ತದೆ ಎಂದು ಹಾಕಿ ಇಂಡಿಯಾ ಹೇಳಿದೆ. ಈ ಅವಧಿಯಲ್ಲಿ ಶ್ರೀಜೇಶ್ ಅವರು, 2018ರಲ್ಲಿ ಬ್ರೆಡಾದಲ್ಲಿ ನಡೆದ ಹಾಕಿ ಚಾಂಪಿಯನ್‌ಷಿಪ್ ಟ್ರೋಫಿಯಲ್ಲಿ ಭಾರತ ಬೆಳ್ಳಿ ಪದಕ ಗೆಲ್ಲುವಲ್ಲಿ, 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಮತ್ತು ಭುವನೇಶ್ವರದಲ್ಲಿ ನಡೆದ ಎಫ್‌ಐಎಚ್ ಸರಣಿ ಫೈನಲ್ಸ್‌ನಲ್ಲಿ ಚಿನ್ನದ ಪದಕ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪದಾರ್ಪಣೆಗೆ ಶಫಾಲಿ ಸಿದ್ಧ

ಭಾರತ–ಇಂಗ್ಲೆಂಡ್ ಏಕದಿನ ಕ್ರಿಕೆಟ್ ಪಂದ್ಯ ಇಂದು

ಬ್ರಿಸ್ಟಲ್ (ಪಿಟಿಐ): ನವಪ್ರತಿಭೆ ಶಫಾಲಿ ವರ್ಮಾ ಭಾನುವಾರ ಇಲ್ಲಿ ನಡೆಯಲಿರುವ ಭಾರತ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳ ನಡುವಣ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಲಿದ್ದಾರೆ.

17 ವರ್ಷದ ಶಫಾಲಿ ಈಗಾಗಲೇ 22 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದಾರೆ. ತಮ್ಮ ಮಿಂಚಿನ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಈಚೆಗೆ ಇಲ್ಲಿಯೇ ನಡೆದ ಇಂಗ್ಲೆಂಡ್ ಎದುರಿನ ಏಕೈಕ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದ ಅವರು ಎರಡೂ ಇನಿಂಗ್ಸ್‌ಗಳಲ್ಲಿ (96 ಮತ್ತು 63) ಮಿಂಚಿದ್ದರು. ಅದರಿಂದಾಗಿ ಇಂಗ್ಲೆಂಡ್ ಎದುರಿನ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಸುವುದು ಬಹುತೇಕ ಖಚಿತವಾಗಿದೆ.



ಶಫಾಲಿ ವರ್ಮಾ

ಟೆಸ್ಟ್‌ನಲ್ಲಿ ಇಂಗ್ಲೆಂಡ್‌ನ ಬೌಲರ್‌ಗಳಾದ ಕ್ಯಾಥರಿನ್ ಬ್ರಂಟ್, ಅನ್ಯಾ ಶ್ರಬ್‌ಸೋಲ್, ಕೇಟ್ ಕ್ರಾಸ್, ನಥಾಲಿ ಶಿವರ್ ಮತ್ತು ಸೋಫಿ ಅವರ ಎಸೆತಗಳನ್ನು ಹರಿಯಾಣದ ಶಫಾಲಿ ದಿಟ್ಟತನದಿಂದ ಎದುರಿಸಿದ್ದರು.

ತಂಡದ ಉಪನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಸದ್ಯ ಉತ್ತಮ ಫಾರ್ಮ್‌ನಲ್ಲಿ ಇಲ್ಲ. ಆದ್ದರಿಂದ ದೊಡ್ಡ ಹೊಡೆತಗಳ ಆಟಗಾರ್ತಿಯೆಂದೇ ಗುರುತಿಸಿಕೊಂಡಿರುವ ಶಫಾಲಿ ಅವರ ಮೇಲೆ ನಿರೀಕ್ಷೆ ಹೆಚ್ಚಿದೆ.

ಮಿಥಾಲಿ ರಾಜ್ ಮತ್ತು ಪೂನಮ್ ರಾವತ್ ಅವರೂ ತಮ್ಮ ಬ್ಯಾಟಿಂಗ್ ಬಲ ತೋರಿಸಿದರೆ ತಂಡವು 235–240 ರನ್‌ಗಳ ಮೊತ್ತವನ್ನು ತಲುಪುವುದು ಸುಲಭವಾಗುತ್ತದೆ.

ಬೌಲರ್‌ಗಳಾದ ಅನುಭವಿ ಜೂಲನ್ ಗೋಸ್ವಾಮಿ, ಶಿಖಾ ಪಾಂಡೆ, ಪೂಜಾ ವಸ್ತ್ರಕರ್ ಮತ್ತು ಅರುಂಧತಿ ರೆಡ್ಡಿ ಅವರ ಮುಂದೆ ಇಂಗ್ಲೆಂಡ್ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲಿದೆ. ವಿಕೆಟ್ ಕೀಪರ್ ತಾನಿಯಾ ಭಾಟಿಯಾ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಇಂಗ್ಲೆಂಡ್ ತಂಡದಲ್ಲಿ ಸೋಫಿಯಾ ಡಂಕ್ಲಿ ಕೂಡ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ಒಲಿಂಪಿಕ್ಸ್: ಭಾರತದ 'ಚಿಯರ್ ಅಪ್'ಗೆ ಚಾಲನೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳನ್ನು ಹುರಿದುಂಬಿಸುವ 'ಚಿಯರ್ ಅಪ್' ಅಭಿಯಾನಕ್ಕೆ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಶನಿವಾರ ಚಾಲನೆ ನೀಡಿದರು. ದೇಶದಾದ್ಯಂತ ನಡೆಯುವ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಸಚಿವರು ಈ ಸಂದರ್ಭದಲ್ಲಿ ಕರೆ ನೀಡಿದರು.

'ದೇಶದ 100 ಕ್ರೀಡಾಪಟುಗಳು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಅವರನ್ನು ಪ್ರೋತ್ಸಾಹಿಸಲು ದೇಶದ ವಿವಿಧ ಕಡೆಗಳಲ್ಲಿ ಆರು ಸಾವಿರ ಸೆಲ್ಫಿ ಪಾಯಿಂಟ್‌ಗಳನ್ನು ಇರಿಸಲಾಗುವುದು. ರೈಲು ನಿಲ್ದಾಣಗಳಲ್ಲಿ ಈ ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸಲು ರೈಲ್ವೆ ಸಚಿವರು ಒಪ್ಪಿಕೊಂಡಿದ್ದಾರೆ' ಎಂದು ಸಚಿವರು ವಿವರಿಸಿದರು.

'ಹರಿಯಾಣದ ಮುಖ್ಯಮಂತ್ರಿಗಳು ಈಗಾಗಲೇ ಒಲಿಂಪಿಕ್ ಲಾಂಛನದೊಂದಿಗೆ ಸೆಲ್ಫಿ ಫೋಟೊ ತೆಗೆದುಕೊಂಡಿದ್ದಾರೆ. ದೇಶದ ಉದ್ದಗಲದಲ್ಲಿ ಇಂಥ ಪ್ರೇರಣಾತ್ಮಕ ಕಾರ್ಯಗಳು ನಡೆಯಬೇಕು. ಆ ಮೂಲಕ ದೇಶದ ಪ್ರಮುಖ ಶಕ್ತಿಗಳಲ್ಲಿ ಒಂದಾದ ಕ್ರೀಡೆಯನ್ನು ಬೆಳೆಸಲು ನೆರವಾಗಬೇಕು' ಎಂದು ಸಚಿವರು ಕರೆ ನೀಡಿದರು.

ಬ್ಯಾಡ್ಮಿಂಟನ್ ತಂಡದ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಮಾತನಾಡಿ, ಈ ಹಿಂದಿಗಿಂತ ಕ್ರೀಡಾಪಟುಗಳಲ್ಲಿ ಈ ಬಾರಿ ಹೆಚ್ಚು ಉತ್ಸಾಹ ತುಂಬಿದೆ ಎಂದರು.

ಟಿ20 ವಿಶ್ವಕಪ್ ಯುಎಇಗೆ ಸ್ಥಳಾಂತರ?

ಮುಂಬೈ (ರಾಯಿಟರ್ಸ್): ಈ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯನ್ನು ಯುಎಇಗೆ ಸ್ಥಳಾಂತರಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಜ್ಜಾಗಿದೆ ಎಂದು ಮಂಡಳಿಯ ಮೂಲಗಳು ಶನಿವಾರ ತಿಳಿಸಿವೆ. ಭಾರತದಲ್ಲಿ ಕೋವಿಡ್ ಆತಂಕ ಇನ್ನೂ ಕಡಿಮೆಯಾಗದಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕಳೆದ ವರ್ಷ ಕೋವಿಡ್‌ನಿಂದಾಗಿ ಪರಿಸ್ಥಿತಿ ಬಿಗಡಾಯಿಸಿತ್ತು. ಹೀಗಾಗಿ ಐಪಿಎಲ್ ಟೂರ್ನಿಯನ್ನು ಯುಎಇಯಲ್ಲಿ ನಡೆಸಲಾಗಿತ್ತು. ಈ ವರ್ಷ ಭಾರತದಲ್ಲೇ ಟೂರ್ನಿ ಆಯೋಜಿಸಿದ್ದರೂ ಬಯೊಬಬಲ್‌ನಲ್ಲಿದ್ದ ಆಟಗಾರರಿಗೆ ಸೋಂಕು ತಗುಲಿದ್ದರಿಂದ ಮೇ ತಿಂಗಳಲ್ಲಿ ಅರ್ಧಕ್ಕೆ ಮೊಟಕುಗೊಳಿಸಲಾಗಿತ್ತು. ಉಳಿದ ಪಂದ್ಯಗಳನ್ನು ಯುಎಇಯಲ್ಲಿ ನಡೆಸಲು ನಿರ್ಧರಿಸಲಾಗಿದೆ.



ಟಿ20 ವಿಶ್ವಕಪ್ ಟೂರ್ನಿ ಅಕ್ಟೋಬರ್ 17ರಂದು ಆರಂಭವಾಗಲಿದೆ. ಭಾರತದಲ್ಲೇ ಟೂರ್ನಿ ಆಯೋಜಿಸಲು ನಿರ್ಧರಿಸಲಾಗಿತ್ತು. ಆದರೆ ಈಗ, ಟೂರ್ನಿಯನ್ನು ಯುಎಇಯಲ್ಲಿ ಆಯೋಜಿಸುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಬಿಸಿಸಿಐ ಬಂದಿದೆ.

'ಭಾರತದಲ್ಲಿ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಟೂರ್ನಿ ಆಯೋಜಿಸಿದರೂ ಮೂರನೇ ಅಲೆಯ ಆತಂಕದಿಂದ ಪ್ರಯಾಣ ನಿರ್ಬಂಧ ಹೇರುವ ಸಾಧ್ಯತೆ ಇರುವುದರಿಂದ ಕೆಲವು ರಾಷ್ಟ್ರಗಳ ಆಟಗಾರರಿಗೆ ಇಲ್ಲಿಗೆ ಬರಲು ಸಾಧ್ಯವಾಗದು. ಹೀಗಾಗಿ ಟೂರ್ನಿಯನ್ನು ಯುಎಇಗೆ ಸ್ಥಳಾಂತರಿಸುವುದೇ ಸೂಕ್ತ. ಈ ಕುರಿತ ಅಂತಿಮ ನಿರ್ಧಾರವನ್ನು ಕೆಲವೇ ದಿನಗಳಲ್ಲಿ ಕೈಗೊಳ್ಳಲಾಗುವುದು. ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ ತಿಳಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಐಸಿಸಿಯಿಂದ ಯಾವ ಮಾಹಿತಿಯೂ ಬಾರದ ಕಾರಣ ತಕ್ಷಣ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಐ–ಲೀಗ್ ಫುಟ್‌ಬಾಲ್ ಅರ್ಹತಾ ಟೂರ್ನಿ

ಬೆಂಗಳೂರು: ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಐ–ಲೀಗ್ ಫುಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳಿಗೆ ಬೆಂಗಳೂರು ಆತಿಥ್ಯ ವಹಿಸಲಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮತ್ತು ಫೆಡರೇಷನ್‌ನ ಲೀಗ್ ಸಮಿತಿ ಶನಿವಾರ ಆನ್‌ಲೈನ್ ಮೂಲಕ ಆಯೋಜಿಸಿದ್ದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ತಿಳಿಸಿದೆ.

ದೇಶದ ಪ್ರಮುಖ ಹತ್ತು ಕ್ಲಬ್‌ಗಳು ಅರ್ಹತಾ ಟೂರ್ನಿಯಲ್ಲಿ ಆಡಲು ತಂಡಗಳನ್ನು ಕಳುಹಿಸುವ ನಿರೀಕ್ಷೆ ಇದೆ ಎಂದು ಫೆಡರೇಷನ್ ತಿಳಿಸಿದೆ. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಹೊಸ ಟರ್ಫ್ ಹಾಕಲಾಗಿದ್ದು ಸೆಪ್ಟೆಂಬರ್ ವೇಳೆಗೆ ಕೋವಿಡ್ ಆತಂಕ ಕಡಿಮೆಯಾಗುವ ಸಾಧ್ಯತೆ ಇದೆ. ನಿಯಮ ಪಾಲಿಸಿಕೊಂಡು ಟೂರ್ನಿ ಆಯೋಜಿಸಲಾಗುವುದು ಎಂದು ಕೆಎಸ್‌ಎಫ್‌ಎ ತಿಳಿಸಿದೆ.

ಕಳೆದ ಬಾರಿ ರದ್ದುಗೊಳಿಸಲಾದ ಮಹಿಳಾ ಲೀಗ್ ಈ ಬಾರಿ ಆಯೋಜಿಸುವ ಕುರಿತು ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಭೆಯ ನಂತರ ಎಐಎಫ್‌ಎಫ್ ತಿಳಿಸಿದೆ.

ಸುಶೀಲ್ ಜೊತೆ ಫೋಟೊ ತೆಗೆಸಿಕೊಂಡ ಪೊಲೀಸರು: ತನಿಖೆ

ನವದೆಹಲಿ (ಪಿಟಿಐ): ಕೊಲೆ ಆರೋಪದಲ್ಲಿ ಬಂಧನದಲ್ಲಿರುವ ಕುಸ್ತಿಪಟು ಸುಶೀಲ್ ಕುಮಾರ್ ಜೊತೆ ತನ್ನ ಸಿಬ್ಬಂದಿಯು ಫೋಟೊ ತೆಗೆಸಿಕೊಂಡಿದ್ದರ ಕುರಿತು ದೆಹಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ದೆಹಲಿ ಪೊಲೀಸರ ವಿಶೇಷ ತಂಡ ಮತ್ತು ಸಶಸ್ತ್ರ ಪೊಲೀಸರ ಉಪಸ್ಥಿತಿಯಲ್ಲಿ ಸುಶೀಲ್ ಅವರನ್ನು ತಿಹಾರ್ ಜೈಲಿಗೆ ಸ್ಥಳಾಂತರಿಸುವಾಗ ಮಾಂಡೋಲಿ ಜೈಲು ಆವರಣದಲ್ಲಿ ಶುಕ್ರವಾರ ಈ ಘಟನೆ ನಡೆದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಶೀಲ್ ಕುಮಾರ್ ಮತ್ತು ಪೊಲೀಸರು ಮಾಸ್ಕ್ ಧರಿಸದೆ ನಿಂತಿರುವ ಚಿತ್ರಗಳು ಜಾಲತಾಣಗಳಲ್ಲಿ ವೈರಲ್ ಆಗಿದ್ದವು.

'ಘಟನೆ ಕುರಿತು ಸ್ವಯಂಪ್ರೇರಿತ ತನಿಖೆ ಆರಂಭಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕ್ವಾರ್ಟರ್‌ಫೈನಲ್‌ಗೆ ಡೆನ್ಮಾರ್ಕ್

ಆ್ಯಮ್‌ಸ್ಟರ್‌ಡ್ಯಾಮ್ (ಎಎಫ್‌ಪಿ): ಕಾಸ್ಪರ್ ಡೋಲ್‌ಬರ್ಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಡೆನ್ಮಾರ್ಕ್ ತಂಡವು ಯೂರೊ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿತು.

ಶನಿವಾರ ಇಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಆ ತಂಡವು 4–0ಯಿಂದ ವೇಲ್ಸ್ ಎದುರು ಗೆದ್ದಿತು.

ವಿಜೇತ ತಂಡದ ಕಾಸ್ಪರ್ (27, 48ನೇ ನಿಮಿಷ), ಜೋಕಿಮ್ ಮೆಹ್ಲೆ (88ನೇ ನಿ.) ಹಾಗೂ ಮಾರ್ಟಿನ್ ಬ್ರಾಥ್‌ವೇಟ್ (90 + 4ನೇ ನಿಮಿಷ) ಗೋಲು ಹೊಡೆದರು.

ಒಲಿಂಪಿಕ್ಸ್: ₹ 10 ಲಕ್ಷ ಪ್ರೋತ್ಸಾಹಧನ

ಬೆಂಗಳೂರು: ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಕರ್ನಾಟಕದಿಂದ ಆಯ್ಕೆಯಾಗುವ ಕ್ರೀಡಾಪಟುಗಳಿಗೆ ತಲಾ ₹ 10 ಲಕ್ಷ ಪ್ರೋತ್ಸಾಹಧನ ನೀಡಲಾಗುವುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ತಿಳಿಸಿದ್ದಾರೆ.

ಒಲಿಂಪಿಕ್ ಕ್ರೀಡಾಕೂಟದಲ್ಲಿ ದೇಶವನ್ನು ಪ್ರತಿನಿಧಿಸುವ ತಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವುದಾಗಿ ತಮಿಳುನಾಡು ಮತ್ತು ಮಧ್ಯಪ್ರದೇಶ ರಾಜ್ಯಗಳು ಘೋಷಿಸಿದ್ದವು. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಪ್ರೋತ್ಸಾಹಧನ ನೀಡುವ ಪ್ರಸ್ತಾವಕ್ಕೆ ಇಲಾಖೆ ಒಪ್ಪಿಗೆ ನೀಡಿ, ಇದೇ 24ರಂದು ಆದೇಶವನ್ನೂ ಹೊರಡಿಸಿದೆ.

ಪಟ್ಟಣ ಸಹಕಾರಿ ಬ್ಯಾಂಕ್: ಸಂಸದರು, ಶಾಸಕರಿಗೆ ನಿರ್ಬಂಧ

ಮುಂಬೈ (ಪಿಟಿಐ): ಸಂಸತ್ ಸದಸ್ಯರು ಮತ್ತು ಶಾಸಕರು, ಪಟ್ಟಣ ಸಹಕಾರಿ ಬ್ಯಾಂಕ್‌ಗಳ ವ್ಯವಸ್ಥಾಪಕ ನಿರ್ದೇಶಕರು (ಎಂಡಿ) ಮತ್ತು ಪೂರ್ಣಾವಧಿ ನಿರ್ದೇಶಕರ (ಡಬ್ಲ್ಯುಟಿಡಿ) ಹುದ್ದೆಗೇರುವುದನ್ನು ನಿಷೇಧಿಸಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ವಿಪತ್ತು ನಿರ್ವಹಣೆ ಅಧಿಕಾರಿ

₹ 5 ಸಾವಿರ ಕೋಟಿಗಿಂತಲೂ ಅಧಿಕ ಆಸ್ತಿ ಮೌಲ್ಯ ಹೊಂದಿರುವ ಪಟ್ಟಣ ಸಹಕಾರಿ ಬ್ಯಾಂಕ್‌ಗಳಿಗೆ ಮುಖ್ಯ ವಿಪತ್ತು ನಿರ್ವಹಣೆ ಅಧಿಕಾರಿ ನೇಮಕವನ್ನು ಆರ್‌ಬಿಐ ಕಡ್ಡಾಯಗೊಳಿಸಿದೆ. ಈ ಅಧಿಕಾರಿಯು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ವಿವರಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಅರ್ಹತೆ ಮತ್ತು ವಯೋಮಾನದ ಕುರಿತು ಹೊರಡಿಸಿರುವ ಮಾರ್ಗಸೂಚಿಯಲ್ಲಿ ಈ ಅಂಶ ಉಲ್ಲೇಖಿಸಲಾಗಿದೆ. ಈ ಹುದ್ದೆಗಳನ್ನು ನಿರ್ವಹಿಸುವವರ ವಯಸ್ಸು ಕನಿಷ್ಠ 35 ವರ್ಷ ಹಾಗೂ ಗರಿಷ್ಠ 70 ವರ್ಷ ಎಂದು ನಿಗದಿಪಡಿಸಲಾಗಿದೆ. ಸ್ನಾತಕೋತ್ತರ ಪದವಿ ಅಥವಾ ಹಣಕಾಸು ವಿಷಯವನ್ನು ಓದಿರುವುದು ಕಡ್ಡಾಯ. ಲೆಕ್ಕ/ವೆಚ್ಚ ಪರಿಶೋಧಕ, ಹಣಕಾಸು ವಿಷಯದಲ್ಲಿ ಎಂಬಿಎ ಅಥವಾ ಬ್ಯಾಂಕಿಂಗ್ ಅಥವಾ ಕೊ ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ ಮಾಡಿರಬೇಕು.

ನಗರಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ವ್ಯಾಪಾರೋದ್ಯಮದಲ್ಲಿ ತೊಡಗಿರುವವರು ಸಹ ಈ ಹುದ್ದೆಗಳಿಗೆ ಅರ್ಹರಲ್ಲ ಎಂದೂ ತಿಳಿಸಿದೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಧ್ಯಮ/ಹಿರಿಯ ವ್ಯವಸ್ಥಾಪಕ ಮಟ್ಟದ ಹುದ್ದೆ (ನಗರ ಸಹಕಾರಿ ಬ್ಯಾಂಕ್‌ನ ಅನುಭವವೂ ಒಳಗೊಂಡು) ಅಥವಾ ಬ್ಯಾಂಕೇತರ ಹಣಕಾಸು ಕಂಪನಿಗಳಲ್ಲಿ ಸಾಲ ನೀಡುವ ಮತ್ತು ಸ್ವತ್ತು ನಿರ್ವಹಣೆಯಲ್ಲಿ ಕನಿಷ್ಠ ಎಂಟು ವರ್ಷಗಳ ಅನುಭವವನ್ನು ಹೊಂದಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹುದ್ದೆಗಳಿಗೆ ಗರಿಷ್ಠ 5 ವರ್ಷಗಳ ಅವಧಿಗೆ ನೇಮಕ ಮಾಡಬಹುದು. ಆ ಬಳಿಕ ಮರು ನೇಮಕಕ್ಕೆ ಅವಕಾಶ ಇದೆ. ಆದರೆ, ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಾವಧಿಯ ನಿರ್ದೇಶಕ 15ಕ್ಕಿಂತಲೂ ಹೆಚ್ಚಿನ ವರ್ಷಗಳ ಅವಧಿಗೆ ಹುದ್ದೆಯಲ್ಲಿ ಇರಬಾರದು. ಆ ಬಳಿಕವೂ ಅಗತ್ಯ ಇದ್ದರೆ ಮೂರು ವರ್ಷಗಳ ವಿರಾಮದ ಬಳಿಕ ಮರುನೇಮಕ ಮಾಡಬಹುದು.

ಎಂಡಿ ಅಥವಾ ಸಿಇಒಗಳ ಐದು ವರ್ಷಗಳ ಅವಧಿ ಪೂರ್ಣಗೊಂಡಿದ್ದರೆ, ಹೊಸ ಮಾರ್ಗಸೂಚಿಯ ಅನ್ವಯ ಅರ್ಹತೆ ಹೊಂದಿದ್ದಲ್ಲಿ ಮರುನೇಮಕಕ್ಕೆ ಆರ್‌ಬಿಐಗೆ ಮನವಿ ಸಲ್ಲಿಸಬಹುದು ಇಲ್ಲವೇ ಎರಡು ತಿಂಗಳ ಒಳಗೆ ಹೊಸ ಎಂಡಿ/ಸಿಇಒ ನೇಮಕ ಮಾಡಬೇಕು. ಒಂದೊಮ್ಮೆ ಅವಧಿ ಮುಗಿಯುವ ಮುನ್ನವೇ ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಾವಧಿಯ ನಿರ್ದೇಶಕರನ್ನು ಅಧಿಕಾರದಿಂದ ವಜಾ ಮಾಡುವುದಿದ್ದರೆ ಆರ್‌ಬಿಐನ ಪೂರ್ವಾನುಮತಿ ಪಡೆಯಬೇಕು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹525
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1390 (1390)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1153(1155)

ತಮಿಳುನಾಡಿನಲ್ಲಿ ₹100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶನಿವಾರ ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು 35 ಪೈಸೆಗಳಷ್ಟು ಹೆಚ್ಚಿಸಿವೆ. ಇದರಿಂದಾಗಿ ತಮಿಳುನಾಡಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ.

ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಜಮ್ಮು–ಕಾಶ್ಮೀರ, ಒಡಿಶಾ ಮತ್ತು ಲಡಾಖ್‌ನಲ್ಲಿ ಈಗಾಗಲೇ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿ ದಾಟಿ ಮಾರಾಟವಾಗುತ್ತಿದೆ.

ಚೆನ್ನೈನಲ್ಲಿ ಪೆಟ್ರೋಲ್ ದರ ₹ 99.19 ಮತ್ತು ಡೀಸೆಲ್ ದರ ₹ 93.23ರಷ್ಟಾಗಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 104.22 ಮತ್ತು ಡೀಸೆಲ್ ದರ ₹ 96.16ರಷ್ಟಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 101.39 ಮತ್ತು ಡೀಸೆಲ್ ದರ ₹ 93.99ರಕ್ಕೆ ತಲುಪಿದೆ.

ಮೇ 4ರಿಂದ ಇಲ್ಲಿಯವರೆಗೆ ಒಟ್ಟಾರೆ 30 ಬಾರಿ ಇಂಧನ ದರದಲ್ಲಿ ಹೆಚ್ಚಳ ಮಾಡಲಾಗಿದೆ. ಈ ಅವಧಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 7.71 ಮತ್ತು ಡೀಸೆಲ್ ದರ ಲೀಟರಿಗೆ ₹ 8.12ರಷ್ಟು ಹೆಚ್ಚಳ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500

ಕಾಳು ಮೆಣಸು	380

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	323-395
ದ್ವಿತಳಿ (ಬಿ.ವಿ)	361-485

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11150	11000	10850	157.25 ಸೆಂಟ್ಸ್
ಎಸಿ	4785	4500	4175	
ಆರ್‌ಪಿ	5500	5500	5450	
ಆರ್‌ಸಿ	3300	3150	3250	1699 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

26-6-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	8950-9000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1400 (1400)
ಒಂದು ವಾರದ ಡೆಲಿವರಿ	1395 (1395)
ಸೋಯಾ ಕಚ್ಚಾ	1225 (1253)
ಪಾಮ್ ವಾರದ ಡೆಲಿವರಿ	1151 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,800 (47,000)

ಬೆಳ್ಳಿ ಕೆ.ಜಿ 68,300 (68,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ